THE BOOK WAS
DRENCHED

TEXT FLY WITHIN
THE BOOK ONLY

UNIVERSAL LIBRARY
OU_198568
UNIVERSAL LIBRARY

# ಮಹಾದೇವ ದೇಸಾಯಿಯವರ

## ಕೃತಿಗಳು

ಗೊರೂರು ರಾಮಸ್ವಾಮಿ ಅಯ್ಯಂಗಾರ್

**ಮಾರುತಿ ಪುಸ್ತಕ ಮಂದಿರ**

ಅವಿನ್ಯೂ ರಸ್ತೆ : ಬೆಂಗಳೂರ-೨

ಎರಡನೆಯ ಮುದ್ರಣ 1954

CHECKED 1956
K 4385
K 923.2
R16M

ಎಲ್ಲಾ ಹಕ್ಕುಗಳು ಪ್ರಕಾಶಕರಿಗೆ ಸೇರಿವೆ

1969

ಬೆಲೆ. ೨-೧೨-೦

ಶಂಕರ ಮುದ್ರಣಾಲಯ

ಬೆಂಗಳೂರು

# ವಿಷಯ ಸೂಚಿಕೆ


| | | |
|---|---|---|
| 1. | ಇತಿಹಾಸ ಪ್ರಸಿದ್ಧ ಭೇಟಿ. | ೧– ೧೪ |
| 2. | ಕಾಶೀ ವಿಶ್ವವಿದ್ಯಾಲಯ | ೧೪– ೨೫ |
| 3. | ಋಷೀಕೇಶದ ಒಂದು ನೋಟ | ೨೫– ೩೧ |
| 4. | ಅಮೇರಿಕನ್‌ರ ವರ್ಣದ್ವೇಷ | ೩೧– ೩೫ |
| 5. | ವಾರ್ಧಾಕ್ಕೆ ಅರ್ಹವಾದುದಲ್ಲ | ೩೫– ೩೯ |
| 6. | ಬಾಂಬು ಹಾಕಲು ಹಕ್ಕು | ೩೯– ೪೨ |
| 7. | ಜಮುನಾಲಾಲಜೀ | ೪೨– ೫೩ |
| 8. | ಡಾಕ್ಟರ್ ಕಗಾವಾ ರವರ ಭೇಟಿ | ೫೩– ೬೯ |
| 9. | ಶ್ರದ್ಧೆ, ನಂಬಿಕೆಗೆ ಸಂಚಕಾರ | ೬೯– ೮೩ |
| 10. | ಹಿಂದಲತ್ಯಾಗಕ್ಕೆ ಇಂದು ಬೆಲೆ | ೮೪– ೮೬ |
| 11. | ಹೊಸ ಡೆಲ್ಲಿಯ ಒಂದು ನೋಟ | ೮೬– ೯೫ |
| 12. | ಒಬ್ಬ ಬೌದ್ಧನೊಂದಿಗೆ ಸಂಭಾಷಣೆ | ೯೫–೧೦೫ |
| 13. | ಒಂದು ವಿಷಾದ ಪ್ರಸಂಗ | ೧೦೫–೧೧೬ |
| 14. | ಬಾಲ್ಯ ವಿವಾಹ ಇನ್ನು ಸಾಕು | ೧೧೬–೧೨೧ |
| 15. | ಒಂದು ಬದಲಾವಣೆಯ ಕತೆ | ೧೨೨–೧೨೬ |
| 16. | ಡಾಕ್ಟರ್ ಮೂಟ್‌ರವರ ಎರಡನೆಯ ಭೇಟಿ | ೧೨೬–೧೪೪ |
| 17. | ಸೇವಾಗ್ರಾಮದ ಸುದ್ದಿಗಳು | ೧೪೪–೧೪೭ |
| 18. | ನಮ್ಮಕಾಲಕ್ಕೆ ನಾವು ದೇವರಿಗೆ ಹೊಣೆಗಾರರು | ೧೪೮–೧೫೨ |
| 19. | ವೇಗವು ಗ್ರಾಮ ಸಂಸ್ಕೃತಿಗೆ ವಿರೋಧವಾದುದು | ೧೫೨–೧೫೯ |
| 20. | ಬ್ರಿಟಿಷ್ ಮತ್ತು ಅಮೆರಿಕನ್‌ರ ನಾಜಿಇಸಂ | ೧೫೯–೧೬೨ |
| 21. | ಸಿಮ್ಲಾದಲ್ಲಿಯ ಬಡವರು | ೧೬೨–೧೬೫ |
| 22. | ಕವಿಯ ಭೇಟಿ | ೧೬೫–೧೭೦ |
| 23. | ಸೇವಾಗ್ರಾದ ಸುದ್ದಿಗಳು | ೧೭೦–೧೭೮ |
| 24. | .ಸಾಮ್ರಾಜ್ಯವಾದಿಗಳ ಗ್ಯಾಂಗು | ೧೭೮-೧೮೦ |

# ಮಹದೇವ ದೇಸಾಯಿಯವರ ಕೃತಿಗಳು

## ೧. ಇತಿಹಾಸ ಪ್ರಸಿದ್ಧ ಭೇಟಿ

ಗಾಂಧಿಯವರು, ಚೀಣಾ ದಂಡನಾಯಕನನ್ನು ನೋಡುವುದನ್ನು ಕುರಿತು ಅನೇಕ ಸುದ್ದಿಗಳು ಹೊರಟಿವೆ. ಕೆಲವು ಸಂಗತಿಗಳನ್ನು ವಾಚಕರ ಮುಂದೆ ಇಡುತ್ತೇನೆ. ಗಾಂಧಿಯವರನ್ನು ಸೇವಾಗ್ರಾಮದಲ್ಲಿ ನೋಡಲು ಚಿಯಾಂಗ್ ಕೈಷೇಕರಿಗೆ ಇಷ್ಟ ಎಂಬ ಸುದ್ದಿ, ಮೊದಲು ಜವಹಿರ್‌ಲಾಲರ ಮೂಲಕ ಬಂತು. ಆ ಮಹನೀಯರು ಯಾವಾಗ ಬರುತ್ತಾರೋ ಎಂಬ ಹೆಚ್ಚು ಸಂಗತಿಗಳನ್ನು ಗಾಂಧಿಜಿ ನಿರೀಕ್ಷಿಸುತ್ತಿದ್ದರು. ಆದರೆ ಅನಂತರ ಭೇಟಿಯ ವಿಚಾರ ತಿಳಿಯಬೇ ಇಲ್ಲ. ಆ ವೇಳೆಗೆ, ದಂಡನಾಯಕ ಚಿಯಾಂಗ್ ಕೈಷೇಕರಿಗೆ ಭೇಟಿ ತೆಗೆದುಕೊಳ್ಳಲು ಅವಕಾಶವಿಲ್ಲವೆಂದೂ, ಗಾಂಧಿಯವರನ್ನು ಡಿಲ್ಲಿಯಲ್ಲಿ ಬಂದು ಕಾಣುವಷ್ಟು ಕಷ್ಟ ಅವರಿಗೆ ಕೊಡಲು ದಂಡನಾಯಕನಿಗೆ ಇಷ್ಟವಿಲ್ಲವೆಂದೂ, ಆದುದರಿಂದ ಆತ ಅತ್ಯಂತ ವಿಷಾದದಿಂದ ಚೀನಾಕ್ಕೆ ಹಿಂದಿರುಗುವನೆಂದೂ ಜವಹಿರ್‌ಲಾಲರ ಮುಖಾಂತರ ತಿಳಿಯಿತು. "ನಿಮ್ಮನ್ನು ಎಲ್ಲಿ ಬೇಕಾದರೂ ನೋಡಲು ನಾನು ಸಿದ್ಧ" ಎಂದು ಗಾಂಧಿಜಿ ಚೀಣಾ ದಂಡನಾಯಕನಿಗೆ ಬರೆದರು. ಹಾಗೆಯೇ ಒಂದು ತಂತಿ ಸಹ ಕಳುಹಿಸಿದರು. ವಾರ್ಧಾದ ಡೆಪ್ಯುಟಿ ಕಮಿಷನರ್ ಸಾಹೇಬರು "ಯಾವಾಗ (ಅತಿಥಿ) ದಂಡನಾಯಕ ಬರುತ್ತಾರೆ" ಎಂದು ನನ್ನನ್ನು ಕೇಳುತ್ತಲೇ ಇದ್ದರು! ನಿಮ್ಮಷ್ಟೇ ನನಗೂ ಗೊತ್ತಿರುವುದು ಎಂದು ನಾನು ಹೇಳುತ್ತಿದ್ದೆ. ಕೊನೆಗೆ ಜವಹಿರ್‌ಲಾಲರಿಂದ ಒಂದು ಸುದ್ದಿ ಬಂತು. ಚಿಯಾಂಗ್ ಕೈಷೇಕ್ ಗಾಂಧಿ ನೋಡದೆ ಹಿಂದಿರುಗುವುದು ಸಾಧ್ಯವಿಲ್ಲ. ಗಾಂಧಿಜಿ ೧೮ನೆ ತಾರೀಖು ಶಾಂತಿನಿಕೇತನಕ್ಕೆ ಬಂದು ಅಲ್ಲಿ ದಂಡನಾಯಕನನ್ನು ನೋಡಲು ಸಾಧ್ಯವೇ ಎಂದು ಆತ ಹೇಳಿಕಳುಹಿಸಿದ. ಇದು ಸಾಧ್ಯವಿಲ್ಲವೆಂದು ನಾನು ಹೇಳಿದೆ. ಜಮನಾಲಾಲ ಬಜಾಜರು ಕೈಕೊಂಡಿದ್ದ ಕಾರ್ಯಗಳನ್ನು ಮುಂದುವರಿಸುವವಲುವಾಗಿ ಗಾಂಧಿಯವರು ೨೦ನೇ ತಾರೀಖು ಬಜಾಜರ ಮಿತ್ರರ ಸಭೆ

ಕರೆದಿದ್ದರು. ಆದರಲ್ಲಿ ಅವರು ಹಾಜರಿರಬೇಕಾಗಿದ್ದಿತು. ಆಗ ಪಂಡಿತರು ಭೇಟಿಗೆ ಕಲ್ಕತ್ತವನ್ನು ಆರಿಸಿದರು. ಗಾಂಧಿ ಕೂಡಲೇ ಒಪ್ಪಿದರು. ಚೀನಾದ ಧೀರನೊಂದಿಗೆ ೫-೬ ಗಂಟೆ ಇರುವುದು ಸಾಧ್ಯವಾಗುವುದಾದರೆ ೪೮ ಗಂಟೆಗಳ ಪ್ರಯಾಣವನ್ನು ಸಂತೋಷವಾಗಿ ಮಾಡುವುದಾಗಿ ಹೇಳಿದರು.

ಆ ಭೇಟಿ ಹೀಗೆ ಏರ್ಪಾಡಾಯಿತು. ನಾವು ಹೋಗಿ ಭಿರ್ಲಾ ಪಾರ್ಕ್‌ನಲ್ಲಿ ಉಳಿದೆವು. ಹೋದ ಒಂದು ಗಂಟೆಯೊಳಗಾಗಿ ದಂಡನಾಯಕನೂ ಆತನ ಮಾನ್ಯಳಾದ ಸತಿಯೂ ನಮ್ಮಲ್ಲಿ ದಯವಿಟ್ಟು ಬಂದರು. ಮೊದಲು ಯೋಗಕ್ಷೇಮಗಳನ್ನು ವಿಚಾರಿಸುವ ಸಂದರ್ಶನ. ಅನಂತರ ಮತ್ತೆ ಮಧ್ಯಾಹ್ನದ ಮೇಲೆ ಸೇರಬೇಕೆಂದು ಏರ್ಪಾಡಾಯಿತು. ದಂಡನಾಯಕ "ಸರ್ಕಾರಿ ಭವನಕ್ಕೆ ನೀವು ಬರುವ ಕಷ್ಟ ನಿಮಗೆ ಕೊಡುವುದಿಲ್ಲ. ನಿಮ್ಮ ಊಟ ವಿಶ್ರಾಂತಿಯಾದ ಮೇಲೆ ನಾವೇ ಬರುತ್ತೇವೆ" ಎಂದರು. ಗಾಂಧಿಯವರು "ನನ್ನ ಅವಕಾಶ ನಿಮಗೆ ಪೂರ್ತ ದೊರಯಲಿ ಎಂದು ನಾನು ರೈಲಿನಲ್ಲಿಯೇ ಊಟ ಮುಗಿಸಿದೆ. ನಿಮಗೆ ಅಸೌಕರ್ಯವಾಗದಿದ್ದರೆ ಒಂದು ಸೂಚನೆ ಮಾಡುತ್ತೇನೆ. ನೀವೂ ಇಲ್ಲಿಯೇ ಇರಿ. ಭಾರತೀಯರ ಊಟ ಮಾಡಿ. ನನ್ನ ಪ್ರಯಾಣದ ಕೊನೆಯ ಗಳಿಗೆಯ ವರೆಗೆ ಮಾತನಾಡಬಹುದು. ಬ್ಯಾರಕ್‌ಪುರಕ್ಕೆ (ದಂಡನಾಯಕ ಉಳಿದಿದ್ದ ಸ್ಥಳ) ಹೋಗಿ ಬರುವ ಕಾಲವನ್ನು ಹೀಗೆ ಉಳಿಸಬಹುದು" ಎಂದರು. ಆದುದರಿಂದ ಅತಿಥಿಗಳು ಉಳಿದರು. ಭಿರ್ಲಾ ಪುತ್ರರಿಗೆ ಅವರಿಗೆ ಭೋಜನವನ್ನು ಕೊಟ್ಟ ಗೌರವವುಂಟಾಯಿತು. ಗಾಂಧಿ, ಸ್ಟೇಷನ್ನಿಗೆ ಹೊರಡುವವರೆಗೆ ಗಾಂಧಿಯವರೊಂದಿಗೆ ಅತಿಥಿಗಳು ಮಾತನಾಡುತ್ತಿದ್ದರು.

## ಅನ್ಯಾದೃಶ್ಯ ಜೋಡಿ

ಚಿಯಾಂಗ್ ದಂಪತಿಗಳಿಗೆ ಸಮವಾದ ಜೋಡಿ ಅಪರೂಪ. ದಂಡನಾಯಕ ಬಡತನದಲ್ಲಿ ಹುಟ್ಟಿದವ ಆತ ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಮಿಲಿಟರಿ ಶಿಕ್ಷಣಕ್ಕೆ ಜಪಾನಿಗೆ ಹೋದ. ಮಿನಿಸ್ಟ್ರಿ ಸ್ಟಾಫ್ ಕಾಲೇಜನ್ನು ಸೇರಿ, ಜಪಾನ್ ಸೈನ್ಯದಲ್ಲಿ ಅನೇಕ ವರುಷ ಕೆಲಸ ಮಾಡಿದನೆಂದೂ ಹೇಳುತ್ತಾರೆ. ಜಪಾನಿನಲ್ಲಿ ಆತ, ಚೀನಾವಿಧಾತ ಸ್ವರ್ಗೀಯ ಸನ್ ಎಟ್ ಸೇನ್‌ರನ್ನು ಕಂಡ. ಅವರು ಆತನಿಗೆ ಕ್ರಾಂತಿಯನ್ನು

ಘೋಷಿಸಿದರು. ಅಂದಿನಿಂದ ಆತನ ಬಾಳು, ಚೀನದ ಸ್ವಾತಂತ್ರಕ್ಕೂ ಕ್ರಾಂತಿಗೂ ಮೀಸಲಾಯಿತೆಂದು ಹೇಳಬಹುದು. ಚಿಯಾಂಗ್ ಕೈ ಷೇಕ್ ಸ್ವಲ್ಪಕಾಲ ವ್ಯಾಪಾರದಲ್ಲಿ ತೊಡಗಿದ್ದ. ಆದರೆ ೧೯೨೫ರ ವೇಳೆಗೆ ಕುಮಿಂಗ್ ಟಾಂಗ್‌ನ ಸ್ಥಾಯಿ ಸಮಿತಿಯ ಅಧ್ಯಕ್ಷನಾದ. ಸನ್ ಎಟ್ ಸೇನ್‌ರ ಮರಣಾನಂತರ ರಾಷ್ಟ್ರ ಸೈನ್ಯದ ದಂಡನಾಯಕತ್ವವನ್ನು ಈತ ವಹಿಸಿ ಕೊಂಡ.

ಚೀನಾವನ್ನು ಒಂದುಮಾಡಿ, ಜಪಾನನ್ನು ಎದುರಿಸಲು ಆ ರಾಷ್ಟ್ರ ವನ್ನು ದೃಢತೆಯಿಂದ ಸಿದ್ಧಮಾಡಿದ ಆ ದಂಡನಾಯಕನ ಇತಿಹಾಸವನ್ನು ಇಲ್ಲಿ ಹೇಳುವುದು ಸಾಧ್ಯವಿಲ್ಲ. ಆತನ ಜೀವನದ ಹೆಗ್ಗುರುತುಗಳನ್ನು ಜಾನ್ ಗಂತರ್ ಅವರ ಏಷಿಯಾದಲ್ಲಿ ಎಂಬ ಪುಸ್ತಕದಿಂದ ತೆಗೆದು ಕೊಂಡಿದ್ದೇನೆ. ಆದರೆ ಚಿಯಾಂಗ್ ಕೈಷೇಕ್ ಹತ್ತು ವರುಷ ಚೀನಾದಲ್ಲಿ ಒಳ ಜಗಳ ಮಾಡಿ ದೇಶವನ್ನು ಒಗ್ಗಟ್ಟು ಮಾಡಿದನೆಂಬ ಆ ಲೇಖಕನ ಅಭಿಪ್ರಾಯವನ್ನು ನಾನು ಅಂಗೀಕರಿಸಲು ಹಿಂದೆಗೆಯುತ್ತೇನೆ. ಯಾಕೆಂದರೆ ಆ ಮಾತು ನಿಜವೇ ಸುಳ್ಳೇ ಎಂದು ಪರೀಕ್ಷಿಸಲು ನನಗೆ ಅವ ಕಾಶವಾಗಿಲ್ಲ.

ಈ ದಂಡನಾಯಕ, ೧೯೨೭ರಲ್ಲಿ ಸೂಂಗ್ ಮನೆತನಕ್ಕೆ ಸೇರಿದ ಪ್ರಸಿದ್ಧಳಾದ ಮ್ಯಾಡಮ್ ಸತಿಯನ್ನು ಮದುವೆಯಾದ. ಈಕೆ ಪಾದ್ರಿಯ ಮಗಳು. ಇವಳ ಶಿಕ್ಷಣವೆಲ್ಲಾ ಅಮೆರಿಕಾದಲ್ಲಿ ಆಯಿತು. ದಂಡ ನಾಯಕನಿಗೆ ಜಪಾನ್ ಭಾಷೆಯ ಹೊರತು ಮತ್ತಾವ ಅನ್ಯ ಭಾಷೆಯೂ ತಿಳಿಯದು. ಆದುದರಿಂದ ಈಕೆಯೇ ಆತನಿಗೆ ಎಲ್ಲಾ ವಿಷಯದಲ್ಲಿಯೂ ದ್ವಿಭಾಷಿ. ಆದರೆ ಆಕೆ ದ್ವಿಭಾಷಿ ಮಾತ್ರವೇ ಅಲ್ಲ. ಆಕೆ ಗಂಡನ ಎಲ್ಲಾ ಕಷ್ಟ ಸುಖಗಳಲ್ಲಿಯೂ ಹಿತೈಷಿಣಿಯೂ ನಂಬಿಕೆಯಾದ ಸಲಹೆ ಗಾರಳೂ ಆಗಿದ್ದಾಳೆ. ಗಂಡನಿಗೆ ಆಕೆಯಲ್ಲಿ ನಂಬಿಕೆ ವಿಶ್ವಾಸ ಬಹಳ. ಈ ಸಂಕ್ಷೇಪವಾದ ಚರಿತ್ರೆಯಲ್ಲಿ ಸಹ 'ಸಿಯಾನ್ ಪ್ರಸಂಗ' ಎಂಬು ದನ್ನು ಕುರಿತು ಹೇಳಬೇಕು. ದಂಡನಾಯಕ ಚಿಯಾಂಗ್ ಕೈ ಷೇಕ್, ಸಿಯಾನ್ ಎಂಬಲ್ಲಿಗೆ ಯಾವುದೋ ಅವ್ಯವಸ್ಥೆಯನ್ನು ಸರಿಪಡಿಸಲು ಹೋಗಿ ದ್ದಾಗ ಚಾಂಗ್ ಸೂಲಿಯಾಂಗ್ ಎಂಬ ಸೇನಾನಾಯಕ ಆತನನ್ನು ಸೆರೆಹಿಡಿದ. ಚಿಯಾಂಗ್ ಕೈ ಷೇಕ್, ಚಾಂಗ್ ಸೂಲಿಯಾಂಗ್‌ನಿಗೆ

(ಇವನಿಗೆ ಉಪದಂಡನಾಯಕನೆಂದು ಹೆಸರು) ಕಮ್ಯೂನಿಸ್ಟ್‌ಗಳೊಡನೆ ಕಾದು ಎಂದು ಹೇಳಿದ್ದ. ಅದರ ಬದಲು ಉಪದಂಡನಾಯಕ, ಅವರೊಡನೆ ಸ್ನೇಹದಿಂದಲೂ ಸಲಿಗೆಯಿಂದಲೂ ಇದ್ದ. ದಂಡನಾಯಕ ಇದನ್ನು ವಿಚಾರಿಸಲು ಹೋದಾಗ, ಉಪದಂಡನಾಯಕ, ಆತನನ್ನು ಸೆರೆ ಹಿಡಿದ. ಚಿಯಾಂಗ್ ಕೈ ಷೇಕ್ "ಮಾತನಾಡಲಿಲ್ಲ. ಊಟ ಮಾಡಲಿಲ್ಲ. ಹೇಳಿದ ಯಾವ ಮಾತನ್ನೂ ಕೇಳಲಿಲ್ಲ." ಖೈದಿಗೂ ಯಜಮಾನನಿಗೂ ನಡೆದ ಸಂಭಾಷಣೆಯನ್ನು ದಂಡನಾಯಕ ತನ್ನ ದಿನಚರಿಯಲ್ಲಿ ಬರೆದಿದ್ದಾನೆ. ಸೆರೆ ಹಿಡಿದ ಉಪದಂಡನಾಯಕ ಹೀಗೆ ಹೇಳಿದ "ತಾವು ನನ್ನ ಸೂಚನೆಯನ್ನು ಒಪ್ಪಿಕೊಂಡರೆ, ನಾನು ತಮ್ಮ ಅಪ್ಪಣೆ ಪಾಲಿಸುತ್ತೇನೆ."

ಖೈದಿ ಹೀಗೆ ಪ್ರತ್ಯುತ್ತರ ಕೊಟ್ಟ "ನೀನು ನನ್ನ ಅಧೀನನೇ ಅಥವ ನನ್ನ ಶತ್ರುವೇ ಯಾರು? ನನ್ನ ಅಧೀನನಾದರೆ ನನ್ನ ಅಪ್ಪಣೆ ಪಾಲಿಸಬೇಕು. ನನ್ನ ಶತ್ರುವಾದರೆ ನನ್ನನ್ನು ಕೂಡಲೇ ಕೊಲ್ಲಬೇಕು. ಈ ಎರಡರಲ್ಲಿ ಒಂದು ಮಾರ್ಗವನ್ನು ಆರಿಸಿಕೊ. ನನ್ನೊಂದಿಗೆ ಮಾತನಾಡಬೇಡ. ನಾನು ನಿನ್ನ ಮಾತನ್ನು ಕೇಳುವುದಿಲ್ಲ."

ಉಪದಂಡನಾಯಕ ಹೀಗೆ ಹೇಳಿದ "ಇಂದಿನ ಜಗತ್ತಿನಲ್ಲಿ ನೀನೊಬ್ಬನೇ ಮಹನೀಯನೆಂದು ನನ್ನ ಭಾವನೆ. ಸ್ವಲ್ಪ ಸೋತು ನಮ್ಮ ಪ್ರಾರ್ಥನೆಲಾಲಿಸಿ, ಈ ಕ್ರಾಂತಿಯಲ್ಲಿ ಮಾರ್ಗದರ್ಶಕನಾಗು. ನಾವು ಬೇಕಾದುದು ಸಾಧಿಸಬಹುದು. ಸುಮ್ಮನೆ ನಿನ್ನ ಪ್ರಾಣ ಬಲಿ ಕೊಡುವುದರಿಂದ ಏನು ?"

ಚಿಯಾಂಗ್ ಕೈ ಷೇಕ್ ಹೀಗೆ ಹೇಳಿದ. "ನಾನು ದೃಢವಾದ ಮನಸ್ಸಿನಿಂದ, ನನ್ನ ತತ್ವವನ್ನು ಬಿಡುವ ಬದಲು ಜೀವವನ್ನೇ ಕೊಟ್ಟರೆ, ಸಾಯುವವರೆಗೆ ನನ್ನ ಸತ್ಯ ನನ್ನಲ್ಲಿಯೇ ಉಳಿಯುವುದು. ನನ್ನ ಆತ್ಮ ಎಂದೆಂದಿಗೂ ಉಳಿಯುವುದು."

ಸಿಯಾನ್‌ನಲ್ಲಿ ಈ ನಾಟಕ ನಡೆಯುತ್ತಿರುವಾಗ, ಸತಿ ಚಿಯಾಂಗ್ ಕೈ ಷೇಕ್‌ಳು, ಕುಮೆಂಗ್ ಟೌಂಗ್ ಸೈನ್ಯಾಧಿಕಾರಿಗಳಿಗೆ "ಸ್ವಲ್ಪ ಶಾಂತಿಯಿಂದಿರಿ, ದಂಗೆಯನ್ನು ಬಲ ಪ್ರದರ್ಶನದಿಂದ ತುಳಿಯಬೇಡಿ" ಎಂದು ಹೇಳಿಕೊಳ್ಳುತ್ತಿದ್ದಳು. ಚಿಯಾಂಗ್ ಕೈ ಷೇಕ್‌ರ ಆಸ್ಟ್ರೇಲಿಯನ್ ಮಿತ್ರ ಡೊನಾಲ್ಡ್ ಎಂಬುವನೂ, ಸತಿ ಚಿಯಾಂಗ್‌ಳೂ ಸೈನ್ಯಗಳನ್ನು ಹಿಡಿತ

ವಲ್ಲಿ ಇಡುವುದರಲ್ಲಿ ತೊಡಗಿದ್ದರು. ಸೈನ್ಯಗಳು, ಹಿಡಿತ ತಪ್ಪಿಹೋದರೆ ದಂಗೆ ಏನೋ ಅಡಗಿ ಹೋಗುತ್ತಿದ್ದಿತು. ಆದರೆ ಕ್ರಾಂತಿಗೆ ಚಿಯಾಂಗ್ ಕೈಷೇಕರು ಇಲ್ಲವಾಗುತ್ತಿದ್ದರು. ಆದುದರಿಂದ ಆಕೆ ಎರಡು ಕಾಲಿನ ಮೇಲೆ ನಿಂತು ಕಾದಾಡುವ ಗಂಡಸಿನಂತೆ ಮನಸ್ಸನ್ನು ಸ್ವಾಧೀನ ವಲ್ಲಿಟ್ಟು ಕೊಂಡು ಧೈರ್ಯದಿಂದಲೂ ದಕ್ಷತೆಯಿಂದಲೂ ಕೆಲಸ ಮಾಡ ತೊಡಗಿದ್ದಳು. ಈ ಗುಣಗಳು ಅಹಿಂಸೆಯ ಮೂಲತತ್ವಗಳು. ಆಕೆ ಸಿಯಾನ್‌ಗೆ ಆಕಾಶ ವಿಮಾನದಲ್ಲಿ ಹಾರಿ ಹೋಗಿ ಶತ್ರುವಿನ ಪಾಳಯಕ್ಕೇ ಹೋದಳು. ಶತ್ರುವಿನಲ್ಲಿ ಪೂರ್ಣ ನಂಬಿಕೆ ತೋರಿಸಿ ಗಂಡನನ್ನು ಗೌರವವಾಗಿ ಬಿಡಿಸಿ ಕೊಂಡಳು. ಗಂಡ ಯಾವ ಕರಾರಿಗೂ ಒಪ್ಪಲು ಸಿದ್ಧನಾಗಿರಲಿಲ್ಲ. ಆತ ಹೆಂಡತಿಗೆ ಹೀಗೆ ಬರೆದಿದ್ದ. "ನನ್ನ ಹೆಂಡತಿಗೆ ಅವಮಾನವಾಗುವಂತಹ ಅಥವ ಸನ್ ಎಟ್ ಸೇನ್‌ರ ಅನುಯಾಯಿಗೆ ಅಗೌರವವಾದ ಯಾವ ಕೆಲಸವನ್ನು ನಾನು ಮಾಡುವುದಿಲ್ಲ. ನಾನು ಕ್ರಾಂತಿಗಾಗಿ ಜನಿಸಿದೆ. ಕ್ರಾಂತಿಗಾಗಿ ಸಂತೋಷದಿಂದಲೇ ಸಾಯುತ್ತೇನೆ. ಈ ದೇಹವನ್ನು ಕಲುಷಿತ ಮಾಡದೆ ನನ್ನ ಜನನಿ ಜನಕರಿಗೆ ಹಿಂದಿರುಗಿಸುತ್ತೇನೆ." ಕೊನೆಗೆ ಹೆಂಡತಿ ಹೋಗಿ ಗಂಡನನ್ನು ಬಿಡಿಸಿದಾಗ ಆತ "ದೇವರು ಒಂದು ಹೊಸ ಕೆಲಸ ಮಾಡುವನು. ಹೆಂಗಸು, ಗಂಡಸನ್ನು ರಕ್ಷಿಸಲು ಅವಕಾಶ ಕೊಡುವನು" ಎಂದ. (ಇದನ್ನೂ ಹೇಳಬೇಕು; ಚಿಯಾಂಗ್ ಕೈಷೇಕ್ ಮೊದಲು ಬುದ್ಧ ಮತದವನಾಗಿದ್ದ. ಆತ ಸತಿಯನ್ನು, ಮದುವೆಯಾಗಬೇಕೆಂದು ಕೇಳುತ್ತಿದ್ದಾಗ 'ನೀನು ಕ್ರೈಸ್ತನು ಅಲ್ಲದುದರಿಂದ ಆಗುವುದಿಲ್ಲ' ಎಂಬ ಉತ್ತರ ಬಂತು. ಆಗ ಆತ "ನಾನು ಮತ ಬದಲಾಯಿಸುವುದಿಲ್ಲ. ನಿನ್ನನ್ನು ಮದುವೆಯಾಗುವುದಕ್ಕಾಗಿ ನಾನು ಮತ ಬದಲಾಯಿಸಿದರೆ ನಿನಗೆ ನನ್ನಲ್ಲಿ ಗೌರವ ಹೋಗುತ್ತೆ; ಆದರೆ ಕ್ರೈಸ್ತ ಧರ್ಮವನ್ನು ಅಭ್ಯಾಸ ಮಾಡುತ್ತೇನೆ. ನನ್ನ ಮನಸ್ಸಿಗೆ ಅದು ಒಪ್ಪಿದರೆ ಆಗ ಬದಲಾಯಿಸುತ್ತೇನೆ" ಎಂದ. ಆ ಸಬೂಬು ಫಲಕಾರಿ ಯಾಯಿತು. ಮದುವೆಯಾದ ಮೂರು ವರುಷಗಳ ನಂತರ ಆತ ಕ್ರೈಸ್ತನಾದ.)

ದಂಡನಾಯಕ ತನ್ನ ಮನಸ್ಸನ್ನು ತಾನು ಬಹಳ ಪರೀಕ್ಷಿಸಿಕೊಳ್ಳು ಹವನು. ಗಾಂಧಿಯವರಂತೆ ಆತ, ತನ್ನ ಅನುಯಾಯಿಗಳ ತಪ್ಪುಗಳ

ಗೆಲ್ಲಾ ತಾನೇ ಜವಾಬ್ದಾರನೆನ್ನುತ್ತಾನೆ. ಸಿಯಾನ್‌ನಲ್ಲಿ ತನ್ನನ್ನು ಸೆರೆ ಹಿಡಿದ ದಂಗೆಕೋರರ ಜವಾಬ್ದಾರಿಯೂ ತನ್ನದೇ ಎಂದ ಆತ. ದಂಗೆಕೋರರು ಈತನನ್ನು ಬಿಡುಗಡೆ ಮಾಡಿ ಕ್ಷಮಾ ಯಾಚಿಸಿದರು. ಅನಂತರ ಈತ ಪದೇ ಪದೇ ತನ್ನ ದಂಡನಾಯಕತ್ವಕ್ಕೆ ರಾಜೀನಾಮೆ ಕೊಟ್ಟ.

ಜಪಾನಿನೊಂದಿಗೆ, ಬೇರೆ ಸಹಾಯವಿಲ್ಲದೆ ಹೋರಾಡಿದ ಈತನ ಯೋಗ್ಯತೆ, ಚೆನ್ನಾಗಿ ಗೊತ್ತಾಗಿದೆ. ಇಂಗ್ಲಿಷ ಚರಿತ್ರಕಾರರು, ಪೂರ್ವದೇಶದ ಯುದ್ಧ ದಂಡನಾಯಕರ ಸಾಹಸವನ್ನು ಗೌರವದಿಂದಲೂ ಮೆಚ್ಚುಗೆಯಿಂದಲೂ ನೋಡಲು ಒಪ್ಪುವುದಿಲ್ಲ. ಆದರೆ ಚೀನದ ನಾಲ್ಕು ವರುಷದ ಧೀರಸಾಹಸ, ಅವರ ಮೆಚ್ಚುಗೆಯನ್ನೂ ಸಂಪಾದಿಸತೊಡಗಿದೆ. ಇದಕ್ಕೆ ಕಾರಣ ಚೀನ ಈಗ ಮಿತ್ರರಾಷ್ಟ್ರವಾಗಿರುವುದೇ ಇರಬಹುದು. ಎ ಜಿ. ಗಾರ್ಡನರ್ ಹೀಗೆ ಹೇಳುತ್ತಾನೆ. "ಜಪಾನು ಚೀನಾವನ್ನು ಮುತ್ತಿದುದು ಈ ನಾಟಕದ ಮೊದಲನೆಯ ದೃಶ್ಯ ; ಒಂಭತ್ತು ರಾಷ್ಟ್ರಗಳು ಸೇರಿ ಚೀನಾದ ಸ್ವಾತಂತ್ರ್ಯವನ್ನು ರಕ್ಷಿಸಬೇಕೆಂದಿದ್ದ ನಿಯಮವನ್ನು ಜಪಾನು ಮೀರಿತು. ಈ ಕೌಲಿಗೆ ರುಜು ಹಾಕಿದ್ದ ಇಂಗ್ಲೆಂಡಾಗಲಿ ಅಮೆರಿಕವಾಗಲಿ ಚೀನದ ಸಂರಕ್ಷಣೆಗೆ ಕಿರುಬೆರಳು ಸಹ ಎತ್ತಲಿಲ್ಲ. ಜಪಾನಿಗೆ "ಇದು ಸುಲಭ" ಎಂದು ತೋರಿತು. ಆದರೆ ಅದರ ಬದಲು ಒಂದು ಅದ್ಭುತ ನಡೆಯಿತು. ಈ ಅದ್ಭುತ ಈ ಯುದ್ಧದಲ್ಲಿ ಅತ್ಯಂತ ದೊಡ್ಡ ಬಹು ಫಲಕಾರಿಯಾದ ಅದ್ಭುತ. ಜಪಾನರು ನಿರೀಕ್ಷಿಸಿದಂತೆ ಚೀನ ಮೂರು ತಿಂಗಳಿನಲ್ಲಿ ನಿರ್ನಾಮವಾಗಲಿಲ್ಲ. ಆ ಸರ್ಕಾರ ಸೋಲಲಿಲ್ಲ. ಜನರು ದಯಾಭಿಕ್ಷೆ ಬೇಡಲಿಲ್ಲ. ಚೀಣರು, ಸ್ತ್ರೀಪುರುಷರು ಮಕ್ಕಳು ಲಕ್ಷಸಂಖ್ಯೆಯಲ್ಲಿ ಸಾಯತೊಡಗಿದರು. ಜಪಾನರಿಗೆ ಚೀನಾದಲ್ಲಿ, ಕಾಡಿನಲ್ಲಿ ಸಿಕ್ಕಿಕೊಂಡಂತೆ ಆಗಿದೆ. ಜಪಾನು ಒಂದು ರಾಷ್ಟ್ರವನ್ನು ನಾಶಮಾಡಲಿಲ್ಲ. ಒಂದು ರಾಷ್ಟ್ರವನ್ನು ಸೃಷ್ಟಿಸಿತು. ತ್ಯಾಗ ಕಷ್ಟದ ಕುಲುಮೆಯಲ್ಲಿ ಚೀನ, ಜಗತ್ತಿನ ಮಹತ್ತಾದ ರಾಷ್ಟ್ರಗಳ ಪೈಕಿ ಒಂದಾಗಿ ಪುನರುಜ್ಜೀವಿತವಾಗಿದೆ. ಈ ಪುನರ್ಜನ್ಮಕ್ಕೆ ಕಾರಣ ಚಿಯಾಂಗ್ ಕೈಷೇಕರ ಸ್ಫೂರ್ತಿದಾಯಕವಾದ ನಾಯಕತ್ವ ".

ಆದರೆ ಸತೀ ಚಿಯಾಂಗ್ ಕೈಷೇಕರ ವಿಚಾರಕ್ಕೆ ಹಿಂದಿರುಗುವ. ಆಕೆ ವಿಮಾನ ಆಡಳಿತದ ಅಧಿಕಾರಿಣಿ. ನೂತನ ಚೈತನ್ಯ ಚಳುವಳಿಯ

ಜೀವಾಳ. ಆ ಚಳುವಳಿ ನಮ್ಮ ರಚನಾತ್ಮಕ ಕಾರ್ಯಕ್ರಮದ ಮಾರ್ಗದಲ್ಲಿ ನಡೆಯುತ್ತಿದೆ. ಗ್ರಾಮಸುಧಾರಣೆ, ಗ್ರಾಮಗಳವರಿಗೆ ಆರೋಗ್ಯನೈರ್ಮಲ್ಯ ವನ್ನು ಬೋಧಿಸುವುದು, ಮದ್ಯಪಾನ ನಿರೋಧ ಪ್ರಚಾರ, ಪರಿಶುದ್ಧ ಜೀವನ ಇವು ಆ ಚಳುವಳಿಯ ಅಂಗಗಳು.

ಸತೀ ಚಿಯಾಂಗ್ ಕೈಷೇಕರ ಕಾರ್ಯಕ್ಷೇತ್ರ, ಜೀವನ, ಆಕೆಯ ಗಂಡ ನಿಂದ ಬೇರೆಯಿಲ್ಲ. ಕ್ರಾಂತಿಯ ಮನೋಭಾವ, ದೇಶದ ರಕ್ಷಣೆ, ಇಬ್ಬರಿಗೂ ಒಂದೇ ಸಮನಾದ ಧ್ಯೇಯ ಬಂಧನ. ಲೆನಿನ್‌ಗೂ ಆತನ ಹೆಂಡತಿಗೂ ಇದೇ ಬಾಂಧವ್ಯವಿದ್ದಿತು. ಸತೀ ಚಿಯಾಂಗ್‌ರ ಸಹೋದರಿ, ಸನ್‌ಯಟ್ ಸೇನರ ಹೆಂಡತಿಗೂ ಗಂಡನಿಗೂ ಇದೇ ವಿಧವಾದ ಬಾಂಧವ್ಯವಿದ್ದಿತು.

## ದಂಡನಾಯಕನ ಕಾರ್ಯನೀತಿ

ಮೇಲೆ ಹೇಳಿದುವು ಅವರ ಬಾಳಿನ ಹೆಗ್ಗುರುತುಗಳು. ಅವರು ಸುಮಾರು ಐದು ಗಂಟೆಗಳ ಕಾಲ ಬಿರ್ಲಾ ಭವನದಲ್ಲಿದ್ದರೂ, ಆ ಭೇಟಿ ಅತ್ಯಂತ ಅಲ್ಪಕಾಲದುವೇ ಆಯಿತು. ದಂಡನಾಯಕನೂ ಗಾಂಧಿಜಿಯೂ ಅವಕಾಶ ಸಾಲದಲ್ಲಾ ಎಂಬುದಾಗಿ ಅವಸರ ಅವಸರದಿಂದ ಮಾತನಾಡು ತ್ತಿದ್ದರು. ಅಲ್ಲದೆ ದಂಡನಾಯಕನ ಗುರಿಯೆಲ್ಲಾ ಯುದ್ಧವನ್ನು ಗೆಲ್ಲು ವುದೇ ಆಗಿದೆ. ಈ ದೃಢನಿಶ್ಚಯ ಅವನ ಮುಖದಲ್ಲಿಯೂ ಕಬ್ಬಿಣದಂತಹ ಕಟ್ಟುಮಸ್ತಾದ ದೃಢಕಾಯವಾದ ದೇಹದಲ್ಲಿಯೂ, ಚೆನ್ನಾಗಿ ಕಾಣುತ್ತದೆ. ಅವನ ಮಾತು ನಿಧಾನ ಮತ್ತು ಸ್ಪಷ್ಟ. ಒಂದೊಂದು ವೇಳೆ ಸ್ವಲ್ಪ ನಗು. ಇಷ್ಟರಿಂದ ಆತನ ಕಾರ್ಯದ ನೀತಿಯನ್ನು ಅರಿಯುವುದು ಸುಲಭವಲ್ಲ. ಚೀನ ಇರುವಂತಹ ಪರಿಸ್ಥಿತಿಯಲ್ಲಿಯೇ ಇರುವ ನಮಗೆ ಮುಖ್ಯವಾದುದು ಏನೆಂದರೆ ಆತನ ಕಾರ್ಯನೀತಿ. ಚೀನ ಸುದ್ದಿಖಾತೆಯವರು ಪ್ರಕಟಿಸಿದ, 'ದಂಡನಾಯಕನ ಕಾರ್ಯನೀತಿ ಯೋಗ' ಎಂಬ ಒಂದು ಚಿಕ್ಕ ಪುಸ್ತಕ ಗಾಂಧಿ ಯವರ ಬಳಿ ಇದ್ದಿತು. ದಂಡನಾಯಕನನ್ನು ನೋಡುವುದಕ್ಕೆ ಮುಂಚೆ ಗಾಂಧಿಯವರು ಇದನ್ನು ಓದುವುದು ಒಳ್ಳೆಯದೆಂದು, ಪ್ಯಾರಿಲಾಲ್ ಅದನ್ನು ಗಾಂಧಿಗೆ ಕೊಟ್ಟರು. ಚೀನಾ ಭಾಷೆಯಿಂದ ಅನುವಾದ ಮಾಡಿ ದವರು ಸತೀ ಚಿಯಾಂಗ್ ಕೈಷೇಕ್. ಈ ಮುಖ್ಯವಾದ ಗ್ರಂಥದ ಸಿದ್ಧತೆ ಯಲ್ಲಿ ಬಹಳ ಎಚ್ಚರಿಕೆ ತೆಗೆದುಕೊಂಡೆನೆಂದು ಆಕೆ ಹೇಳಿದ್ದಾರೆ. ಆಕೆ "ಈ

ನಿರುತ್ಸಾಹದ ಕಾಲದಲ್ಲಿ ಈ ದೃಶ್ಯಕ್ಕೆ ಅನುಗುಣವಾದ ಯೋಗ್ಯತೆಯುಳ್ಳ ಮನುಷ್ಯ ಕೊಟ್ಟ ಈ ಭಾಷಣಕ್ಕೆ" ಮುನ್ನುಡಿಯನ್ನೂ, ಟಿಪ್ಪಣಿಯನ್ನೂ ಬರೆದಿದ್ದಾಳೆ. ಈ ಟಿಪ್ಪಣಿಗಳಿಂದ ಈ ಕ್ರಾಂತಿಯ ನಾಯಕ ಹೇಳುವ ಕಾರ್ಯನೀತಿಗಳೆಲ್ಲಾ ಚೀನದ ಪ್ರಾಚೀನ ಋಷಿಗಳ ವಾಣಿಯೇ ಎಂದು ಆಕೆ ತೋರಿಸಿದ್ದಾಳೆ.

ಚೀನದ ವೇದಾಂತವೂ ಭಾರತ ವೇದಾಂತವೂ ಸ್ವಲ್ಪ ಹೆಚ್ಚು ಕಡಿಮೆ ಸಮಾನ. ಈ ಚೀನಾದವರ ವೇದಾಂತ, ಭಗವತ್‌ಗೀತೆಯ ಕರ್ಮಯೋಗಕ್ಕೆ ಅನುಗುಣವಾಗಿದೆ. ದಂಡನಾಯಕ ಹೀಗೆ ಹೇಳುತ್ತಾನೆ. "ಕರ್ಮವೇ ಜೀವ. ಕರ್ಮವೆಂದರೆ ಜನರಿಗಾಗಿ ಜನತೆಗಾಗಿ ಮಾಡುವ ಕರ್ಮ"

ಗೀತೆ ಹೀಗೆ ಹೇಳುತ್ತದೆ.

"ಕರ್ಮ ಮಾಡದೆ ಯಾರೂ ಒಂದು ಗಳಿಗೆಯೂ ಇರಲು ಸಾಧ್ಯವಿಲ್ಲ. ಪ್ರತಿಯೊಬ್ಬನ ಸ್ವಭಾವವೂ ಕರ್ಮ ಮಾಡುವುದೇ ಆಗಿದೆ." (೩-೫.) ದಂಡನಾಯಕ ಹೀಗೆ ಹೇಳುತ್ತಾನೆ, "ಹುಟ್ಟಿ ಸಾಯುವವರೆಗೆ, ಎಲ್ಲಿಯವರೆಗೆ ನಾವು ಕಾಲಕ್ಕೆ ಅಧೀನರಾಗಿರುತ್ತೇವೆಯೋ ಅಲ್ಲಿಯವರೆಗೆ ಕರ್ಮದಿಂದ ವಿಮುಖವಾಗುವುದು ಮನುಷ್ಯನಿಗೆ ಸಾಧ್ಯವಿಲ್ಲ ಮನುಷ್ಯ ಬೆಳೆಯುವುದು ಕರ್ಮದಿಂದಲೇ. ಅವನ ಸ್ವಭಾವ, ಗುಣ, ಬೆಳೆದು ಹಿರಿಯನಾಗುವುದು ಕರ್ಮದಿಂದಲೇ". ಗೀತೆ ಹೀಗೆ ಹೇಳುತ್ತದೆ, "ನಿನ್ನ ಕೆಲಸ ನೀನು ಮಾಡು. ನಿನ್ನ ಸ್ವಭಾವಕ್ಕೆ ಅನುಗುಣವಾದ ಕೆಲಸ ನೀನು ಮಾಡಿದರೆ ನಿನಗೆ ಪಾಪವುಂಟಾಗುವುದಿಲ್ಲ" (೧೮-೪೭.) ದಂಡನಾಯಕ ಹೀಗೆ ಹೇಳುತ್ತಾನೆ, "ಮಾಡುವ ಕೆಲಸ ಮನುಷ್ಯನ ಸ್ವಭಾವಕ್ಕೆ ಸಮರಸವಾಗಿದೆಯೇ ಎಂಬುದನ್ನು ಮಾತ್ರ ನಾವು ಯೋಚಿಸಬೇಕು. ಮನುಷ್ಯ ತನ್ನ ಸ್ವಭಾವಕ್ಕೆ ಅನುಗುಣವಾಗಿ ತನ್ನಲ್ಲಿರುವ ಶಕ್ತಿಗಳನ್ನು ಬೆಳೆಸಿಕೊಳ್ಳಬೇಕು." ಹೀಗೆ ಪ್ರಪಂಚದ ಕಲ್ಯಾಣಕ್ಕಾಗಿ ನಿಸ್ವಾರ್ಥತೆಯಿಂದ ಮಾಡುವ ಕೆಲಸ, ಪ್ರಕೃತಿಯ ಮತ್ತು ನಮ್ಮ ಸ್ವಭಾವಕ್ಕೆ ಅನುಗುಣವಾದುದು. ಗೀತೆಯಲ್ಲಿ ಹೀಗೆ ಹೇಳಿದೆ, "ಈ ಚಕ್ರವನ್ನು ಹೀಗೆ ತಿರುಗಿಸದವನು ವ್ಯರ್ಥವಾಗಿ ಜೀವಿಸುತ್ತಾನೆ" (೩-೪). ದಂಡನಾಯಕ ಹೀಗೆ ಹೇಳುತ್ತಾನೆ, "ಭೂಮಿಸುತ್ತುತ್ತಿರುವಂತಹ ಚಲನೆಯನ್ನು ಬರಿಯ ಚಲನೆ ಎಂದು ಮಾತ್ರ ಹೇಳುವುದಕ್ಕಾಗುವುದಿಲ್ಲ. ಆ ವಿಶ್ರಾಂತಿಯಿಲ್ಲದ ಚಲನೆ

ಯನ್ನು, ಪ್ರಾಚೀನರು ಪ್ರಕೃತಿಯ ಕರ್ಮ ಎಂದು ಕರೆದರು. ಕರ್ಮದ ಗುಣಕ್ಕೆ ಅದೇ ಉದಾಹರಣೆಯಾಗಬಹುದು.

ದಂಡನಾಯಕನು ನಾವು ಯಜ್ಞವೆಂದು ಕರೆಯುವ ಸತ್ಕರ್ಮಕ್ಕೂ, ಬರಿಯ ಅಪ್ರಯೋಜಕವಾದ ಕರ್ಮ ಅಥವ ಅಕರ್ಮಕ್ಕೂ ವ್ಯತ್ಯಾಸ ತೋರಿಸಿದ್ದಾನೆ ಆ ಭಾಗ ಬಹಳ ಚೆನ್ನಾಗಿದೆ. ಆದುದರಿಂದ ಸ್ವಲ್ಪಭಾಗ ಉದಹರಿಸುತ್ತೇನೆ. "ಕರ್ಮ ಎಂಬುದು ಬರಿಯ ಚಲನೆಯಲ್ಲ. ಕರ್ಮ ಒಂದೇ ಸಮನೆ ಮುಂದುವರಿಯುತ್ತದೆ. ಚಲನೆ ಮಧ್ಯೆಮಧ್ಯೆ ನಿಲ್ಲುತ್ತದೆ. ಕರ್ಮ ಸ್ವಾಭಾವಿಕ; ಚಲನೆ ಹೊರಗಿನ ಬಲಾತ್ಕಾರದ ಫಲ; ಕರ್ಮ. ಪ್ರಕೃತಿ ನಿಯಮಕ್ಕೆ ಅನುಸಾರವಾಗಿ ಮನುಷ್ಯಸ್ವಭಾವಕ್ಕೆ ಹೊಂದಿಕೊಂಡಿರುವುದು. ಚಲನೆ ಯಾವುದೋ ಹೊರಗಿನ ಒತ್ತಡಕ್ಕೆ ಸಿಕ್ಕಿರುವುದು ಉದಾಹರಣೆಗೆ ಕರ್ಮ, ನಿಲ್ಲದೆ ಹರಿಯುತ್ತಿರುವ ನೀರಿನ ಪ್ರವಾಹ; ಹಗಲು ರಾತ್ರಿ ಓಡುತ್ತಿರುವುದು ಅದರ ಸ್ವಭಾವ. ಚಲನೆ ಎಂಬುದು ನೀರಿನಮೇಲೆ ಬಿದ್ದ ಕಲ್ಲಿನ ಫಲ. ಕಲ್ಲು ನೀರಿಗೆ ಬಿದ್ದಕೂಡಲೇ ನೀರು ಚಲಿಸುತ್ತದೆ. ಮೇಲೆ ಹಾರುತ್ತದೆ. ಆಗ ಅದರ ಚಲನ ಹೆಚ್ಚು ಅಪಾಂತರ. ಆದರೆ ಹೊರಗಿನಿಂದ ಬಂದ ಆ ಬಲ ಕಡಿಮೆಯಾದ ಮೇಲೆ, ನೀರು ಮೊದಲಿನಂತೆ ಆಗುತ್ತದೆ. ಈ ಚಲನೆ ಅಶಾಶ್ವತ ಯಾಕೆಂದರೆ ಅದಕ್ಕೆ ಬೇಕಾದ ಶಕ್ತಿ ಹೊರಗಿನಿಂದ ಬಂದಿದೆ". ಚೀಣ ಭಾಷೆಯು, ತನ್ನದೇ ಆದ ವೈಶಿಷ್ಟ್ಯವನ್ನು ತೋರಿಸುವ ಇನ್ನೊಂದು ಉಪಮಾ ಇದು. "ಅರಿಷಡ್ವರ್ಗಗಳಿಗೆ ಒಳಗಾಗಿ ಅವುಗಳಿಂದ ಪ್ರೇರಿತನಾದಾಗ ಮಾತ್ರ ಚಲಿಸುವ ಮನುಷ್ಯ, ಗಂಟೆಯಂತೆ; ಗಂಟೆಯನ್ನು ಬಾರಿಸಿದರೆ ಸದ್ದಾಗುತ್ತದೆ, ಇಲ್ಲದಿದ್ದರೆ ಇಲ್ಲ." ಗೀತೆ ಹೀಗೆ ಹೇಳುತ್ತದೆ. "ಸತ್ಕರ್ಮದ ತಿರುಳನ್ನು ಅರಿಯದ ಮನುಷ್ಯ, ಕಾಮ ಕ್ರೋಧ ಮೋಹದಿಂದ ಪೀಡಿತನಾಗಿ ಚಲಿಸುತ್ತಾನೆ. ಆದರೆ ಸಂಯಮಿ ಆತ್ಮದಿಂದಲೇ ಅನುಭವಿಸಿ ತನ್ನಲ್ಲಿ ತಾನು ತುಷ್ಟನಾಗುತ್ತಾನೆ". (೩-೧೭) ಅವನು ಕರ್ಮ ಮಾಡುವುದಿಲ್ಲ. ಆದರೆ ಶಾಂತನಾಗಿದ್ದಾನೆ. ಆದರೆ ಆ ಶಾಂತಿ ಅಕರ್ಮವಲ್ಲ. ದಂಡನಾಯಕ ಹೀಗೆ ಹೇಳುತ್ತಾನೆ. "ವಿಶ್ರಾಂತಿಯೂ ಕರ್ಮವಾಗುವುದು. ನನ್ನ ಕರ್ಮಯೋಗದಲ್ಲಿ ವಿಶ್ರಾಂತಿಗೂ ಕರ್ಮಕ್ಕೂ ವ್ಯತ್ಯಾಸವಿಲ್ಲ. ಈ ವ್ಯತ್ಯಾಸ ಹೆಸರಿಗೆ ಮಾತ್ರ" ಗೀತೆಯಲ್ಲಿ ಕೃಷ್ಣ ಹೀಗೆ ಹೇಳುತ್ತಾನೆ. "ನಾನು ಯಾವಾಗಲೂ ನಿದ್ರಾರಹಿತವಾದ

ಆದಿ ಇಲ್ಲದ ಕರ್ಮದಲ್ಲಿ ಇದ್ದೇನೆ. (೩-೨೩) ಆದರೆ ಅದು ವಿಶ್ರಾಂತಿ. ಸರ್ ಚಿಯಾಂಗ್ ಕೈಷೇಕ್ ತಮ್ಮ ಟಿಪ್ಪಣಿಯಲ್ಲಿ ಹೇಳಿರುವಂತೆ "ಇದಕ್ಕೆ ಸರಿಯಾದ ಉಪಮಾನವೆಂದರೆ ಬುಗರಿ ; ಅದು ಯಾವಾಗಲೂ ತಿರುಗುತ್ತಿರುವುದರಿಂದ ಅದಕ್ಕೆ ಒಂದು ವಿಧವಾದ ವಿಶ್ರಾಂತಿ ಸಮತೆ ಯುಂಟಾಗುತ್ತದೆ. ಆ ಸಮತೆಯನ್ನು ಬುಗರಿಯ ವಿಚಾರದಲ್ಲಿ ಸಾಮಾನ್ಯ ವಾಗಿ ಬುಗುರಿ ಮಲಗಿರುವುದೆಂದು ಹೇಳುತ್ತಾರೆ". ಎನ್ನುತ್ತಾರೆ. ಅಥವ ದಂಡನಾಯಕ ಹೇಳಿರುವಂತೆ ಸೆಂಗ್‌ಕೊಫಾನ್ (Tseng-Kuo-Fan) ಎಂಬ ವೇದಾಂತಿ "ತನ್ನಲ್ಲಿ ತಾನು ಐಕ್ಯನಾಗಿ ಬೂದಿಯಾಗುವು ದಲ್ಲ. ಅದು ವಿಶ್ರಾಂತಿ ಅಲ್ಲವೇ ಅಲ್ಲ. ಅಂತಹ ಮನಸ್ಸನ್ನು ಯಾವು ದಾದರೂ ಹೊರಗಿನ ಗದ್ದಲ ಅವಾಂತರಗಳು ಪೂರ್ಣವಾಗಿ ವಿಚಲಿತ ಮಾಡಿ ಬಿಡಬಹುದು" ಎಂಬುದೇ ಅಭಿಪ್ರಾಯ.

ಗೀತೆಯಲ್ಲಿ ಹೇಳಿರುವಂತೆ ಫಲದಕಡೆ ನೋಡದೆ ಕರ್ಮ ಮಾಡ ಬೇಕೆಂಬ ತತ್ವ, ದಂಡನಾಯಕ ಚಿಯಾಂಗ್ ಕೈಷೇಕರ ಪುಸ್ತಕದಲ್ಲಿ ಸುಂದರ ವಾಗಿ ಪ್ರತಿಬಿಂಬಿತವಾಗಿದೆ. "ಜನಿಸಿರುವವರೆಲ್ಲ ಭೂಮಿ ಸ್ವರ್ಗದ ನಡುವೆ ನಮ್ಮ ದಿನಗಳನ್ನು ಕಳೆಯುತ್ತಿದ್ದೇವೆ. ಅಪಜಯದ ಭಯ ನಮಗೆ ಇರ ಕೂಡದು. ಕರ್ಮಮಾಡದೆ ಇರುವುದು ಮಾತ್ರವೇ ನಮ್ಮ ಅಪಜಯ".

ಕೊನೆಯ, ಅತ್ಯಂತ ಮುಖ್ಯವಿಷಯ, ಸತ್ಕರ್ಮದ ತಿರುಳು ಸಮ್ಯಕ್ ಜ್ಞಾನ.—ನಿಜವಾದ ಜ್ಞಾನ ಯಾವುದೆಂದು ಗೀತೆಯ ಎರಡನೆ ಅಧ್ಯಾಯ ದಲ್ಲಿ ಹೇಳಿರುವುದನ್ನು ಹೋಲಿಸಿ ನೋಡಿ—ಅನಂತರ ದಂಡನಾಯಕ ಹೀಗೆ ಹೇಳುತ್ತಾನೆ. "ಸತ್ಕರ್ಮ, ಜ್ಞಾನದಿಂದ ಉಂಟಾಗುತ್ತದೆ. ಕರ್ಮ ದಿಂದ ಮತ್ತೆ ಜ್ಞಾನವುಂಟಾಗುತ್ತದೆ........ನಮ್ಮ ಕಾರ್ಯಗಳಲ್ಲಿ, ಅಭ್ಯಾಸ ದಿಂದ ನಮಗೆ ನಿಜವಾದ ಜ್ಞಾನ ಉಂಟಾಗುತ್ತದೆ. ಜ್ಞಾನವನ್ನು ವೃದ್ಧಿ ಮಾಡಿಕೊಳ್ಳುವ ಶಕ್ತಿ ನಮಗೆ ಕರ್ಮದಿಂದ ಮಾತ್ರ ಉಂಟಾಗುತ್ತದೆ." (ಗೀತ ೪-೨೩. ೧೮-೫೭.೧೦-೧೦) ಈ ಜ್ಞಾನ, ಬುದ್ಧಿಯೋಗ ಎರಡೂ ಒಂದೇ.

ಈ ತತ್ವ ತಿಳಿದವರಿಗೆ ಉಳಿದ ಸಂದೇಶ ಸ್ಪಷ್ಟ. "ಕರ್ಮವೇ ಜೀವ ; ಸ್ವಲ್ಪ ಶಕ್ತಿಯುಳ್ಳ ಮನುಷ್ಯ ಸಹ ತನ್ನ ಶಕ್ತಿಯು ಪ್ರಕಾಶವಾಗುವ ಮಾರ್ಗವನ್ನು ಕಂಡು ಕೊಳ್ಳುತ್ತಾನೆ, ಆ ಪ್ರಕಾಶ ಮಾರ್ಗ ಅವನಿಗೂ ಇತರರಿಗೂ ಒಳ್ಳೆಯದಾಗುತ್ತದೆ. ಇತರರಿಗಾಗಿ, ತನ್ನ ಪೂರ್ಣ ಸಾಹಸ

ವನ್ನು ಮಾಡುವುದರಿಂದ ತನಗೆ ತೃಪ್ತಿಯುಂಟಾಗುವುದೆಂಬುದು ಮಗುವಿಗೂ ಗೊತ್ತು. ಮಗುವನ್ನು ಯಾರೂ ಹೊಗಳದಿದ್ದರೂ ತನ್ನ ಮನಸ್ಸಿಗೆ ತೃಪ್ತಿಯಾಗಿರುವುದು ಅದಕ್ಕೆ ಗೊತ್ತಾಗುತ್ತದೆ. ಮಗುವಿನಿಂದ ಮುದುಕನಾಗುವವರೆಗೆ ಒಂದೇ ಒಂದು ಹೆದ್ದಾರಿ. ಮೊದಲು ತನ್ನ ಸ್ವಂತ ಆವಶ್ಯಕತೆ ಜೀವನಗಳಿಗಾಗಿ ಕರ್ಮ ಮಾಡುವುದು. ಅನಂತರ ಮನಸ್ಸು ವಿಶಾಲವಾದಂತೆ, ಸಂಸಾರ, ಪಕ್ಷ, ರಾಷ್ಟ್ರ, ಕೊನೆಯಲ್ಲಿ ಮನುಷ್ಯ ಪ್ರಪಂಚವೇ ಸೇವೆಗೆ ಅರ್ಹವಾದ ಕ್ಷೇತ್ರವಾಗುತ್ತದೆ. ಕ್ರಾಂತಿಯಲ್ಲಿ ತನ್ನ ಸ್ಥಾನ ಗಳಿಸಲು ಅರ್ಹತೆ ಪಡೆಯುವವನು, ಇತರರನ್ನು ಹೆದರಿಸುವ ಯಾವ ಅನಾಯಕನ್ಕೂ ಹೆದರುವುದೇ ಇಲ್ಲ. ತನ್ನ ಕರ್ತವ್ಯದಿಂದ, ತನ್ನ ಮೇಲೆ ಯಾವ ಯಾವ ಜವಾಬ್ದಾರಿ, ಕಷ್ಟಬಂದರೂ ಅವನ ಕ್ರಾಂತಿಯ ಮನೋ ಭಾವ, ಕರ್ಮಮಾಡಬೇಕೆಂಬ ಮನೋಭಾವದಿಂದ ಅವನು ಆ ಕಷ್ಟವನ್ನು ಔದಾಸೀನ್ಯದಿಂದಲೇ ಎದುರಿಸುತ್ತಾನೆ. ಯಾವ, ಕಷ್ಟ ಬರಲಿ, ವಿಷ ಪರೀಕ್ಷೆ, ನೀರಿನ ಪರೀಕ್ಷೆ, ಬೆಂಕಿಯ ಪರೀಕ್ಷೆ, ಏನೇಬರಲಿ, ತನ್ನ ಸಮಸ್ತವೂ ನಾಶವಾಗಲಿ ಅವನ್ನೆಲ್ಲಾ ಅವನು ಸ್ವಾಭಾವಿಕವಾಗಿ ಸ್ವೀಕರಿಸುತ್ತಾನೆ. ಈ ಬಗೆಯ ಮನುಷ್ಯನಿಗೆ ಕರ್ಮ ಸುಲಭ ಎಂಬ ಅರ್ಥದಲ್ಲಿ ಅದನ್ನು ಹೇಳಿದೆ." ಮತ್ತು ತ್ಸಂಗ್ ಕೊ ಫಾನ್ (Tseng-Kuo-Fan) ರ ಮಾತಿನಲ್ಲಿ "ನೀವು ಪದೇ ಪದೇ ಕರ್ತವ್ಯ ಪರಾಙ್ಮುಖರಾಗುತ್ತಿದ್ದೀರಿ. ಪ್ರಾಪಂಚಿಕ ವಸ್ತುಗಳ ಬಗ್ಗೆ ನಿಮಗೆ ಬಹಳ ಆದರೆ ನೀವು ಊಟಕ್ಕೆ ಕಾಲ ಮೀರಿ ಬಂದುದನ್ನು ಯಾರೂ ಕಾಣರು."

ಇವು ಹರಿಜನ ಪತ್ರದ ಯಂಗ್ ಇಂಡಿಯಾದ ವಾಕ್ಯಗಳಂತೆಯೇ ಕಾಣುತ್ತಿವೆ. ಯಾಕೆಂದರೆ ಚಿಯಾಂಗ್ ಕೈಷೇಕ್ ನವ ಗಾಂಧಿಯವರಂತೆ 'ಕೇವಲ ಪಾಲು ಕೆಲಸಗಾರನು, ಹೊರತು ಮಾತುಗಾರನಲ್ಲ."

## ಮಾತು ಕಥೆ.

ಆದರೆ ವಾಚಕರು ಮಾತುಕಥೆ ವಿಚಾರ ಏನು ಎಂದು ಆತುರದಿಂದ ಕೇಳಬಹುದು. ಹೌರಾ ಸ್ಟೇಷನ್ನಿನಲ್ಲಿ ಇಬ್ಬರು ಪ್ರಯಾಣಿಕರು ಯಾವು ದಾದರೂ ಒಪ್ಪಂದಕ್ಕೆ ಬಂದಿದ್ದೀರಾ ಎಂದು ಕೇಳಿದರು. ಗಾಂಧಿ

ಯವರು ಯಾವ ವ್ಯಾಪಾರಕ್ಕೂ ಒಪ್ಪಂದಕ್ಕೂ ಹೋಗಿರಲಿಲ್ಲ. ಗಾಂಧಿ ಮತ್ತು ದಂಡನಾಯಕ ಇಬ್ಬರ ಮನಸ್ಸಿನಲ್ಲಿಯೂ ಅದು ಇಲ್ಲ. ಅವರಿಗೆ ಬೇಕಾಗಿದ್ದುದು ಒಬ್ಬರನ್ನೊಬ್ಬರು ನೋಡಿ ಒಬ್ಬರ ಪರಿಚಯ ಒಬ್ಬರು ಮಾಡಿಕೊಂಡು ತಿಳಿದು ಕೊಳ್ಳುವುದು. ಇದು ತಕ್ಕಮಟ್ಟಿಗೆ ಸಾಧ್ಯವಾಯಿತು. ಆ ಭೇಟಿಯಲ್ಲಿ ಸ್ವಲ್ಪಕಾಲ ಗಾಂಧಿಯವರು ಸತ್ಯಾಗ್ರಹ ಅಸಹಕಾರದ ವಿಷಯ ತಿಳಿಸಿದರು. "ಈ ಯುದ್ಧದ ಅಸ್ತ್ರ ಯಾವ ಸದ್ದನ್ನೂ ಮಾಡುವುದಿಲ್ಲ. ಕೊಲ್ಲುವುದಿಲ್ಲ. ಬೇಕಾದರೆ ತನ್ನ ಪ್ರಾಣವನ್ನೇ ಕೊಡುತ್ತದೆ." ಧನುಷ್ ತಕಲಿ ಕೆಲಸ ಮಾಡುತ್ತಿದ್ದುದನ್ನು ಸತಿ ಚಿಯಾಂಗ್ ಕೈಷೇಕ್ ರು ನೋಡಿ "ಇದನ್ನು ನೀವು ನನಗೆ ಕಲಿಸಬೇಕು" ಎಂದರು. ಗಾಂಧಿಯವರು "ಸೇವಾಗ್ರಾಮಕ್ಕೆ ಬನ್ನಿ ಕಲಿಸುತ್ತೇನೆ." "ದಂಡನಾಯಕ ಇಲ್ಲಿ ನಿಮ್ಮನ್ನು ತನ್ನ ರಾಯಭಾರಿಯಾಗಿ ಇಡಲಿ. ನಾನು ನನ್ನ ಮಗಳಾಗಿ ಸ್ವೀಕರಿಸುತ್ತೇನೆ" ಎಂದರು ಗಾಂಧಿಯವರು. ಅವರೊಂದಿಗೆ ಆಗಲೇ ಅಷ್ಟು ಸ್ನೇಹ ಸಲಿಗೆಯಿಂದ ಮಾತನಾಡುವಷ್ಟು ಅವರ ಬಾಂಧವ್ಯ ಆ ಕೆಲವು ಗಂಟೆಗಳಲ್ಲಿ ಬೆಳೆದಿದ್ದಿತು. ಪ್ರಾರಂಭದ ಅರ್ಧ ಗಂಟೆಯಲ್ಲಿ ದಂಡನಾಯಕನ ಜತೆಯಲ್ಲಿ ಬಂದಿದ್ದ ಅಧಿಕಾರಿ ದ್ವಿಭಾಷಿ ಭಾಷಾಂತರ ಮಾಡಿದ. ಅನಂತರ ಗಾಂಧಿಯವರು "ನಮ್ಮದು ಔಪಚಾರಿಕವಾದ ಅಧಿಕಾರದ ಮಾತಲ್ಲ. ನಿಮ್ಮ ಸತಿ ದ್ವಿಭಾಷಿಯಾಗಲಿ ಎಂದರು. ಸತಿ ಚಿಯಾಂಗ್‌ರು ಮಹಾತ್ಮಜೀ ನೋಡಿದಿರಾ. ಒಳ್ಳೆ ಪೀಕಲಾಟಕ್ಕೆ ತಂದಿರಿ. ಎಲ್ಲರೂ ನಿಮ್ಮ ಬಲೆಗೆ ಬೀಳುತ್ತಾರೆಂಬುದು ನನಗೆ ಗೊತ್ತು. ನನ್ನ ಪತಿ ಬಹಳ ಕೆಲಸ ಕೊಡುತ್ತಾರೆ. ಅವರ ಕಷ್ಟವಾದ ಸೂಕ್ಷ್ಮವಾದ ಆಲೋಚನೆಗಳನ್ನು ನಾನೇ ಭಾಷಾಂತರಿಸ ಬೇಕಾಗಿದೆ. ಆದರೆ ಈಗ ಒಂದು ವರುಷದಿಂದ ಈ ಕೆಲಸವನ್ನು ಸರ್ಕಾರಿ ನೌಕರ ದ್ವಿಭಾಷಿಗೆ ಹಾಕಿ ನಾನು ಸುಖವಾಗಿ ಕಾಲ ಕಳೆಯುತ್ತಿದ್ದೇನೆ ಎಂದರು. ಗಾಂಧಿ ನಗುತ್ತಾ "ಹಾಗಾದ ಮೇಲೆ ನೀವು ಸರಿಯಾದ ಗೃಹಿಣಿಯಲ್ಲ" ಎಂದರು. ಸತಿ ಚಿಯಾಂಗ್‌ರು "ಆತ ದ್ವಿಭಾಷಿಯನ್ನು ಮದುವೆಯಾಗಲಿಲ್ಲ. ಆತ ಮದುವೆಯಾದುದು ಒಂದು ಸ್ತ್ರೀಯನ್ನು" ಎಂದರು. ಹೀಗೆಯೇ ಸಂಭಾಷಣೆ ನಡೆಯಿತು. ಮೊದಲನೆಯ ಮಾತು ಮುಗಿದನಂತರ ಸತಿ ಚಿಯಾಂಗ ರು "ನಾನು

ಅನೇಕ ಪುರುಷರನ್ನು ನೋಡಿದ್ದೇನೆ. ಯಾರ ಬಲೆಗೂ ಬೀಳುವವಳಲ್ಲ. ಆದರೆ ಮಹಾತ್ಮರು ನನ್ನನ್ನು ಆಕರ್ಷಿಸಿದ್ದಾರೆ" ಎಂದಳು. ಉಳಿದ ಮಾತು ಕತೆಗಳನ್ನು ಊಹಿಸಿಕೊಳ್ಳುವುದು ಒಳ್ಳೆಯದು. ದಂಡನಾಯಕ "ಭಾರತಕ್ಕೆ ಅಸಹಕಾರ ಒಳ್ಳೆಯದು. ಆದರೆ ಇತರ ದೇಶಗಳೂ ಭಾರತದಂತೆ ಇದ್ದ ಹೊರತು ಅವಕ್ಕೆ ಅಸಹಕಾರ ಒಳ್ಳೆಯದೆಂದು ಹೇಳಲು ಸಾಧ್ಯವಿಲ್ಲ" ಎಂದು ಅಭಿಪ್ರಾಯ ಪಟ್ಟರು. ಜಪಾನರು ಭಾರತವನ್ನು ಆಕ್ರಮಿಸಿದರೆ ಇಲ್ಲಿಯೂ ಅದೇ ಅನ್ಯಾಯ ಅತ್ಯಾಚಾರ ನಡೆಯಬಹುದೆಂದು ಆತ ಶಂಕಿಸಿದ. ಅಸಹಕಾರದ ತತ್ವ, ಕಾರ್ಯ ಕ್ರಮಗಳನ್ನೆಲ್ಲಾ ದಂಡನಾಯಕನೊಂದಿಗೆ ಚರ್ಚಿಸುವುದು ಗಾಂಧಿಯವರಿಗೆ ಸಾಧ್ಯವಾಗಲಿಲ್ಲ. ಆದರೆ ಅವರು ಜಪಾನ ಬರಲಿ ಜರ್ಮನಿ ಬರಲಿ ಅವರನ್ನು ಭಯಂಕರವಾದ ಅಸಹಕಾರದಿಂದ ಎದುರಿಸುತ್ತೇವೆ ಎಂದು ದೃಢವಾಗಿ ಹೇಳಿದರು. ದಂಡನಾಯಕ ಹೀಗೆ ಹೇಳಿದರು "ನಿಮ್ಮ ಅಸಹಕಾರ ಬರಿಯ ಪಟ್ಟುತಿನ್ನುವ ಅಸಹಕಾರವಲ್ಲ. ಇದು ಪ್ರಗತಿಯ ಚಳುವಳಿ. ನನಗೆ ಗೊತ್ತು. ಆದರೆ ಈ ಶತ್ರುಗಳು ನಿಮ್ಮ ಮುನ್ನುಗ್ಗುವ ಅಸಹಕಾರ ಶಕ್ತಿಗೂ ಹೆದರದಿರಬಹುದು. ಅಹಿಂಸೆಯನ್ನು ಕುರಿತು ಬೋಧಿಸುವುದನ್ನೂ ಅಸಾಧ್ಯಮಾಡಬಹುದು."

ಗಾಂಧಿಜಿ ಹೀಗೆ ಹೇಳಿದರು "ನಾನು ಇಷ್ಟು ಹೇಳಬಲ್ಲೆ; ಪರಿಸ್ಥಿತಿಗೆ ಅನುಸಾರವಾಗಿ ಪ್ರತಿಕ್ರಿಯೆ ಮಾಡಲು ದೇವರು ನನಗೆ ದಾರಿ ತೋರಿಸುತ್ತಾನೆ. ಆದುದರಿಂದ ಶತ್ರು ಆಕ್ರಮಿಸಿದರೆ ಹೇಗೆ ಎದುರಿಸಬೇಕೆಂಬುದನ್ನು ಈಗ ಹೇಳಲಾರೆನಾದರೂ, ದೇವರು ಸರಿಯಾದ ದಾರಿ ತೋರಿಸುತ್ತಾನೆಂದು ಹೇಳಬಲ್ಲೆ. ಈ ಸಂಭಾಷಣೆಯಿಂದ ನಿಮಗೆ ಸಮಾಧಾನವಾಗಿಲ್ಲವೆಂದು ನನಗೆ ಗೊತ್ತು. ಸೇವಾಗ್ರಾಮಕ್ಕೆ ಬನ್ನಿ. ಎರಡು ದಿನ ಶಾಂತವಾಗಿ ಚರ್ಚಿಸಬಹುದು. ಆದರೆ ಈ ಪ್ರಾರ್ಥನೆ ವ್ಯರ್ಥವೆಂದು ನಾನು ಬಲ್ಲೆ. ನಿಮಗೆ ಇರಲು ಅವಕಾಶವಿಲ್ಲ."

ಸತಿ ಚಿಯಾಂಗ್ ಕೈಷೇಕರು ಹೀಗೆ ಹೇಳಿದರು "ಯಾರು ಬಲ್ಲರು ನಾವು ಬೇಗನೇ ಮತ್ತೆ ಬರಬಹುದು. ಚುಂಕಿಂಗ, ಕಲ್ಕತ್ತಾದಿಂದ ಹನ್ನೆರಡುಗಂಟೆ ಪ್ರಯಾಣದ ಒಳಗೇ ಇದೆ."

ಗಾಂಧಿಯವರು "ಹಾಗಾದಮೇಲೆ ತಿಂಗಳಿಗೊಂದು ಸಲ ನನಗೆ ದರ್ಶನಕೊಡಿ" ಎಂದು ಆ ಮಾನ್ಯ ಅಥಿತಿಗಳನ್ನು ಬೀಳ್ಕೊಂಡರು.

ಸತಿ ಚಿಯಾಂಗ್ ಕೈಷೇಕರು "ನನ್ನ ರಾಟೆ ಎಲ್ಲಿ? ಎಂದರು. ಅದನ್ನು ತಿಳಿಯದೆ ನಮ್ಮ ಸಾಮಾನಿನ ಜತೆಯಲ್ಲಿ ಸ್ಟೇಶನ್ನಿಗೆ ತೆಗೆದು ಕೊಂಡು ಹೋಗಿಬಿಟ್ಟಿದ್ದರು. ಗಾಂಧಿಯವರು "ನಿಮಗೆ ಅದು ಬರುತ್ತೆ. ಸ್ಟೇಶನ್ನಿನಿಂದ ಹಿಂದಕ್ಕೆ ಕಳುಹಿಸುತ್ತೇನೆ" ಎಂದರು.

ಈಗ ಚೀನಾಕ್ಕೆ ಹೋಗುತ್ತಿರುವ ಆಕೆಯ ಸಾಮಾನಿನ ಜತೆ ಧನುಷ್ ತಕ್ಲಿ ಇದೆ. ಆಕೆ ಅದನ್ನು ಉಪಯೋಗಿಸಬಹುದು ಅಥವಾ ಉಪಯೋಗಿಸದೆ ಇರಬಹುದು. ಆದರೆ ಚೀಣಾದ ಕುಶಲ ಕರ್ಮಿಗಳಿಗೆ ಅದು ಒಪ್ಪಿಗೆಯಾಗುವುದು. ಅವರು ಇದನ್ನು ಅನುಸರಿಸಬಹುದು ಅಥವಾ ಅದನ್ನು ಇನ್ನೂ ಉತ್ತಮಪಡಿಸಿ ಬೇಕಾದ ಬಡವರ ಸೇವೆಗಾಗಿ ಉಪಯೋಗಿಸ ಬಹುದು.

ವಾರ್ಧಾ ಮಾರ್ಗದಲ್ಲಿ ರೈಲಿನಲ್ಲಿ ಎಂ. ಡಿ.

೧೯–೨–೪೨.

---

## ೨. ಕಾಶೀ ವಿಶ್ವವಿದ್ಯಾಲಯ

ಕಾಶೀ ಎಂದ ಕೂಡಲೇ ನಮ್ಮ ಮನಸ್ಸಿನಲ್ಲಿ ಎರಡು ದೃಷ್ಟಿಯಿಂದ ಅದರ ಪಾವಿತ್ರ್ಯತೆ ಗೋಚರವಾಗುತ್ತದೆ. ಮೊದಲನೆಯದು ಕಾಶಿಯ ಪ್ರಾಚೀನಕಾಲದಿಂದ ನಡೆದು ಬಂದಿರುವ ಅಧ್ಯಾತ್ಮ ವಾತಾವರಣ. ಎರಡನೆಯದು ಭಾರತದ ಸೇವೆಗೆ ಬಾಳನ್ನು ಮೀಸಲು ಮಾಡಿರುವ ಭಾರತ ಭೂಷಣ ಮಾಳವಯ್ಯ ಅವರ ದರ್ಶನ. ಈ ಅಗಾಧವಾದ ದೇಶ ಪ್ರೇಮವೇ ಗಾಂಧಿಯವರನ್ನೂ ಮಾಳವಯ್ಯರನ್ನೂ ಬಿಡದೆ ಬಂಧಿಸಿರುವ ತಂತು.

ತಮ್ಮ ಕನಸು, ಕಾರ್ಯರೂಪದಲ್ಲಿ ಕೈಗೂಡುವುದನ್ನು ಮಾಳವಯ್ಯ ರಂತೆ ಹೆಚ್ಚು ಜನ ಅನುಭವಿಸಿಲ್ಲ. ಆ ತಮ್ಮ ಕನಸು ಕಾರ್ಯಕಾರಿ

ಯಾಗಲು ಅವರು ಪ್ರಾಚೀನ ಭಾರತ ಸಂಸ್ಕೃತಿಯ ಪ್ರೇಮಿಗಳೆಲ್ಲರ ಸೇವೆ ಯನ್ನೂ ತೆಗೆದುಕೊಂಡರು. ಹಿಂದೂ ರಾಜ ಮಹಾರಾಜರೂ ,ಧನಿಕರೂ ಅವರ ಗಾರುಡಿಗೆ ಒಳಗಾದರು. ಒಂದುದಿನ ಗಂಗಾನದಿಯಲ್ಲಿ ಸ್ನಾನ ಮಾಡಿ ಕುಳಿತಿದ್ದಾಗ ಮಾಳವಯ್ಯರಿಗೆ ಕಾಶೀ ವಿದ್ಯಾಪೀಠದ ದೃಶ್ಯ ಕಣ್ಣೆದುರಿಗೆ ತೋರಿತು. ಆ ದಿವ್ಯದರ್ಶನವನ್ನು ಅವರು ತಮ್ಮ ತಂದೆಗೆ ತಿಳಿಸಿದರು. ಅವರ ತಂದೆಯವರು ತಾವು ಕಷ್ಟಪಟ್ಟು ಸಂಪಾದಿಸಿದ್ದ ನೂರ ಒಂದು ರೂಪಾಯಿಗಳನ್ನು ಮಗನಿಗೆ ಕೊಟ್ಟು, ಈ ನೂರ ಒಂದು ರೂಪಾಯಿಗಳು ಒಂದು ಕೋಟಿ ಒಂದು ರೂಪಾಯಿಗಳಾಗಬೇಕೆಂದು ಆಶೀರ್ವದಿಸಿದರೆಂದು ಕಥೆ. ಆ ಆಶೀರ್ವಾದ ನೆರವೇರಿತು. ಈ ಇಪ್ಪತ್ತೈದು ವರುಷದಲ್ಲಿ ವಿಶ್ವವಿದ್ಯಾಲಯದ ಕಟ್ಟಡಗಳು ಒಂದಾದ ಮೇಲೆ ಒಂದು ಎದ್ದವು. ದೇಶದ ಸಾವಿರಾರು ಯುವಕರು ಬಂದು ಮಾಳವಯ್ಯರವರ ಸತ್ ಪ್ರಭಾವದಲ್ಲಿ ಜ್ಞಾನಾರ್ಜನೆ ಮಾಡಿದರು. ಆ ಯುವಕರು ಮಾಳ ವಯ್ಯರವರಿಗೆ ತಮ್ಮ ಚೈತನ್ಯ ಯವ್ವನ ತೇಜಸ್ಸನ್ನು ಕೊಟ್ಟರು. ಪಂಡಿತರ ವೃದ್ಧಾಪ್ಯ, ಗೌರವ ಹೆಮ್ಮೆಗೆ ಅರ್ಹವಾದುದಾಗಿ ಪರಿಣಮಿಸಿತು. ಈ ಸಂಸ್ಥೆಯ ಬೆಳ್ಳಿಯ ಹಬ್ಬಕ್ಕೆ ಸಾವಿರಾರು ಜನ ಎಲ್ಲಾ ಕಡೆಯಿಂದಲೂ ನೆರೆದರು. ಆನಂದ ಸಂತೋಷ ಮಂಗಳ ಎಲ್ಲೆಲ್ಲು ತಾಂಡವವಾಡಿತು. ಪಂಡಿತರ ಹೊರೆ, ಸರಿಯಾದ ಪ್ರಶಿಸಿಥಿ ಡಾಕ್ಟರ ರಾಧಾಕೃಷ್ಣನ್‌ರ ಮೇಲೆ ಬಿದ್ದಿದೆ. ಅವರು ಮಾಳವಯ್ಯರವರನ್ನು ಕುರಿತ ಎಲ್ಲರ ಪರವಾದ ಅದ್ಭುತವಾದ ಮಂಗಳ ಅಭಿನಂದನೆಯಲ್ಲಿ "ಇಂತಹ ಋಷಿಗಳಿಂದ ಕ್ಷೇತ್ರಗಳು ನಿಜವಾಗಿಯೂ ಪವಿತ್ರಗಳಾಗುತ್ತವೆ" "ತೀರ್ಥಿಂ ಕುರ್ವೆತಿ ತೀರ್ಥಾಣಿ" ಎಂದು ಹೇಳಿ ಮಾಳವಯ್ಯರವರಿಗೆ ಶತಮಾನ ಆಯುಸ್ಸನ್ನು ಕೋರಿದರು.

## ಅಪೂರ್ಣವಾದ ಕನಸು

ಆದರೂ ಮಾಳವಯ್ಯರವರಿಗೆ ಕನಸು, ಪರಿಪೂರ್ಣವಾಗಿ ಕಾರ್ಯ ಕಾರಿಯಾಗಿಲ್ಲ. ಪಂಡಿತ ರಾಮನರೇಶ ತ್ರಿಪಾಟಿಯವರು ಪ್ರಕಟಿಸಿರುವ "ಮಾಳವಯ್ಯರವರೊಡನೆ 30 ದಿನಗಳು" ಎಂಬ ಪುಸ್ತಕದಲ್ಲಿ ಪಂಡಿತರ ಆಸೆ ಕನಸುಗಳು ವ್ಯಕ್ತವಾಗಿವೆ. "ಭಾರತವನ್ನು ಇನ್ನೂ ಒಂದುಸಲ

ತಿರುಗಲು ನನಗೆ ಆಸೆ. ಮಾಡಬೇಕಾದ ಕೆಲಸ ಬಹಳವಿದೆ. ಸಂಗೀತಕ್ಕಾಗಿ ಒಂದು ದೊಡ್ಡ ಭವನ ಬೇಕು. ವಿದ್ಯಾರ್ಥಿಗಳು ಅಲ್ಲಿ ಕಲಿತ ಸಂಗೀತ ಭಕ್ತಿಯ ಭಾವಗೀತೆಗಳು, ಅವರ ಬಾಳನ್ನು ಮುಂದೆ ಸ್ಫೂರ್ತಿಗೊಳಿಸ ಬೇಕು. ಇಲ್ಲಿ ಹತ್ತುಸಾವಿರ ವಿದ್ಯಾರ್ಥಿಗಳು ನಮ್ಮ ಪ್ರಾಚೀನ ವಿದ್ಯೆ ಯನ್ನು ವ್ಯಾಸಂಗಮಾಡಿ ಪ್ರಾಚೀನವೈಭವ ಪುನರುಜ್ಜೀವನ ಗೊಳಿಸುವ "ನಲಂದ" ವಾಗಬೇಕು. ಒಂದುದಿನ ಪಂಡಿತರು ಬೆಳದಿಂಗಳಲ್ಲಿ ಹೀಗೆ "ಎಂತಹ ಭವ್ಯದೃಶ್ಯ. ನಮ್ಮ ಋಷಿಗಳಿಗೆಲ್ಲಾ ಇಲ್ಲ ಒಂದು ಆಶ್ರಮ ಕಟ್ಟಲು ಸ್ಥಳವಿದೆ. ಅವರು ನಮ್ಮ ಯುವಕರಿಗೆ ಶಾಶ್ವತವಾದ ಸ್ಫೂರ್ತಿ ಯಾಗಿ ಇರಬಹುದು. ಇಲ್ಲಿ ವಶಿಷ್ಟ, ಅತ್ರಿ, ಗೌತಮ, ಆಂಗೀರಸ ಇವರು ತಮ್ಮ ಆಶ್ರಮಗಳನ್ನು ಸ್ಥಾಪಿಸಿ ತಮ್ಮ ಅದ್ವಿತೀಯವಾದ ಸಂದೇಶ ಗಳನ್ನು ಬೀರಿದರೆ ಮಾತ್ರ ವಿಶ್ವವಿದ್ಯಾಲಯದ ಗುರಿ ಸಾಧಿತವಾಗುವುದು. ನಮ್ಮ ಪಂಡಿತರು ತುಲಸೀದಾಸ ಮತ್ತು ಇತರ ಯೋಗಗಳನ್ನು ಕುರಿತು ಪರಿಶೋಧನೆ ನಡೆಸಬೇಕು. ಶುದ್ಧವಾದ ಪ್ರಕ್ಷಿಪ್ತಗಳಿಲ್ಲದ ಅವರ ಕೃತಿಗಳು ನನಗೆ ಬೇಕು. ಮತ್ತು "ಇಲ್ಲಿ ನಮ್ಮ ಕೆಲವು ರಸ್ತೆಗಳಿಗೆ ಯುಧಿಷ್ಟರ, ಹರಿಶ್ಚಂದ್ರ, ಹನುಮ, ಪ್ರತಾಪ ಇವರ ಹೆಸರನ್ನಿಡಬೇಕು." "ಬಡವರಿಗೆ ಎಷ್ಟು ವಿದ್ಯಾರ್ಥಿವೇತನ ಬೇಕಾದರೂ ಕೊಡಿ. ಅವರಲ್ಲಿ ಅನೇಕ ಶಿವಾಜಿ, ಪ್ರತಾಪ, ಹರಿಶ್ಚಂದ್ರ, ಧ್ರುವ ಇರಬಹುದು. ಯಾರು ಬಲ್ಲರು ? ನಾನು ಉದ್ದೇಶಪೂರ್ವಕವಾಗಿ। ಗೀತೆಯ ತರಗತಿ ಏರ್ಪಡಿ ಸಿದ್ದೇನೆ. ನಮ್ಮ ಈ ಅದ್ಭುತವಾದ ಪುಸ್ತಕ ವಿದ್ಯಾರ್ಥಿಗಳ ಸ್ಫೂರ್ತಿ ಯಾಗಲೆಂದು."

ಗಾಂಧಿಜಿಯೂ ಇತರರಂತೆ ಅಲ್ಲಿಗೆ ಒಬ್ಬ ಯಾತ್ರಿಕರಾಗಿ ಹೋ ದರು. ಆದರೆ ಅವರು ಪಾಲಿಸಬೇಕಾದ ಒಂದು ಕರ್ತವ್ಯ ಇದ್ದಿತು. ಘಟಿಕೋತ್ಸವದ ಉಪನ್ಯಾಸಕ್ಕೆ ಅವರು ಸರಿಯಲ್ಲ. ಅದು ಅವರ ದಾರಿ ಯಲ್ಲ. ಮಾಲವಯ್ಯರವರ ಕೆಲಸದ ಭಾರ ಯಾರ ತಲೆಯಮೇಲೆ ಬೀಳು ವುದೋ, ಅವರು ಈ ಹಬ್ಬ ಸಂಭ್ರಮದ ಆನಂದದಲ್ಲಿ ಪಂಡಿತರ ಕನಸಿನ ಗುರಿಯನ್ನು ಮರೆಯದಿರಲೆಂದು ಗಾಂಧಿಯವರು ಎಚ್ಚರಿಕೆ ಕೊಟ್ಟರು.

ಇಪ್ಪತ್ತೈದು ವರುಷಗಳ ಕೆಳಗೆ ಅವರು ಇಂತಹ ಒಂದು ಕರ್ತವ್ಯ ವನ್ನು ಮಾಡಿದ್ದರು. ಆಗಿನ ದರ್ಭಾಂಗ ಮಹಾರಾಜರು ಗಾಂಧಿಯವರನ್ನು

“ಐಶ್ವರ್ಯ ಸುಖದಲ್ಲಿ ಬೆಳೆದವರಾದವರೂ ಬಡತನವನ್ನು ಅರಿಸಿಕೊಂಡು ಬಡವರೊಂದಿಗೆ ಒಂದಾಗುವನು” ಎಂದು ಹೇಳಿ ಸ್ವಾಗತಿಸಿದರು. ಗಾಂಧಿ ಆ ವರ್ಣನೆಯನ್ನು ತಮ್ಮ ವಿಷಯದಲ್ಲಿ ಸಾರ್ಥಕಗೊಳಿಸಲಿಕ್ಕೆ ಸಿದ್ಧರೆಂಬುದು ದರ್ಭಾಂಗರಾಜರಿಗೆ ತಿಳಿಯಲಿಲ್ಲ. ಆದರೆ ಮಾಳವೀಯ್ಯರವರಿಗೆ ಗೊತ್ತಾಗಿದ್ದಿತು. ಗಾಂಧಿಜಿ ಅವರಿಗೆ ತಮ್ಮ ಮನಸ್ಸನ್ನು ತಿಳಿಸಿದ್ದರು. ವಿಶ್ವವಿದ್ಯಾಲಯಕ್ಕೆ ಸರಕಾರದ ಒಪ್ಪಿಗೆ ಪಡೆಯುವುದು ಎಷ್ಟು ಕಷ್ಟ ಎಂಬುದು ಗಾಂಧಿಗೆ ತಿಳಿದಿದ್ದಿತು. ಹಾಗೆಯೇ ಮಾಳವೀಯ್ಯರವರ ಇನ್ನು ಪೂರ್ಣವಾಗದ ಇತರ ಆಸೆಗಳೂ ಅವರಿಗೆ ಗೊತ್ತಿದ್ದುವು. ಮಾಳವೀಯ್ಯ, ಆಗ ವೈಸರಾಯರ ಕಾರ್ಯಕಾರಿ ಮಂಡಲದ ವಿದ್ಯಾಮಂತ್ರಿ ಸರ್ ಹಾರ್ಕೋರ್ಟ್ ಬಟ್ಲರನ್ನು ಕಂಡು, ತಮ್ಮ ವಿದ್ಯಾಪೀಠದಲ್ಲಿ ಶಿಕ್ಷಣ ಹಿಂದಿಯಲ್ಲಿ ನಡೆಯುವುದೆಂದು ಹೇಳಿದರು. ಆದರೆ ಬಟ್ಲರ್‌ಗೆ ತನ್ನ ಕೆಲಸ ಸರಿಯಾಗಿ ಗೊತ್ತಿತ್ತು. ಆತ “ಅದು ಸಾಧ್ಯವಿಲ್ಲ; ಹಾಗಾದರೆ ನಿಮ್ಮ ಪಾಡು. ಸರ್ಕಾರದ ಸಹಾಯವೂ ಸಮಾನಪ್ರತಿಷ್ಠೆಯೂ ನಿಮಗೆ ದೊರಕುವುದಿಲ್ಲ. ನೀವು ಎಲ್ಲಿಯವರೆಗೆ ಇಂಗ್ಲೀಷ್ ಭಾಷೆಯಲ್ಲಿ ನಿಮ್ಮ ಕಾರ್ಯಕ್ರಮ ನಡೆಸುತ್ತೀರೋ ಅಲ್ಲಿಯವರೆಗೆ ನಮಗೆ ಕ್ಷೇಮ. ಆಗ ನಿಮ್ಮ ಅಭಿಪ್ರಾಯಗಳೂ ಆಸೆಗಳೂ ನಮಗೆ ಗೊತ್ತು. ಆದರೆ ನಿಮ್ಮ ಭಾಷೆಯನ್ನು ನೀವು ಉಪಯೋಗಿಸಲು ಪ್ರಾರಂಭಿಸಿದರೆ, ಅನಂತರ ನಮಗೆ ಏನೇನೂ ಗೊತ್ತಾಗುವುದಿಲ್ಲ” ಎಂದಿದ್ದ. ಎದುರಾಳಿಯ ಮಾತನ್ನು ಅನೇಕ ವೇಳೆ ಬೇಗ ಒಪ್ಪುತ್ತಿದ್ದ ಮಾಳವೀಯ್ಯ, ಹಿಂದಿಯ ವಿಷಯ ಹೆಚ್ಚಾಗಿ ಒತ್ತುವುದಿಲ್ಲವೆಂದು ಹೇಳಿದ್ದರು. ಆದರೆ ಗಾಂಧಿಜಿ ಕೇಳಲಿಲ್ಲ. ಆ ಸಂದರ್ಭದಲ್ಲಿ ಗಾಂಧಿಜಿ ಏನು ಹೇಳುತ್ತಾರೆ ಎಂಬುದು ಮಾಳವೀಯ್ಯರವರಿಗೆ ಚೆನ್ನಾಗಿ ಗೊತ್ತಿದ್ದಿತು. ಗಾಂಧಿಯವರು ಮಾಳವೀಯ್ಯರಿಗೆ ಮೊದಲೇ ಎಚ್ಚರಿಕೆ ಕೊಟ್ಟಿದ್ದರು. ಗಾಂಧಿ ಮಾತನಾಡುವುದಿಲ್ಲ ಎಂದರೂ ಮಾಳವೀಯ್ಯರವರು ಕೇಳಲಿಲ್ಲ. “ಇಂಗ್ಲೀಷಿನಲ್ಲಿಯೇ ಹೇಳಿ, ಆದರೆ ನಿಮ್ಮ ಮನಸ್ಸಿನಲ್ಲಿರುವುದನ್ನೇ ಹೇಳಿ” ಎಂದರು. ಆದುದರಿಂದ ಗಾಂಧಿ ಸರಾಗವಾಗಿ ಹೇಳಿಬಿಟ್ಟರು. ಆ ಭಾಷಣ, ಇಪ್ಪತ್ತೈದು ವರುಷದ ಹಿಂದೆ ಕೊಟ್ಟುದಾದರೂ ಈವತ್ತಿನದೋ ಎಂಬಂತೆ ತೋರುತ್ತಿದೆ. ಆ ದಿನ ಹೇಳಿದ ಅವೇ ಮಾತುಗಳು ಪ್ರಾಯಶಃ ಗಾಂಧಿಯವರಿಗೆ ಈಗ ಜ್ಞಾಪಕ

ವಿರಲಾರವು. ಆದರೆ ಅದರಲ್ಲಿ ಅದೇ ಶ್ರದ್ಧೆ ಇದೆ. ಅದರ ಭಾಷೆ ಪೂರ್ಣವಾಗಿ ಇಂದಿನ ಭಾಷಣ ಭಾಷೆಯಂತೆಯೇ ಇದೆ. "ಈ ಮಹತ್ವಾದ ವಿದ್ಯಾಪೀಠದ ಆಶ್ರಯದಲ್ಲಿ, ಈ ಪವಿತ್ರವಾದ ನಗರದಲ್ಲಿ ನಾನು ಪರಭಾಷೆಯಲ್ಲಿ ನಮ್ಮ ಜನರಿಗೆ ಭಾಷಣ ಮಾಡಬೇಕಾಗಿರುವುದು ಅತ್ಯಂತ ದುಃಖ ಮತ್ತು ಅವಮಾನ" ಗಾಂಧಿಯವರು ಹಾಗೆ ಪ್ರಾರಂಭಿಸಿದರು. "ಇಲ್ಲಿಗೆ ಬರುವ ಯುವಕರಿಗೆ ದೇಶಭಾಷೆಯಲ್ಲಿ ಶಿಕ್ಷಣ ದೊರೆಯುವಂತೆ ಈ ವಿದ್ಯಾಪೀಠ ಏರ್ಪಡಿಸಬೇಕು. ನಮಗೆ ನಮ್ಮ ಭಾಷೆಗಳ ಮೂಲಕ ಶಿಕ್ಷಣ ದೊರೆತಿದ್ದರೆ ಇಂದು ನಾವು ಏನಾಗಿರುತ್ತಿದ್ದೆವು ?. ಇಂದು ನಮ್ಮ ದೇಶ ಸ್ವತಂತ್ರವಾಗಿರುತ್ತಿದ್ದಿತು. ನಮ್ಮ ವಿದ್ಯಾವಂತರು ಈ ದೇಶದಲ್ಲಿ ಪರಕೀಯರಂತೆ ಇರಬೇಕಾದುದಿರಲಿಲ್ಲ. ಅವರು ದೇಶದ ಹೃದಯದೊಂದಿಗೆ ಮಾತನಾಡುತ್ತಿದ್ದರು. ಅವರು ಬಡವರೊಂದಿಗೆ ಬಡವರಾಗಿ ಕೆಲಸಮಾಡುತ್ತಿದ್ದರು. ಕಳೆದ ಐವತ್ತು ವರುಷಗಳಿಂದ ಅವರು ಗಳಿಸಿದ ವಿವೇಕಜ್ಞಾನ ದೇಶದ ನಿಜವಾದ ಆಸ್ತಿಯಾಗುತ್ತಿದ್ದಿತು." ಅನಂತರ ಗಾಂಧಿಯವರು ಈ ಪರಭಾಷೆಯ ಫಲವಾಗಿ ನಮ್ಮ ಜನ ಕಳೆದುಕೊಂಡ ಸಾವಿರಾರು ವರುಷದ ಶ್ರಮವನ್ನು ವಿವರಿಸಿ ಅನಂತರ ಗಟ್ಟಿಯಾಗಿ ಅವರೆದುರಿಗೆ ಆಲೋಚಿಸತೊಡಗಿದರು. ಗಾಂಧಿಯವರು ತಮ್ಮ ಕಣ್ಣನ್ನು ಎಲ್ಲೆಡೆ ತಿರುಗಿಸಿದರು. ಆಗ ಅವರಿಗೆ ಸುತ್ತಾ ಧನಿಕರು ಧರಿಸಿದ್ದ ರತ್ನಾಭರಣಗಳು ಕಣ್ಣಿಗೆ ಬಿದ್ದವು. ಅವು ಕಣ್ಣಿಗೇನೋ ಹಬ್ಬವಾಗಿದ್ದುವು. ಆದರೆ ಗಾಂಧಿಯವರ ಬಾಯಲ್ಲಿ ಈ ಮಾತು ಹೊರಟಿತು. "ನೀವು ಈ ರತ್ನಾಭರಣಗಳನ್ನು ಬಿಚ್ಚಿ. ಇವು ನಿಮ್ಮ ದೇಶದವರಿಗಾಗಿ ನಿಮ್ಮಲ್ಲಿ ಟ್ರಸ್ಟ್ ಎಂದು ನಿರ್ಣಯಿಸುವವರೆಗೆ ನಮ್ಮ ದೇಶಕ್ಕೆ ಮುಕ್ತಿಯಿಲ್ಲ."

ಆ ಭಾಷಣವನ್ನೆಲ್ಲಾ ನಾನು ಪೂರ್ತಿ ಕೊಡುವುದಿಲ್ಲ. ಕುತೂಹಲವುಳ್ಳವರು ಈಗಲೂ ಅದನ್ನು ಓದಿ ಲಾಭ ಹೊಂದಬಹುದು. ಅನಂತರ ಗಾಂಧಿಯವರು ಹೇಳಿದ ಮಾತುಗಳು, ಬಾಂಬು ತತ್ವ ವಿರೋಧ ಇವು, ಅರ್ಥಮಾಡಿಕೊಳ್ಳಲಾರದ ಜನರ ಕಿವಿಗೆ ಬಹು ಅಹಿತವಾಗಿ ತೋರಿದವು. ಅನೇಕ "ದೊಡ್ಡ ಮನುಷ್ಯರು" ಒಟ್ಟಾಗಿ ಸಭಾ ತ್ಯಾಗ ಮಾಡಿದರು. ಈಗ ಕಾಲ ಬದಲಾಯಿಸಿದೆ. ಆಗ ಹೇಳಿದುದಕ್ಕಿಂತ ಹೆಚ್ಚು ಕಠಿಣವಾದ ಮಾತನ್ನು ಗಾಂಧಿ ಹೇಳಿ ಆಗಿದೆ. ಜನವರಿ ೨೧ನೆ ತಾರೀಖು ಗಾಂಧಿ

ಯನರು ಹಿಂದುಸ್ಥಾನಿಯಲ್ಲಿ ಭಾಷಣ ಪ್ರಾರಂಭ ಮಾಡಿದಾಗ ಯಾರಿಗೂ ಅದು ವಿಚಿತ್ರವಾಗಿ ಕಾಣಲಿಲ್ಲ. ಆದರೆ ವಿದ್ಯಾಪೀಠ ಇನ್ನೂ ಗಾಂಧಿ ಮತ್ತು ಮಾಳವಯ್ಯರವರ ಇಚ್ಛೆಗೆ ಅನುಸಾರವಾಗಿ ವಿದ್ಯಾಪೀಠವಾಗಿಲ್ಲ. ೮೦ ವರುಷದ ಮುದುಕ ಮಾಳವಯ್ಯರವರ ಗಾಂಧಿಯವರ ಪ್ರತಿಯೊಂದು ಮಾತನ್ನೂ ಪೋಷಿಸುವ ಶುದ್ಧವಾದ ಹಿಂದಿ ಭಾಷಣ ; ಕೇಳಿ ಎಲ್ಲರ ಹೃದಯಗಳೂ ಪ್ರಫುಲ್ಲವಾದುವು. ಗಾಂಧಿಯವರು ಹೇಳಿದಂತೆ ಶಾಖ ವನ್ನೂ ಬೆಳಕನ್ನೂ ಕೊಡುವ ಸೂರ್ಯ ಅಲ್ಲಿದ್ದಾನೆ. ಆ ಬೆಳಕು, ಶಾಖವನ್ನು ಸ್ವೀಕರಿಸಿ ಅನುಭವಿಸುವುದು ಮಾತ್ರವೇ ನಮ್ಮ ಕೆಲಸ, ವಿದ್ಯಾರ್ಥಿಗಳಿಗೆ ಮಾಳವಯ್ಯರ ಆಶೀರ್ವಾದ ಅವರೇ ರಚಿಸಿದ ಸಂಸ್ಕೃತ ಶ್ಲೋಕದಲ್ಲಿ ಅಡಕವಾಗಿದೆ.

ಸತ್ಯೇನ ಬ್ರಹ್ಮಚರ್ಯೇಣ ವ್ಯಾಯಾಮೇನ ವಿದ್ಯಯಾ
ದೇಶ ಭಕ್ತ್ಯಾಽತ್ಮ ತ್ಯಾಗೇನ ಸಂಮಾನಾರ್ಹಃ ಸದಾ ಭವ

ಸತ್ಯ ಬ್ರಹ್ಮಚರ್ಯ ವ್ಯಾಯಾಮ ವಿದ್ಯೆ ದೇಶಭಕ್ತಿ ತ್ಯಾಗ ಇವುಗಳಿಂದ ಯಾವಾಗಲೂ ಗೌರವಾರ್ಹರಾಗಿ.

ಕಾಶೀ ವಿಶ್ವವಿದ್ಯಾಲಯ ಹೇಗೆ ತನ್ನದೇ ಆದ ಮಾರ್ಗದಲ್ಲಿ ಬೆಳೆಯ ಬೇಕು ; ತಮ್ಮ ಅಭಿಪ್ರಾಯದಲ್ಲಿ ಆ ಮಾರ್ಗ ಯಾವುದು ಎಂಬುದನ್ನು, ಗಾಂಧಿಯವರು ಸ್ಪಷ್ಟಪಡಿಸಿದರು. ಅದಲ್ಲದೆ, ವಿದ್ಯಾರ್ಥಿಗಳನ್ನು ತನ್ನಲ್ಲಿಗೆ ಆಕರ್ಶಿಸುವಂತಹ ಕೆಲವು ಲಕ್ಷಣಗಳು ಈ ವಿದ್ಯಾಪೀಠದಲ್ಲಿವೆ. ಇಂಜನೀಯರಿಂಗ್ ಮತ್ತು ಟೆಕ್ನಲಾಜಿಕಲ್ ಭಾಗವನ್ನು ಕುರಿತು ಗಾಂಧಿ ಯವರು ಹೇಳಿದರು. ಹಾಗೆಯೇ ಪೌರವಿದ್ಯೆಯ ಕಲಾಶಾಲೆ, ಧರ್ಮಮತ ಕಲಾಶಾಲೆ ಆಯುರ್ವೇದ ಕಲಾಶಾಲೆ ಇವುಗಳೆಲ್ಲಾ ಇವೆ. ಅಲ್ಲಿರುವ ಅನೇಕ ಉಪಾಧ್ಯಾಯರು ಪೌರಾತ್ಯ ಭಾಷಾವಿಶಾರದರೂ ಪಠ್ಯಪುಸ್ತಕ ಗಳನ್ನು ಬರೆದವರೂ ಆಗಿದ್ದಾರೆ. ಪ್ರೊಫೆಸರ್ ಆತ್ರೇಯ ಇಂಗ್ಲಿಷ್ ನಲ್ಲಿಯೂ ಹಿಂದಿಯಲ್ಲಿಯೂ ಅನೇಕ ವೇದಾಂತ ಗ್ರಂಥಗಳನ್ನು ಬರೆದಿದ್ದಾರೆ. ಪೌರಾತ್ಯ ಭಾಷೆಯ ಭಾಗದಲ್ಲಿ ಆಯುರ್ವೇದ ವ್ಯವಸಾಯ ಪರಿಶೋಧನೆ ಇವುಗಳಲ್ಲಿ ಹೊಸ ಪರಿಶೋಧನೆಗಳನ್ನು ನಡೆಸಲು ಒಳ್ಳೆಯ ಅನುಕೂಲಗಳಿವೆ. ಆ ಬಾಬುಗಳಲ್ಲಿ ಹೆಚ್ಚು ಕೆಲಸ ನಡೆದಿರುವುದೋ ಎಂಬುದು ತಿಳಿಯಲಿಲ್ಲ. ಮತಧರ್ಮ ಕಲಾಶಾಲೆ, ಸ್ಮೃತಿರತ್ನ, ಸ್ಮೃತಿಸಾಗರ ಎಂಬ ಬಿರುದುಗಳನ್ನು

ಕೊಡುವುದರಿಂದಲೇ ತೃಪ್ತವಾಗಕೂಡದು ಈ ಬಿರುದು ತೆಗೆದುಕೊಳ್ಳು ವವರು ಯೂರೋಪಿಯನ್ ಪಾಶ್ಚಾತ್ಯ ವಿದ್ವಾಂಸರಂತೆ ನಮ್ಮ ಶಾಸ್ತ್ರ ಗಳನ್ನು ಕುರಿತು ಮುಂದೆ ಅಭ್ಯಾಸಮಾಡಿ ಕೃತಿಗಳನ್ನೂ ವಿಮರ್ಶೆಗಳನ್ನೂ ಗ್ರಂಥಗಳನ್ನೂ ತಯಾರಿಸುವಂತೆ ನೋಡಬೇಕು.

ವಿಶ್ವವಿದ್ಯಾಲಯಕ್ಕೆ ವಿಶಾಲವಾದ ಆಟದ ಬಯಲು ಇರುವುದಲ್ಲದೆ ಶಿವಾಜಿ ಭವನ ಎಂಬ ಹೆಸರಿನ ವ್ಯಾಯಾಮಶಾಲೆಯೂ ಇದೆ. ಈಜುವ ಮತ್ತು ದೋಣಿಯ ಸ್ಪರ್ಧೆಗಳು ಆಗಾಗ್ಗೆ ಏರ್ಪಡುತ್ತವೆ. ಈ ಸ್ಥಿತಿ ಯಲ್ಲಿ ಒಂದು ಮಾತು ಹೇಳಬೇಕೆಂದು ನನಗೆ ಅನ್ನಿಸುತ್ತದೆ. ನಾಲ್ಕು ಸಾವಿರ ಸಂಖ್ಯೆಯ ವಿದ್ಯಾರ್ಥಿಗಳುಳ್ಳ ವಿಶ್ವವಿದ್ಯಾಲಯದಲ್ಲಿ, ಉತ್ಸವ ಗಳಿಗೂ ಸಭೆಗಳಿಗೂ ಜಾತೀಯ ಐಕ್ಯತೆಗೂ, ಸ್ವಯಂಸೇವಕರನ್ನು ವ್ಯವಸ್ಥೆ ಗೊಳಿಸಲೂ ಸಂಸ್ಥೆಯ ಕೆಲಸಗಳನ್ನು ನಿರ್ವಹಿಸುವುದಕ್ಕೂ ಒಳ್ಳೆಯ ಆಸ್ಪದವಿದೆ. ಘಟಿಕೋತ್ಸವದ ದಿನ ಈ ವ್ಯವಸ್ಥೆ ಸರಿಯಾಗಿಲ್ಲದುದು ಸ್ಪಷ್ಟವಾಯಿತು. ಆ ೨೧ ನೆ ತಾರೀಖು ಮಧ್ಯಾನ್ಹ ಗಾಂಧಿಯವರನ್ನೂ ಮಾಳವಯ್ಯರವರನ್ನೂ ವೇದಿಕೆಗೆ ಕರೆದುಕೊಂಡು ಹೋಗುವುದೇ ಕಷ್ಟ ವಾಯಿತು. ವ್ಯವಸ್ಥೆ ಸರಿಯಾಗಿದ್ದಿದ್ದರೆ, ಈ ಹಿರಿಯರನ್ನು ವೇದಿಕೆಯ ಬಳಿಗೆ ಸುಲಭವಾಗಿ ನಡೆಸಿಕೊಂಡು ಹೋಗಲು ಒಂದು ಮಾರ್ಗ ಬಿಡಿಸಿರ ಬೇಕಾಗಿದ್ದಿತು. ದಾರಿ ಇರಲಿಲ್ಲವೆಂಬುದು ಮಾತ್ರವೇ ಅಲ್ಲ. ಸ್ವಯಂ ಸೇವಕರ ಪೈಕಿಯೇ ಅನೇಕ ಫೋಟೊಗ್ರಾಫರುಗಳು ದರ್ಶನಕ್ಕಾಗಿಯೂ ಫೋಟೊ ತೆಗೆದುಕೊಳ್ಳುವುದಕ್ಕಾಗಿಯೂ ಮುಂದೆ ನುಗ್ಗಿದರು. ಈ ದೊಂಬಿಯಲ್ಲಿ ಮಾಳವಯ್ಯರವರಂತಹ ವೃದ್ಧರನ್ನು ಕರೆದುಕೊಂಡು ಹೋಗುವುದು ಅಪಾಯವಲ್ಲವೇ ಎಂದು ಕೂಡ ನಾನು ಯೋಚಿಸಿದೆ. ಬಹಳ ಕಷ್ಟದಿಂದ ವೃದ್ಧರನ್ನು ವೇದಿಕೆಗೆ ಕರೆದುಕೊಂಡು ಹೋದ ಮೇಲೆ ಬಹಳ ಹೊತ್ತು ಅಸಾಧ್ಯವಾದ ಗದ್ದಲವೆದ್ದಿತು. ಇದು ನಮ್ಮ ವಿದ್ಯೆ ಸಂಸ್ಕೃತಿ ಜ್ಞಾನ ಇವುಗಳ ಫಲವೇ ಎಂದು ವಿಷಾದದಿಂದಲೂ ದುಃಖ ದಿಂದಲೂ ತಲೆತಗ್ಗಿಸಬೇಕಾಗಿದೆ. ಆತ್ಮ ಗೌರವ ಗಾಂಭೀರ್ಯ ಇವುಗಳ ದೃಷ್ಟಿಯಿಂದಲೂ, ನೆರೆದಿರುವ ಮಾನ್ಯ ಅತಿಥಿಗಳಾದ ಗಾಂಧಿ ಜವಹರ್ ಲಾಲ್ ನೆಹ್ರು ರಾಜೇಂದ್ರಬಾಬು ಇವರ ಗೌರವಕ್ಕಾಗಿಯೂ ಶಾಂತವಾಗಿ ಶಿಸ್ತಿನಿಂದ ಇರಿ ಎಂದು ಡಾ. ರಾಧಾಕೃಷ್ಣನ್ ದುಃಖದಿಂದ ಹೇಳಿದರು.

ಎಷ್ಟೇ ದೊಡ್ಡ ಸಭೆಯನ್ನಾಗಲಿ ವ್ಯವಸ್ಥೆಯಿಂದ ಶಿಸ್ತಿನಿಂದ ಏರ್ಪಡಿಸುವು ದನ್ನು ನಮಗೆ ಕಲಿಸದಿದ್ದರೆ, ಆಟದ ಬಯಲುಗಳಿಂದಲೂ ವ್ಯಾಯಾಮ ಶಾಲೆಗಳಿಂದಲೂ ಏನೂ ಪ್ರಯೋಜನವಿಲ್ಲ

ನಾನು ಜಾತೀಯ ಐಕ್ಯ ಎಂದು ಹೇಳಿದೆ. ಈ ನಾಲ್ಕು ಸಾವಿರ ವಿದ್ಯಾರ್ಥಿಗಳಿಗೆ ಅಹಿಂಸಾ ಸಿಸ್ತನ್ನು ಕಲಿಸಿ ಸಿಪಾಯಿಗಳಾಗಿ ಸಿದ್ಧಗೊಳಿ ಸಿದರೆ ಇವರು ಒಳ್ಳೆಯ ಶಾಂತಿ ದಳವಾಗಬಹುದು. ಒಂದು ಸಾವಿರ ಅಥವಾ ನೂರಾದರೂ ವಿದ್ಯಾರ್ಥಿಗಳು ಖಾದಿ ಉಡುಪುಗಳನ್ನು ಧರಿಸಿ ಜಾತೀಯ ದಂಗೆ ನಡೆಯುತ್ತಿರುವ ಸ್ಥಳಕ್ಕೆ ಹೋಗಿ ಧೈರ್ಯದಿಂದ ಕಷ್ಟ ಬಂದರೂ ಸಹಿಸಿಕೊಂಡು ಆ ದಂಗೆಯನ್ನು ಅಡಗಿಸಬಹುದು. ವಿದಾರ್ಥಿ ಗಳು ಇದನ್ನು ಕುರಿತು ಸ್ವಲ್ಪ ಯೋಚಿಸಿದರೂ ಸಾಕು. ಅವರು ಜಾತೀಯ ಒಗ್ಗಟ್ಟಿಗೆ ಒಳ್ಳೆಯ ವ್ಯವಸ್ಥಾಪಕರಾಗುತ್ತಾರೆ. ಆದರೆ ಅದು ದೂರದ ಆಸೆ ನೂಲುವವರನ್ನಾಗಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆಯೆ ? ಒಂದು ಗಂಟೆ ನೂಲುವುದು ಜಾತೀಯ ಒಗ್ಗಟ್ಟಿಗೆ. ಒಳ್ಳೆಯ ಸಿದ್ಧತೆ ಯಾಗುತ್ತದೆ.

ವಿಶ್ವವಿದ್ಯಾಲಯದಲ್ಲಿ, ಕಾಶೀ ಗಾಂಧಿ ಆಶ್ರಮ, ಖಾದಿ ಭಂಡಾರದ ಒಂದು ಶಾಖೆ ಇದೆ. ಒಂದು ನೂಲುವ ಕೇಂದ್ರ ಸಹ ಇದೆ. ಒಂದು ನೌಕರರ ಪರಸ್ಪರ ಸಹಾಯ ಸಂಘವೂ ಮಂಡಿಯೂ ಇದೆ. ಇವೆಲ್ಲಾ ಚೆನ್ನಾಗಿ ನಡೆಯುತ್ತಿವೆಯೆಂದು ಭಾವಿಸುತ್ತೇನೆ. ಭಾವಿಸುತ್ತೇನೆಂದು ಯಾಕೆ ಹೇಳಿದೆನೆಂದರೆ ನಾನು ಅವುಗಳನ್ನು ಹೋಗಿ ನೋಡಲು ಅವಕಾಶ ವಾಗಲಿಲ್ಲ. ಆದರೆ ಆ ವ್ಯವಸ್ಥೆಯೇ ಬಹಳ ಮೆಚ್ಚುಕೆಗೆ ಅರ್ಹವಾದುದು.

ಆದರೆ ಎಲ್ಲಾವುಗಳಿಗಿಂತ ಹೆಚ್ಚಾಗಿ ವಿದ್ಯಾರ್ಥಿ ಸೇವಕಮಂಡಲ, ವಿದ್ಯಾರ್ಥಿ ಸಹಾಯಕ ಸಂಘ, ವಿದ್ಯಾರ್ಥಿಗಳ ಸ್ವಾವಲಂಬನಾ ಸಂಘ, ಇವುಗಳನ್ನು ಕುರಿತು ಹೇಳಬೇಕು. ಇವುಗಳ ಏರ್ಪಾಡು ಮಾಡಿರು ವವರು ಪ್ರೊಫೆಸರ್ ಅಸ್ರಾನಿ ಮತ್ತು ಮುಕುತ್ ಬಿಹಾರಿಲಾಲ್. ವಿದ್ಯಾರ್ಥಿಗಳ ಸ್ವಾವಲಂಬನಾ ಸಂಘವನ್ನು ಕುರಿತು ಹೆಚ್ಚಾಗಿಯೇ ಹೇಳ ಬೇಕು. ಈ ಸಂಘ ಬಡವಿದ್ಯಾರ್ಥಿಗಳಿಗೆ ಕೆಲಸ ಒದಗಿಸುತ್ತದೆ. ಪಾಠ ಹೇಳುವುದು, ಫೋಟೋಗ್ರಫಿ, ಟೈಪ್‌ರೈಟಿಂಗ್, ಹಾಲು ಮಾರುವುದು, ತುಪ್ಪ, ಪತ್ರಿಕೆ, ಕಾಗದ ಕಡ್ಡಿ ಮಾರುವುದು, ಕುರ್ಚಿ ಬೆಂಚು ಮೇಜು

ಮುಂತಾದುವುಗಳನ್ನು ಹೊರುವುದು, ಬಣ್ಣ ಹಾಕುವುದು, ಗಿಲಾವು ಮಾಡು ವುದು, ಮನೆಗೆ ಸುಣ್ಣ ಹಾಕುವುದು, ತೋಟದ ಕೆಲಸ ಬೂಟ್ಸುಗಳಿಗೆ ಪಾಲಿಷ್ ಹಾಕುವುದು ಮುಂತಾದ ಕೆಲಸಗಳು. ಕೆಲಸಗಾರರಾದ ವಿದ್ಯಾರ್ಥಿಗಳು ತಿಂಗಳಿಗೆ ಹದಿನೈದು ರೂಪಾಯಿ ಸಂಪಾದಿಸುತ್ತಾರೆ. ಪಂಡಿತ ರಾಮನರೇಶ ತ್ರಿಪಾಟಿಯ ಕಣ್ಣಿಗೆ, ಬೆಳಗಿನಜಾವ ಬೈಸಿಕಲ್ಲು ಮೇಲೆ ಹಾಲಿನ ಡಬ್ಬಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಎಂ. ಎ. ತರಗತಿಯ ಒಬ್ಬ ವಿದ್ಯಾರ್ಥಿ ಕಂಡ. ವಿದ್ಯಾರ್ಥಿಯ ಮೂವರು ತಮ್ಮಂದಿರು ವಿಶ್ವವಿದ್ಯಾಲಯದಲ್ಲಿ ಇದ್ದಾರೆ. ಅವರ ತಂದೆಯ ತಿಂಗಳ ಸಂಪಾದನೆ ೩೫ ರೂಪಾಯಿಗಳು. ಮಕ್ಕಳ ವಿದ್ಯಕ್ಕೆ ಕೊಡಲು ಆತನಲ್ಲಿ ಹಣವಿಲ್ಲ. ಮಕ್ಕಳು ಒಂದು ಹಾಲಿನ ಅಂಗಡಿ ಇಟ್ಟಿದ್ದಾರೆ. ತುಪ್ಪ ಮಾರುತ್ತಿದ್ದಾರೆ. ಹೀಗೆ ನೂರು ವಿದ್ಯಾರ್ಥಿಗಳು ಕೆಲಸಮಾಡಿಕೊಂಡು ಸಂಪಾದಿಸುತ್ತಿದ್ದಾರೆ. ಪ್ರೊಫೆಸರ್ ಅಸರಾಣಿಯವರಿಗೆ ನೂಲುವುದರ ಲ್ಲಿಯೂ ಗ್ರಾಮಕೈಗಾರಿಕೆಯಲ್ಲಿಯೂ ಬಹಳ ಉತ್ಸಾಹ. ಅವರು ಆ ದಾರಿಯಲ್ಲಿ ಮಾಡಿರುವ ಹೆಚ್ಚು ಕೆಲಸ ಗಮನಾರ್ಹವಾದುದು. ಆತ, ರಚ ನಾತ್ಮಕ ಕಾರ್ಯಕ್ಕಾಗಿ, ಗಾಂಧಿಯವರಿಗೆ ಕೊಡಲು ಒಂದು ನಿಧಿ ಶೇಖರಿ ಸಿದ್ದ. ವಿದ್ಯಾರ್ಥಿಗಳೇ ನೆಯಿದ ನೂಲಿನಿಂದ ಮಾಡಿದ ಒಂದು ಖದ್ದರ್ ಸಹ ಆತ ಗಾಂಧಿಯವರಿಗೆ ಅರ್ಪಿಸಿದ.

ನಮಗಾಗಿ ಹಗಲು ರಾತ್ರಿ ದುಡಿದ ಸತೀಶ ಕಾಲೇಲ್ಕರ್ ಮತ್ತು ಆತನ ಸ್ವಯಂಸೇವಕ ವಿದ್ಯಾರ್ಥಿಗಳನ್ನು ಕುರಿತು ಒಂದು ಮಾತು. ಈ ವಿದ್ಯಾರ್ಥಿಗಳ ಪೈಕಿ ಅನೇಕರು ಗುಜರಾತಿನವರೇ ಆಗಿದ್ದುದನ್ನು ನೋಡಿ ಆಚಾರ್ಯ ಕೃಪಾಲಿನಿ ಸತೀಶನನ್ನು, ನೀವು ಬರಿ ಗುಜರಾತಿಗಳನ್ನೇ ಆರಿ ಸಿದ್ದೀರೀ ಎಂದು ಹಾಸ್ಯಮಾಡಿದರು. ಅದು ತಪ್ಪಾಗಿದ್ದರೆ ಆ ತಪ್ಪು ರಾಧಾಕೃಷ್ಣರವರದು. ಯಾಕೆಂದರೆ ಗುಜರಾತಿ ಕಲಿತವರೇ ಗಾಂಧಿಯ ವರನ್ನು ಅರಿತು ಸೇವೆ ಚೆನ್ನಾಗಿ ಮಾಡುತ್ತಾರೆಂದು ರಾಧಾಕೃಷ್ಣನ್ ಬಲಾ ತ್ಕರಿಸಿದರು. ಬಾಲಕರಿಗೆ ಪ್ರಿಯನಾಗುತ್ತಿರುವ ಸತೀಶ ತಮಗೆ ಚೆನ್ನಾಗಿ ತಿಳಿದಿದ್ದ. ವಿದ್ಯಾರ್ಥಿಗಳನ್ನೇ ಆರಿಸಿದ ಕಾಕ ಕಾಲೇಲ್ಕರ ರಂತಹ ಮಾನ್ಯಪಿತೃವಿನ ಮಗನಾದ ಆತ, ಪ್ರಾಂತೀಯತೆಯಿಂದಲೂ ಜಾತ್ಯಾಭಿಮಾನದಿಂದಲೂ ಬಿಡಲ್ಪಟ್ಟವನಾಗಿದ್ದಾನೆ. ಆತನ ಭವಿಷ್ಯ

ಉಜ್ವಲವಾಗಿದೆ. ಈ ಟಿಪ್ಪಣಿಗಳಲ್ಲಿ ನಾನು ಸೂಚಿಸಿರುವ ಮಾರ್ಗದಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುವುದಕ್ಕಿಂತ ಉತ್ತಮವಾದ ಕೆಲಸ ಆತನಿಗೆ ಬೇರೆ ಇಲ್ಲ.

ವಿಶ್ವವಿದ್ಯಾಲಯದಲ್ಲಿ ನಾವಿದ್ದ ಕಾಲ ಅತ್ಯಲ್ಪ. ಅಷ್ಟು ಕಾಲದೊಳಗೆ ಅಲ್ಲಿ ಏನನ್ನೂ ನಾವು ಅಧ್ಯಯನ ಮಾಡಲು ಸಾಧ್ಯವಾಗಲಿಲ್ಲ. ನಾನು ಮೇಲೆ ಹೇಳಿರುವುದರಲ್ಲಿ ತಿದ್ದ ಬೇಕಾದುದು ಇರಬಹುದು. ಸ್ತ್ರೀಯರ ಕಲಾಶಾಲೆ ಸ್ವಸಂಪೂರ್ಣವಾಗಿ ಬೇರೆ ಆವರಣದಲ್ಲಿದೆ. ಆ ಕಲಾ ಶಾಲೆಗೆ ಬೇರೆ ಉಪಾಧ್ಯಾಯರಿದ್ದಾರೆ. ಆದರೆ "ವಿಜ್ಞಾನವನ್ನು ಆರಿಸಿ ಕೊಂಡ ಸ್ತ್ರೀಯರು ಪುರುಷರ ಜತೆಯಲ್ಲಿಯೇ ಆ ವಿಷಯ ವ್ಯಾಸಂಗ ಮಾಡಬೇಕು" ಅದು ನಿಜವಾದರೆ, ವಿದ್ಯಾರ್ಥಿನಿಯರು ಉಳಿದ ಪಾಠ ಗಳಲ್ಲಿಯೂ ಪುರುಷ ಪ್ರೊಫೆಸರ ತರಗತಿಯ ಲಾಭ ಯಾಕೆ ಹೊಂದಬಾರ ದೆಂಬುದು ನನಗೆ ಅರ್ಥವಾಗುವುದಿಲ್ಲ ಹಾಗೆಯೇ ಸ್ತ್ರೀ ಪ್ರೊಫೆಸರರ ಪಾಠಗಳನ್ನು ಕೇಳಿ ವಿದ್ಯಾರ್ಥಿಗಳೂ ಲಾಭ ಪಡೆಯಬಹುದು. ಶಿಕ್ಷಣ ದಲ್ಲಿ ಇಷ್ಟರಮಟ್ಟಿನ ಮಡಿ ಆವಶ್ಯಕವಿಲ್ಲ.

ಆದರೆ ನಾನು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗುತ್ತೇನೆ. ಪ್ರತಿವಾರವೂ ಗೀತೆಯ ಪಾಠವಿದೆ. ವಿದ್ಯಾರ್ಥಿನಿಯರಿಗೆ ಅದಕ್ಕೆ ಪ್ರವೇಶ ವುಂಟೋ ಇಲ್ಲವೋ ನನಗೆ ಗೊತ್ತಿಲ್ಲ ಪ್ರವೇಶವಿಲ್ಲದಿದ್ದಲ್ಲಿ, ಅವಕಾಶ ಕೊಡಬೇಕು. ನಾವು ಕಾಶಿಗೆ ಹೋದ ಮರುದಿವಸ, ಸ್ತ್ರೀ ಕಲಾಶಾಲೆ ಯಿಂದ ಗಾಂಧಿಯವರು ವಿದ್ಯಾರ್ಥಿನಿಯರಿಗೆ ತಮ್ಮ ಅವಕಾಶದಲ್ಲಿ ಕೆಲವು ನಿಮಿಷಗಳನ್ನಾದರೂ ಕೊಡದೆ ಹೋಗಕೂಡದೆಂದು ಪ್ರಾರ್ಥನೆ ಬಂದಿತು. ಗಾಂಧಿಯವರು ಕೂಡಲೆ ಒಪ್ಪಿದರು. ಕಲಾಶಾಲೆಯ ಮುಂದಲ ವಿಶಾಲ ವಾದ ಸುಂದರವಾದ ಬಯಲನ್ನು ನೋಡಿ ಅಲ್ಲಿಯೇ ಸಾಯಂಕಾಲದ ಪ್ರಾರ್ಥನೆ ಮಾಡಬಹುದೆಂದು ಅವರಿಗೆ ಎನ್ನಿಸಿತು. ವಿದ್ಯಾರ್ಥಿಗಳು ಸೂಚನೆಯನ್ನು ಸಂತೋಷದಿಂದ ಸ್ವೀಕರಿಸಿದರು. ಪ್ರಾರ್ಥನೆಯ ಕಾಲ ದಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದ ನಿಧಿಯನ್ನೂ ಖಾದಿ ಛದ್ದರನ್ನೂ ಅರ್ಪಿಸಬೇಕೆಂದಿದ್ದ ಪ್ರೊಫೆಸರ್ ಆಸ್ರಾನಿಯನ್ನೂ ಅಲ್ಲಿಗೇ ಕರೆದ್ದು ದಾಯಿತು. ಪ್ರಾಯಶಃ ಅದೇ ಮೊದಲನೆಯ ಸಲವಾಗಿ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಒಟ್ಟಿಗೆ ಪ್ರಾರ್ಥನೆ ಮಾಡಿದರು. ವಿದ್ಯಾರ್ಥಿನಿಯರ

ಅರಿಕೆಯಂತೆಯೇ, ಗಾಂಧಿಯವರು, ಪ್ರಾರ್ಥನೆಯಾದನಂತರ ವಿದ್ಯಾರ್ಥಿನಿಯರ ಗೀತಾ ಪಠನವನ್ನು ಕೇಳಲು ಒಪ್ಪಿದರು. ಅವರು ಗೀತೆಯ ೧೧ ನೆ ಅಧ್ಯಾಯದ ೩೬ ರಿಂದ ೪೬ ರ ವರೆಗಿನ ಶ್ಲೋಕಗಳನ್ನು ಹಾಡಿದುದು ನನಗೆ ಆ ಕಾಲಕ್ಕೆ ಬಹು ಅರ್ಹವಾಗಿ ತೋರಿತು. ಅದಕ್ಕಿಂತ ಉತ್ತಮವಾದ ಸ್ವಾಗತ ಗೀತೆ ಆರಿಸಲು ಸಾಧ್ಯವಿರಲಿಲ್ಲ. ವಿದ್ಯಾರ್ಥಿನಿಯರಲ್ಲಿ ಎಲ್ಲರಿಗೂ ಅಲ್ಲದಿದ್ದರೂ ಕೆಲವರಿಗಾದರೂ ಭಗವದ್ಗೀತೆ ಬರುವುದೆಂಬುದು ಬಹಳ ಆನಂದದ ಮಾತು. ವಿದ್ಯಾರ್ಥಿನಿಯರಿಗೆ ಹೊರಗಿನ ಪ್ರಪಂಚದೊಂದಿಗೆ ಹೆಚ್ಚಾದ ಸಾಂಸ್ಕೃತ ಸಂಬಂಧ ಏರ್ಪಡಬೇಕು. ಆಗಾಗ ಅವರು ಮಾಳವಯ್ಯ ರಾಧಾಕೃಷ್ಣನ್ ಮುಂತಾದವರ ಉಪನ್ಯಾಸಗಳನ್ನು ಕೇಳಬೇಕು. ಹೊರಗಿನಿಂದ ಬರುವ ಎಲ್ಲಾ ಮುಖಂಡರ ಉಪನ್ಯಾಸಗಳಿಗೂ ಅವರಿಗೆ ಪ್ರವೇಶವಿರಬೇಕು ಎಂಬುದು ನನ್ನ ಮತ.

ಪಂಡಿತ ಜವಹಿರ್‌ಲಾಲರು, ಗಾಂಧಿಯವರೊಂದಿಗೆ ಅಭಿಪ್ರಾಯ ವಿನಿಮಯಕ್ಕಾಗಿ ಎರಡು ಕಾಂಗ್ರೆಸ್ ಕೆಲಸಗಾರರ ಸಭೆ ಸೇರಿಸಿದ್ದರು. ಒಂದು ಸಭೆಯಲ್ಲಿ ಸಂಯುಕ್ತ ಪ್ರಾಂತದ ಕಾರ್ಯಕಾರಿ ಸದಸ್ಯರು ಇದ್ದರು. ಮತ್ತೊಂದರಲ್ಲಿ ಕಾಂಗ್ರೆಸ ಕಮಿಟಿ ಸದಸ್ಯರಿದ್ದರು. ಅವರು ಗಾಂಧಿಯವರನ್ನು ಬುದ್ಧಿವಂತಿಕೆಯ ಅನೇಕ ಪ್ರಶ್ನೆ ಕೇಳಿದರು. ಕೆಲವು ಬೇರೆ ಪ್ರಶ್ನೆಗಳನ್ನೂ ಕೇಳಿದರು. ಆ ಪ್ರಶ್ನೆಗಳನ್ನು ಕೇಳಿ ಗಾಂಧಿಯವರಿಗೂ ನೆರೆದಿದ್ದವರಿಗೂ ಬಹಳ ನಗು ಬಂತು. ಈ ನಗು ಗಾಂಧಿಯವರ ಆರೋಗ್ಯ ಸಂತೋಷಕ್ಕೆ ಬಹಳ ಸಹಾಯಕ. ಪ್ರೇಕ್ಷಕರಿಗೆ ಗಾಂಧಿಯವರ ವಿನೋದ ಮನೋಭಾವ ಚೆನ್ನಾಗಿ ಗೊತ್ತಾಯಿತು.

ಪ್ರಶ್ನೆ—ನಿಮ್ಮ ಕೊನೆಯಗುರಿ ಏನು ? ಕಾಂಗ್ರೆಸ್ಸು ನಿಮ್ಮ ತತ್ವವನ್ನು ಅಂಗೀಕರಿಸುವುದು ಬೇಕೇ ಅಥವಾ ತನ್ನ ಗುರಿ ಸಾಧಿಸುವುದು ಬೇಕೆ ?

ಉತ್ತರ—ನಾನು ಕಾಂಗ್ರೆಸ್ಸಿನಲ್ಲಿ ಇಟ್ಟ ಪ್ರತಿಯೊಂದು ಕಾರ್ಯಕ್ರಮವೂ ಕಾಂಗ್ರೆಸ್ಸಿನ ಗುರಿಯಾದ ಸ್ವಾತಂತ್ರ್ಯ ಸಂಪಾದನೆಗಾಗಿಯೇ ಇಟ್ಟುದಾಗಿದೆ. ಸತ್ಯ, ಅಹಿಂಸೆ ನನ್ನ ಮತ. ಅದು ನನ್ನ ಧರ್ಮವೆಂದು ಬೇಕಾದರೂ ಹೇಳಿ. ಆದರೆ ಆ ಧರ್ಮವನ್ನು ಕಾಂಗ್ರೆಸ್ಸಿನ ಮೂಲಕ ಪ್ರಚಾರ ಮಾಡುವುದು ನನ್ನ ಗುರಿಯಲ್ಲ. ಕಾಂಗ್ರೆಸ್ಸಿನ ಮುಂದೆ

ಅವು ಕಾರ್ಯದ ದಾರಿ ಎಂದು ಇಟ್ಟಿದ್ದೇನೆ. ರಾಜಕೀಯ ಗುರಿಗೆ ರಾಜಕೀಯ ದಾರಿ ನಾನು ದಕ್ಷಿಣ ಆಫ್ರಿಕಾದಲ್ಲಿಯೂ ಹೀಗೆಯೇ ಮಾಡಿದೆ. ಹಾಗಲ್ಲವಾದರೆ, ನಾನು ರಾಜಕೀಯ ಕೆಲಸಗಾರ ಎನ್ನುವುದನ್ನು ನಿಲ್ಲಿಸಿ ಧರ್ಮ ಗುರುವಿನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತೇನೆ. ರಾಜಕೀಯ ಮಾರ್ಗವನ್ನು ಯಾವಾಗ ಬೇಕಾದರೂ ಬದಲಾಯಿಸಿಕೊಳ್ಳಬಹುದು. ಆದರೆ ಬದಲಾವಣೆ ಸತ್ಯವಾದುದೂ ಉದ್ದೇಶ ಪೂರ್ವಕವಾದುದೂ ಆಗಿರಬೇಕು. ಅಭ್ಯಾಸದಲ್ಲಿ ಬಿಟ್ಟು ಬಿಟ್ಟಿರುವ ಮಾರ್ಗವನ್ನು, ಅನುಸರಿಸುತ್ತೇವೆಂದು ನಟಿಸಬಾರದು. ಅದರಿಂದ ತನಗೂ ಪ್ರಪಂಚಕ್ಕೂ ಮೋಸವಾಗುತ್ತದೆ.

೧-೨-೧೯೪೪

---

## ೩. ಋ ಷಿ ಕೇ ಶ ದ ಒ ೦ ದು ನೋಟ.

ಡೆಲ್ಲಿಯಿಂದ ನಾನು ವಿಶ್ರಾಂತಿಗಾಗಿ ಋಷೀಕೇಶಕ್ಕೆ ಹೋದೆ. ಸರ್ಕಾರದ ಕಾಗದಪತ್ರಗಳಲ್ಲಿಯೂ ಪೋಸ್ಟಾಫೀಸಿನಲ್ಲಿಯೂ ಬಳಸುತ್ತಿರುವ ಹೆಸರು ಅದೇ. ನಾನು ಅಲ್ಲಿ ಕೆಲವು ದಿನ ವಿಶ್ರಾಂತಿಗಾಗಿ ಹೋಗಿದ್ದರೂ, ಹೇಗೋ ೩-೪ ದಿನಗಳಿಗಿಂತ ಹೆಚ್ಚಾಗಿ ಅಲ್ಲಿ ಇರಲು ನನ್ನಿಂದ ಸಾಧ್ಯವಾಗಲಿಲ್ಲ. ಪವಿತ್ರವಾದ ಗಂಗಾನದಿ ಎಂದಿನಂತೆ ಆಹ್ಲಾದ ಮನೋಹರವಾಗಿದ್ದಿತು. ಕೆಲವು ಸನ್ಯಾಸಿಗಳೂ ನನ್ನ ಕಣ್ಣಿಗೆ ಬಿದ್ದರು. ಆದರೆ ವಿಶ್ರಾಂತಿಗಾಗಿ ಸಹ ಅಲ್ಲಿ ಇರಲು ನನ್ನಿಂದ ಸಾಧ್ಯವಾಗಲಿಲ್ಲ. ವಿಶ್ರಾಂತಿ ಏನೋ ಸಿಗುತ್ತಿದ್ದಿತು. ಆದರೆ ಸಮಾಧಾನ ಶಾಂತಿಯಿಲ್ಲದ ವಿಶ್ರಾಂತಿಯಿಂದ ಪ್ರಯೋಜನವಿಲ್ಲ. ಆದರೆ ಎಲ್ಲೆಲ್ಲೂ ಕೊಳಕು, ನೊಣಗಳ ಗುಂಪು, ಪೋಲಿ ದನಗಳು, ಭಿಕ್ಷುಕರ ಕೂಟ, ಅವರಿಗಿಂತ ಯಾವ ವಿಧದಲ್ಲಿಯೂ ಹೆಚ್ಚು ಉತ್ತಮರಲ್ಲದ ಸಾಧುಗಳ ಕೂಟ, ಇಂತಹ ಅಶಾಂತಿಯ ವಾತಾವರಣದಲ್ಲಿ ಶಾಂತಿ ಕಷ್ಟವಾಯಿತು.

ಹೇಗೋ ಕಾಂಗ್ರೆಸ್ ಕಮಿಟಿಯವರು ನನ್ನನ್ನು ಪತ್ತೆ ಹಚ್ಚಿದರು. ಅಲ್ಲಿ ಒಂದು ಸಭೆಯಲ್ಲಿ ಭಾಷಣ ಮಾಡಬೇಕೆಂದು ಅವರು ಕೇಳಿದರು.

ಯಾರ ಸಭೆಯಲ್ಲಿ ಎಂದು ನಾನು ಕೇಳಿದೆ. ಅವರು ನಕ್ಕರು. ಋಷೀಕೇಶ ದಲ್ಲಿ ಶಾಶ್ವತವಾಗಿರತಕ್ಕ ಸಾಧುಗಳು ಸುಮಾರು ಎರಡುಸಾವಿರ, ಸನ್ಯಾಸಿಗಳು ಒಂದುಸಾವಿರ, ಬಂದು ಹೋಗುತ್ತಿರುವ ಸನ್ಯಾಸಿಗಳು ಸುಮಾರು ಸಾವಿರ. ಐನೂರು ಭಿಕ್ಷುಕರು ಇದ್ದಾರೆ. ಇವರಿಗೆಲ್ಲಾ ಊಟ ಛತ್ರಗಳಲ್ಲಿ ಕೆಲವು ಅಂಗಡಿಗಳೂ ಅಲ್ಲಿವೆ. ಕಾಂಗ್ರೆಸ್ಸಿನವರು "ಇಲ್ಲಿ ಅನೇಕ ಸಂಸ್ಕೃತ ವಿದ್ಯಾರ್ಥಿಗಳು ಇದ್ದಾರೆ. ಪರ್ವತಪ್ರದೇಶದ ನಿವಾಸಿ ಗಳು ಇದ್ದಾರೆ. ಅವರು ನಿಮ್ಮ ರಚನಾತ್ಮಕ ಕಾರ್ಯದ ಸಂದೇಶವನ್ನು ಕೇಳಬಹುದು" "ಆದರೆ ಸಾಧುಗಳಿಗೆ ನಮ್ಮಲ್ಲಿ ದ್ವೇಷ" ಎಂದರು. ನಾನು "ನೀವು ಶ್ರದ್ಧೆಯಿಂದ ಅವರ ಮಧ್ಯೆ ಕೆಲಸ ಪ್ರಾರಂಭಿಸಿದ್ದೀರಾ" ಎಂದೆ. ಒಬ್ಬ ಗೆಳೆಯರು "ಪ್ರಯತ್ನ ನಡೆದಿದೆ. ಜಮೀನು ನಮಗೆ ಬೇಕಾ ದಷ್ಟು ಸಿಗುತ್ತದೆ. ಆದರೆ ಯಾವ ಕೆಲಸವೂ ಇನ್ನೂ ಸಾಧ್ಯವಾಗಿಲ್ಲ. ರಚನಾತ್ಮಕ ಕಾರ್ಯಕ್ರಮದ ಕೇಂದ್ರದ ತಳಹದಿ ಕಲ್ಲನ್ನು ನೀವು ಹಾಕಿ ಹೋಗಿ ಏನು ಮಾಡಬೇಕೆಂಬುದನ್ನು ನಮಗೆ ಸ್ಪಷ್ಟವಾಗಿ ಹೇಳಿ" ಎಂದರು. ನಾನು ಅವರಿಗೆ ಹೀಗೆ ಹೇಳಿದೆ. "ಅದು ನಿಮ್ಮ ಉದ್ದೇಶವಾದರೆ ನೂಲುವುದು ನೇಯುವುದು ಜೇನು ಸಾಕುವುದು ಕೈಕಾಗದ ತಯಾರಿ, ಮುಂತಾದುವನ್ನು ಕಲಿಯಲು ೨-೩ ಕೆಲಸಗಾರರನ್ನು ಕಳುಹಿಸಿ; ನೂಲುವುದು ಯಾರಿಗೆ ಬರುತ್ತದೆಯೋ ಅವರು ರಾಟೆಗಳನ್ನೂ ಹತ್ತಿಯನ್ನೂ ಸಂಗ್ರಹಿಸುವುದರಿಂದ ಪ್ರಯತ್ನವನ್ನು ಪ್ರಾರಂಭಿಸಬಹುದು. ನಾನು ಎಲ್ಲೋ ಎರಡುದಿನ ಪ್ರಯಾಣಕ್ಕಾಗಿ ಬಂದಿದ್ದೇನೆ. ನಾನು ಪ್ರಾರಂಭಿಸಲು ಸಾಧ್ಯವಿಲ್ಲ" ಎಂದೆ. ಅನಂತರ ಸ್ವಲ್ಪಹೊತ್ತಿನಮೇಲೆ ನಾನು ಒಬ್ಬ ಸಾಧುವನ್ನು ನೋಡಿದೆ. ಅವನ ಜಡೆ ಸಿಂಬಿಯಾಗಿದ್ದಿತು. ಗಡ್ಡ ಉದ್ದವಾಗಿದ್ದಿತು. ದೂರದಿಂದಲೇ ಅವನು ನನ್ನನ್ನು ಕರೆದು ನಿಲ್ಲಿಸಿದ. ಒಂದು ಗಳಿಗೆ ನನಗೆ ಆತನ ಗುರುತು ಸಿಕ್ಕಲಿಲ್ಲ. ಆದರೆ ಅದು ಪರಿಚಿತವಾದ ಮುಖ. ಆ ಮೇಲೆ ಗೊತ್ತಾಯಿತು. ಅನೇಕ ವರುಷಗಳ ಕೆಳಗೆ ನಾವಿಬ್ಬರೂ ಸೆರೆಮನೆ ಯಲ್ಲಿ ಸಂಧಿಸಿದ್ದೆವು. ಆತ ಈ ಬಾಳನ್ನು ಆರಿಸಿಕೊಂಡಿದ್ದ. ತನ್ನ ಕುಟೀ ರಕ್ಕೆ ಬರಬೇಕೆಂದು ನನ್ನನ್ನು ಕೇಳಿಕೊಂಡ. ಅವನು ಎರಡು ಚರಕದಲ್ಲಿ ತಪ್ಪದೆ ನೂಲು ತೆಗೆಯುತ್ತಿದ್ದಾನೆ. ಅವನ ಹತ್ತಿರ ಎರಡು ಹಸುಗಳಿವೆ. ಒಂದು ಸಣ್ಣ ತೋಟ ಮಾಡಿಕೊಂಡಿದ್ದಾನೆ. ಆತ "ಇಲ್ಲಿ ಸ್ವರಾಜ್ಯಕ್ಕಾಗಿ

ತಪಸ್ಸು ಮಾಡುತ್ತಾ ಕುಳಿತಿದ್ದೇನೆ. ನಮ್ಮ ಗುರಿಯನ್ನು ನಾವು ಮುಟ್ಟುವುದರಲ್ಲಿ ಸಂದೇಹವಿಲ್ಲ ಎಂದ. ನಾನು "ಆದರೆ ಹೇಗೆ. ಇತರ ಸಾಧುಗಳು ಚರಕವನ್ನು ಪ್ರಾರಂಭಿಸುವಂತೆ ನೀವು ಪ್ರೇರಿಸಿದ್ದೀರಾ? ರಚನಾತ್ಮಕ ಕಾರ್ಯಕ್ರಮ ಮಾಡಲು ಅವರು ಹೊರಕ್ಕೆ ಹೊರಡುವರೆ" ಎಂದೆ. ಸನ್ಯಾಸಿ ನಕ್ಕ. "ಆ ಮಾರ್ಗದಲ್ಲಿ ಪ್ರಯತ್ನಿಸುತ್ತೇನೆ" ಎಂದ.

ಸ್ವಾಮಿ ಸೇವಾನಂದ ಎಂಬುವರು ಋಷೀಕೇಶದಲ್ಲಿ ಇದ್ದಾರೆ. ದಿವ್ಯಜೀವನ ಎಂಬ ಮಾಸಪತ್ರಿಕೆ ನಡೆಸುತ್ತಿದ್ದಾರೆ. ಅವರ ದಿವ್ಯಜೀವನದ ಶಾಖೆಗಳು, ಈ ದೇಶದಲ್ಲಿಯೂ ದೇಶದ ಹೊರಗೂ ಇವೆ. ನನ್ನನ್ನು ಋಷಿಕೇಶಕ್ಕೆ ಆಕರ್ಶಿಸಿದವರು ಅವರು. ಈ ದಿವ್ಯಜೀವನ ಸಂಘದ ಸದಸ್ಯರು ವರುಷದಲ್ಲಿ ನಾಲ್ಕುಸಲ ಸೇರಿ ನಮ್ಮ ನೀತಿ ಮತ್ತು ಧರ್ಮ ಜೀವನವನ್ನು ಬೆಳಸಿಕೊಳ್ಳಲು ನಿಶ್ಚಯಿಸಿದ್ದಾರೆ. ನಾನು ಇನ್ನೂ ಅನೇಕ ಸನ್ಯಾಸಿಗಳನ್ನು ನೋಡಿದೆ. ಕೆಲವರು ತುಂಬ ಪ್ರಾಜ್ಞರು, ಅವರೆಲ್ಲಾ ದೇಶದ ಸುದ್ದಿ ಏನು ? ಹೊಸ ವರ್ತಮಾನವೇನು ? ಎಂದು ಕೇಳುತ್ತಿದ್ದರು. ವರ್ತಮಾನ ಇವರಿಗೆ ಇಷ್ಟು ಉತ್ಸಾಹವಾದ ಮೇಲೆ ಇವರು ದೇಶಕ್ಕಾಗಿ ಯಾಕೆ ಕೆಲಸಮಾಡಬಾರದು ಎಂದು ನಾನು ಯೋಚಿಸಿದೆ ; ಅವರಿಗೆ ಹೀಗೆ ಹೇಳಿದೆ "ಭಗವದ್ಗೀತೆಯಲ್ಲಿ ಸನ್ಯಾಸಿ ಎಂದರೆ ಏನು ಎಂದು ಹೇಳಿರುವುದು ನಿಮಗೆ ಗೊತ್ತು. "ಯಾರು ಫಲಾಪೇಕ್ಷೆಯಿಲ್ಲದೆ ಅನಾಸಕ್ತನಾಗಿ ಕೆಲಸಮಾಡುತ್ತಾನೆಯೋ ಅವನೇ ಸನ್ಯಾಸಿ ; ಯೋಗಿ ಆದರೆ ಬೆಂಕಿ ಹತ್ತಿಸದವನೂ ಕರ್ಮಮಾಡದವನೂ ಸನ್ಯಾಸಿಯಲ್ಲ (೬-೧) ಆದರೆ ಇಲ್ಲಿ ಬೆಂಕಿ ಹತ್ತಿಸದವರೂ ಏನನ್ನೂ ಮಾಡದವರೂ ಸನ್ಯಾಸಿಗಳಾಗಿದ್ದಾರೆ. ನಮ್ಮ ದೇಶ ಸ್ವತಂತ್ರವಾಗುವುದು ಹೇಗೆ ?" ಸ್ವಾಮಿ ಶಿವಾನಂದ ನನ್ನ ಮಾತನ್ನು ಒಪ್ಪಿದರು. ಯಾವ ಕೆಲಸವನ್ನು ಮಾಡದಿದ್ದರೂ ಹೊಟ್ಟೆತುಂಬ ಅನ್ನ ಸಿಕ್ಕುವಾಗ, ಏನನ್ನೂ ಮಾಡಲು ಸಾಧ್ಯವಿಲ್ಲ ಎಂದರು. ತಮ್ಮ ಆಶ್ರಮದಲ್ಲಿ ಚರಕವನ್ನು ಸ್ಥಾಪಿಸಿ ನೂಲುವ ಉಪದೇಶವನ್ನು ಸಾಧ್ಯವಾದೆಡೆಗಳಲ್ಲೆಲ್ಲಾ ಹರಡುತ್ತೇನೆ ಎಂದು ಸ್ವಾಮಿ ಶಿವಾನಂದ ಹೇಳಿದರು.

ಆದರೆ ಆಗಬೇಕಾದ ಕೆಲಸ ಇನ್ನೂ ಹೆಚ್ಚಾಗಿದೆ. ಸನ್ಯಾಸಿ ಸಾಧುಗಳಿಗೆ, ಕರ್ಮಮಾರ್ಗವನ್ನು ಬೋಧಿಸುವವರ ಒಂದು ಗುಂಪು ಬೇಕಾ

ಗಿದೆ. ತನ್ನ ಔದಾರ್ಯವನ್ನು ದುರುಪಯೋಗ ಪಡಿಸವಂತೆ ನಾವು ದಾನಿ ಗಳಿಗೂ ಹೇಳಬೇಕಾಗಿದೆ.

ನಾನು ಋಷೀಕೇಶಕ್ಕೆ ಜಗಲ ಕಿಶೋರ ಬಿರ್ಲ ಸೇಟ್‌ರ ಜತೆಗೆ ಹೊಗಿದ್ದೆ. ಆತ ದೊಡ್ಡ ಪ್ರಮಾಣದಲ್ಲಿ ಒಂದು ಯಜ್ಞವನ್ನು ಏರ್ಪಡಿಸಿದ್ದ. ವೇದಪಾರಂಗತರಾದ ಮತ್ತು ವಿದ್ವಾಂಸರಾದ ಬ್ರಾಹ್ಮಣರು ಭಾರತದ ಎಲ್ಲಾ ಭಾಗಗಳಿಂದಲೂ ಬಂದು ನೆರೆದಿದ್ದರು. ಯಜ್ಞದ ಮುಖ್ಯ ಪುರೋಹಿತ ಗೋಸ್ವಾಮಿ ಗಣೇಶದತ್ತರು " ನೀವು ಬರುವುದನ್ನು ಈ ದೊಡ್ಡ ಗುಂಪಿಗೆ ಆಗಲೇ ತಿಳಿಸಿಬಿಟ್ಟಿದ್ದೇನೆ " ಎಂದರು. ನಾನು " ನಿಮ್ಮ ವಿಶ್ವಾಸ, ಆದರೆ ನಾನು ಯಜ್ಞಕ್ಕಾಗಿ ಬಂದಿಲ್ಲ. ನಾನು ಬಂದಿರುವುದು ಯಾರಿಗೂ ತಿಳಿಯಬಾರದು. ಇಲ್ಲಿಗೆ ಸ್ವಲ್ಪ ವಿಶ್ರಾಂತಿಗಾಗಿ ಬಂದಿನ್ದೇನೆ " ಎಂದೆ. ಆದರೆ ಆತ ಕರುಣಿ, ಬಿಡಲಿಲ್ಲ. ನೆರೆದಿದ್ದವರಿಗೆ ನನ್ನ ಪರಿಚಯು ಉದ್ದವಾದ ಭಾಷಣದಲ್ಲಿ ಮಾಡಿದ. ಯಜ್ಞದಲ್ಲಿ ತೊಡಗಿದ್ದವರ ಪರವಾಗಿ ನನ್ನನ್ನು ಆಶೀರ್ವದಿಸಿದ. ನನಗೆ ತಿಳಿದುದರಲ್ಲಿ ಯಜ್ಞ ಹಿಂದುಗಳ ಅಭಿವೃದ್ಧಿಗಾಗಿ, ಶಾಂತಿಸ್ಥಾಪನೆಗಾಗಿ " ಎಂದು ಗೊತ್ತಾಯಿತು ಹಿಂದು ರಾಜ್ಯ ಹಿಂದು ಸಾಮ್ರಾಜ್ಯ ಎಂಬ ಮಾತುಗಳು ಪದೇಪದೇ ಉಚ್ಚರಿತವಾಗುತ್ತಿದ್ದವು. ನನಗೆ ಒಳ್ಳೆ ಪೀಕಲಾಟಕ್ಕೆ ಬಂತು. ಇವರಿಗೆ ಏನು ಹೇಳಬೇಕು ಎಂಬುದು ತಿಳಿಯಲಿಲ್ಲ. ಆದರೆ ನಾಲಿಗೆಯಲ್ಲಿ ದೇವರ ಹೆಸರನ್ನು ಇಟ್ಟು ಕೊಂಡು ನನ್ನ ಹೃದಯದಲ್ಲಿ ಏಳುತ್ತಿದ್ದ ಕೆಲವು ಭಾವಗಳನ್ನು ಅವರ ಮುಂದೆ ಇಟ್ಟೆ.

ನಾನು ಇಲ್ಲಿಗೆ ಬಂದುದು ಮನಸ್ಸಿಗೂ ದೇಹಕ್ಕೂ ವಿಶ್ರಾಂತಿಗಾಗಿ ಆ ವಿಶ್ರಾಂತಿಯಿಂದ ನನ್ನ ಕೆಲಸ ಮಾಡಲು ನನಗೆ ಚೈತನ್ಯ ಹೆಚ್ಚಾಗ ಲೆಂದು. ನೀವು ಇಲ್ಲಿ ಯಜ್ಞಮಾಡಲು ಯಜ್ಞದಲ್ಲಿ ಭಾಗಿಯಾಗಲು ಸೇರಿ ದ್ದೀರಿ. ನೀವೆಲ್ಲಾ ಹಿಂದುಗಳು. ನಾನು ಹಿಂದು ; ನನ್ನ ಹೃದಯವನ್ನು ಪೂರ್ಣವಾಗಿ ಆಕರ್ಶಿಸಿರುವ ಹಿಂದು ಪ್ರಾರ್ಥನೆ ಇದು.

ಸರ್ವೇತ್ರ ಸುಖಿನಃ ಸಂತು ಸರ್ವೇಸಂತು ನಿರಾಮಯಾಃ

ಸರ್ವೇ ಭದ್ರಾಣಿ ಪಶ್ಯಂತು ನಕಶ್ಚಿತ್ ದುಃಖಭಾಗ್ ಭವೇತ್.

(ಇಲ್ಲಿ ಎಲ್ಲರೂ ಸುಖಿಗಳಾಗಲಿ, ಎಲ್ಲರೂ ನಿರೋಗಿಗಳಾಗಲಿ, ಎಲ್ಲರೂ ಶುಭವನ್ನು ನೋಡಲಿ, ಯಾರಿಗೂ ದುಃಖವಿಲ್ಲದಿರಲಿ)

ದಿನದ ಕಷ್ಟವಾದ ದುಡುಮೆ ಮುಗಿದನಂತರ ನಾನು ವಿಶ್ರಾಂತಿಗಾಗಿ ಮಲಗುವಾಗ ಈ ಪ್ರಾರ್ಥನೆಯನ್ನು ಈಗ ಉಚ್ಚರಿಸುವಂತೆ ನಿತ್ಯಾ ಉಚ್ಚರಿಸುತ್ತೇನೆ. ಸರ್ವರ ಒಳ್ಳೆಯದಕ್ಕೂ ಶುಭಕ್ಕೂ ಪ್ರಾರ್ಥಿಸೋಣ. ಅದೇ ಹಿಂದೂಮತದ ವೈಭವ. ಅದೇ ಅದರ ಶಕ್ತಿ.

ಪ್ರಾರ್ಥನೆ ಮಾಡುವುದು ಸುಲಭ, ಆದರೆ ಪರಿಶುದ್ಧವಾದ ಪಶ್ಚಾತ್ತಾಪದ ಹೃದಯವಿಲ್ಲದೆ ಮಾಡುವ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ. ಅಗ್ನಿಯಲ್ಲಿ ತುಪ್ಪ ಹೋಮ ಮಾತ್ರವೇ ಯಜ್ಞವಲ್ಲ. ಇದರ ಅರ್ಥ ಇನ್ನೂ ಆಳವಾಗಿದೆ. ವ್ಯಕ್ತಿ ತನ್ನ ಸರ್ವಸ್ವವನ್ನೂ ಜನತೆಯ ಸುಖಕ್ಕಾಗಿ ತ್ಯಾಗಮಾಡುವುದು ಯಜ್ಞ. ಆ ಆಹುತಿಗಳ ಅರ್ಥ ನನಗೆ ಬೇರೆಯಾಗಿದೆ. ನಮ್ಮ ದೌರ್ಬಲ್ಯ, ನಮ್ಮ ಕೋಪ, ನಮ್ಮ ಸಂಕುಚಿತಬುದ್ಧಿ ಇವುಗಳನ್ನೆಲ್ಲ ಶುದ್ಧಿಯ ಬೆಂಕಿಯಲ್ಲಿ ಹೋಮ ಮಾಡಬೇಕು. ಹಾಗೆ ಮಾಡಿದಾಗ ಮಾತ್ರ ನಮ್ಮ ಪ್ರಾರ್ಥನೆ ದೇವರಿಗೆ ಕೇಳುವುದು.

ಪ್ರಾರ್ಥನೆಯ ಮತ್ತೊಂದು ದೃಷ್ಟಿ, ನಿಮ್ಮೆದುರು ಇಡುತ್ತೇನೆ. ನೀವು ಇಲ್ಲಿ ನಿಮ್ಮ ಆಶೆಯ ಪೂರೈಕೆಗಾಗಿ ಸೇರಿದ್ದೀರಿ. ಆ ಉದ್ದೇಶಕ್ಕಾಗಿ ಯಜ್ಞ ಮಾಡುತ್ತಿದ್ದೀರಿ. ನಮ್ಮ ಆಸೆಗಳಲ್ಲಿ ಒಳ್ಳೆಯವೂ ಇವೆ. ಕೆಟ್ಟವೂ ಇವೆ. ಅವುಗಳಲ್ಲಿ ಒಳ್ಳೆಯದು ಯಾವುದು ಕೆಟ್ಟದು ಯಾವುದು, ನಮಗೆ ಯಾರಿಗೂ ತಿಳಿಯದು. ಅದು ನಮ್ಮ ಯೋಚನೆ ಮತ್ತು ಕರ್ತವ್ಯದ ಒಡೆಯನಾದ ಭಗವಂತನಿಗೆ ಗೊತ್ತು. ಆದುದರಿಂದ ನಾನು "ನನ್ನ ಶುದ್ಧವಾದ ಪ್ರಾರ್ಥನೆಗಳನ್ನು ನಡೆಸಿಕೊಡಿ, ಈ ಪ್ರಾರ್ಥನೆಗಳು ಅಶುದ್ಧ ಕ್ರೂರ ಮೂಢವಾಗಿದ್ದರೆ ಬೇಡ" ಎಂದು ಕೇಳಿಕೊಳ್ಳುತ್ತೇನೆ. ಆ ವಿಧವಾದ ಪ್ರಾರ್ಥನೆಯಲ್ಲಿ ನನ್ನೊಂದಿಗೆ ನೀವು ಭಾಗಿಗಳಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯಮಾತು. ಶಾಂತಿಗಾಗಿ ಪ್ರಾರ್ಥನೆ ಮಾಡುವುದು ಶುದ್ಧವಾದುದು ಎಂದು ಎಲ್ಲರಿಗೂ ಗೊತ್ತು. ಕ್ರೂರವಾದ ಹೊಡೆದಾಟ ರಕ್ತಪಾತದ ಈ ಕಾಲದಲ್ಲಿ, ಶಾಂತಿಗಾಗಿ ಪ್ರಾರ್ಥನೆ ಮಾಡುವುದು ಒಳ್ಳೆಯದು. ಈ ಸಂದರ್ಭದಲ್ಲಿ ಮಹತ್ತರವಾದ ಒಂದು ವೇದದ ಪ್ರಾರ್ಥನೆ ಮಾಡಬೇಕೆಂದು ನನಗೆ ಎನಿಸುತ್ತದೆ. ನನ್ನೊಂದಿಗೆ ನೀವೆಲ್ಲಾ ಭಾಗಿಗಳಾಗುವಿರೆಂದು ನನಗೆ ಗೊತ್ತು.

ಯದಿಹ ಘೋರಂ ಯದಿಹ ಕ್ರೂರಂ ಯದಿಹ ಪಾಪಂ
ತಚ್ಛಾಂತಂ ತಚ್ಛಿವಂ ಸರ್ವಮೇವ ಶಮಸ್ತು ನಃ

ಘೋರವಾದುದೂ ಕ್ರೂರವಾದುದೂ ಪಾಪವಾದುದೂ ಶಮನವಾಗಲಿ. ನನಗೆ ಮಂಗಳವೂ ಶಾಂತಿಯೂ ಉಂಟಾಗಲಿ.

ಹಿಂದೂ ಧರ್ಮ ಪರಿಶುದ್ಧವಾಗಲೆಂದು ನಾವು ಪ್ರಾರ್ಥಿಸಬೇಕಾದ ಈ ಪವಿತ್ರ ಸ್ಥಳದಲ್ಲಿ ಹಿಂದೂ ಧರ್ಮದಲ್ಲಿ ಘೋರ ಕ್ರೂರ ಪಾಪದ ಸೂಚನೆಗಳೆಲ್ಲಾ ನಾಶವಾಗಲಿ ಎಂದು ಪ್ರಾರ್ಥಿಸೋಣ. ಹೋರಾಟ ರಕ್ತಪಾತ ನಿಲ್ಲಲಿ. ಎಲ್ಲೆಲ್ಲೂ ಶಾಂತಿಯೂ ಸಮರಸವೂ ನೆಲಸಲಿ. ಅದೇ ನಾವೆಲ್ಲಾ ಮಾಡಬೇಕಾದ ಪ್ರಾರ್ಥನೆ. ಇಂತಹ ಶುದ್ಧವಾದ ಪ್ರಾರ್ಥನೆ ದೇವರು ನಡೆಸುತ್ತಾನೆಂದು ನನಗೆ ಗೊತ್ತು. ಕೃಷ್ಣ ಪರಮಾತ್ಮನು ಒಳ್ಳೆಯದನ್ನು ಮಾಡುವವನಿಗೆ, ಕೆಟ್ಟದ್ದಾಗುವುದಿಲ್ಲ ಎಂದು ಹೇಳಿದ್ದಾನೆ. ನಿಮಗೆ ವಂದನೆ"

ಈ ಮನೋಭಾವದಿಂದ ಆ ಯಜ್ಞದಲ್ಲಿ ನಾನು ಭಾಗಿಯಾದೆ. ವ್ಯವಸ್ಥಾಪಕರಿಗೆ ನನ್ನ ಅಭಿಪ್ರಾಯ ಒಪ್ಪಿಗೆಯಾದುದು ಸಂತೋಷ.

ಆದರೆ ಈಗ ಹಿಂದೆ ನಡೆದುದನ್ನು ಯೋಚಿಸಿದರೆ, ನಾನು ಯಜ್ಞದಲ್ಲಿ ಭಾಗ ವಹಿಸಿದುದು ತಪ್ಪು ಎಂದು ನನಗೆ ತೋರುತ್ತದೆ. ನಾನು ಯಜ್ಞದ ಉದ್ದೇಶವನ್ನು ಅಪ್ರತ್ಯಕ್ಷವಾಗಿ ವಿವರಿಸಿದೆ. ಆದರೆ ಉದ್ದೇಶ ಎಷ್ಟೇ ಒಳ್ಳೆಯದಾಗಿದ್ದರಲಿ, ಯಜ್ಞದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವ ಧೈರ್ಯ ನನಗೆ ಇರಬೇಕಾಗಿದ್ದಿತು.

ಈಗ ಮಾಡುತ್ತಿರುವ ಯಜ್ಞ ಪೂರ್ಣವಾಗಿ ಅಪ್ರಯೋಜಕವಾದ ಪ್ರಾಚೀನ ಅವಶೇಷ. ಅತ್ಯಂತ ಅವಶ್ಯಕವಾದ ಹಸುವಿನ ತುಪ್ಪ ಮತ್ತು ಇತರ ಪದಾರ್ಥಗಳ ವ್ಯರ್ಥ ವೆಚ್ಚ. ಒಂದು ತಿಂಗಳಕಾಲ ಎರಡುಸಾವಿರ ಸಾಧುಗಳ ಊಟ ಇವೆಲ್ಲಾ ರಾಷ್ಟ್ರಕ್ಕೆ ವ್ಯರ್ಥವಾದ ವೆಚ್ಚ. ಇದರಿಂದ ಹಿಂದೂಧರ್ಮಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಗೀತೆಯಲ್ಲಿ ಹೇಳಿರುವ ಯಜ್ಞ ನಿಜವಾದರೂ ಇದಲ್ಲ. ನಿಸ್ವಾರ್ಥತೆಯಿಂದ ಜನತೆಯನ್ನು ಸೇವಿಸುವುದೇ ಅಲ್ಲಿ ಹೇಳಿರುವ ಯಜ್ಞ. ಸೇಠ್ ಕಿಶೋರ್ ಬಿರ್ಲ ಚಿನ್ನದಂತಹ ಮನುಷ್ಯ. ಉದಾರಿ. ಆದರೆ ಹಿಂದೂ ಧರ್ಮದ ಏಳಿಗೆಗೂ ಮಂಗಳಕ್ಕೂ ಅವರು ಮಾಡುವ ಈ ಅಸಾಧ್ಯವಾದ ವೆಚ್ಚಕ್ಕೆ ಬೇರೆ

ಮಾರ್ಗ ಬೇಕು. ಈ ಸಾಧುಗಳನ್ನೆಲ್ಲಾ ರಚನಾತ್ಮಕ ಕಾರ್ಯಕ್ಕೆ ಹಚ್ಚಿದರೆ, ಅದರಿಂದ ಅವರಿಗೆ ಅನ್ನ ಬಟ್ಟೆ ಒದಗುವಂತಾದರೆ, ಸಾಧುಗಳು ದೇಶದಲ್ಲಿ ಹೋಗಿ ಧರ್ಮಗಳ ಸಮಾನತೆಯನ್ನೂ ಜಾತೀಯ ಐಕ್ಯವನ್ನೂ ಬೋಧಿಸುವುದಾದರೆ ಆತ ವೆಚ್ಚ ಮಾಡಿದ ಹಣ ಸಾರ್ಥಕವಾಗುವುದು. ಆದರೆ ನನ್ನ ಅಭಿಪ್ರಾಯ ಪ್ರಾಯಶಃ ಆತನಿಗೆ ಪೂರ್ತಾ ತಪ್ಪಾಗಿ ತೋರಬಹುದು. ಆತನ ಧರ್ಮ ಏನೇ ಆಗಿರಲಿ, ನನ್ನ ಧರ್ಮ ನನಗೆ ಗೊತ್ತು "ಆ ಯಜ್ಞದಲ್ಲಿ ಭಾಗವಹಿಸಿದ್ದವರೂ ಪ್ರೇಕ್ಷಕರೂ ಧರ್ಮವೆಂಬ ಹೆಸರಿನಲ್ಲಿ ತಮ್ಮನ್ನೇ ತಾವು ಮೋಸ ಪಡಿಸಿಕೊಳ್ಳುತ್ತಿದ್ದರು" ಎಂದು ನಾನು ಖಂಡಿತ ಹೇಳಬೇಕಾಗಿದ್ದಿತು. ನನ್ನ ಕರ್ತವ್ಯ ನಾನು ಮಾಡಲಿಲ್ಲ.

೨೬—೪—೪೨

---

## ಅಮೆರಿಕನ್ನರ ವರ್ಣದ್ವೇಷ.

ನಿಗ್ರೋವಿಗೆ ಅಮೆರಿಕದಲ್ಲಿ ಇರುವ ಸ್ಥಾನ, ಬಿಳಿಯರು ಅವನಲ್ಲಿ ಎಲ್ಲೆಲ್ಲೂ ತೋರಿಸುವ ವರ್ಣದ್ವೇಷ, ಇವನ್ನೆಲ್ಲಾ ಈ ಹಿಂದೆಯೇ ಈ ಪತ್ರಿಕೆಯಲ್ಲಿ ಚರ್ಚಿಸಿ ಆಗಿದೆ. ಈಗ ಏಷ್ಯಾದವರನ್ನು ಅದರಲ್ಲಿಯೂ ಈ ಯುದ್ಧದಲ್ಲಿ ಅಮೇರಿಕದ ಮಿತ್ರರೇ ಆದ ಚೀನಾದವರನ್ನು, ಅಮೆರಿಕದವರು ಹೇಗೆ ನಡೆಸಿಕೊಳ್ಳುತಿದ್ದಾರೆಂದು ಸೂಕ್ಷ್ಮವಾಗಿ ಹೇಳಬಹುದು. ಏಷ್ಯಾ ಪತ್ರಿಕೆಯ ಫೆಬ್ರವರಿ ಸಂಚಿಕೆಯಲ್ಲಿ ಡಾಕ್ಟರ್ ಸ್ಪಿಂಕ್ಸ್ ಎಂಬುವರು ಬರೆದ ಒಂದು ನಿಷ್ಪಕ್ಷಪಾತವಾದ ಲೇಖನವಿದೆ. ಅದರಲ್ಲಿ, ಚೀನಾದವರು ಅಮೆರಿಕಾಕ್ಕೆ ಬರಕೂಡದೆಂದು ಮಾಡಿರುವ ಕಾನೂನನ್ನು ಕೂಡಲೆ ತೆಗೆದುಹಾಕಬೇಕೆಂದು ಅವರು ಹೇಳುತ್ತಾರೆ. "ಅಮೆರಿಕದ ಭವಿಷ್ಯ ಏಷ್ಯಾದ ಕೋಟ್ಯಾಂತರ ಜನರೊಂದಿಗೆ ನಾವು ನಡೆದುಕೊಳ್ಳುವುದರೊಡನೆ ಸಂಬಂಧಿಸಿದೆ. ಯುದ್ಧದಲ್ಲಿಯಾಗಲಿ ಶಾಂತಿಯಲ್ಲಿಯಾಗಲಿ, ಸ್ನೇಹಿತರಾಗಿಯಾಗಲಿ ದ್ವೇಷಿಗಳಾಗಿಯಾಗಲಿ ಇನ್ನು ಮೇಲೆ ನಾವು ಏಷ್ಯಾದವರನ್ನು ಸಮಾನವಾಗಿ ನಡೆಸಿಕೊಳ್ಳಬೇಕು. ನಮ್ಮ ಕಾನೂನುಗಳಲ್ಲಿ, ಏಷ್ಯಾದವರು ಬೇರೆ ಎಂದು ಮಾಡಿದರೆ, ಜಗತ್ತನ್ನು

ನಾವು ಉತ್ತಮಗೊಳಿಸುವವರು ಎಂಬ ನಮ್ಮ ಜಂಭದಲ್ಲಿ ಅವರಿಗೆ ನಂಬಿಕೆ ಬರುವುದಿಲ್ಲ." ಸತ್ಯ ಮತ್ತು ಪರಿಸ್ಥಿತಿಯ ಕಾರಣದಿಂದ ಹೀಗೆ ನ್ಯಾಯ ಏಷ್ಯಾದವರಿಗೆ ದೊರಕಬೇಕೆಂದು ಡಾಕ್ಟರ್ ಸ್ಪಿಂಕ್ಸ್ ವಾದಿಸುತ್ತಾರೆ. ಯಾವುದು ಸತ್ಯವೋ ಅದೇ ಪರಿಸ್ಥಿತಿಗೆ ಅನುಕೂಲವಾದುದು ಎಂಬ ತತ್ವ ತಿಳಿಯಬೇಕು.

ಡಾಕ್ಟರ್ ಸ್ಪಿಂಕ್ಸ್ ಇನ್ನೂ ಹೀಗೆ ಹೇಳುತ್ತಾರೆ. "ನಮ್ಮ ಕಾರ್ಯದಿಂದ ನಾವು ಇಂದು ಎರಡು ಮುಖ್ಯತತ್ವಗಳಿಗೆ ವಿರೋಧವಾಗಿ ನಡೆಯುತ್ತಿದ್ದೇವೆ ಆ ತತ್ವಗಳಿಗೆ ಶತ್ರುರಾಷ್ಟ್ರಗಳು ವಿರೋಧವಾಗಿ ನಡೆಯುತ್ತಿವೆಯೆಂದು ಅವುಗಳನ್ನು ದೂರುತ್ತೇವೆ. ನಮ್ಮ ಪರದೇಶದವರು ವಸತಿ ಬರುವ ಕಾನೂನಿಂದ ಜಗತ್ತಿನ ಜನತೆಯಲ್ಲಿ ಸುಮಾರು ಕಾಲುಭಾಗ ಜನರಿಗೆ ನ್ಯಾಯ ಸಮಾನತೆ ಇಲ್ಲ. ಈ ವರ್ಣದ್ವೇಷ ಬಹಳ ಅವಮಾನಕರವಾದ ರೀತಿಯಲ್ಲಿ ಚೀನಾವಿಗೆ ಅನ್ವಯವಾಗಿದೆ." ಆತ ಅಮೆರಿಕದಲ್ಲಿ ಪಕ್ಷಪಾತದ ಮತ್ತು ವರ್ಣದ್ವೇಷದ ಗುರಿಯೇ ಉಳ್ಳ ಕಾನೂನುಗಳನ್ನು ಚರ್ಚಿಸುತ್ತಾನೆ. ೧೯೨೪ನೆ ವರುಷದ ಅಮೇರಿಕದ ವಸಾಹತು ಕಾನೂನು ಚೀಣಾದವರೇ ಆಗಲಿ ಇತರರೇ ಆಗಲಿ ತಮ್ಮ ದೇಶಕ್ಕೆ ಬರಕೂಡದೆಂದು ಹೇಳಿಲ್ಲ, ಆದರೆ ಅಮೆರಿಕದ ಪ್ರಜೆಯಾಗಲು ಯಾರು ಅನರ್ಹರೋ ಅವರು ಪ್ರವೇಶಿಸ ಕೂಡದೆಂದು ಹೇಳಿದೆ. ಅಮೆರಿಕದ ಸುಪ್ರೀಂಕೋರ್ಟ್ ಏಷ್ಯಾದವರೂ-ಭಾರತೀಯರೂ ಸಹ-ಅಮೆರಿಕದ ಪ್ರಜೆಗಳಾಗಲು ಅನರ್ಹರೆಂದು ಹೇಳಿದೆ. ಆದುದರಿಂದ ಚೀಣಾದವರೂ ಜಪಾನರೂ ಭಾರತೀಯರೂ ಅಮೆರಿಕಕ್ಕೆ ಬರಲು ಅವಕಾಶವಿಲ್ಲ—ಆದರೆ ವಿದ್ಯಾರ್ಥಿಗಳೂ ವರ್ತಕರೂ ಹಂಗಾಮಿಯಾಗಿ ಬರಬಹುದು.

ಇದು ಏಷ್ಯಾದವರಿಗೆಲ್ಲಾ ಒಂದೇ ಸಮನಾದ ಅನ್ಯಾಯವೆಂದು ಹೇಳಬಹುದು. ಆದರೆ ಚೀಣಾವಿಗೆ ಉಳಿದ ರಾಷ್ಟ್ರಗಳಿಗಿಂತ ಹೆಚ್ಚು ಕಿರುಕುಳ, ಇದು ಮುಂದೆ ಗೊತ್ತಾಗುವುದು. ೧೮೯೪ರ ಚೀಣಾ ಅಮೆರಿಕಾ ಕೌಲಿನಿಂದ ಅಮೇರಿಕ ಚೀಣಾದವರು ಹತ್ತು ವರುಷ ತಮ್ಮ ದೇಶಕ್ಕೆ ಬರದಂತೆ ಮಾಡಿದರು. ಅಷ್ಟೇ ಅಲ್ಲ. ಅಮೆರಿಕದ ಇತರ ಸ್ವಾಸ್ಥ್ಯಗಳಿಗೂ ಚೀಣಾದವರಿಗೆ ಪ್ರವೇಶವಿಲ್ಲವಾಯಿತು. ೧೯೨೪ರ ವಸತಿ ಕಾನೂನುಗಳೂ ಹಾಗೆಯೇ ಇವೆ. ಹೀಗೆ ಅಮೆರಿಕ ಚೀಣಾದವರನ್ನು ಎಲ್ಲಾ

ವಿಧದಲ್ಲಿಯೂ ಬಹಿಷ್ಕರಿಸಿದೆ. ೧೮೮೪ನೆ ವರುಷದ ಕಾನೂನಿನಲ್ಲಿ ಚೀಣಾದವನ ಪ್ಯಾಸ್ ಪೋರ್ಟ್ ಇದ್ದರೂ, ಅದರ ಜತಗೆ ಆತನ ಉದ್ಯೋಗ, ಆತ ಅಮೆರಿಕದಲ್ಲಿ ಹಂಗಾಮಿಯಗಿರುತ್ತಾನೆಂಬ ಸರ್ಟಿಫೀಕೇಟ್ ಸಹ ಇರಬೇಕೆಂದು ನಿಯಮವಿದ್ದಿತು; ಹೀಗೆ ಮಾಡುವದರಿಂದ ಅಮೆರಿಕವು ಚೀಣಾ ಸರ್ಕಾರದ ಪ್ಯಾಸ್‌ಪೋರ್ಟನ್ನು ಒಪ್ಪದಂತೆ ಆಯಿತು. ಅಂದರೆ ಚೀಣಾ ಸರ್ಕಾರವನ್ನೇ ಒಪ್ಪುವುದಿಲ್ಲ ಎಂದಂತೆ ಆಯಿತು.

ಬ್ರಿಟಿಷ್ ಎನ್ ಸೈಕ್ಲೋಪಿಡಿಯಾದಲ್ಲಿ ಹೀಗೆ ಹೇಳಿದೆ. "ವರ್ಣದ್ವೇಷದಿಂದ ವಸತಿ ಬರಕೂಡದೆಂದು ಕಾನೂನುಮಾಡಿದುದು ಚೀಣಾಕ್ಕೆ ವಿರೋಧವಾಗಿ. ೧೮೮೮ರಲ್ಲಿಯೂ ಮತ್ತು ಜಪಾನಿನೊಂದಿಗೆ "ಸೌಹಾರ್ದದ ಕೌಲಿ" ನಿಂದಲೂ ಜಪಾನ್ ಕೂಲಿಗಳು ಬರಕೂಡದೆಂದು ಮಾಡಿದರು. ಈ 'ಸೇರಿಸಬಾರದೆಂಬ' ನೀತಿಯಿಂದ ಚೀಣರ ಸಂಖ್ಯೆ ಕಡಿಮೆಯಾಯಿತು. ೧೯೧೦ರಲ್ಲಿ ಅಮೆರಿಕದಲ್ಲಿ ೭೧೫೩೧ ಚೀಣರು ಇದ್ದರು. ೧೯೨೦ರಲ್ಲಿ ೬೧೬೩೯ ಇದರು. ಜಪಾನರ ಸಂಖ್ಯೆ ೭೨೧೫೭ ರಿಂದ ೧೧೧೦೧೦ ಕ್ಕೆ ಅಂದರೆ ೫೩.೯ ಏರಿತು. ಏಷ್ಯಾದವರಾಗಿ ಅಮೆರಿಕದಲ್ಲಿ ಹೋಗಿ ನೆಲೆಸಿರುವವರು ಅತಿಸ್ವಲ್ಪ; ಇಲ್ಲವೇ ಇಲ್ಲ ಎನ್ನಬಹುದು.

ಮುಂದುವರಿಸೋಣ. ಚೀಣರು ತಮ್ಮ ದೇಶದವರನ್ನು ಮದುವೆಯಾಗಿ ಅವರನ್ನು ವಾಸಕ್ಕೆ ಅಮೆರಿಕಾಕ್ಕೆ ಕರೆದುಕೊಂಡು ಬರಲು ಅಮೇರಿಕ ಸರ್ಕಾರ ಒಪ್ಪುವುದಿಲ್ಲ. ಇದರಿಂದ ಚೀಣರಿಗೆ ಬಹಳ ಅಸಮಾಧಾನ. ಅಮೆರಿಕದಲ್ಲಿರುವ ಚೀಣರಲ್ಲಿ ಗಂಡಸರೇ ಹೆಚ್ಚು. ಆದುದರಿಂದ ಈ ಅಸಮಾಧಾನ ಸ್ವಾಭಾವಿಕವಾಗಿದೆ.

ಚೀಣರು ಅಮೆರಿಕಾಕ್ಕೆ ಬರುವಾಗ ಕೆಲವು ಬಂದರುಗಳಲ್ಲಿ ಮಾತ್ರ ಅವರು ಇಳಿಯಬೇಕೆಂದು ಕಾನೂನು; ಸಾಮಾನ್ಯವಾದ ವಸತಿ ಕಾನೂನಿನ ಕಿರುಕುಳದ ಜತಗೆ ಈ ಕಿರುಕುಳವು ಸೇರುತ್ತದೆ.

ಈ ವರ್ಣದ್ವೇಷ ಚೀಣರ ಮನಸ್ಸನ್ನು ನೋಯಿಸದೇ ಇಲ್ಲ. ೧೯೦೫ರಲ್ಲಿ ಚೀಣರು ಪರದೇಶದ ಬಹಿಷ್ಕಾರ ಪ್ರಾರಂಭಿಸಿದರು. ಆ ಅಸ್ತ್ರವನ್ನು ಮೊದಲು, ಅಮೇರಿಕ ಬಹಿಷ್ಕಾರ ಕಾನೂನಿಗ ವಿರೋಧವಾಗಿ ಪ್ರಯೋಗಿಸಿದರು. ಜಪಾನು ಶಕ್ತವಾಗಿ ಬೆಳೆದಿದ್ದುದರಿಂದ ಅಂತರ ರಾಷ್ಟ್ರೀಯ ಪ್ರಶ್ನೆಯಾಗಿ ಇದನ್ನು ಮಾಡಬಹುದಾಗಿದ್ದಿತು. ಆದರೆ ಜಪಾನು ಹಾಗೆ

ಮಾಡಲು ಪ್ರಯತ್ನಿಸಿದುದರಿಂದಲೇ ಆ ಪ್ರಶ್ನೆಗೆ ವಿರೋಧ ಬಂದಿತೆಂದು ಹೇಳುತ್ತಾರೆ. ಬಹಿಷ್ಕಾರ ಕಾನೂನನ್ನು ಮಾಡದಿದ್ದರೆ ಏಷ್ಯಾದವರು ಬಂದು ತುಂಬಿ, ಅಮೆರಿಕದ ಜೀವನ ತಲೆಕೆಳಕಾಗುವುದೆಂಬ ವಾದವನ್ನು ಡಾ. ಸ್ಪಿಂಕ್ಸ್ ಅರ್ಥವಿಲ್ಲದ ವಾದವೆನ್ನುತ್ತಾರೆ. ಏಷ್ಯದವರಲ್ಲದವರು ಹೇಗೆ ಇಷ್ಟು ಸಂಖ್ಯೆ ಬರಬಹುದೆಂದು ಮಾಡಿದ್ದಾರೋ, ಅಷ್ಟು ಸಂಖ್ಯೆ ಏಷ್ಯಾದವರೂ ಬರಬಹುದೆಂದು ಮಾಡಿದರೆ, ದೇಶಕ್ಕೆ ಸಾಮಾಜಿಕ ಅಥವ ಆರ್ಥಿಕ ಆಂದೋಳನ ವುಂಟಾಗುವುದಿಲ್ಲ. ೧೯೨೪ರ ಕಾನೂನಿಗೆ ಅನುಸಾರ ವಾಗಿ, ಅಮೆರಿಕದಲ್ಲಿ ವಾಸಮಾಡುವ ಏಷ್ಯಾದವರಲ್ಲದವರ ಸಂಖ್ಯೆಗೆ, ಶೇಕಡ ೨ರಂತೆ ಅಮೆರಿಕಕ್ಕೆ ಬಂದು ನೆಲಸಬಹುದೆಂದು ಇದೆ. ಈ ತತ್ವದಂತೆ ವರುಷಕ್ಕೆ ೨ ಸಾವಿರ ಚೀಣರು, ಕೆಲವು ಭಾರತೀಯರು, (ಯುದ್ಧ ಮುಗಿದ ಮೇಲೆ) ೧೮೦ ಜಪಾನರು ಅಮೆರಿಕಕ್ಕೆ ವಸತಿ ಹೋಗಬಹುದು. ಈ ಜಾತಿಗಳು ಬೇರೆಬೇರೆ ಯಾದರೂ, ಇಷ್ಟು ಸ್ವಲ್ಪ ಜನಸಂಖ್ಯೆಯಿಂದ ಅಮೆರಿಕದಲ್ಲಿ ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಏನೂ ಗೊಂದಲವಾಗು ವುದಿಲ್ಲ. ಈ ಸಂದರ್ಭದಲ್ಲಿ ಅಮೆರಿಕದಲ್ಲಿರುವ ಏಷ್ಯಾದ ಜನರ ಸಂಖ್ಯೆ ಪರಿಗಣಿಸಬಹುದು ೧೮೭೦ ರಲ್ಲಿ ಅಮೆರಿಕದಲ್ಲಿ ೬೩೧೯೯ ಚೀಣರೂ ೫೫ ಜಪಾನರೂ ಇದ್ದರು. ೧೯೩೦ ರ ವೇಳೆಗೆ ೭೪೯೫೪ ಚೀಣರು ಆದರು. ಅಂದರೆ ೬೦ ವರುಷದಲ್ಲಿ ಶೇಕಡ ೧೬ ಹೆಚ್ಚಿತು. ಆದರೆ ಜಪಾನರು ೧೩೮೮೩೪ಕ್ಕೆ ಏರಿದರು. ಇದರ ಹೊರತು ೧೨ ಕೋಟಿ ಜನಸಂಖ್ಯೆಯು ಅಮೆರಿಕದಲ್ಲಿ ೫೦೯೭೮ ಮಾತ್ರ ಉಳಿದ ಏಷ್ಯಾದವರು ಇದ್ದಾರೆ. (೧೯೩೭ರ ಸ್ಟೇಟ್ಸ್ ಮನ್ ವಾರ್ಷಿಕ ಪುಸ್ತಕ) ಯುದ್ಧ ನಡೆಯುತ್ತಿರುವಾಗ, ಇತರ ರಾಷ್ಟ್ರಗಳಿಗೆ ಅವಕಾಶ ಕೊಟ್ಟಿರುವಂತೆ ಶೇಕಡ ೨ ಎಂದು ಚೀಣಾಕ್ಕೆ ಅವಕಾಶ ಕೊಟ್ಟರೂ ಅಮೆರಿಕ ಸೇರುವ ಚೀಣರ ಸಂಖ್ಯೆ ಅಲ್ಪವಾಗುತ್ತಿದೆ.

ಡಾಕ್ಟರ್ ಸ್ಪಿಂಕ್ಸ್‌ರವರು, "ಕೆಲವು ಜಾತಿಗಳಿಗೆ ಕೆಲವು ಜಾತಿ ಗಳನ್ನು ಬಹಿಷ್ಕರಿಸುವ ಹಕ್ಕು ಇದೆ" ಎಂಬ ವಾದವನ್ನು ತಿರುಳಿಲ್ಲದು ದೆಂದು ತಿರಸ್ಕರಿಸಿದ್ದಾರೆ. ಎಲ್ಲಾ ರಾಷ್ಟ್ರಗಳೂ ಒಂದು ಎಂಬ ಭವ್ಯವಾದ ನೂತನ ಪ್ರಪಂಚಸೃಷ್ಟಿಗೆ ವಿಶಾಲಭಾವಕ್ಕಿಂತ ಹೆಚ್ಚು ಸಹಾಯಕ ವಾದುದು ಬೇರೆ ಯಾವುದೂ ಇಲ್ಲ. ಬೇರೆ ಮಾತಿನಲ್ಲಿ ಹೇಳಬೇಕಾದರೆ "ನೂತನ ಜಗತ್ತಿನ ಸೃಷ್ಟಿ ಕುರಿತು ದಪ್ಪದಪ್ಪ ಮಾತುಗಳನ್ನಾಡುವುದು

ಕ್ಕಿಂತ, ಈಗಲೇ ಉತ್ತಮ ಮಾರ್ಗದಲ್ಲಿ ಪ್ರಾರಂಭಿಸಿ ನಿಮ್ಮದೆಲ್ಲಾ ಬರಿ ಬೂಟಾಟಿಕೆ ಎಂಬ ಅಪಾದನೆಯನ್ನು ತಪ್ಪಿಸಿಕೊಳ್ಳಿ."

೨೭-೬-೧೯೩೪.

---

## ೫ ವಾರ್ಥಾಕ್ಕೆ ಅರ್ಹವಾದುದಲ್ಲ

ರಾತ್ರಿ ಶಖೆ; ನಮ್ಮ ರೈಲುಗಾಡಿಯಲ್ಲಿ ಉಸಿರಾಡುವುದಕ್ಕೂ ಅವಕಾಶವಿಲ್ಲದಂತೆ ತುಂಬಿತ್ತು. ಮಲಗಲು ಅವಕಾಶವಿಲ್ಲದವರು ಬಿಡುವಿಲ್ಲದೆ ಮಾತನಾಡುತ್ತಾ ತಮ್ಮ ಬೇಸರಿಕೆಯನ್ನು ಕಳೆದುಕೊಳ್ಳುತ್ತಿದ್ದರು. ಅವರ ಹರಟೆ, ನಿದ್ರೆ ಮಾಡಲು ಪ್ರಯತ್ನಿಸುತ್ತಿದ್ದವರನ್ನೂ ಎಚ್ಚರವಾಗಿರಿಸಿದ್ದಿತು. ಗಾಡಿ ಚಲಿಸುತ್ತಿರುವಾಗ ಶಖೆ ಆಗಲು, ಗಾಳಿ ಇಲ್ಲದಿರಲು, ಕಾರಣವಿಲ್ಲ. ಆದರೆ ಕೆಲವರು ಕಿಟಕಿಗಳ ಬಲಿ ನಿಂತು ಇದ್ದಲು ಪುಡಿಯ ಬದಲು ಉಸಿರು ಕಟ್ಟಿದರೂ ಕಟ್ಟಲಿ ಎಂದರು. ಆತ ಅರ್ಧನಿದ್ರೆಯಲ್ಲಿರುವಾಗ ನಾನು ಮೆತ್ತಗೆ ಕಿಟಕಿ ತೆರೆಯುತ್ತಿದ್ದೆ. ಆದರೆ ನನಗೆ ಪೂರ್ಣನಿದ್ರೆ ಬಂದಾಗ ಆತ ಮತ್ತೆ ಮುಚ್ಚುತ್ತಿದ್ದ.

ಹೀಗೆ ಬೆಳಗಿನಜಾವ ಎರಡು ಗಂಟೆಯ ವರಿಗೆ ನನಗೆ ನಿದ್ರೆ ಬರಲಿಲ್ಲ. ಆಮೇಲೆ ಸುಸ್ತಿನಿಂದಲೇ ನಾವು ಮಲಗಿ ಬಿಟ್ಟೆವು. ಸುಮಾರು ೩-೩೦ ಗಂಟೆ ಸಮಯದಲ್ಲಿ ಒಬ್ಬ ಠೊಣಪ ಸಿಕ್‌ರವನು ತೂಗುತ್ತಾಗಾಡಿಯೊಳಕ್ಕೆ ಬಂದ. ಮೇಲಿನ ಆಸನದಲ್ಲಿ ಅವನಿಗೆ ಒಂದು ಜಾಗ ಸಿಕ್ಕಿತು. ಆದರೆ ಅವನ ಉದ್ದ, ಗಾತ್ರದಿಂದ ಅವನಿಗೆ ಅಲ್ಲಿ ಸುಖವಾಗಲಿಲ್ಲ. ಆದುದರಿಂದ ಆತ ಕೆಳಕ್ಕೆ ಇಳಿದ. ನನಗೆ ಜಾಗ ಕೊಡಿ ಎಂದು ಮಲಗಿದ್ದವರೊಬ್ಬರೊಡನೆ ಕೂಗಿದ. ಆ ಮಿತ್ರ, ಪಾರ್ಸಿ, ಸ್ವಲ್ಪವೂ ಅಸಮಾಧಾನ ಪಡದೆ ಆತನಿಗೆ ಜಾಗ ಕೊಟ್ಟ. ಪಾರಸಿ ಇನ್ನೂ ಅರ್ಧ ಒರಗಿಕೊಂಡಿದ್ದ. ಸಿಕ್‌ರವನು "ಎದ್ದುಬಿಡಿ. ನೀವು ರಾತ್ರಿಯೆಲ್ಲಾ ಮಲಗಿದ್ದೀರಿ. ಈಗ ಳ ಗಂಟೆ, ನನಗೆ ಮಲಗಲು ಬೇಕಾಗುವ ಜಾಗ ಕೊಡಬೇಕು" ಎಂದ.

ಪಾರಸಿ ಎರಡು ಗಂಟೆಯವರಿಗೆ ಮಲಗಿರಲಿಲ್ಲ. ಈಗ ಎದ್ದು ಕೂಡಲು

ಅವನು ಸಿದ್ಧನಾಗಿರಲಿಲ್ಲ. ಸಿಕ್ ಮತ್ತೆ ಕೂಗಿದ. "ಏಳುತ್ತೀರೋ ಸ್ಟೇಶನ್ ಮಾಸ್ಟರನ್ನು ಕರಿಯಲೋ" ಎಂದ.

ಪಾರಸಿ ಯುವಕ ಕುಳಿತ ಜಾಗ ಬಿಟ್ಟು ಅಲ್ಲಾಡಲಿಲ್ಲ. ಮಾತನಾಡಲಿಲ್ಲ. ಆದರೆ ಸಿಕ್‌ನ ಕೂಗಾಟದಿಂದ ಅಲ್ಲಿಗೆ ಅನೇಕರು ಬಂದು ಸೇರಿದರು. ಒಬ್ಬ ರೈಲ್ವೆ ಅಧಿಕಾರಿಯೂ ಬಂದ. ಪರಿಸ್ಥಿತಿ ಆತನಿಗೆ ಕೂಡಲೆ ಗೊತ್ತಾಯಿತು. ಆತ ಒಳ್ಳೆಯ ಮಾತಿನಿಂದ "ದಯವಿಟ್ಟು ಸಿಕ್‌ನಿಗೆ ಸ್ವಲ್ಪ ಸ್ಥಳಕೊಡಿ" ಎಂದು ಎಲ್ಲರನ್ನೂ ಪ್ರಾರ್ಥಿಸಿದ. ಆದರೆ ಸಿಕ್‌ನಿಗೆ ಸಾಕಾಗಲಿಲ್ಲ. ತನ್ನ ಪ್ರಭಾವ, ಜಂಭ ಜನರಿಗೆ ತೋರಿಸಬೇಕೆಂಬುದು ಅದೂ ಅವನ ಆಸೆಯಾಗಿದ್ದಿತು. ಅವನು ಸಂದೇಹ ದೃಷ್ಟಿಯಿಂದ ಪಾರಸಿಯನ್ನು ನೋಡಿ "ನೀವು ಹೋಗುವುದು ಎಲ್ಲಿಗೆ" ಎಂದ.

ಪಾರಸಿ ವಿನಯವಾಗಿಯೇ 'ಬೊಂಬಾಯಿಗೆ' ಎಂದು ಉತ್ತರ ಕೊಟ್ಟ.

"ಎಲ್ಲಿಂದ ಬರುತ್ತಿದ್ದೀರಿ."

"ವಾರ್ಧಾದಿಂದ."

"ನಿಮ್ಮಲ್ಲಿ ಟಿಕೆಟ್ ಇದೆಯೆ? ನಿಮ್ಮಲ್ಲಿ ಟಿಕೆಟ್ ಇದೆಯೋ ಇಲ್ಲವೇ ಮೊದಲು ಸ್ಟೇಶನ್ ಮಾಸ್ಟರು ನೋಡಲಿ. ಅನಂತರ ನಿಮ್ಮ ಜಾಗದಲ್ಲಿ ನೀವು ಕೂರುವುದನ್ನು ತೋರಿಸುತ್ತೇನೆ."

ಇಲ್ಲಿಯ ವರೆಗೆ ಸಂಭಾಷಣೆ ಹಿಂದಿಯಲ್ಲಿ ನಡೆದಿದ್ದಿತು. ಪಾರ್ಸಿ ಮಿತ್ರ ಬಹಳ ಶಾಂತವಾಗಿದ್ದರು. ಅವರು ಇಂಗ್ಲಿಷಿನಲ್ಲಿ "ನಿಮ್ಮ ಅಭಿಪ್ರಾಯವೇನು? ನನ್ನ ಟಿಕೆಟ್ ನೀವು ಕೇಳಲು ಕಾರಣವೇನು? ನಿಮಗೇನು ಹಕ್ಕು" ಎಂದರು.

ಈತ ಹೀಗೆ ಇಂಗ್ಲಿಷ್ ಮಾತನಾಡುವಷ್ಟು ನಾಗರೀಕನಾಗಿದ್ದುದನ್ನು ನೋಡಿ, ಸಿಕ್ ಧ್ವನಿಯನ್ನು ಸ್ವಲ್ಪ ತಗ್ಗಿಸಿ "ನಿಮ್ಮ ಟಿಕೆಟ್ ನನಗೆ ತೋರಿಸಬೇಕೆಂದು ನಾನು ಕೇಳಲಿಲ್ಲ. ನಿಮ್ಮಲ್ಲಿ ಟಿಕೆಟ್ ಇದೆಯೋ ಇಲ್ಲವೇ ಎಂಬುದನ್ನು ಸ್ಟೇಷನ್ ಅಧಿಕಾರಿ ನೋಡಬೇಕೆಂದು ಹೇಳಿದೆ" ಎಂದ. ಪಾರ್ಸಿಯು "ನೀವು ಮೊದಲು ನನ್ನಲ್ಲಿ ಟಿಕೆಟ್ ಇದೆಯೇ ಎಂದು ಕೇಳಿದಿರಿ. ಸ್ಟೇಷನ್ ಅಧಿಕಾರಿ ನನ್ನಲ್ಲಿ ಟಿಕೆಟ್ ಇದೆಯೇ ಇಲ್ಲವೇ ಎಂದು ನೋಡಬೇಕೆಂದು ನೀವು ಹೇಳುವುದಾದರೂ, ಟಿಕೆಟ್ಟು ಇಲ್ಲದೆ ನಾನು ಪ್ರಯಾಣ ಮಾಡುತ್ತಿರಬಹುದೆಂದು ನೀವು ಸೂಚಿಸಲು ಕಾರಣವೇನು?" ಎಂದ.

ಸಿಕ್ ನೇರವಾಗಿ ಜವಾಬು ಕೊಟ್ಟ. "ನೀವು ವಾರ್ಧಾದಿಂದ ಬಂದುದಾಗಿ ಹೇಳಿದಿರಿ. ನಿಮ್ಮ ಹತ್ತಿರ ಹಾಸಿಗೆ ಇಲ್ಲ. ನೀವು ಹಾಸಿಕೊಂಡಿರುವ ದುಪಟಿ ಹಳೆಯದು. ನಿಮ್ಮನ್ನು ನೋಡಿದರೆ ನಿಮ್ಮಲ್ಲಿ ಟಿಕೆಟ ಇರಲಾರದೆಂದು ನನಗೆ ತೋರಿತು"

ಪಾರಸಿ ಮಿತ್ರ ಶಾಂತನಾಗಿಯೇ "ಈಗ ನೀವು ಏಟನ ಜತೆಗೆ ಅವಮಾನವನ್ನು ಸೇರಿಸುತ್ತಿದೀರಿ. ಮನುಷ್ಯನ ಯೋಗ್ಯತೆಯನ್ನು ನೀವು ಬರಿಯ ಆವನ ವೇಷ ಮತ್ತು ಮುಖದಿಂದಲೇಯೇ ನಿರ್ಣಯಿಸುವುದು."

ಸಿಕ್—ನಾನು ಹಾಗೆ ಮಾಡುವುದಿಲ್ಲ. ನೀವು ವಾರ್ಧಾದಿಂದ ಬರುತ್ತಿರುವುದಾಗಿ ಹೇಳಿದಿರಿ. ನಿಮ್ಮ ಮೈಮೇಲೆ ಅಗ್ಗವಾದ ಖಾದಿ ಇದ್ದಿದ್ದರೆ ನಾನು ಪ್ರಶ್ನಿಸುತ್ತಿರಲಿಲ್ಲ.

"ಹಾಗಾದರೆ ನನ್ನ ಮೈಮೇಲೆ ನೀವು ನೋಡುವುದೇನು? ನಾನು ಧರಿಸಿರುವುದೆಲ್ಲಾ ಖಾದಿಬಟ್ಟೆ ಎಂಬುದು ಕಾಣುವುದಿಲ್ಲವೆ?"

ಪಾರಸಿಯ ಮೈಮೇಲೆ ಖಾದಿ ಚಿಕ್ ಸೂಟು ಇದ್ದಿತು ಆದರೆ ಸಿಕ್, ಖಾದಿಯನ್ನು ಯಾವಾಗಲೂ ಧರಿಸದವನಾದುದರಿಂದ ಖಾದಿಗೆ ಬಣ್ಣವೂ ಇರಬಹುದೆಂದು ಅವನಿಗೆ ತಿಳಿದಿರಲಿಲ್ಲ. ಆದರೆ ಆತ ತನ್ನ ವಾದ ಬಿಡಲಿಲ್ಲ. ನೀವು ಹಾಸಿಕೊಂಡಿರುವ ಈ ದುಪಟಿ ಖಾದಿಯಲ್ಲ. ಮಿಲ್‌ಬಟ್ಟೆ ಎಂದ.

ಪಾರಸಿ "ಹೌದು. ನಾನು ಒಪ್ಪುತ್ತೇನೆ. ಆದರೆ ಅದಕ್ಕೂ ನನ್ನ ಹತ್ತಿರ ಟಿಕೆಟ್ ಇದೆಯೋ ಇಲ್ಲವೋ ಎಂಬುದಕ್ಕೂ ಏನು ಸಂಭಂದ?"

"ಸಂಭಂಧವಿಲ್ಲ. ಆದರೆ ಹಾಸಿಗೆಯಿಲ್ಲದೆ ರೈಲಿನಲ್ಲಿ ದೂರ ಪ್ರಯಾಣ ಮಾಡುವುದು ಹೇಗೆ? ನಿಮ್ಮ ಹತ್ತಿರ ದುಪಟಿಯ ಹೊರತು ಮತ್ತೇನೂ ಇಲ್ಲದುದನ್ನು ಕಂಡು, ಈ ರೈಲಿನಲ್ಲಿ ಟಿಕಟ್ ಇಲ್ಲದೆ ಪ್ರಯಾಣ ಮಾಡುವವರಂತೆ ನೀವು ಒಬ್ಬರು ಎಂದುಕೊಂಡೆ" ಎಂದ. ಸಿಕ ಮಿತ್ರರಿಗೆ ಶಖೆ ಕಾಲದಲ್ಲಿ ಯುವಕರಿಗೆ ರೈಲು ಕಾಲುಮಣೆಯ ಮೇಲೆ ಹಾಕಲು ದುಪಟಿ ಹೊರತು ಮತ್ತೇನೂ ಆವಶ್ಯಕವಿಲ್ಲ ಎಂಬುದು ಮರೆಯಿತು. ಆದರೆ ಅವರು ತಮ್ಮ ವಾದ ಮತ್ತೆ ಬದಲಾಯಿಸಿದರು. "ನೀವು ವಾರ್ಧಾದವರಾಗಿ ನಿಮಗೆ ಕೋಪಬರಬಹುದೆ? ನೀವು ಯುವಕರು. ನಾನು ಮುದುಕ. ಆದುದರಿಂದ ನನಗೆ ಸ್ಥಳ ಕೊಡಿ ಎಂದೆ. ನಿಮಗೆ ಸಿಟ್ಟುಬಂತು ಎಂದರು."

ಪಾರಸಿ ಮಿತ್ರರು "ಅದು ಸರಿಯೇ? ನಾನು ನಿಮಗೆ ಸ್ಥಳಕೊಟ್ಟೆ.

ಕೋಪಿಸಿಕೊಂಡವರೂ ಕೂಗಿದವರೂ, ನನ್ನಲ್ಲಿ ಟಿಕೆಟ್ ಇದ್ದಿರಲಾರ ದೆಂದವರೂ ನೀವೆಯೆ ವಾರ್ಧಾದವರು ಹೇಗೆ ಇರಬೇಕು, ಏನು ಧರಿಸು ಬೇಕು, ಅದರ ಚಿಂತೆ ನಿಮಗ್ಯಾಕೆ ? ನಿಮ್ಮ ಪಾಡು ನೀವು ನೋಡಿಕೊಳ್ಳಿ. ಮಾತಿನ ಏಟು ಕೆಲವು ವೇಳೆ ಕತ್ತಿಯ ಏಟಿಗಿಂತ ಕ್ರೂರವೆಂಬುದನ್ನು ದಯವಿಟ್ಟು ಮರೆಯಬೇಡಿ. ನೀವು ಈಗ ನನಗೆ ಕೊಟ್ಟ ಏಟು ಆ ಬಗೆಯದು.

ಸಿಕ್‌ನಿಗೆ ಹೇಗೆ ಹೇಗೊ ಆಯಿತು. ಆದರೂ ಆತ, ಪಾರ್ಸಿ ಮಾಡಿದುದು ವಾರ್ಧಾದಿಂದ ಬಂದವನ ನಡವಳಿಕೆಗೆ ಅರ್ಹವಾದುದಲ್ಲ ವೆಂದೇ ಮತ್ತೆ ಮತ್ತೆ ವಾದಿಸಿದ. ಗಾಡಿಯಲ್ಲಿ ಖಾದಿ ಧರಿಸಿದ್ದವರು ಮತ್ತಾರೂ ಇರಲಿಲ್ಲ. ಆದುದರಿಂದ ಸಿಕ್‌ನ ಮಿತ್ರರೇ ಹೆಚ್ಚಾಗಿದ್ದರು. ಆತನ ಮಗ್ಗುಲಲ್ಲಿದ್ದವರು ಪಾರ್ಸಿಗೆ ಎದುರಾಗಿ ವಾದ ಪ್ರಾರಂಭಿಸಿದರು. "ನೀವು ಗಾಂಧಿ ಆಶ್ರಮದಿಂದ ಬರುತ್ತಿದ್ದೀರೇನೋ ?"

"ಬರುತ್ತಿದ್ದೇನೆ ಎನ್ನೋಣ. ಆದರೆ ?"

"ನೀವು ಗಾಂಧಿ ಆಶ್ರಮದವರಾದರೆ ಕೋಪಿಸಿಕೊಳ್ಳಕೂಡದು. ಅಲ್ಲಿ ಅವರು ಅಹಿಂಸೆ ಅಭ್ಯಾಸಿಸುತ್ತಿದ್ದಾರೆ."

ಪಾರ್ಸಿ ಮಿತ್ರ ಮೆತ್ತಗೆ "ಸರಿ. ನಾನು ಆಶ್ರಮಕ್ಕೆ ಸೇರಿದವನಲ್ಲ. ನೋಡುವುದಕ್ಕೆ ಹೋಗಿದ್ದೆ" ಎಂದ.

ತಪ್ಪು ಮೊದಲು ವಾರ್ಧಾದ್ದು ಆಯಿತು. ಅನಂತರ ಗಾಂಧಿ ಆಶ್ರಮದ್ದು. ಮೊದಲನೆಯ ಆಪಾದನೆ, ಯುವಕ ಖಾದಿ ಧರಿಸಿರಲಿಲ್ಲ ವೆಂಬುದು. ಅನಂತರ ಖಾದಿ ದುಪಟಿ ಉಪಯೋಗಿಸುತ್ತಿರಲಿಲ್ಲವೆಂಬುದು. ಆಮೇಲೆ ಆತ ಕೋಪಿಸಿಕೊಂಡನೆಂಬುದು. ಸರ್ಕಾರ, ಸತ್ಯಾಗ್ರಹಿಗಳು ಮಾತನಾಡದೆ ಅವಮಾನ ಬೈಗಳ ಏಟು, ಲಾಠಿ ಛಾರ್ಜು ಸಹಿಸಬೇಕೆಂದು ನಿರೀಕ್ಷಿಸುತ್ತದೆ. ಹಾಗೂ ಅವರು ಸಹಿಸಿದರೆ, ಮುಂದೆ ಹೆದರದೆ ಬಂದೂಕಕ್ಕೂ ಎದೆ ಕೊಡಬೇಕೆಂದು ನಿರೀಕ್ಷಿಸುತ್ತಾರೆ. ಅವರು ಹಾಗೆ ಮಾಡದಿದ್ದರೆ, ಆಗ ಅವರು ಸತ್ಯಾಗ್ರಹಿಗಳಲ್ಲ. ಹಾಗೆಯೇ ಎಲ್ಲಾ ನಿಯಮ ಗಳನ್ನೂ ಪಾಲಿಸಬೇಕಾದುದು ವಾರ್ಧಾವೇ ; ನೂಲಿ, ಖಾದಿ ಧರಿಸಿ ಕೋಪಿಸಿಕೊಳ್ಳಬೇಡಿ. ಕಾಯಾ ವಾಚಾ ಮನಸಾ ಅಹಿಂಸೆ ಪಾಲಿಸಿ. "ವಾರ್ಧಾದವರು" ಹೀಗೆ ತಮಗೆ ಸ್ವಾತಂತ್ರ್ಯ ಗಳಿಸಬೇಕೆಂದು

"ಮಾರ್ಧವನರಲ್ಲದವರು" ಬಯಸುತ್ತಾರೆ. ಸ್ವಾತಂತ್ರ್ಯ ಬಂದರೆ ಅವರು ಅದನ್ನು ಸುಖವಾಗಿ ಅನುಭವಿಸುತ್ತಾರೆ. ಆದರೆ ನಿಯಮಗಳನ್ನೆಲ್ಲಾ ಮಾರ್ಧಾ ಪಾಲಿಸಬೇಕು. ಮತ್ತಾರೂ ಅಲ್ಲ!

೧೧—೫—೧೯೪೦

---

## ೬. ಬಾಂಬು ಹಾಕಲು ಹಕ್ಕು.

೧೯೩೨ನೆಯ ಇಸವಿಯಲ್ಲಿ, ನಿಶ್ಶಸ್ತ್ರ ಸಮ್ಮೇಳನದಲ್ಲಿ, ಆಕಾಶದಿಂದ ಜನರ ಮೇಲೆ ಬಾಂಬು ಎಸೆಯಬಾರದೆಂಬ ಸಲಹೆ ಬಂದಾಗ, ಆ ಸಲಹೆ ತಿರಸ್ಕೃತವಾಗಲು ಕಾರಣ, ಬ್ರಿಟಿಸ್ ಸರ್ಕಾರ ಗಡಿನಾಡಿನಲ್ಲಿ ಪೋಲೀಸ್ ಉಸ್ತುವಾರಿಯ ಹೆಸರಿನಲ್ಲಿ' ಬಾಂಬು ಹಾಕುವುದು ಆವಶ್ಯಕ ಎಂದು ಹೇಳಿ ಮೊಂಡು ಹಿಡಿದುದೇ. ಈ ವಿಚಾರ ಬ್ರಿಟಿಷ್ ಮುಖ್ಯ ಮಂತ್ರಿಗೆ ಗೊತ್ತು. ಆದರೆ ಈಗಲೂ ಆತ ಆ ಹಿಂದಲ ನಟನೆಯ ಬುರುಡೆಯಲ್ಲಿಯೇ ತೊಡಗಿದ್ದಾನೆ. "ಗಡಿನಾಡಿನ ಮೇಲೆ ಬಾಂಬು ಎಸೆಯುವ ಈ ದಯೆಯ ಕಾರ್ಯದಿಂದ, ಆಕಾಶದಿಂದ ಬಾಂಬು ಹಾಕಬಾರದೆಂಬ ಸಾರ್ವಜನಿಕ ಒಪ್ಪಂದಕ್ಕೆ ಭಂಗ ಬರುವಂತಿದ್ದರೆ, ಅದನ್ನು ಬಿಡಲೂ ನಾವು ಸಿದ್ಧ" ಎನ್ನುತ್ತಾರೆ. ಈ ಬಾಂಬಿನ ದಯಾ ಸ್ವಭಾವವನ್ನು ತೋರಿಸಲು ಮುಖ್ಯಮಂತ್ರಿ "ಜನರು ಅವಿತುಕೊಳ್ಳಲು ೨೪ ಗಂಟೆ ಎಚ್ಚರಿಕೆ ಕೊಡುತ್ತೇವೆ. ಸುತ್ತಮುತ್ತ ಅನೇಕ ಗವಿಗಳಿವೆ; ಅಲ್ಲಿ ಆಶ್ರಯ ಪಡೆಯಲು ಅವಕಾಶವಿರುವುದೆಂದು ನಾವು ಒಪ್ಪಿದ್ದೇನೆ" ಎಂದೂ ಹೇಳಿದರು. ಕೆಲವು ಬ್ರಿಟಿಷ್ ಪತ್ರಿಕೆಗಳಿಗೆ ಈ ಮುಖ್ಯ ಮಂತ್ರಿಯ ಬುರುಡೆ ಕಂಡು ಆಶ್ಚರ್ಯವಾಗಿದೆ. ಟೈಮ್ಸ್ ಪತ್ರಿಕೆ ಸಹ "ಬ್ರಿಟಿಷ್ ಸರ್ಕಾರ ಹೀಗೆ ಗುಡ್ಡಗಾಡಿನ ದಂಗೆಕೋರರ ಮೇಲೆ ಬಾಂಬು ಹಾಕುತ್ತಿರುವುದರಿಂದ ಸರ್ಕಾರದ ನೀತಿಯ ಸ್ಥಾನ ಸ್ವಲ್ಪ ಅಭದ್ರವೇ" ಎಂದಿದೆ. ಗಡಿನಾಡನ್ನು ಕುರಿತು ಹೆಚ್ಚು ತಿಳುವಳಿಕೆ, ಬ್ರಿಟಿಷ್ ಮುಖ್ಯಮಂತ್ರಿಗೆ ಉಂಟಾಗುವುದಕ್ಕಾಗಿ ಯಾರಾದರೂ ಆತನಿಗೆ ಗಡಿನಾಡಿನ ಭಾವಚಿತ್ರಗಳನ್ನು ಕಳುಹಿಸಬೇಕು. ಆಗ ಗವಿಗಳು ಅಲ್ಲಿ ಇಲ್ಲವೆಂದೂ, ಮಣ್ಣಿನ ಗುಡಿಸಲುಗಳನ್ನು ಸಹ ಕಟ್ಟಿಕೊಳ್ಳಲು

ಅನುಕೂಲವಿಲ್ಲದ ಬಡ ಗಡಿನಾಡಿನವರು, ನೆಲದಲ್ಲಿ ಅಗೆದು ಮಾಡಿಕೊಂಡಿರುವ ಮನೆಗಳೇ ಇವೆಂದೂ ಆತನಿಗೆ ಗೊತ್ತಾಗುತ್ತದೆ.

ಆದರೆ ಇಂತಹ ವಿಚಾರಗಳಲ್ಲೆಲ್ಲಾ ಸತ್ಯ, ತಿಳಿವಳಿಕೆ ಯಾರಿಗೆ ಬೇಕಾಗಿದೆ ? ಲ್ಯಾನ್ಸ್ ಬರಿಯನವರು ಹೌಸ್ ಆಫ್ ಕಾಮನ್ಸ್‌ನಲ್ಲಿ ಹೀಗೆ ಕೇಳಿದರು "ಮುಖ್ಯಮಂತ್ರಿ ಇಲ್ಲಿ ನಮ್ಮೆದುರಿಗೆ ಹೇಳಿದುದೆಲ್ಲಾ ಸುಳ್ಳೆಂದೂ, ಗಡಿನಾಡಿನ ಹಳ್ಳಿಯ ಮನೆಗಳೂ ಆಸ್ತಿಗಳೂ ಪೂರ್ಣವಾಗಿ ನಾಶವಾಗಿರುವುವೆಂದೂ ಭಾರತ ನ್ಯಾಯ ವಿಧಾಯಕ ಸಭೆಯಲ್ಲಿ ಒಬ್ಬ ಸದಸ್ಯರ ಹೇಳಿದುದಕ್ಕೆ ನೀವು ಏನು ಸಮಾಧಾನ ಕೊಡುತ್ತೀರಿ" ಈ ಕೇಳಿಕೆಗೆ ಮುಖ್ಯಮಂತ್ರಿ "ನಾನು ಆ ಹೇಳಿಕೆ ನೋಡಿಲ್ಲ" ಎಂದುಬಿಟ್ಟರು. ಬಾಂಬು ಹಾಕುವ ಕ್ರಮ, ಅದರ ಫಲ ಆವಶ್ಯಕತೆ ಇವುಗಳ ಮೇಲೆ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಎರಡು ಪತ್ರಗಳನ್ನು ಪ್ರಕಟಿಸಿತು. ಅವುಗಳ ದೃಷ್ಟಿಯಲ್ಲಿ ಸರ್ಕಾರಕ್ಕೆ ಬಾಂಬು ಹಾಕಲು ಸ್ವಲ್ಪವೂ ಸಬೂಬು ಇಲ್ಲ. ಕೇಂದ್ರ ನ್ಯಾಯವಿಧಾಯಕ ಸಭೆಯ ಗಡಿನಾಡು ಸದಸ್ಯರಾದ ಶ್ರೀ ಅಬ್ದುಲ್ ಕ್ವಯೂಮ್, ಮ್ಯಾಂಚೆಸ್ಟರ್ ಗಾರ್ಡಿಯನ್‌ಗೆ ಹೀಗೆ ಬರೆದರು.

"ಕಾಗದಗಳನ್ನು ಕೆಳಗೆ ಎಸೆದು ಜನರಿಗೆ ಬಾಂಬು ಹಾಕುವ ಎಚ್ಚರಿಕೆ ಕೊಡಲಾಗುತ್ತಿದೆ ಎಂದು ಸರ್ಕಾರ ಹೇಳುತ್ತದೆ ಆದರೆ ಈ ಅಚ್ಚುಮಾಡಿದ ಕಾಗದ ಎಲ್ಲೋ ಅಲ್ಲೊಂದು ಇಲ್ಲೊಂದು ದೂರ ದೂರದಲ್ಲಿ ಬೀಳುತ್ತದೆ. ಬಾಂಬು ಬೀಳುವ ಗ್ರಾಮಗಳವರಿಗೆ ಆ ಕಾಗದ ದೊರೆತರೂ ಅಲ್ಲಿ ಓದು ಬರಹ ಬಲ್ಲವರು ಅತ್ಯಲ್ಪ. ಆದುದರಿಂದ ಈ ನೋಟೀಸುಗಳಿಂದ ಅವರಿಗೆ ಯಾವ ಎಚ್ಚರಿಕೆಯೂ ದೊರೆತಂತೆ ಆಗುವುದಿಲ್ಲ. ಅನಂತರ ಪ್ರಾರಂಭವಾಗುತ್ತದೆ. ಮನೆ ಮಠ ಮಸೀದಿ ಧ್ವಂಸ ; ಯಾವ ಹೊಡೆದಾಟದಲ್ಲಿಯೂ ಭಾಗ ವಹಿಸದ ಹೆಂಗಸರು ಮಕ್ಕಳ ಮುದುಕರ ನಿರಾಯುಧರ ನರಮೇಧ ಪ್ರಾರಂಭವಾಗುತ್ತದೆ."

"ಗಡಿನಾಡಿನ ಎರಡು ಭಾಗಗಳಿಗೂ ಸಂಬಂಧ ಉಂಟು. ಬಾಂಬು ಧಾಳಿ ನಡೆದಾಗ ಈ ಭಯಂಕರ ವಿನಾಶ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ತಿಳಿಯುತ್ತದೆ. ಕಳೆದ ಜೂನ್ ಅಥವ ಜುಲೈನಲ್ಲಿ ನಾನು ಬನ್ನುವಿನಲ್ಲಿ ಒಂದು ದೊಡ್ಡ ಸಭೆಯಲ್ಲಿ ಭಾಗವಹಿಸಿದೆ. ಶುಕ್ರವಾರದ ಪ್ರಾರ್ಥನೆ

ಮುಗಿದನೋ೯ಲೆ ಸಾವಿರಾರು ಭಕ್ತರು ಬ್ರಿಟಿಷ್ ಸರ್ಕಾರದ ನಾಶಕ್ಕಾಗಿಯೂ ಇಸ್ಲಾಂ ಸ್ವಾತಂತ್ರ್ಯಕ್ಕಾಗಿಯೂ ದೇವರನ್ನು ಪ್ರಾರ್ಥಿಸಿದರು.

ಮಿ. ಪಟ್ರಿಕ್ ಲಾಸೆಯವರು ಬಾಂಬಿನಿಂದ ಕೊಲ್ಲುವುದನ್ನು ಬಿಡಿ ಎಂದು ಒಂದು ಲೇಖನ ಬರೆದಿದ್ದಾರೆ. ಲಾಸೆಯವರು ಕಲಕತ್ತ ಸ್ಟೇಟ್ಸ್ಮನ್ ಪತ್ರಿಕೆಯ ಸಿಮ್ಲ ಬಾತ್ಮೀದಾರರಾಗಿದ್ದರು. ಸರ್ಕಾರದ ಆಡಳಿತ ಮತ್ತು ಸೈನ್ಯದ ಅಧಿಕಾರಿಗಳೆಲ್ಲಾ ಅವರಿಗೆ ಬಳಕೆ. "ಭಾರತಗಡಿಯಲ್ಲಿ ಬಾಂಬು ಹಾಕುವುದನ್ನು ಬಿಡಿ" ಎಂಬ ಕೇಳಿಕೆಯನ್ನು ಬ್ರಿಟಿಷ್ ಮುಖ್ಯಮಂತ್ರಿ ತಿರಸ್ಕರಿಸಿ ಒಳ್ಳೆಯ ಸುಸಂಧಿಯನ್ನು ಕಳೆದುಕೊಂಡರೆಂದು ಆತ ಹೇಳುತ್ತಾನೆ. "ಯಾವ ಬ್ರಿಟಿಷ್ ಸರ್ಕಾರದ ಕೈಯೂ ಈ ವಿಷಯದಲ್ಲಿ ಶುದ್ಧವಾಗಿಲ್ಲ. ಲೇಬರ್ ಸರ್ಕಾರ ಅನೇಕವಾಗಿ ಬಾಂಬು ಹಾಕುತ್ತಿದ್ದರು. ಜನರಿಗೇನೋ ಎಚ್ಚರಿಕೆ ಕೊಡುತ್ತಾರೆ. ಭಾರತದ ಹಳ್ಳಿಗಳು ಇಂಗ್ಲೆಂಡಿನ ಹಳ್ಳಿಗಳಂತೆ ಇಲ್ಲಿ ಹೋಲಿಸಿದರೆ ಆ ಬಾಂಬು ಪದ್ಧತಿ ಮೃದುವಾದುದು. ಆದರೆ ಸರ್ಕಾರ ಹೇಳುವಂತೆ ಯಾರು ಸಾಯಲೇ ಇಲ್ಲವೆಂಬುದನ್ನು ನಾನು ನಂಬಲಾರೆ ವಯಸ್ಕರೂ ಮಕ್ಕಳೂ ಗರ್ಭಿಣಿಯರೂ ಪೂರ್ಣವಾಗಿ ತಪ್ಪಿಸಿಕೊಳ್ಳುತ್ತಾರೆ ಎಂಬ ಮಾತು ನಂಬಿಕೆಗೆ ಅರ್ಹವಲ್ಲವೆಂದು ಒಬ್ಬ ಅನುಭವಸ್ಥ ಯೋಧ ಹೇಳಿದ.

"ಬ್ರಿಟಿಷ್ ಇಂಡಿಯಾದಲ್ಲಿ ಗಡಿಯಲ್ಲಿ ಬಾಂಬು ಎಸೆಯುವುದು ಬಹು ಸುಲಭ. ಎಸೆಯಕೂಡದು ಎಂದು ಇರುವ ಕಾನೂನು ತಡೆ ಅತಿ ಸಡಿಲ. ಹಿಂದಲ ಕಾಲದಲ್ಲಿ ಎಲ್ಲಿಗೆ ಸೈನ್ಯವನ್ನು ಕಳುಹಿಸುವುದು ಸಹ ಅನಾವಶ್ಯಕವೆಂದು ತಿಳಿದಿದ್ದರೋ, ಅಂತಹ ಕಡೆಗಳಲ್ಲೆಲ್ಲಾ ಈಗ ಸುಲಭವಾಗಿ ಬಾಂಬು ಹಾಕುತ್ತಾರೆ. ವಿಮಾನದಿಂದ ಬಾಂಬುಗಳನ್ನು ಎಸೆಯುವುದಕ್ಕೆ ಮುಂಚೆ ಇದ್ದ ಕಷ್ಟವೇ ಇಗಲೂ ಇದೆ. ಕಾಡು ಜನರನ್ನು ತಿದ್ದುವ ನಮ್ಮ ಮಾರ್ಗದಲ್ಲಿ ನಮಗೆ ಹೆಚ್ಚು ಜಯವಾಗಿಲ್ಲ. ಯೂರೋಪಿನಲ್ಲಿ ಮಾಡುವಂತೆ ಪೂರ್ಣವಾಗಿ ಬಾಂಬು ಹಾಕಿ ಎಲ್ಲವನ್ನೂ ನಾಶಪಡಿಸಿಬಿಡಬಹುದು. ಆದರೆ, ಅದರಿಂದ ಬ್ರಿಟಿಷರ ಗೌರವ ಪ್ರತಿಷ್ಠೆಗೆ ಕುಂದು. ಇತರಕಡೆ ಬಾಂಬು ಹಾಕಬಾರದೆಂಬ ತತ್ವಕ್ಕೆ ಇದು ಬಹಳ ವಿರೋಧವಾಗಿ ಪರಿಣಮಿಸುತ್ತದೆ. ಫಲ ಏನೂ ಇಲ್ಲ."

ಆದರೆ ಮನುಷ್ಯತ್ವ, ಸಮಯವೇದಾಂತ, ವ್ಯರ್ಥ, ಇವಾವುದರಿಂದಲೂ

ಬ್ರಿಟಿಷರ ಕಣ್ಣು ತೆರೆದಿಲ್ಲ. ಅವರು ಇನ್ನೂ ಬಾಂಬು ಹಾಕುವ ತತ್ವ ವನ್ನೇ ಒಪ್ಪಿ ಸಾಮ್ರಾಜ್ಯ ಕಟ್ಟುತಿದ್ದಾರೆ. ಪ್ರಪಂಚದ ರಾಷ್ಟ್ರಗಳಿಗೆ ತಾವು ಆಷಾಢಭೂತಿಗಳಾಗಿ ಕಾಣುವುದರಿಂದ ಅವರಿಗೆ ಏನೂ ಇಲ್ಲ. ಬ್ರಿಟನ್ನಿನ ಕೈ ಇದರಲ್ಲಿ ಶುದ್ಧವಾಗಿಲ್ಲ ಎಂದು ಇತರ ರಾಷ್ಟ್ರಗಳು ತಿಳಿದು ಕೊಂಡರೂ ಬ್ರಿಟನ್ನಿಗೆ ಏನೂ ಇಲ್ಲ. ಅವರ ಕಣ್ಣನ್ನು ಬಹುಶಃ ತೆರೆಯ ಬಹುದಾದುದು ಪೂರ್ಣವಾದ ಸ್ವಾರ್ಥ ಪ್ರಶ್ನೆ. ನ್ಯೂಸ್ ಕ್ರಾನಿಕಲ್ ಇದನ್ನು ಸ್ಪಷ್ಟವಾಗಿ ಹೇಳುತ್ತದೆ. "ಈ ನಷ್ಟಕ್ಕೆ, ಭಾರತದಲ್ಲಿ ಬಾಂಬು ಹಾಕದ ನೀತಿಯ ದೃಷ್ಟಿಯಿಂದ ಲಕ್ಷದಷ್ಟು ಲಾಭವುಂಟು. ಬರಿ ನೀತಿಯ ಲಾಭವೇ ಅಲ್ಲ. ಲಂಡನ್ ಸಿಡಿಮದ್ದಿನಿಂದ ಪುಡಿಯಾಗುವ ಅವಕಾಶ ಅಧಿಕವಾಗುವುದಾದರೆ, ಭಾರತದ ಹಳ್ಳಿಗಳನ್ನು ಬಾಂಬಿನಿಂದ ಸುಡುವುದರ ಲಾಭತಾನೇ ಏನು ?"

ಜುಲೈ ೨, ೧೯೩೮.

ಬ್ರಿಟಿಷರು ಭಾರತದಲ್ಲಿ ೧೯೪೨ನೆ ಇಸವಿಯಲ್ಲಿ ಗಡಿನಾಡಿನಲ್ಲಿ ಮಾತ್ರವೇ ಅಲ್ಲ. ದೇಶದ ಒಳಗೂ ನಿಶ್ಶಸ್ತ್ರರ ಮೇಲೂ ಬಾಂಬು ಉಪಯೋಗಿಸಿದರು.

---

## ೭ ಜಮುನಾಲಾಲಜಿ

"ದೇವತೆ, ಚೈತನ್ಯದಾಯಕವಾದ ಜ್ಯೋತಿಯೊಡನೆ ಬಂದನು. ಭಗ ವಂತನ ಆಶೀರ್ವಾದಕ್ಕೆ ಪಾತ್ರರಾದವರ ಹೆಸರನ್ನು ತೋರಿಸಿದನು. ಆಹಾ ! ಸೇತ್‌ಜಮುನ್‌ನ ಹೆಸರು ಎಲ್ಲದಕ್ಕಿಂತ ಮುಂದಾಗಿದ್ದಿತು."

ಜಮುನಾಲಾಲಜಿಯನ್ನು ತಿಳಿದವರ ಸಂಖ್ಯೆ ಅಪಾರ—ಎಲ್ಲೆಲ್ಲಿಂದಲೂ ಬರುತ್ತಿರುವ ತಂತಿಗಳ ಸಂಖ್ಯೆ ನೋಡಿದರೆ ಇದು ತಿಳಿಯುತ್ತದೆ— ಅವರು ನಾನು ಮೇಲಿನ ಲೈಹಂಟ್‌ನ ಪದ್ಯದಲ್ಲಿ ಮಾಡಿರುವ ಬದಲಾವಣೆ ಯಿಂದ ಅಸುಖಿಗಳಾಗುವುದಿಲ್ಲವೆಂದು ಭಾವಿಸುತ್ತೇನೆ. ಆ ೧೧ನೇ ತಾರೀಖು ದುಃಖಕರವಾದ ದಿನ, ಜಮುನಾಲಾಲರಿಗೆ ತಮ್ಮನ್ನು ಸ್ವರ್ಗಕ್ಕೆ ಕರೆಯಲು ಬಂದವನ ದರ್ಶನವಾಯಿತೋ ಇಲ್ಲವೊ ಹೇಳಲಾರೆ. ಆದರೆ ಹಾಗೇ ನಾದರೂ ದೇವತೆ ಬಂದಿದ್ದರೆ, ಜಮುನಾಲಾಲರು ಆತನಿಗೆ ಹೀಗೆ ಹೇಳು ತ್ತಿದ್ದರೆಂದು. ಭಾವಿಸುತ್ತೇನೆ.

" ನಮ್ರ, ಆದರೂ ಸುಖಿ, ತನ್ನವರನ್ನು ತಾನು ಪ್ರೀತಿಸಿದವನೆಂದು " ಬರೆ.

೧೯೨೮ರಲ್ಲಿ ಮಗನ್‌ಲಾಲ್ ಸ್ವರ್ಗಸ್ಥರಾದ ಈಚೆಗೆ, ಜಮುನಾಲಾಲರ ಈ ಆಕಸ್ಮಿಕ ಮರಣದಂತಹ ಚೇತರಿಸಿಕೊಳ್ಳಲಾರದ ಏಟು ಗಾಂಧಿಯವರಿಗೆ ಬಿದ್ದಿರಲಿಲ್ಲ. ಗಾಂಧಿ, ಅನುಭವಿಸಿದ ದುಃಖ, ಶೂನ್ಯತೆಯನ್ನು ವಿವರಿಸಲು ನನ್ನಲ್ಲಿ ಮಾತುಗಳೇ ಇಲ್ಲ. ಎರಡು ದಿನ ಗಾಂಧಿ ಜಮುನಾಲಾಲರ ಸತಿಯನ್ನೂ ವೃದ್ಧ ತಾಯಿಯನ್ನೂ ಸಮಾಧಾನ ಮಾಡುತ್ತಾ ತಾವೂ ಧೈರ್ಯದಿಂದ ಸಹಿಸಿಕೊಂಡರು. ಆದರೆ ಮೂರನೆಯ ದಿನ " ಮಕ್ಕಳಿಲ್ಲದವರು ಮಕ್ಕಳನ್ನು ದತ್ತು ತೆಗೆದುಕೊಳ್ಳುತ್ತಾರೆ. ಆದರೆ ಜಮುನಲಾಲರು ನನ್ನನ್ನು ತಂದೆಯಾಗಿ ದತ್ತು ತೆಗೆದುಕೊಂಡರು. ನನ್ನ ಸಮಸ್ತಕ್ಕೂ ಆತ ಹಕ್ಕುದಾರನಾಗಬೇಕಾಗಿದ್ದಿತು. ಅದರ ಬದಲು ತನ್ನ ಸಮಸ್ತಕ್ಕೂ ನನ್ನನ್ನು ಹಕ್ಕುದಾರನಾಗಿ ಬಿಟ್ಟು ಹೋಗಿದ್ದಾನೆ " ಎಂದು ಹೇಳುತ್ತಿರುವಾಗ ಅವರಿಗೆ ದುಃಖ ಉಕ್ಕಿಬಂತು. ಎಲ್ಲವೂ ಶೂನ್ಯ, ಬರಿದು ಎಂಬುದೇ ಎಲ್ಲರ ಭಾವವೂ ಆಗಿದೆ. ಬಾಪು ಮತ್ತು ಬಾ ಎದುರಿಗೇ ಇದ್ದರೂ ; ಜಮುನಲಾಲರು ಇಲ್ಲದುದರಿಂದ ಎಲ್ಲಾ ಶೂನ್ಯ. ಆತ, ಸ್ಥಾಪಿಸಿದ ಮತ್ತು ಸ್ಥಾಪಿಸಲು ಸಹಾಯ ಮಾಡಿದ ಸಂಸ್ಥೆಗಳೆಲ್ಲಾ ಅವರ ಉತ್ಸಾಹ ಸಹಾಯಗಳಿಲ್ಲದೆ ಬಡವಾಗುವುವು. ಅವುಗಳಿಗೆ ಒಂದು ಅಂಕೆಯುಂಟಾಗುವುದು. ಜಮುನಲಾಲರ ನಿರ್ದಾಕ್ಷಿಣ್ಯವಾದ ಚೈತನ್ಯದಾಯಕವಾದ ವಿವೇಕ, ಈಗ ಮರೆಯಾಗಿರುವುದರಿಂದ, ಕಾಂಗ್ರೆಸ್ ವರ್ಕಿಂಗ್ ಸಮಿತಿ ಸಹ ನಿರುತ್ಸಾಹ ಬೇಸರಿಕೆ ಯುಳ್ಳದುದಾಗುವುದು.

ನಮ್ಮನ್ನು ಆವರಿಸಿರುವ ಶೂನ್ಯತೆಯನ್ನು, ವಲ್ಲಭಭಾಯಿಯವರ ಮುಂದಲ ಕಾಗದದಿಂದ ಸ್ವಲ್ಪ ಅರಿಯಬಹುದು.

" ರೈಲಿನಲ್ಲಿಯೂ ಮೋಟಾರಿನಲ್ಲಿಯೂ ಕುಳಿತುಕೊಳ್ಳುವುದಿಲ್ಲವೆಂದು ಆತ ಪ್ರತಿಜ್ಞೆ ಮಾಡಿದ್ದ. ಹದಿನೈದನೆಯ ತಾರೀಕಿಗೆ ಆ ಪ್ರತಿಜ್ಞೆಯ ವಾಯಿದೆ ಮುಗಿಯ ಬೇಕಾಗಿದ್ದಿತು. ಅನಂತರ ಹಜಿರಾಕ್ಕೆ ಬಂದು ನನ್ನ ಜತೆಯಲ್ಲಿದ್ದುಕ್ಕೊಂಡು ವಿಶ್ರಾಂತಿ ತೆಗೆದುಕೊಳ್ಳುವುದಾಗಿ ವಾಗ್ದಾನ ಮಾಡಿದ್ದ. ಅದರ ಬದಲು ಈಗ ಶಾಶ್ವತ ವಿಶ್ರಾಂತಿಗೆ ಹೋಗಿಯೇ ಬಿಟ್ಟ. ಇದಕ್ಕಿಂತ ಉತ್ತಮವಾದ ಮರಣವಿಲ್ಲ. ಆದರೆ ಗಾದೆ

ಇರುವಂತೆ "ಸಾವಿರ ಜನ ಬೇಕಾದರೂ ಸಾಯಲಿ. ಆದರೆ ಆ ಸಾವಿರ ಜನರ ಪೋಷಕ ಸಾಯುಬೇಡ."

ನಮ್ಮ ದೇಶದ ಎಲ್ಲಾ ಭಾಗಗಳಲ್ಲಿಯೂ ಗುಡಿಸಲುಗಳಲ್ಲಿ, ಸಾವಿರಾರು ಕೆಲಸಗಾರರು ಮೌನವಾಗಿ ಅಶ್ರುಧಾರೆ ಸುರಿಸುತ್ತಿದ್ದಾರೆ. ಬಾಪುವಿಗೆ ನಿಜವಾಗಿಯೂ ಪುತ್ರವಿಯೋಗ. ಜಾನಕೀದೇವಿ ಮತ್ತು ಸಂಸಾರಕ್ಕೆ ನಿಜವಾದ ವಿಶ್ರಾಂತಿಸ್ಥಾನ ವಿಯೋಗ. ದೇಶಕ್ಕೆ ಅಕೃತ್ರಿಮ ಸೇವಕನ ನಷ್ಟ. ಕಾಂಗ್ರೆಸ್ಸಿಗೆ ಆಧಾರ ಸ್ತಂಭವೇ ಹೋಯಿತು. ಗೋವಿನ ನಿಜವಾದ ಮಿತ್ರ ಮರೆಯಾದ. ಅನೇಕ ಸಂಸ್ಥೆಗಳ ಪೋಷಕ ಮರೆಯಾದ. ನಮ್ಮ ಭ್ರಾತೃ, ಸಹೋದರ ಇಲ್ಲವಾದ. ನನಗೆ ಶೂನ್ಯತೆ ಅನಾಥ ಎಂಬ ಭಾವ ಬರುತ್ತಿದೆ."

ಎಲ್ಲರೂ ದುಃಖಿತರಾಗಿದ್ದಾರೆ. ದುಃಖಿಗಳ ಸ್ಟೈಕಿ ವರ್ಕಿಂಗ್ ಸಮಿತಿ ಸದಸ್ಯರು ಮಾತ್ರವೇ ಅಲ್ಲದೆ, ಜಮುನಲಾಲರೊಂದಿಗೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದ ಭಿರ್ಲಾ, ಟಾಟಾ, ಸರ್ ಪುರುಷೋತ್ತಮದಾಸ್, ಅವರ ಸಹಾಯಕ್ಕೆ ಯಾವಾಗಲೂ ಒಳಗಾಗಿದ್ದ ಅವರ ಸಹೋದ್ಯೋಗಿಗಳೂ ಜಗತ್ತಿಗೇ ತಿಳಿಯದೆ ಅವರ ಸಹಾಯವನ್ನು ಹೊಂದುತ್ತಿದ್ದವರೂ ಇದ್ದಾರೆ. ವಾರ್ಧಾದಲ್ಲಿ ಅವರ ನಿಧನದ ದುಃಖಸಭೆಯಲ್ಲಿ ಹಿಂದೂ ಮಹಾಸಭೆ, ಮುಸ್ಲಿಂಲೀಗ್ ಸದಸ್ಯರು ಭಾಗಿಗಳಾದರು. ಒಬ್ಬ ಮುಸಲ್ಮಾನ ಬ್ಯಾರಿಸ್ಟರ್, ಜಮುನಲಾಲರ ಮಹತ್ತರಗಳಾದ ಗುಣವರ್ಣನೆ ಮಾಡಿದರು. ಜಮುನಲಾಲರು ಸಕಾಲದಲ್ಲಿ ಸಹಾಯ ಮಾಡದೆ ಇದ್ದಿದ್ದರೆ, ಆಂಗ್ಲೊ ಉರ್ದು ಸ್ಕೂಲು ಸ್ಥಾಪನೆಯಾಗುತ್ತಲೇ ಇರಲಿಲ್ಲವೆಂದು ಆತ ಹೇಳಿದ. ಜಮುನಲಾಲರ ಸ್ನೇಹಪರತೆಯಿಂದ ಎಲ್ಲರೂ ಅವರಿಗೆ ಬೇಕಾದವರಾಗಿದ್ದರು. ಅವರ ಮನೆಗೆ ಬಂದವರಿಗೆ ತಮ್ಮ ಮನೆಯಲ್ಲಿಯೇ ಇದ್ದಂತೆ ಸಮಾಧಾನವಾಗುತ್ತಿದ್ದಿತು. ತಮ್ಮ ರಕ್ತಸಂಬಧಿಗಳು ಅಥವ ಮನೆಯವರು ಮಾತ್ರವೇ ಸಂಸಾರ ಎಂಬ ಬಂಧನವನ್ನು ಅವರು ಮರೆತು ಜಗತ್ತಿನವರನ್ನೆಲ್ಲಾ ತಮ್ಮ ಸಂಸಾರಕ್ಕೆ ಸೇರಿಸಿಕೊಂಡರು. ಐಶ್ವರ್ಯ ಸ್ಥಾನ ಇವುಗಳ ಬಂಧನವನ್ನೂ ಅವರು ದಾಟಿದ್ದರು. ಅವರ ಸೇವಕರೂ, ನೌಕರರೂ, ಅವರ ಸಂಸಾರಕ್ಕೆ ಸೇರಿದವರೇ ಆದರು. ಅವರ ಸುಖ ದುಃಖಗಳು ಪೂರ್ಣವಾಗಿ ಸಮಾನವಾಗಿದ್ದವು. ಲೋಕದಲ್ಲಿ ಢಂಭಾಚಾರ

ನಟನೆ ಇಲ್ಲದವರೂ, ಐಶ್ವರ್ಯ ತನ್ನದೆಂಬ ಭಾವದಿಂದ ಅದಕ್ಕೆ ಅಂಟಿಕೊಳ್ಳದವರೂ ಅಪರೂಪ. ಜಾತಿಯ ಪ್ರೇಮ, ತಮ್ಮ ಪ್ರಾಂತ ಪ್ರೇಮ ಇವುಗಳಿಲ್ಲದವರೂ ಬಜಾಜರಂತೆ ದ ಯಾಶಾಲಿಗಳೂ ಅಪರೂಪ.

ತಮ್ಮ ಆಸೆಗಳನ್ನು, ಅಡಗಿಸಿಕೊಳ್ಳಲು, ಮತ್ತು ಉತ್ತಮವಾದ ಮಾರ್ಗಕ್ಕೆ ತಿರುಗಿಸಲು ಸಕ್ತರಾದ ಕೆಲವು ಮಹನೀಯರಂತೆ, ಜಮುನಾ ಲಾಲರು ತಾವು ಐಶ್ವರ್ಯವಂತರೆಂಬ ಭಾವನನ್ನು ಅಡಗಿಸಲು ಶಕ್ತರಾಗಿದ್ದರು. ಅವರು ಆರಿಸಿದ ಗುರುವನ್ನು, ಅರುವಿನ ಕಷ್ಟದ ಮುಳ್ಳುದಾರಿಯಲ್ಲಿ ಪೂರ್ಣವಾಗಿ ಅನುಸರಿಸಿದರು. ಐಶ್ವರ್ಯದ ಮೇಲೆ ತಮ್ಮ ಸ್ವಾಮಿತ್ವವನ್ನು ಬಿಟ್ಟುದರಿಂದಲೇ ಇದು ಅವರಿಗೆ ಸಾಧ್ಯವಾಯಿತು. ಜಮುನಾ ಲಾಲರು ಜನಿಸಿದುದು, ನೀರಿಲ್ಲದ ಜಯಪುರ್ ರಾಜ್ಯದ ಸಣ್ಣ ಹಳಿಯ ಬಡವನ ಮನೆಯಲ್ಲಿ. ಅದೇ ರಾಜ್ಯದ ಧನಿಕ ವಾರ್ಧಾದಲ್ಲಿದ್ದವನು ಆತನನ್ನು ದತ್ತು ತೆಗೆದುಕೊಂಡ ಮಗನನ್ನು ದತ್ತು ಕೊಡಲು ಆ ಬಡ ಮಾತಾಪಿತೃಗಳೂ ಕೂಡ ಮೊದಲು ಒಪ್ಪಲಿಲ್ಲ. ಆದರೆ ವಾರ್ಧಾದ ಧನಿಕ, ಬಚರಾಜ್ ಹಳ್ಳಿಯಲ್ಲಿ ಒಂದು ಭಾವಿ ತೋಡಿಸಲು ಒಪ್ಪಿಕೊಂಡ ಮೇಲೆ, ಮಗನನ್ನು ಕಳುಹಿಸಿದರು. ದತ್ತು ತಂದೆ ಮಗುವನ್ನು ಸಾಕಿದರು. ಎರಡು ಮೂರು ವರುಷ ಹಿಂದಿ ಕಲಿಸಿ, ಅನಂತರ ವ್ಯಾಪಾರಕ್ಕೆ ಹಾಕಿದರು. ಒಂದು ಸಲ, ಕೋಪಿಷ್ಟನಾದ ಆತನ ತಂದೆಗೆ ಜಮುನಾ ಲಾಲರ ಮೇಲೆ ಅಸಮಾಧಾನವುಂಟಾಯಿತು, ಆತ "ನೀನು ದುಡಿಯದೆ ಐಶ್ವರ್ಯವಂತನಾದೆ. ಅದಕ್ಕೇ ಹೀಗೆ" ಎಂದು ಜಮುನಲಾಲರಿಗೆ ಹೇಳಿದ. ಆಗ ಜಮುನಾಲಾಲರ ವಯಸ್ಸು ೧೨. ಆತ ತಂದೆಗೆ ಒಂದು ಕಾಗದ ಬರೆದ. ಅದು ನಮ್ರವಾಗಿದ್ದರೂ ಖಂಡಿತವಾಗಿದ್ದಿತು. ಅದನ್ನು ನೋಡಿದರೇನೆ ಮುಂದಲ ಜಮುನಾಲಾಲರು ಯಾವ ರೀತಿಯವರು ಎಂಬುದು ಗೊತ್ತಾಗುತ್ತಿದ್ದಿತು. ಕಾಗದದ ಭಾಷೆ ಮಾರವಾಡಿ. ಕೆಲವು ಮಾತುಗಳನ್ನು ಅನುವಾದಿಸಲು ಸಾಧ್ಯವಿಲ್ಲ. ಆದರೆ ಕಾಗದದ ಸಾರಾಂಶ ಇದು.

"ನಿಮಗೆ ಇಂದು ನನ್ನಮೇಲೆ ಬಹು ಕೋಪ ಬಂತು. ಅದು ದೇವರ ಇಚ್ಛೆ. ನನ್ನನ್ನು ದತ್ತು ತೆಗೆದುಕೊಂಡಿರುವುದರಿಂದ ನನ್ನಮೇಲೆ ಸಿಟ್ಟುಗೊಳ್ಳಲು ನಿಮಗೆ ಅಧಿಕಾರವಿದೆ. ಅದು ನಿಮ್ಮ ತಪ್ಪಲ್ಲ. ಆದರೆ ತಪ್ಪು ನಿಮಗೆ ನನ್ನನ್ನು ದತ್ತು ಕೊಟ್ಟವರದು. ನಿಮ್ಮ ಐಶ್ವರ್ಯ ನಿಮ್ಮದು.

ಅದನ್ನು ನಿಮಗೆ ಬೇಕಾದಂತೆ ನೀವು ವಿನಿಯೋಗಿಸಬಹುದು. ನನಗಾಗಿ ನಿಮಗೆ ಖರ್ಚು ಬಿದ್ದುದಕ್ಕೆ ನನಗೆ ದುಃಖವಾಗಿದೆ. ಆದರೆ ಇಲ್ಲಿಂದ ಮುಂದೆ ನಿಮ್ಮ ಒಂದು ಕಾಸನ್ನೂ ನಾನು ಮುಟ್ಟುವುದಿಲ್ಲ. ನಿಮ್ಮ ಮೇಲೆ ನನಗೇನೂ ಹಕ್ಕು ಇಲ್ಲ. ಆದುದರಿಂದ ಆ ಯೋಚನೆ ಬಿಡಿ. ದೇವರು ನಿಮ್ಮನ್ನು ಇನ್ನೂ ಬಹುಕಾಲ ಇಟ್ಟಿರಲಿ. ನಾನು ಹೋದೆಡೆಗಳಲ್ಲೆಲ್ಲಾ ನಿಮಗೆ ಒಳ್ಳೆಯದನ್ನು ಪ್ರಾರ್ಥಿಸುತ್ತೇನೆ. ನಿಮ್ಮನ್ನು ಬೇಜಾರು ಪಡಿಸಿ ದುದಕ್ಕೆ ಮನ್ನಿಸಿ. ನಿಮ್ಮ ಹಣಕ್ಕಾಗಿ ನಾನು ನಿಮ್ಮ ಸೇವೆ ಮಾಡಲಿಲ್ಲ ವೆಂದು ದಯವಿಟ್ಟು ನಂಬಿ. ಆ ಭಾವಕ್ಕೆ ನಿಮ್ಮ ಮನಸ್ಸಿನಲ್ಲಿ ಎಡೆ ಗೊಡಬೇಡಿ. ನನಗೆ ಐಶ್ವರ್ಯದ ಆಸೆ ಇಲ್ಲ. ಈ ಲೋಕದಲ್ಲಿಯೂ ಪರ ಲೋಕದಲ್ಲಿಯೂ ನನ್ನನ್ನು ಸುಖಿಯಾಗಿ ಇಡುವವನು ದೇವರು. ಆತನ ಹೆಸರು ಮರೆಯದಿದ್ದರೆ ನನಗೆ ಅದೇ ಸಾಕು. ನಿಮ್ಮ ಪಾಡಿಗೆ ಗೆಲುವಾಗಿರಿ. ನಾನು ಹೋಗುತ್ತಿರುವುದರಿಂದ ದುಃಖಪಡಿಬೇಡಿ. ಈ ಪ್ರಪಂಚದ ಸಂಬಂಧವೆಲ್ಲಾ ಬರಿದು. ಜಗತ್ತಿನ ಆಸ್ತಿಗಳ ಹಿಡಿತದಲ್ಲಿ ನೀವು ಸಿಕ್ಕಿಬಿದ್ದಿದ್ದೀರಿ. ಅವುಗಳ ಕ್ರೂರವಾದ ಹಿಡಿತದಿಂದ ನನ್ನನ್ನು ಇಂದು ಬಿಡಿಸಿದುದ ಕ್ಕಾಗಿ, ದೇವರನ್ನು ವಂದಿಸಿ. ನಿಮ್ಮ ಹಣವನ್ನು ತೆಗೆದುಕೊಳ್ಳಲು ನಾನು ಕೋರ್ಟಿಗೆ ಹೋಗುವುದಿಲ್ಲ. ನಿಮ್ಮ ಒಂದು ಕಾಸೂ ನನಗೆ ಬೇಡ. ಇಲ್ಲಿ ಒಂದು ಬಿಡುಗಡೆ ಕಾಗದ, ಛಾಪಾ ಕಾಗದದಲ್ಲಿ ಬರೆದು ಇಟ್ಟಿದ್ದೇನೆ. ನಿಮ್ಮಿಂದ ನನಗೆ ಏನೂ ಬರಬೇಕಾದುದಿಲ್ಲವೆಂದು ಬರೆದಿದ್ದೇನೆ. ನಾನು ಯಾರಿಂದಲೂ ಸಾಲ ಮಾಡಿಲ್ಲ. ಆದುದರಿಂದ ನೀವು ಕೊಡಬೇಕಾದು ದಿಲ್ಲ. ನಿಮ್ಮ ಹಣವನ್ನು ದಾನ ಮಾಡಿ. ನಿಮ್ಮ ಸ್ವಭಾವ, ಸಾಧುಗಳ ಮೇಲೂ ಇತರರ ಮೇಲೂ ಬೀಳುವುದಾಗಿದೆ. ಹಾಗೆ ಮಾಡಬೇಡಿ. ಸಾಧ್ಯ ವಾದುದನ್ನು ಕೊಟ್ಟು ಅವರನ್ನು ತೃಪ್ತಿಪಡಿಸಿ. ನಾನು ನಿಮ್ಮ ಮನೆ ಯಿಂದ, ನನ್ನ ಮೈಮೇಲಿರುವ ಬಟ್ಟೆಗಳ ಹೊರತು ಮತ್ತೇನನ್ನೂ ತೆಗೆದು ಕೊಳ್ಳುತ್ತಿಲ್ಲ."

ತಂದೆಗೆ ಪಶ್ಚಾತ್ತಾಪವಾಯಿತು. ಅಳುತ್ತಾ "ಇಲ್ಲಿಯೇ ನಿಲ್ಲು" ಎಂದು ಪ್ರಾರ್ಥಿಸಿದರು. ಜಮನಾಲಾಲರು ನಿಂತರು. ವಿವೇಕ, ಸ್ವಾಭಾವಿಕವಾದ ವ್ಯಾಪಾರ ಧರ್ಮ, ಇವುಗಳು ಅವರಿಗೆ ಹುಟ್ಟುಗುಣಗಳಾಗಿ ದ್ದವು. ಅವರು ಅನೇಕ ಲಕ್ಷರೂಪಾಯಿ ದುಡಿದರು. ತಂದೆಯ ಆಸ್ತಿಯ

ಐದರಷ್ಟನ್ನು ದಾನ ಮಾಡಿದರು. ತಂದೆಯ ಪ್ರಾರ್ಥನೆಯಂತೆ ಮನೆಯಲ್ಲಿ ನಿಂತ ಅವರು, ತಂದೆಯ ಆಸ್ತಿಯ ವ್ಯವಸ್ಥಾಪಕರಾಗಿ ಮಾತ್ರವೇ ಉಳಿದರು. ತಿಳಿದೋ ತಿಳಿಯದೆಯೋ ಮತ್ತೊಬ್ಬರ ಆಸ್ತಿಯನ್ನು ತಾನು ಸಂರಕ್ಷಿಸುವುದರಲ್ಲಿ ಅದೇ ಅವರ ಮೊದಲನೆಯ ಪಾಠವಾಯಿತು. ಮೊದಲು ಜಮುನಾಲಾಲರನ್ನು ದತ್ತು ತೆಗೆದುಕೊಂಡ ತಂದೆ, ಆ ಮೊದಲ ಪಾಠ ಅವರಿಗೆ ಕಲಿಸಿದರು. ಈಚೆಗೆ ಜಮುನಾಲಾಲರೆಗೇ ದತ್ತು ತೆಗೆದುಕೊಂಡ ಎರಡನೆಯ ತಂದೆ, ಅದರ ಆಳವಾದ ಗಾಢವಾದ ಅರ್ಥವಿವರಣೆ, ವ್ಯಾಪ್ತಿಗಳನ್ನೆಲ್ಲಾ ಅವರಿಗೆ ಉಪದೇಶಿಸಿದರು.

ಹಾಗೆಯೇ ಅವರು ಅತ್ಯಂತ ಧೈರ್ಯಶಾಲಿಗಳಾಗಿದ್ದರು. ಅವರ ಆ ಧೈರ್ಯವನ್ನು ಕಡಮೆಮಾಡುವ ದಾಸ್ಯ ಮನೋಭಾವದ ವಿದ್ಯೆ ಅವರಲ್ಲಿ ಇರಲಿಲ್ಲ. ರೈಲಿನ ಒಂದು ಎರಡನೆಯ ತರಗತಿಯಲ್ಲಿ ತಿರುಗುತ್ತಾ ತನ್ನನ್ನು ಗದರಿಸಲು ಪ್ರಯುಕ್ತಿಸಿದ ಬಿಳಿಯ ಸಿಪಾಯಿಗಳ ಬಾಯನ್ನು ಅವರು ಮುಚ್ಚಿಸಿದ್ದರು. ಗವರ್ನರರ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಅವರು ದ್ರಾಕ್ಷಾರಸವನ್ನು ಕೊಡಲು ಒಪ್ಪಲಿಲ್ಲ. ಒಬ್ಬ ಛೀಫ್ ಕಮಿಷನರು "ನೀವು ಇನ್ನೂ ಹೆಚ್ಚು ರಾಜಭಕ್ತಿಯುತರಾಗದಿದ್ದರೆ, ನಿಮ್ಮ ಪಾಠಶಾಲೆಯ ಪ್ರಾರಂಭೋತ್ಸವ ನಾನು ನಡೆಸುವುದಿಲ್ಲ" ಎಂದು ಹೇಳಿದುದಕ್ಕೆ ಜಮುನಾಲಾಲರು, ನನಗೆ ಆ ಬೆಲೆಯಾದ ಹೆಕ್ಕು ಇಲ್ಲದಿದ್ದರೂ ಆಗುತ್ತೆ ಎಂದರು. ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರು "ತಿಳಕರು ಇಂಗ್ಲೆಂಡಿಗೆ ಪ್ರಯಾಣ ಮಾಡುತ್ತಿರುವ ಆ ಹಡಗು ಮುಳುಗಿದರೆ ನನಗೆ ಎಷ್ಟು ಸಂತೋಷ" ಎಂದಾಗ ಜಮುನಾಲಾಲರು "ಆ ಹಡಗಿನಲ್ಲಿ ಅನೇಕ ಇಂಗ್ಲಿಷ್ ಪ್ರಯಾಣಿಕರು ಇರುವುದನ್ನು ನೀವು ಮರೆತಿರಿ" ಎಂದರು.

ಗಾಂಧಿಯವರ ನಾಯಕತ್ವದಲ್ಲಿ ಇಪ್ಪತ್ತು ವರುಷದ ಸಾರ್ವಜನಿಕ ಜೀವನದಲ್ಲಿ ಈ ನಿರ್ಭಯ ಚೆನ್ನಾಗಿ ಪ್ರಕಾಶಕ್ಕೆ ಬಂದಿತು. ಪ್ರೆಸಿಡೆಂಟ್ ಕ್ರೂಗರ್‌ರಿಗೆ ಅಕ್ಷರ ಬರುತ್ತಿರಲಿಲ್ಲ. ದಂಡನಾಯಕ ಚಿಯಾಂಗ್ ಕೈ ಶೇಕ್‌ರಿಗೆ ಇಂಗ್ಲೀಷು ಬರುವುದಿಲ್ಲ. ಇಂಗ್ಲೀಷು ಬರದುದರಿಂದ ಅವರಿಗೇನೂ ಕುಂದಕವಾಗಲಿಲ್ಲ. ಅದರಿಂದ, ಅವರ ಮನಸ್ಸಿನ ಸ್ವಭಾವಿಕವಾದ ಶಕ್ತಿ ಸ್ವಲ್ಪವೂ ಕಮ್ಮಿಯಾಗದೆ ಉಳಿಯಿತು. ಜಮುನಾಲಾಲರ

ವಿಚಾರದಲ್ಲಿಯೂ ಹಾಗೆಯೇ. ಕಾಂಗ್ರೆಸ್ ನಿರ್ಣಯದ ಮಾತುಗಳು ಕಠಿಣವಾಗಿದ್ದರೂ, ಅವರಿಗೆ ಇತರ ಕಾಂಗ್ರೆಸ್ ಸದಸ್ಯರಿಗಿಂತ ಬಹುಬೇಗ ಅದರ ಅರ್ಥ ಗೊತ್ತಾಗುತ್ತಿದ್ದಿತು. ನೋಡಿದರೆ ಯಾವ ಅಪಾಯವೂ ಇಲ್ಲದಿರುವ ಸುಲಭವಾದ ನಿರ್ಣಯದಂತೆ ಕಾಣುವ ನಿರ್ಣಯದಲ್ಲಿಯ ಅಪಾಯಗಳನ್ನು, ಅವರು ಆಗಾಗ್ಗೆ ಇತರ ಸದಸ್ಯರಿಗೆ ತೋರಿಸುತಿದ್ದರು. ಯುದ್ಧಕ್ಕೆ ನೀತಿಬಲ ಮತ್ತು ಶಕ್ತಿಬಲ ಕೊಡಬೇಕೆ ಎಂಬ ಪ್ರಶ್ನೆ ಮೊದಲು ಎತ್ತಿದವರೇ ಅವರು. ವ್ಯಾಪಾರಿಗಳ ಜನಾಂಗ, ನೀತಿಯ ಬಲದ ಬಲೆಗೆ ಬೀಳುವುದಿಲ್ಲವೆಂದು ಅವರೇ ಮೊದಲು ಹೇಳಿದವರು.

ಜಮುನಾಲಾಲರು ರಾಷ್ಟ್ರದ ನಿಧಿಯ ಕೋಶಾಧಿಕಾರಿಯಾದಂತೆ, ರಾಷ್ಟ್ರದ ಗೌರವ, ಮರ್ಯಾದೆಯ, ಕೋಶಾಧಿಕಾರಿ ಸಹ ಆಗಿದ್ದರು. ಸ್ವಾತಂತ್ರ್ಯದ ಪ್ರವಾಹಕ್ಕೆ ಸ್ವಲ್ಪವೂ ಹಿಂದೆಗೆಯದೆ ಆದದ್ದಾಗಲಿ ಎಂದು ದುಮುಕಿ, ಪ್ರತಿಸಲವೂ ಬಂದ ಅನೇಕ ಕಷ್ಟಗಳನ್ನೂ ಸೆರೆ ವಾಸವನ್ನೂ ಸುಲಭವಾಗಿ ಸಹಿಸಿಕೊಂಡ ಒಬ್ಬಿಬ್ಬರು ಧನಿಕರ ಪೈಕಿ, ಇವರೇ ಮುಂದಾಳು. ಕಷ್ಟ, ನಿರುತ್ಸಾಹ, ಬೇಸರಿಕೆಯ ಸಂದರ್ಭಗಳಲ್ಲಿ, ಇತರರ ಉತ್ಸಾಹ ಮೆತ್ತಗಾದಾಗಲೂ, ಅವರ ಸ್ವಾತಂತ್ರನಂಬಿಕೆಯ ಜ್ಯೋತಿ ಪ್ರಕಾಶವಾಗಿ ಉರಿಯುತ್ತಲೇ ಇದ್ದಿತು. ಇತರರಲ್ಲಿ ಉತ್ಸಾಹ ನಂಬಿಕೆ ಹುಟ್ಟಿಸುವುದಕ್ಕಾಗಿಯೇ, ಗಾಂಧಿಯವರು ಮೊದಲು ಆರು ವರುಷದ ಸೆರೆ ಯಲ್ಲಿದ್ದಾಗ ಜಮುನಾಲಾಲರು ಗೋಸೇವೆಗೆ ಎರಡೂವರೆ ಲಕ್ಷ ರೂಪಾಯಿ ಗಳನ್ನು ಕೊಟ್ಟರು. ರಾಜನೀತಿತಂತ್ರ ಅವರಿಗೆ ತಿಳಿಯುತ್ತಿದ್ದಿತು. ಆದರೆ ರಾಜನೀತಿ ಮನುಷ್ಯನ ಆತ್ಮವನ್ನೂ ಮನಸ್ಸನ್ನೂ ಕೆಡಿಸುವ ವಿಶಾಲವಾದ ಆಟ ಎಂಬುದು ಅವರ ನಂಬಿಕೆಯಾಗಿದ್ದಿತು. ಆದುದರಿಂದ ಅವರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ಕೆ ಮೊದಲೇ ಮನಸ್ಸು ಮೀಸಲು ಮಾಡಿದರು. ಖಾದಿಗೆ ತಮ್ಮ ಕಾಲ, ತಮ್ಮ ಹಣ, ವ್ಯವಸ್ಥಾಶಕ್ತಿ, ಭಕ್ತಿ ಎಲ್ಲವನ್ನು ಅರ್ಪಿಸಿದರು, ಹರಿಜನ ಸೇವೆಯಲ್ಲಿ ತೊಡಗಿ ಸಂಕುಚಿತ ಬುದ್ಧಿಯ ತಮ್ಮ ಜಾತಿಯವರ ದ್ವೇಷಕ್ಕೆ ಒಳಗಾದರು. ಹಿಂದೂ ಮುಸಲ್ಮಾನರ ಐಕ್ಯ ಅವರಿಗೆ ಪ್ರಿಯವಾಗಿದ್ದಿತು. ಒಂದು ದಂಗೆಯಲ್ಲಿ ಅವರಿಗೆ ಲಾಠಿ ಏಟುಗಳು ಬಿದ್ದವು. ಅವರು ಅವನ್ನು ಸಂತೋಷದಿಂದಲೇ ಸ್ವೀಕರಿಸಿದರು. ಅವರ ಮನಃಪೂರ್ವಕವಾದ ಉದ್ಯೋಗನಿಷ್ಠೆ,

ಅವರಿಗೆ ಖಾನ್ ಸಾಹೇಬರುಗಳನ್ನು ತಮ್ಮಂದಿರಾಗಿಯೂ ರೆಹನಾಬಹೆನ್, ಕ್ಯಾಪ್ಟನ್ ಸಹೋದರಿಗಳನ್ನು ತಂಗಿಯವರಾಗಿಯೂ ಮಾಡಿತು. ಅವರು ಗ್ರಾಮೋದ್ಯೋಗಕ್ಕೆ, ಸ್ತ್ರೀಯರ ಉದ್ಧಾರಕ್ಕೆ, ತಮ್ಮ ಆಸ್ತಿಯ ಹೆಚ್ಚುಭಾಗ ಕೊಟ್ಟು ದುಡಿದರು. ಗೋಸೇವೆಗೆ ತಮ್ಮ ಬಾಳನ್ನೇ ಮೀಸಲಾಗಿ ಇಟ್ಟರು.

ಇದಕ್ಕಿಂತ ಹೆಚ್ಚಾದ, ಸೇವೆಯಿಂದ ಧನಿಕವಾದ ಬಾಳು, ಯಾರಿಗೆ ತಾನೇ ದೊರೆತೀತು. ಆದರೂ ಜಮುನಾಲಾಲರ ಮಾತುಗಳಲ್ಲಿ ಆಗಾಗ್ಗೆ "ಏನನ್ನೋ ಸಾಧಿಸಲಿಲ್ಲ" ಎಂಬ ಒಂದು ಕೊರತೆ ಕಾಣುತ್ತದೆ. ಸತ್ಯ ನ್ಯಾಯ ಇವುಗಳಲ್ಲಿ ಅವರು ಬಹು ಖಂಡಿತ. ಆ ದೃಷ್ಟಿಯಿಂದ ಅವರು ತಮ್ಮ ವಿಷಯದಲ್ಲಿಯೇ ಕ್ರೂರರಾಗಿ ಇರುತ್ತಿದ್ದರು. ಗಾಂಧಿಯವರನ್ನು ಕಾಣುವುದಕ್ಕೆ ಮುಂಚೆ, ಅವರು ಅನೇಕ ಸನ್ನಿಧಿಗಳಲ್ಲಿ ಪೂಜೆ ಮಾಡಿದ್ದರು. ಗಾಂಧಿಯವರನ್ನು ನೋಡಿದ ಕೂಡಲೇ ಅವರ ಮನಸ್ಸು ದೃಢವಾಯಿತು ಗಾಂಧಿಯವರ ಸತ್ಯದಿಂದಲೇ ಜಮುನಾಲಾಲರಿಗೆ ಅವರ ಮಗನಾಗುವ ಪ್ರೇರಣೆಯುಂಟಾಯಿತು. ೧೯೨೨ರಲ್ಲಿ ಅವರು ಹೀಗೆ ಬರೆದರು. "ನಾನು ಮಹಾತ್ಮರ ಮಗನೆನ್ನಿಸಿಕೊಳ್ಳುವ ಯೋಗ್ಯತೆಯುಳ್ಳವನೆಂದು ಆಗುವಕಾಲ ಮಂಗಳಕಾಲ. ಅವರ ಅಪಾರವಾದ ಕರುಣೆಯಿಂದ ನನ್ನ ತಪ್ಪು ದೌರ್ಬಲ್ಯಗಳನ್ನು ಕಾಣುವ ಜ್ಞಾನ ನನಗೆ ಉಂಟಾಗಿದೆ" ಅವರಿಗೆ ಅನೇಕ ವೇಳೆ ನನ್ನ ಜ್ಞಾನ, ಆತ್ಮಜ್ಞಾನ ಸಾಲದು ಎಂಬ ಕೊರತೆ ಉಂಟಾಗುತ್ತಿದ್ದಿತು. ಸಾರ್ವಜನಿಕ ಕೆಲಸಗಳಿಂದ ವಿಮುಖನಾಗುವ ಮನೋಭಾವ ಅವರಿಗೆ ಬರುತ್ತಿದ್ದಿತು. ಜಮುನಾಲಾಲರ ಹಣದ ತ್ಯಾಗ ಅತ್ಯಪಾರವಾಗಿದ್ದರೂ, ಅವರ ಈ ಆತ್ಮಜ್ಞಾನದ ಅನ್ವೇಷಣದಿಂದ, ಗಾಂಧಿಯವರಿಗೆ ಅವರು ಬಹಳ ಪ್ರಿಯರಾಗಿದ್ದರು. ಅದರಿಂದಲೇ ಗಾಂಧಿಯವರು ಸೆರೆಮನೆಯಿಂದ ಬರೆದ ಎರಡು ಕಾಗದದಿಂದ, ಜಮುನಾಲಾಲರಿಗೆ ಅತ್ಯಂತ ಆನಂದವೂ ಹೆಮ್ಮೆಯೂ ಆಯಿತು.

ಆ ಒಂದು ಕಾಗದದಲ್ಲಿ ಗಾಂಧಿಯವರು ಹೀಗೆ ಬರೆದರು :

"ಸತ್ಯಾನ್ವೇಷನೆ ಮಾಡುತ್ತಾ ಹೋಗುತ್ತಿರುವ ನನಗೆ ಹೀಗೆ ತೋರುತ್ತದೆ. ಸತ್ಯದಲ್ಲಿ ಎಲ್ಲವೂ ಸೇರಿವೆ. ಅಹಿಂಸೆಯಲ್ಲಿ ಅಲ್ಲ ಸತ್ಯವಿರುವುದು. ಸತ್ಯದಲ್ಲಿದೆ ಅಹಿಂಸೆ. ಪರಿಶುದ್ಧವಾದ ಹೃದಯಕ್ಕೂ

ಬುದ್ಧಿಗೂ ಕಾಣುವುದು ಆ ಗಳಿಗೆಗೆ ಮಟ್ಟಿಗೆ ಸತ್ಯ. ಅದಕ್ಕೆ ಅಂಟಿ ಕೊಂಡರೆ ಸತ್ಯವನ್ನು ಹೊಂದಲು ನಮಗೆ ಸಹಾಯವಾಗುವುದು. ಇಲ್ಲಿ ಕರ್ತವ್ಯವಿಭಾಗ ಅಥವ ದ್ವಿಮುಖ ಎಂಬುದಿಲ್ಲ. ಆದರೆ ಅಹಿಂಸೆ ಯಾವುದು ಎಂದು ತೀರ್ಮಾನಿಸುವುದು ಅನೇಕ ವೇಳೆ ಕಷ್ಟವಾಗುವುದು. ಉದಾ ಹರಣೆಗಾಗಿ ಕ್ರಿಮಿಗಳ ನಾಶಕಾರಕ ದ್ರಾವಕವನ್ನು ಉಪಯೋಗಿಸುವುದು ಹಿಂಸೆ. ಆದರೆ ಉಪಯೋಗಿಸದೆ ವಿಧಿ ಇಲ್ಲ. ಹಿಂಸೆಯ ಮಧ್ಯದಲ್ಲಿಯೇ ನಾವು ಅಹಿಂಸೆಯ ಬಾಳನ್ನು ಬಾಳಬೇಕಾಗಿದೆ. ಸತ್ಯಕ್ಕೆ ನಾವು ಅಂಟಿ ಕೊಂಡರೆ ಮಾತ್ರ ಇದು ಸಾಧ್ಯ. ಹೀಗೆ ನಾನು ಸತ್ಯದಿಂದ ಅಹಿಂಸೆ ಎಂದು ತೀರ್ಮಾನಿಸುತ್ತೇನೆ. ಸತ್ಯದಿಂದ ಪ್ರೇಮ ಕರುಣೆ ವಿನಯ ಉಂಟಾಗು ತ್ತವೆ. ಸತ್ಯಪ್ರತಿಪಾದಕ ಧೂಳಿನಷ್ಟು ನಮ್ರನಾಗಿರಬೇಕು. ಅವನು ಸತ್ಯವನ್ನು ಎಷ್ಟು ಹೆಚ್ಚು ಹೆಚ್ಚಾಗಿ ಅನುಸರಿಸುತ್ತಾನೋ ಅವನ ವಿನಯ ಗುಣವೂ ಹಾಗೆಯೇ ಹೆಚ್ಚುತ್ತಾ ಹೋಗುತ್ತದೆ. ಇದು ನನ್ನ ಜೀವನದಲ್ಲಿ ನನಗೆ ಗಳಿಗೆ ಗಳಿಗೆಗೂ ಕಾಣುತ್ತಿದೆ. ಒಂದು ವರುಷಕ್ಕೆ ಮುಂಚೆ ಸತ್ಯ ಮತ್ತು ನನ್ನ ಅಲ್ಪತೆ ನನಗೆ ಎಷ್ಟು ತೋರುತ್ತಿದ್ದಿತೋ ಈಗ ಅದಕ್ಕಿಂತ ಹೆಚ್ಚಾಗಿ ತೋರುತ್ತಿದೆ. ಬ್ರಹ್ಮ ಸತ್ಯ, ಜಗನ್ಮಿಥ್ಯ ಎಂಬ ಮಹತ್ತಾದ ಸತ್ಯದ ಅರ್ಥ ವ್ಯಾಪ್ತಿ ನನಗೆ ದಿನದಿನವೂ ಹೆಚ್ಚು ಸ್ಪಷ್ಟವಾಗಿ ಹೊಳೆಯು ತ್ತಿದೆ. ಅದು ನಮಗೆ ಸಹನೆಯನ್ನು ಕಲಿಸುತ್ತದೆ. ಇದರಿಂದ ನಮ್ಮ ಕಾಠಿಣ್ಯ ತೊಳೆದುಹೋಗಿ ನಾವು ಮೃದುವಾಗುತ್ತೇವೆ. ಇದರಿಂದ ನಮ್ಮ ಅಣುವಿನಂತಿರುವ ತಪ್ಪಗಳು ಬೆಟ್ಟಗಳಾಗಿ ತೋರುತ್ತವೆ. ಇತರರ ಬೆಟ್ಟಗಳಂತಿರುವ ತಪ್ಪುಗಳು ಅಣುಗಳಾಗಿ ತೋರುತ್ತವೆ. ನಮಗೆ ಅಹಂಕಾರ ಇರುವುದರಿಂದಲೇ ದೇಹ ಉಳಿದಿದೆ. ಅಹಂಕಾರ, ದೇಹ, ಪೂರ್ಣವಾಗಿ ನಾಶವಾಗುವುದೇ ಮೋಕ್ಷ. ಇದನ್ನು ಸಾಧಿಸಿದವನೇ ಬ್ರಹ್ಮನ ಪ್ರತಿರೂಪು.

ಆದುದರಿಂದಲೇ ಭಗವಂತನ ಪ್ರಿಯವಾದ ಹೆಸರು ದಾಸಾನುದಾಸ. ಹೆಂಡತಿ ಮಕ್ಕಳು ಸ್ನೇಹಿತರು ಆಸ್ತಿ ಎಲ್ಲವನ್ನೂ ಸತ್ಯಕ್ಕಿಂತ ಕಡಿಮೆಯ ದಾಗಿ ತಿಳಿಯಬೇಕು. ಆಗ ಮಾತ್ರವೇ ಸತ್ಯಾಗ್ರಹಿಯಾಗಲು ಸಾಧ್ಯ. ಈ ತತ್ವದ ಅನುಷ್ಠಾನ, ಸುಲಭವಾಗಲಿ ಎಂಬ ದೃಷ್ಟಿಯಿಂದ ನಾನು ಈ ಚಳು ವಳಿಯಲ್ಲಿ ಧುಮುಕಿದ್ದೇನೆ. ಅದೇ ಗುರಿಯಿಂದ ನಿನ್ನಂತವರನ್ನು ಇದರಲ್ಲಿ

ಮುಳುಗಿಸಿದೆ. ಇದರ ಹೊರವೇಷ ಹಿಂದಿ ಸ್ವರಾಜ್ಯ. ಆ ಮುದರಿಯು. ಸತ್ಯಾಗ್ರಹಿ ಇನ್ನೂ ದೊರಕದೆ ಇರುವುದರಿಂದ ಸ್ವರಾಜ್ಯ ಸಾವಕಾಶವಾಗಿದೆ. ಆದರೆ ನಮಗೆ ಇದರಿಂದ ನಿರುತ್ಸಾಹವಾಗ ಬೇಕಾದುದಿಲ್ಲ. ಇದು ನಮ್ಮನ್ನು ಇನ್ನೂ ಹೆಚ್ಚು ಪ್ರಯತ್ನಕ್ಕೆ ಕುದುರಿಸುವುದು.

ಅಶುದ್ಧವಾದ ಯೋಚನೆಗಳಿಂದ ಬಿಡುಗಡೆ ಹೊಂದುವುದೇ ಮೋಕ್ಷ. ಬಿಡದೆ ತಪಸ್ಸು ಮಾಡಿದ ಹೊರತು ಅಶುದ್ಧವಾದ ಯೋಚನೆಗಳಿಂದ ಬಿಡಿಸಿ ಕೊಳ್ಳುವುದು ಕಷ್ಟ. ಇದನ್ನು ಸಾಧಿಸಲು ಇರುವುದು ಒಂದೇ ಮಾರ್ಗ. ಇದು ದೇವರ ದಯೆಯಿಂದ ಮಾತ್ರ ಸಾಧ್ಯ. ದೇವರ ದಯೆ ಆತನನ್ನು ಕುರಿತು ಸದಾ ಧ್ಯಾನಿಸುವುದರಿಂದಲೂ, ಮತ್ತು ಆತನಲ್ಲಿ ಪೂರ್ಣ ಶರಣಾ ಗತಿಯಿಂದಲೂ ಮಾತ್ರ ಉಂಟಾಗುತ್ತದೆ. ಈ ಧ್ಯಾನ ಎಂಬುದು ಪ್ರಾರಂಭದಲ್ಲಿ ಬರಿಯ ನಾಮೋಚ್ಚಾರಣೆಮಾತ್ರವಾಗಬಹುದು. ಮನಸ್ಸಿ ನಲ್ಲಿ ಅಶುದ್ಧವಾದ ಆಲೋಚನೆಗಳು ಸಹ ಇರಬಹುದು. ಆದರೆ ಕೊನೆಗೆ ಬಾಯಿಮಂತ್ರವಾದುದು, ಹೃದಯವನ್ನು ಹಿಡಿಯುತ್ತದೆ. ಆದರೆ ಇನ್ನೊಂದು ವಿಷಯ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಮನಸ್ಸು ಬೇರೆ ಕಡೆ ಚಲಿಸಬಹುದು. ಆದರೆ ಇಂದ್ರಿಯಗಳು ಚಲಿಸಕೂಡದು. ಮನಸ್ಸು ತೆಗೆದುಕೊಂಡು ಹೋದೆಡೆ ಇಂದ್ರಿಯಗಳು ಚಲಿಸಿದರೆ, ಮನುಷ್ಯನ ಕೆಲಸ ಮುಗಿಯಿತು. ಯಾಕೆಂದರೆ ಬಾಹ್ಯೇಂದ್ರಿಯಗಳನ್ನು ಸ್ವಾಧೀನ ದಲ್ಲಿ ಇಟ್ಟುಕೊಂಡಿರುವವನು, ಎಂದಾದರೂ ಅಶುದ್ಧವಾದ ಆಲೋಚನೆ ಗಳನ್ನು ಹಿಡಿತದಲ್ಲಿ ತೆಗೆದುಕೊಳ್ಳುವನು. ಅಶುದ್ಧವಾದ ಯೋಚನೆಗಳಿಂದ ಬೇಜಾರು ಪಡಬೇಡ. ಪ್ರಯತ್ನದ ರಾಜ್ಯಕ್ಕೆ ನಾವೇ ರಾಜರು. ಫಲದ ರಾಜ್ಯಕ್ಕೆ ದೇವರೇ ರಾಜ. ನಿನ್ನಸುತ್ತ ಶುದ್ಧವಾದ ವಾತಾವರಣವುಂಟಾ ಗಲು ಮಾಡಬೇಕಾದುದು ನಿನಗೆ ಗೊತ್ತು. ಮಿತವಾದ ಆಹಾರ, ನೆಲದ ಮೇಲೆ ದೃಷ್ಟಿ. ನಿನ್ನಲ್ಲಿ ಅತೃಪ್ತಿ ; ಕಣ್ಣು, ಕೆಟ್ಟನೋಟ ಬಯಸಿದರೆ ಅದನ್ನೂ ಕೀಳುವಷ್ಟು ಅತೃಪ್ತಿ."

* * *

ಈ ಬಗೆಯ ಆಹಾರದಿಂದ ಬೆಳೆದ ಆತ, ದಿನದಿನಕ್ಕೆ ಹೆಚ್ಚು ಅಂತ ರ್ಮುಖಿಯಾಗುತ್ತಿದ್ದ. ಪ್ರಾರಂಭದಿಂದಲೂ ವಾರ್ಧಾ ಸತ್ಯಾಗ್ರಹ ಆಶ್ರಮವನ್ನು ನಡೆಸಿದ್ದ ವಿನೋಬರವರ ಸಹವಾಸ ಜಮನಾಲಾಲರಿಗೆ

ಬಹಳ ಸಹಾಯವಾಯಿತು. ತಮ್ಮಲ್ಲಿಯೇ ಅವರಿಗೆ ನಂಬಿಕೆ ಹೆಚ್ಚಾಗಿದ್ದಿತು. ಕಾಂಗ್ರೆಸ್ ಅಧ್ಯಕ್ಷಗಿರಿಯ ಮುಳ್ಳಿನ ಕಿರೀಟ ತನ್ನ ಪಾಲಿಗೆ ಬಂದರೆ, ಆ ರಥವನ್ನು ತಾನು ಸರಿಯಾಗಿ ನಡೆಸಿಕೊಂಡು ಹೋಗಬಲ್ಲೆ ಎಂಬ ನಂಬಿಕೆ ಆತನಿಗೆ ಇದ್ದಿತು. ಆದರೆ ಭಗವಂತನ ಸಾನ್ನಿಧ್ಯ ದೊರಕಲು ತಾನು ಮಾಡಬೇಕಾದ ಪ್ರಯಾಣ ಬಹಳ ಇದೆಯಲ್ಲಾ ಎಂದು ಆತನ ಮನಸ್ಸು ಅಧೀರವಾಗುತ್ತಿದ್ದಿತು. ಇದರ ಕಾರಣ ಅವರು ಬಹಳ ಧನಿಕರಾಗಿದ್ದುದು ಅಲ್ಲ. ಆಸ್ತಿ ತನ್ನದು ಎಂಬ ಭಾವ ಅವರು ಬಿಟ್ಟಿದ್ದರು. ಆದರೆ ಇತರ ಸಾಧನೆಗಳು ಆಗಬೇಕಾಗಿದ್ದವು. ತಮ್ಮಲ್ಲಿದ್ದ ಎಲ್ಲಾ ಅಲ್ಪತೆಯನ್ನೂ ತೊಲಗಿಸುವುದಕ್ಕಾಗಿ ಅವರು ಗೋಸೇವೆಯ ದೊಡ್ಡ ದೀಕ್ಷೆ ತೆಗೆದು ಕೊಂಡರು. ಕಾಂಗ್ರೆಸ್ ಅಧ್ಯಕ್ಷರೂ, ಲಾರ್ಡ್ ಲೋಥಿಯರ್‌ರೂ, ಟೈ ಚಿ ಟೊ (H. E. Tai Chi Tao) ಡಾಕ್ಟರ್ ಮಾಟ್, ಈಜಿಪ್ಟ್ ರಾಯಭಾರಿಗಳು, ಇವರೆಲ್ಲಾ ಬಂದು ಉಳಿಯುತ್ತಿದ್ದ ತಮ್ಮ ಮನೆಯನ್ನು ಬಿಟ್ಟು, ಒಂದು ಗುಡಿಸಿಲಿನಲ್ಲಿ ವಾಸಿಸ ತೊಡಗಿದರು. ಅದರ ಹೆಸರು ಗೋಪುರಿ. ಅಲ್ಲಿ ನೂಲುವುದು, ದಿಲೀಪನಂತೆ ಗೋರಕ್ಷಣೆ ಮಾಡುವುದು, ತನ್ನ ಕಾರ್ಯ ಆಲೋಚನೆ ಇವುಗಳ ದಿನಚರಿ ಬರೆಯುವುದು, ಅವರ ಸ್ವಭಾವವಾಯಿತು. ಅವರು ಭಗವಂತನ ಪಾದಾರವಿಂದವನ್ನು ಸೇರಿದ ದಿನ, ನಾವು ಆ ಗುಡಿಸಲಿಗೆ ಹೋಗಿದ್ದಾಗ, ಅವರು ಅಂದಿನವರೆಗೆ ಬರೆದಿಟ್ಟಿದ ದಿನಚರಿಯನ್ನು ನೋಡಿದೆವು. ಅವರು ಬಾಳೂ ಹಾಗೆಯೇ ಪೂರ್ಣವಾಗಿ, ಕ್ರಮವಾಗಿ, ಭಗವಂತನಲ್ಲಿ ಭಯವುಳ್ಳದುದಾಗಿ, ಮುಕ್ತಾಯವಾಯಿತು. ಈ ಬಾಳನ್ನು ಅವರು ಗೋವಿಗೆ ಅರ್ಪಿಸಿದರು. ದಿಲೀಪನಿಗೆ ನಂದಿನಿ ಧೇನು ಹೇಗೋ ಹಾಗೆ ಗೋಮಾತೆ ತನಗೆ ಕಾಮಧೇನುವಾಗಲಿ ಎಂಬುದು ಅವರ ಧ್ಯೇಯವಾಗಿದ್ದಿತು. ಅವರ ಮರಣ, ಗೋಮಾತೆ ಕೊಟ್ಟ ವರವೇಯೆ ಎಂದು ಹೇಳುವುದು ಕಷ್ಟ ಇದ್ದರೂ ಇರಬಹುದು. ಯಾಕೆಂದರೆ ಅವರ ಮರಣಕ್ಕಿಂತ ಹೆಚ್ಚು ಹಿತವಾದ ಮರಣ ಬೇರೆ ಇಲ್ಲ. ಕೊನೆಯ ಗಳಿಗೆಯವರೆಗೆ ಅವರು ಗೋವು ಗೋಪುರಿ ಇವುಗಳನ್ನು ಕುರಿತೇ ಯೋಚಿಸುತ್ತಿದ್ದರು. ಕೊನೆ ಬಹುಬೇಗ ಬಂದಿತು; ಅವರು ತತ್‌ಕ್ಷಣ ಒಂದೇ ಗಳಿಗೆಯೊಳಗೆ ಆನಂದಮಯವಾದ ಶಾಂತಿಯನ್ನು ಪ್ರವೇಶಿಸಿದಂತೆ ತೋರಿತು. ಗೋಮಾತೆ ಜಮುನಾಲಾಲರ

ಕಾಮಧೇನು ಆಯಿತೋ ಇಲ್ಲವೋ, ಅದಿರಲಿ. ಜಮನಾಲಾಲರು ಮಾತ್ರ ತಮ್ಮ ತ್ಯಾಗ ಜೀವನದಿಂದ ಗಾಂಧಿಯವರ ಕಾಮಧೇನು ಆದರು. ಗಾಂಧಿಯವರು ಮೊದಲು ವಾರ್ಧಾದಲ್ಲಿ ನಿಲ್ಲುವುದಕ್ಕೂ ಅನಂತರ ಸೇವಾ ಗ್ರಾಮದಲ್ಲಿ ನಿಲ್ಲುವುದಕ್ಕೂ ಸಾಧ್ಯ ಮಾಡಿದವರು ಅವರೇ. ಅವರು ಗಾಂಧಿಯವರಿಗೂ ಹೊರಗಿನ ಪ್ರಪಂಚಕ್ಕೂ ಮಧ್ಯದ ತಂತು ಆಗಿದ್ದರು. ಅವರ ಮರಣದಿಂದ ಈ ತಂತು ಮರೆಯಾಯಿತು. ಗಾಂಧಿಯವರೂ ಹೊರಗಿನ ಪ್ರಪಂಚವೂ ಬಡವಾಯಿತು.

೨೨-೨-೧೯೪೨

---

## ೮ ಡಾಕ್ಟರ್ ಕಗಾವ ರವರ ಭೇಟಿ

"ಡಾಕ್ಟರ್ ಕಗಾವ, ನಿಮ್ಮ ಪ್ರಸಿದ್ಧಿ ನಿಮಗಿಂತ ಮುಂಚಿತವಾಗಿ ಬಂದಿದೆ" ಎಂದು ಹೇಳಿಕೊಂಡು ಗಾಂಧಿ ಕಗಾವರನ್ನು ಸ್ವೀಕರಿಸಲು ಎದ್ದರು. ಡಾಕ್ಟರ್ ಕಗಾವ ನೆಲದ ಮೇಲೆ ಮಂಡಿಯೂರಿ ನಮಸ್ಕಾರ ಮಾಡಿದರು ಗಾಂಧಿ ಕಗಾವ ಭೇಟಿಯನ್ನು ನಾವೆಲ್ಲಾ ಉತ್ಸಾಹದಿಂದ ಎದುರು ನೋಡುತ್ತಿದ್ದೆವು. ಕಾಲಸ್ಥಿತಿ ಶಾಂತವಾಗಿಲ್ಲ. ಇಲ್ಲವಾಗಿದ್ದರೆ ಗಾಂಧಿಯವರು ಕಗಾವರನ್ನೂ ಆತನ ಕಾರ್ಯಗಳನ್ನೂ ನೋಡಲು ಜಪಾನಿಗೆ ಹೋಗುತ್ತಿದ್ದರು; ಸ್ವಿಡ್ಸರ್‌ಲೆಂಡಿಗೆ ಹೋಗಿ ರೊಮೇನ್ ರೋಲಂಡ್‌ರವರನ್ನು ನೋಡಿದಂತೆ. ೧೯೩೧ರಲ್ಲಿ ದುಂಡು ಮೇಜು ಪರಿಷತ್ತಿನಿಂದ ಭಾರತಕ್ಕೆ ಬೇಗ ಹಿಂದಿರುಗಬೇಕೆಂದು ತಂತಿ ಬಾರದೆ ಇದ್ದಿದ್ದರೆ ತುರ್ಕಿಗೆ ಹೋಗಿ ಕೆಮೆಲ್ ಪಾಷಾರವರನ್ನೂ ನೋಡಿ ಕೊಂಡು ಬರುತ್ತಿದ್ದರು.

ಗಾಂಧಿಯವರ ಪ್ರಶ್ನೆಗೆ ಉತ್ತರವಾಗಿ ಡಾ|| ಕಗಾವ ರವರು "ನನಗೆ ೫೦ ವರುಷ ೬ ತಿಂಗಳು" ಎಂದು ಹೇಳಿದಾಗ ಗಾಂಧಿಯವರು - "ನನ್ನ ಮುಂದೆ ನೀವು ಹುಡುಗ" ಎಂದರು. ಆದರೆ ಎಷ್ಟು ಪೂರ್ಣವಾದ ಕೆಲಸದ ೫೦ ವರುಷಗಳು ! ಗಾಂಧಿಯವರು ಭಾರತದಲ್ಲಿ ಹೇಗೆ ಜನರಿಗೆ ಪ್ರಿಯರೋ,

ಪ್ರಸಿದ್ಧರೊ, ಹಾಗೆಯೇ ಡಾ|| ಕಗಾವ ಜಪಾನಿನಲ್ಲಿ. ಆದರೆ ಇಬ್ಬರ ಬಾಳಿ ನಲ್ಲಿಯೂ ಎಷ್ಟೊಂದು ವ್ಯತ್ಯಾಸ ! ಟೋಯೋಹಿಕೊ ಕಗಾವ ಕೋಬ್ ನಲ್ಲಿ ೧೮೮೮ ರಲ್ಲಿ ಜನಿಸಿದರು. ಅವರ ತಂದೆ ಮೊದಲು ೧೫ ಹಳ್ಳಿಗಳ ಯಜಮಾನರಾಗಿದ್ದರು. ಅನಂತರ ಸರ್ಕಾರದಲ್ಲಿ ದೊಡ್ಡ ಹುದ್ದೆಗೆ ಏರಿದರು. ಕಗಾವ ಚರಿತ್ರೆ ಬರೆದ ಮಿ. ಆಕ್ಸ್ಲಿಂಗ್ ಎಂಬುವರು, ಕಗಾವ ಅವರ ತಂದೆಗೆ ಮದುವೆಯಾದ ಹೆಂಡತಿಯಲ್ಲಿ ಹುಟ್ಟಿದವರೆಂದು ಹೇಳುತ್ತಾರೆ. ಆದರೆ ಡಾ|| ಕಗಾವ ಹೇಳುವಂತೆ "ನನ್ನ ತಾಯಿ ನಮ್ಮ ತಂದೆಯ ಎರಡನೆಯ ಹೆಂಡತಿ. ಅವಳು ನರ್ತಕಿ. ನಮ್ಮ ತಂದೆ ಸತ್ತಾಗ ನನಗೆ ವಯಸ್ಸು ನಾಲ್ಕು. ನಮ್ಮ ತಂದೆಯ ಮೊದಲನೆಯ ಹೆಂಡತಿಯೇ ನನ್ನನ್ನು ಸ್ವಂತ ಮಗನಾಗಿ ಸ್ವೀಕರಿಸಿದಳು. ನಮ್ಮ ಮನೆ ದೊಡ್ಡದಾಗಿದ್ದಿತು. ಆಳುಗಳು ಹೆಚ್ಚಾಗಿದ್ದರು. ಆದರೆ ಯಾರ ಪ್ರೀತಿಯೂ ಇಲ್ಲದೆ ದೊಡ್ಡ ಮನೆಯಲ್ಲಿರುವುದು ನನಗೆ ನರಕವಾಯಿತು. ನಮ್ಮ ಮನೆಯವರು ಧನಿಕರು. ಆದರೆ ಅವರ ಜೀವನ ಮಾರ್ಗ ನನಗೆ ಭಯಂಕರವಾಗಿ ಅಸಹ್ಯವಾಯಿತು. ನಾನು ಹಗಲು ರಾತ್ರಿ ಅತ್ತೆ." ಡಾ|| ಕಗಾವ "ಈ ಬಹು ಪತ್ನೀತ್ವ ನನ್ನನ್ನು ಕ್ರಿಸ್ತಮತಕ್ಕೆ ಓಡಿಸಿತು" ಎಂದು ನನ್ನೊಂದಿಗೆ ಹೇಳಿದರು. ನಾನು ಹೇಳಬಹುದಾದರೆ, ಬಹುಪತ್ನೀತ್ವವಲ್ಲ ಅವರನ್ನು ಓಡಿಸಲು ಕಾರಣ. ಆದರೆ ಪ್ರೇಮ ಸ್ವಲ್ಪವೂ ಇಲ್ಲದುದು. ಬುದ್ಧ ಧರ್ಮದಲ್ಲಿ ಪ್ರೇಮಕ್ಕೆ ಕೊರತೆ ಇಲ್ಲ. ಆದರೆ ಬೌದ್ಧರೆನ್ನಿಸಿ ಕೊಳುವುದರಲ್ಲಿ ಪ್ರೇಮವಿರಲಿಲ್ಲ. ಹಾಗೆಯೇ ಡಾ|| ಅಂಬೇಡ್ಕರರು ತಾವು ಹಿಂದೂ ಆಗಿ ಜನಿಸಿದವರಾದರೂ, ಹಿಂದೂಧರ್ಮದಲ್ಲಿ ಅವರಿಗೆ ಪ್ರೇಮ ದೊರೆಯಲಿಲ್ಲ. ಹಿಂದೂ ಭ್ರಾತೃಗಳನ್ನೇ ಅವರು ದ್ವೇಷಿಸ ತೊಡಗಿದರು.

ಡಾ|| ಕಗಾವ ರವರ ಬಾಲ್ಯ ಜೀವನದಲ್ಲಿ ಪ್ರೇಮವೂ ಬೆಳಕೂ ಇರ ಲಿಲ್ಲ. ಆಗ ಅವರಿಗೆ ಬೌದ್ಧಮತ ಬರಿಯ ಕರ್ಮಕಾಂಡ, ಸತ್ತವರ ಪೂಜೆ ಯಾಗಿ ತೋರಿತೇ ಹೊರತು, ಪ್ರೇಮ ಜನರ ಕರ್ತವ್ಯ ಎಂದು ಆ ಮತ ತೋರಿಸಲಿಲ್ಲ. ಅವರು ವಿದ್ಯೆ ಕಲಿತ ಪಾಠಶಾಲೆಯಲ್ಲಿ ಬೇರೆ ವಾತಾವರಣ ಇರಲಿಲ್ಲ. "ಹೈ ಸ್ಕೂಲಿನ ವಯಸ್ಕರಾದ ವಿದ್ಯಾರ್ಥಿಗಳು ಕುಡಿಯುತ್ತಿದ್ದರು. ಒಳ್ಳೆಯ ಹುಡುಗನಾಗಿರಲು ನನಗೆ ಅವಕಾಶ ತೋರಲೇ ಇಲ್ಲ." ಆ ಸಂದರ್ಭದಲ್ಲಿ, ಆತನ ಪ್ರೀತಿವಂಚಿತವಾದ ಬೆಳಕಿಲ್ಲದ ಬಾಳಿಗೆ ಒಬ್ಬ

ಅಮೆರಿಕನ್ ಪಾದ್ರಿ ಬಂದರು. ಏಸುವಿನ, ಪರ್ವತದ ಮೇಲಿನ ಬೋಧೆಯನ್ನು ಮುಂದಟ್ಟು ಮಾಡಿಕೊಳ್ಳುವಂತೆ ಹೇಳಿದರು. "ಬಯಲಿನಲ್ಲಿಯ ಲಿಲ್ಲಿ ಹೂ" ಎಂಬ ಭಾಗ ಆತನನ್ನು ಆಕರ್ಷಿಸಿತು. "ಈ ಲಿಲ್ಲಿ ಹೂವಿನಂತೆ ಇರಬಹುದಾದರೆ, ನಾನು ಒಳ್ಳೆಯ ಹುಡುಗನಾಗಿರಬಹುದೆಂದು ನನಗೆ ನಂಬಿಕೆಯಾಯಿತು. ನನ್ನ ಚಿಕ್ಕಪ್ಪ ಕ್ರಿಸ್ತಮತ ವಿರೋಧಿ. ಆತ ಒಳ್ಳೆಯ ಬೌದ್ಧ. ನನ್ನ ಕ್ರಿಸ್ತಮತವನ್ನು ನಾನು ಬಹಿರಂಗವಾಗಿ ತೋರಿಸುವಂತೆ ಇರಲಿಲ್ಲ. ಆದುದರಿಂದ ನಾನು ಹಾಸಿಗೆಯಲ್ಲಿ ಮುಸುಕು ಹಾಕಿಕೊಂಡು "ದೇವರೇ ನನ್ನನ್ನು ಒಳ್ಳೆಯವನನ್ನು ಮಾಡು ಎಂದು ಪ್ರಾರ್ಥಿಸುತ್ತಿದ್ದೆ. ನಾನು ಕೆಲವು ಪುಸ್ತಕಗಳನ್ನು ತೆಗೆದುಕೊಳ್ಳಲು ಪಾದ್ರಿಯ ಬಳಿಗೆ ಹೋದೆ. ಆತ, ನೀನು ಹೇಗೆ ದೇವರಪ್ರಾರ್ಥನೆ ಮಾಡುತ್ತೀಯಾ ಎಂದ. ನಾನು ಹಾಸಿಗೆಯಲ್ಲಿ ಎಂದು ಪ್ರತ್ಯುತ್ತರವಿತ್ತೆ. ಆತ ನಕ್ಕು ನೀನು ಹೇಡಿ ಎಂದ ಹೇಡಿ ಎಂಬ ಮಾತು ನನಗೆ ಹಿಡಿಸಲಿಲ್ಲ. ನಾನು ಚರ್ಚಿಗೆ ಹೋದೆ. ಅದೇ ಮೊದಲನೆಯ ಸಲವಾಗಿ ದೇವರನ್ನು ಚರ್ಚಿನಲ್ಲಿ ಪ್ರಾರ್ಥಿಸಿದೆ. ನನಗೆ ಜ್ಞಾನ ಸ್ನಾನವಾಯಿತು."

ವಿಶ್ವವಿದ್ಯಾನಿಲಯದ ವ್ಯಾಸಂಗ ಪೂರ್ತಿಯಾದ ಕೂಡಲೇ ಆತ, ಬಡವರ ಸೇವೆಯಲ್ಲಿ ತೊಡಗಿದ. ಆತನ ಅಭಿಪ್ರಾಯದಲ್ಲಿ ಕ್ರಿಶ್ಚಿಯನ್ ಮತ ಅದೇಯೆ. ಆತ, ದರಿದ್ರರ ಜತೆಯಲ್ಲಿ ಅವರ ಆರು ಅಡಿ ಉದ್ದ ಅಗಲದ ಕೊಠಡಿಗಳಲ್ಲಿ ವಾಸಿಸತೊಡಗಿದ. ಈ ಬಡವರ ಗುಡಿಸಲುಗಳಿಗೂ, ರಕ್ತಪಾಪಗಳಿಗೂ ವ್ಯತ್ಯಾಸವಿಲ್ಲ. ಆದರೆ ಅವನಿಗೆ ತಾನು ಖೂನಿಯಾಗುವೆನೆಂಬ ಭಯವಾಗಲಿ ಅಥವಾ ತನಗೆ ಮೇಹಜಾಡ್ಯ ಬರುವುದೆಂಬ ಭಯವಾಗಲಿ ಇರಲಿಲ್ಲ. ಹತ್ಯಾಕಾರಿಗಳನ್ನೂ ಇಂದ್ರಿಯ ಚಾಪಲ್ಯಕ್ಕೆ ಒಳಗಾದ ಸುಖಲೋಲುಪರನ್ನೂ ಆತ ಮಿತ್ರರಾಗಿ ತಿಳಿದು ಅವರ ಜತೆಯಲ್ಲಿ ಊಟ ತಿಂಡಿ, ನಿದ್ರೆ ಮಾಡುತ್ತಿದ್ದ. ಒಬ್ಬ ಕಳ್ಳ, ಒಬ್ಬ ಖೂನಿಕಾರ, ಒಬ್ಬ ಹುಚ್ಚ, ಒಬ್ಬ ಮೇಹಜಾಡ್ಯ ರೋಗಿ ಇವರ ಜತೆಯಲ್ಲಿ ದಿನಕ್ಕೆ ಹನ್ನೊಂದು ಯೆನ್ (ಜಪಾನ್ ನಾಣ್ಯ) ನಲ್ಲಿ ಜೀವಿಸುತ್ತಿದ್ದ. ಜಪಾನಿನಲ್ಲಿ ಸಹ ದಿನಕ್ಕೆ ಹನ್ನೊಂದು ಯೇನ್ ವೆಚ್ಚದಲ್ಲಿ ನಾಲ್ಕು ಜನ ಜೀವಿಸಲು ಸಾಧ್ಯವಿಲ್ಲ. "ನಾವು ಹೇಗೋ ತಿಂಡಿಶಾಸ್ತ್ರ ಮುಗಿಸಿ ದಿನಕ್ಕೆ ಎರಡೇ ಊಟ ಮಾಡುತ್ತಿದ್ದೆವು. ಅನ್ನಕ್ಕೆ ನೀರು ಸೇರಿಸುತ್ತಿದ್ದೆವು.

ಹೊಟ್ಟೆ ತುಂಬ ನೀರು ಭರ್ತಿ ಮಾಡಿಕೊಳ್ಳುತ್ತಿದ್ದೆವು. ನಾನು ಕುಡುಕರಿಗೆ ಅರ್ಧರಾತ್ರಿ ಎರಡು ಗಂಟೆಯಲ್ಲಿ ಬೋಧಿಸುತ್ತಿದ್ದೆ. ಯಾಕೆಂದರೆ ಅವರ ಬುದ್ಧಿ ಆಗಮಾತ್ರ ಅವರ ಸ್ವಾಧೀನದಲ್ಲಿರುತ್ತಿದ್ದಿತು. ನಾನು ಜೂಜು ಕೋರರಿಗೆ ಬೋಧಿಸುತ್ತಿದ್ದೆ. ಹಗಲು ರಾತ್ರಿ ಬೋಧಿಸುತ್ತಿದೆ. ಆದರೆ ಅದರ ಫಲ ಏನೂ ಆಗಲಿಲ್ಲ. ಯಾಕೆಂದರೆ ಜನ ಒಂದುಸಲ ನೀತಿಯಲ್ಲಿ ಇಳಿಮುಖರಾಗಿ ಹಳ್ಳಕ್ಕೆ ಬಿದ್ದಮೇಲೆ, ಮೇಲೇರಲು ಅವರಿಗೆ ಶಕ್ತಿ ಇರುವುದಿಲ್ಲ. ” .

ಲಂಚಕೋರರು ಆತನ ಔದಾರ್ಯ ಅಹಿಂಸೆಯು, ಉಪಯೋಗ ಪಡೆದರು. ಷರಟು ಬೇಕಾಗಿದ್ದವರಿಗೆ ಆತ ಅಂಗಿ ಶರಾಯಿ ಕೊಟ್ಟ. ಒಬ್ಬ ದುರಾಚಾರಿ ಆತನ ಮುಂದಲ ಹಲ್ಲುಗಳನ್ನು ಮುರಿದ. ಗಲ್ಲಿ ವಾಸದಿಂದ ಅವನಿಗೆ ಬಂದ ರೋಗದ ಗುರುತುಗಳು ಈಗಲೂ ಆತನ ಕಣ್ಣುಗಳಲ್ಲಿ ಕಾಣುತ್ತಿವೆ. ಹೀಗೆ ಐದು ವರ್ಷ ಗಲ್ಲಿಯ ವಾಸದ ನಂತರ ಆತ ಅಮೆರಿಕಾಕ್ಕೆ ಹೋದ. ಮನಶ್ಶಾಸ್ತ್ರವನ್ನೂ ಜೀವಶಾಸ್ತ್ರವನ್ನೂ ಪ್ರಿನ್ಸ್‌ಟನ್‌ನಲ್ಲಿ ವ್ಯಾಸಂಗ ಮಾಡಿ ಧರ್ಮಶಾಸ್ತ್ರದಲ್ಲಿ ಡಾಕ್ಟರ್ ಪ್ರಶಸ್ತಿ ಪಡೆದ. ಜಪಾನಿಗೆ ಹಿಂತಿರುಗಿದ ಮೇಲೆ ತನ್ನ ಕಾರ್ಯಕ್ರಮ ಬದಲಾಯಿಸಿ ಕೂಲಿಗಾರರ ಸಂಘಗಳನ್ನು ಸ್ಥಾಪಿಸಿದ. ಒಂದು ದೊಡ್ಡ ಕೈಗಾರಿಕಾ ಮುಷ್ಕರ ನಡೆಯಿತು. ಕಗಾವರನ್ನೂ ಇನ್ನೂ ಆತನ ಜತೆಯ ೪೫೦ ಜನರನ್ನೂ ಸರ್ಕಾರ ಬಂಧಿಸಿತು. ಕೆಲಸವಿಲ್ಲದಾಗ ಕಾರ್ಖಾನೆಯ ಕೂಲಿಯಾದವನು ಜಮೀನಿನ ಮೇಲೆ ಬಂದು ಅವಲಂಬಿಸುತ್ತಾನೆ. ಆದುದರಿಂದ . ಡಾ|| ಕಗಾವ ಹಿಂದಿರುಗಿದ ಕೂಲಿಯ ಅಂದರೆ ರೈತನ ಸ್ಥಿತಿಗತಿಗಳನ್ನು ವ್ಯಾಸಂಗ ಮಾಡಲು ಪ್ರಾರಂಭಿಸಿದರು. ಸರ್ಕಾರ ಆತನನ್ನು ಮತ್ತೆ ದಸ್ತಗಿರಿ ಮಾಡಿದರು. ಇದಕ್ಕೆ ಕಾರಣ ಆ ಕೂಲಿ ಸಂಘಗಳಿಗೆ ೧೨ ಲಕ್ಷಜನರು ಸದಸ್ಯರಾದುದೇ. ಆದರೆ ಕಗಾವ ಮಾಡಿದ ಕೆಲಸ ವ್ಯರ್ಥವಾಗಲಿಲ್ಲ. ೧೯೨೬ರಲ್ಲಿ ಅವರ ಬರಹಗಳ ಫಲವಾಗಿ ಸರ್ಕಾರ, ಜಪಾನಿನ ಆರು ದೊಡ ಪಟ್ಟಣಗಳಲ್ಲಿ ಗಲ್ಲಿಗಳನ್ನು ನಾಶಮಾಡಲು ಇಪ್ಪತ್ತು ಲಕ್ಷಪೌಂಡುಗಳನ್ನು ವೆಚ್ಚ ಮಾಡಿತು. ಆ ಆರು ನಗರಗಳಲ್ಲಿ ಈಗ ಗಲ್ಲಿಗಳು ಇಲ್ಲ.

## ಆತನ ಜ್ಞಾನ

ಡಾ|| ಕಗಾವ ಗಲ್ಲಿ ವಾಸವನ್ನು ಎದುರಿಸಬೇಕಾಗಿದ್ದಿತು. ಕೂಲಿ

ಗಾರರ ಮತ್ತು ರೈತರ ಅನೀತಿ ದಾರಿದ್ರ್ಯ ಎದುರಿಸಬೇಕಾಗಿದ್ದಿತು. ಕಗಾವರ ವಿಷಯು ಜ್ಞಾನ ಅಸಾಧಾರಣವಾದುದು. "ಜಪಾನಿನಲ್ಲಿ ಕುಡಿತಕ್ಕೆ, ಸೈನ್ಯ ಮತ್ತು ಹಡಗು ಪಡೆ ಎರಡಕ್ಕೂ ಸೇರಿ ಆಗುವುದರ ಎರಡರಷ್ಟು ಖರ್ಚು ಆಗುತ್ತದೆ, ಸರ್ಕಾರದಿಂದ ಲೈಸೆನ್ಸ್ ಪಡೆದ ಮತ್ತು ಖಾಸಗಿ ವ್ಯಭಿಚಾರದ ವೆಚ್ಚ, ವರುಷಕ್ಕೆ ಸುಮಾರು ೧೦೦ ಕೋಟಿ ಯೆನ್. ಆದರೆ ವರುಷಕ್ಕೆ ಜಪಾನಿಗಳು ಉಪಯೋಗಿಸುವ ಅಕ್ಕಿಯ ಬೆಲೆ ೧೫೦ ಕೋಟಿ ಯೆನ್‌ಗಳು. ಜಪಾನಿನಲ್ಲಿ ೧೪೦ ದೊಡ್ಡ ಪಟ್ಟಣಗಳಿವೆ. ೧೨೦೦ ನಗರಗಳಿವೆ. ಉಳಿದವು ಹಳ್ಳಿಗಳು. ಜನ ಸಂಖ್ಯೆಯ ೪೮ ಭಾಗ ಮಾತ್ರ ವ್ಯವಸಾಯ ಜೀವಿಗಳು. ಜಪಾನಿನಲ್ಲಿ ೩೦ ಲಕ್ಷ ಜನ ಮೀನು ಹಿಡಿದು ಜೀವಿಸುತ್ತಾರೆ. ಪ್ರಪಂಚದ ಜನರು ಹಿಡಿಯುವುದರಲ್ಲಿ, ಅರ್ಧಭಾಗ ಮೀನನ್ನು ಜಪಾನಿನವರು ಹಿಡಿಯುತ್ತಾರೆ. ೮೬೦೦ ಪರಸ್ಪರ ಸಹಾಯಕ ಸಂಘ ಕೋಠಿಗಳಲ್ಲಿ ಅಕ್ಕಿ ಶೇಖರಿಸುತ್ತೇವೆ. ದೇಶದ ೫೬೦೦೦೦೦ ರೈತರ ಪೈಕಿ ಶೇಕಡ ೪೦ ಜನರಿಗೆ ಜಮೀನು ಇಲ್ಲ. ರೈತರಲ್ಲಿ ಶೇಕಡ ೭೦ ಜನರು ಇತರರ ಜಮೀನು ಮಾಡುವವರು. ಶೇಕಡ ೨೮ ರೈತರು ಸ್ವಲ್ಪಸ್ವಲ್ಪ ಸ್ವಂತ ಜಮೀನುಳ್ಳವರು. ರೈತರಲ್ಲಿ ಶೇಕಡ ಇಬ್ಬರು ಮಾತ್ರ ಸುಖನಾಗಿದ್ದಾರೆ. ಜಮೀನುದಾರರ ಪೈಕಿ ಶೇಕಡ ೯೫ ಮಂದಿ ಪಟ್ಟಣಗಳಲ್ಲಿ ವಾಸಿಸುತ್ತಾರೆ. (ತಾಂಬರಂ ಸಭೆಯಲ್ಲಿ ಕಗಾವ ಕೊಟ್ಟ ಭಾಷಣ) ಜಪಾನಿನಲ್ಲಿ ೫೭೦೦೦೦೦ ರೈತರ ಸಂಸಾರಗಳಿವೆ... ಆದರೆ ಚರ್ಚಿಗೆ ಹೋಗುವವರು ೩೦೦೦೦೦ ಮಾತ್ರ" ಈ ಕೊನೆಯ ಮಾತನ್ನು ನಾನು ಅರ್ಥಶಾಸ್ತ್ರದ ಭ್ರಾತೃತ್ವ ಎಂಬ ಪುಸ್ತಕದಿಂದ ತೆಗೆದುಕೊಂಡಿದ್ದೇನೆ. ಅದು 'ಪರಸ್ಪರ' ಸಹಾಯಕ ಚಳುವಳಿಯ ಒಂದು ಸಂಕ್ಷೇಪವಾದರೂ ಪೂರ್ಣವಾದ ವರದಿ. ಇದನ್ನು ಎಲ್ಲಾ ಸಾಮಾಜಿಕ ಕೆಲಸಗಾರರೂ ವ್ಯಾಸಂಗ ಮಾಡುವುದು ಒಳ್ಳೆಯದು. ಕಗಾವ "ರಷ್ಯದ ಸಮತಾವಾದದಿಂದ, ಬಲಾತ್ಕಾರವಾದ ಪರಸ್ಪರ ಸಹಾಯಕ ಸಂಘಗಳು" ಜನಿಸಿವೆಯೆಂದು ಹೇಳುತ್ತಾರೆ. ನಮಗೆ ಬೇಕಾದುದು ಸ್ವಂತ ಇಚ್ಛೆಯ ಪರಸ್ಪರ ಸಹಾಯಕ ಸಂಘಗಳು. "ಬಂಡವಾಳಗಾರರನ್ನು ಪ್ರೀತಿಸಲು ನಮಗೆ ಕಾರಣವಿಲ್ಲ. ಆದರೆ ಅವರು ಕ್ರಿಸ್ತಧರ್ಮವಾದ ಭ್ರಾತೃತ್ವದ ಮೇಲೆ ಅವಲಂಬಿಸುವ ಸಹಾಯಕ ಸಂಘದಲ್ಲಿ ಭಾಗಿಗಳಾಗಿ ತಮ್ಮ ಜನರನ್ನು ಸೇವಿಸಲು, ಪಶ್ಚಾತ್ತಾಪ ಪಡಲು ಅವರಿಗೆ ಅವಕಾಶ ಕೊಡಬೇಕು."

## ಅವರ ಕನಸು

ಏಳು ಬಗೆಯ ಪರಸ್ಪರ ಸಹಾಯಕ ಸಂಘಗಳು ಅವಶ್ಯಕವೆಂದು ಅವರು ಹೇಳುತ್ತಾರೆ.

(೧) ಆರೋಗ್ಯ ವಿಮೆ, ಮತ್ತು ಜೀವವಿಮೆಯ ಸಹಕಾರ ಸಂಘಗಳು; (೨) ಬೆಳೆಯುವವರ ಸಹಕಾರ ಸಂಘಗಳು; (೩) ಮಾರಾಟಗಾರರ ಸಹಕಾರ ಸಂಘಗಳು; (೪) ಸಾಲಕೊಡುವ ಸಹಕಾರ ಸಂಘಗಳು; (೫) ಪರಸ್ಪರ ಸಹಾಯಕ, ಸಹಕಾರ ಸಂಘಗಳು; (೬) ಜನ ಸೇವಾ ಸಹಕಾರ ಸಂಘಗಳು; (೭) ಕೊಳ್ಳುವವರ ಸಹಕಾರ ಸಂಘಗಳು. ಈ ಏಳು ಬಗೆಯ ಭ್ರಾತೃತ್ವವೆಂದು ಅವರು ಹೇಳುತ್ತಾರೆ.

ಅವರೇ ವ್ಯವಸಾಯ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಉತ್ತರ ಜಪಾನಿನಲ್ಲಿಯೂ ದಕ್ಷಿಣ ಜಪಾನಿನಲ್ಲಿಯೂ ಎರಡು ಪ್ರಯೋಗ ಕ್ಷೇತ್ರಗಳನ್ನು ನಡೆಸುತ್ತಿದ್ದಾರೆ. ಈ ಸಂಸ್ಥೆಗಳ ಪ್ರೇರಣೆಯಿಂದ ಪ್ರತಿ ಜಿಲ್ಲೆಗಳವರೂ ವರುಷಕ್ಕೆ ೫೦೦೦೦ ವಾಲ್ ನಟ್ ಮರಗಳನ್ನೂ ಒಂದು ಲಕ್ಷ ಚೆಸ್ಟ್‌ನಟ್ ಮರಗಳನ್ನೂ ಬೆಳೆಯಲು ತೀರ್ಮಾನಿಸಿದ್ದಾರೆ.

ಪರಸ್ಪರ ಸಹಾಯಕ ತತ್ವದ ಮೇಲೂ ಕ್ರಿಸ್ತಧರ್ಮಕ್ಕೆ ಅನುಸಾರವಾದ ಪ್ರೇಮದ ಮೇಲೂ ಅವಲಂಬಿಸಿದ ರಾಜ್ಯವೇ ಅವರ ಕನಸು. ಅವರು ಸಮತಾವಾದಿ. ಆದರೆ ಬಲಾತ್ಕಾರವಾಗಿ ಬಂಡವಾಳಗಾರರಿಂದ ಕೀಳುವುದನ್ನು ಅವರು ಒಪ್ಪುವುದಿಲ್ಲ. ವ್ಯಕ್ತಿಗಳ ಆಸ್ತಿ ಕಂಡು ಹಿಡಿಯುವುದು ಅತಿ ಕಷ್ಟವಾದ ಪ್ರಶ್ನೆ; ಆಸ್ತಿಯನ್ನು ಪರಸ್ಪರ ಸಹಕಾರ ಸಂಘದ ಆಸ್ತಿಯಾಗಿ ಬದಲಾಯಿಸುವ ಮಾರ್ಗವನ್ನು ಅವರು ಯೋಚಿಸುತ್ತಿದ್ದಾರೆ ಪರಸ್ಪರ ಸಹಾಯಕ ಸಂಘಗಳಿಂದ ಜನರನ್ನು ಆಡಳಿತಕ್ಕೆ ಆರಿಸಬೇಕು. ಇದರಿಂದ ಚುನಾವಣೆಗಳ ಖರ್ಚು ಉಳಿತಾಯವಾಗುತ್ತದೆ. ಅಂತರರಾಷ್ಟ್ರ ವ್ಯಾಪಾರ, ಪರಸ್ಪರ ಸಹಾಯತತ್ವದ ಮೇಲೆಯೇ ಅವಲಂಬಿಸಿದರೆ, ಕೊನೆಗೆ ಜಗತ್ತಿಗೆ ಶಾಂತಿ ಆಗುತ್ತದೆ. ಗ್ರಂಥದಲ್ಲಿ ಆಸ್ತಿ, ಆಸ್ತಿಯ ಹಕ್ಕುದಾರಿ ಕಂದಾಯ ಖಾಸಗಿ ಆಸ್ತಿಯ ಪ್ರಮಾಣ ಇವುಗಳನ್ನು ಕುರಿತು ಒಳ್ಳೆಯ ಅಭಿಪ್ರಾಯಗಳು ಇವೆ. ಪುಸ್ತಕದ ತುಂಬ, ಸಾರ್ವಜನಿಕವಾದ ಶಿಕ್ಷಣ ಅಹಿಂಸೆಯ ಕ್ರಾಂತಿ ಇವುಗಳಿಂದ ಮಾತ್ರವೇ ಕೂಲಿಗಾರರ ಸ್ಥಿತಿ ಉತ್ತಮವಾಗುವುದೆಂಬ ತತ್ವದ ಪ್ರತಿಪಾದನೆ ಇದೆ. ಅಂತರರಾಷ್ಟ್ರ ಅಂಚೆ ವ್ಯವಸ್ಥೆ

ಯಂತೆ, ಅಂತರ ರಾಷ್ಟ್ರೀಯ ವ್ಯಾಪಾರ ಮತ್ತು ಭೂಕಂಪ, ಪ್ರವಾಹ ಸಹಾಯಕ ಸಂಸ್ಥೆಗಳು ಸ್ಥಾಪಿತವಾದರೆ ಜಗತ್ತಿಗೆ ಶಾಂತಿ. ರಾಷ್ಟ್ರಗಳು ಪೂರ್ಣವಾಗಿ ಪರಸ್ಪರ ಸಹಾಯಕ ಮನೋಭಾವವುಳ್ಳವುಗಳಾಗಬೇಕು. ಅಂತರರಾಷ್ಟ್ರ ಸಾಲದ ಬ್ಯಾಂಕ್ ಸ್ಥಾಪನೆಯಾಗಬೇಕು. ಅಂತಹ ಸಂಸ್ಥೆಗಳಿಂದ ಜಗತ್ತಿನ ಶಾಂತಿ ಸ್ಥಾಪನೆಗೆ ಅವಕಾಶವಾಗುವುದು."

ಇದು ಅವರ ಕನಸು. ಈ ಕನಸುಳ್ಳ ಅವರಿಗೆ, ಜಪಾನು ಇತರ ದೇಶಗಳನ್ನು ತನ್ನ ಕೈಗಾರಿಕಾ ಲೂಟಿಗೆ ಒಳಪಡಿಸಿಕೊಂಡಿರುವುದೂ, ಮದ್ದುಗುಂಡುಗಳನ್ನು ತಯಾರಿಸುತ್ತಿರುವುದೂ ಈ ತತ್ವಕ್ಕೆ ವಿರೋಧವೆಂಬುದು ತಿಳಿದಿದೆಯೆ ? ಅವರ ಯುದ್ಧವನ್ನು ಕುರಿತು, ಅದರಲ್ಲಿಯೂ ಇಂದಿನ ಚೀನಾ ಜಪಾನು ಯುದ್ಧ ಕುರಿತು ಅವರ ಅಭಿಪ್ರಾಯಗಳು ಸ್ಪಷ್ಟವಾಗಿಲ್ಲ. "ದೇಶದಲ್ಲಿ ಜನ ಹೆಚ್ಚಾಯಿತು. ಮಂಚೂರಿಯಾಕ್ಕೆ ಹತ್ತು ಲಕ್ಷ ಸಂಸಾರಗಳನ್ನು ಕಳುಹಿಸಬೇಕು" ಎಂದು ಸಮಾಧಾನದಿಂದ ಹೇಳುತ್ತಾರೆ ನಾನು ಹೀಗೆ ಹೇಳಿದೆ "ಆಳುವ ರಾಷ್ಟ್ರಕ್ಕೂ, ಅಧೀನ ರಾಷ್ಟ್ರಕ್ಕೂ ಹೇಗೆತಾನೆ ಪರಸ್ಪರ ಸಹಕಾರ ವ್ಯಾಪಾರ ನಡೆಯುತ್ತದೆ ? ಲೂಟಿ ಮಾಡುವ ರಾಷ್ಟ್ರಕ್ಕೂ ಆ ಲೂಟಿಗೆ ಒಳಗಾದ ರಾಷ್ಟ್ರಕ್ಕೂ ಹೇಗೆ ಸಹಕಾರ ಸಂಬಂಧ ಉಂಟಾಗುತ್ತದೆ". ಕಗಾವ ರವರು "ನಿಮ್ಮ ಮಾತನ್ನು ಒಪ್ಪಿದೆ. ನಿಮ್ಮ ಸಮಸ್ಯೆ ನಮ್ಮ ಸಮಸ್ಯೆಯಿಂದ ಬೇರೆಯಾದುದು" ಎಂದರು.

ಮತಾಂತರ ಮತಪ್ರಚಾರ ಇವುಗಳ ವಿಷಯದಲ್ಲಿ ಅವರ ಅಭಿಪ್ರಾಯ ಸ್ಪಷ್ಟ. ಎರಡನೆಯ ಜನ್ಮದಲ್ಲಿ ಅವರಿಗೆ ನಂಬಿಕೆ. ಆದರೆ ಮತಾಂತರವನ್ನು ಎಲ್ಲರೂ ಹೊಂದುವುದು ಅವರಿಗೆ ಒಪ್ಪಿಗೆಯಿಲ್ಲ. ಇದಕ್ಕಿಂತ ಹೆಚ್ಚಾಗಿ ಅವರು ಹೇಳಲಿಲ್ಲ "ಕ್ರಿಸ್ತನು ಪ್ರೇಮವನ್ನೂ ಭ್ರಾತೃತ್ವವನ್ನೂ ಬೋಧಿಸಿದ; ಬುದ್ಧ, ಕೆಟ್ಟದ್ದನ್ನು ಒಳ್ಳೆಯದರಿಂದ ಜಯಿಸಿ ಎಂಬ ಅಹಿಂಸೆಯನ್ನು ಬೋಧಿಸಿದ್ದ; ಎಂದೆ" ಆದರೆ ನಾನು ಮೊದಲು ಹೇಳಿದಂತೆ, ಅವರಿಗೆ ಕ್ರಿಸ್ತನ ಆದರ್ಶ ಬಾಳು ಮೊದಲು ಕಂಡಿತು. ಪ್ರಪಂಚದಲ್ಲಿ ಚರ್ಚ್ ಮತ್ತು ಬೈಬಲ್ ಸಾರ್ವಜನಿಕವಾಗಬೇಕೆಂಬುದು ಅವರ ಆಸೆ. ನಾನು ಕೇಳಿದೆ "ಮನುಷ್ಯ ಪ್ರೀತಿಸುತ್ತಾ, ಅಥವಾ ಬೈಬಲ್ಲಿಗೆ ಅನುಸಾರವಾಗಿ ಯಾಕೆ ಬಾಳಬಾರದು. ಇದಕ್ಕೆ ಮತಾಂತರ ಹೊಂದುವ

ಕಾರಣವೇನು ?" ಕಗಾವ ಪ್ರತ್ಯುತ್ತರ ಕೊಡಲಿಲ್ಲ. ಹೀಗೆ ಹೇಳಿದರು "ನನಗೆ ಬಲ್ಾತ್ಕಾರ ಮತಾಂತರ ಒಪ್ಪಿಗೆಯಿಲ್ಲ. ನಾನು ಬೌದ್ಧ ರೈತ ರಿಗೂ ಕೂಲಿಗಳಿಗೂ ಪರಸ್ಪರ ಸಹಾಯ ಬೋಧಿಸುವಾಗ ಮತದ ಮಾತನ್ನು ಆಡುವುದಿಲ್ಲ. ಆದರೆ ಅವರು ನನ್ನಲ್ಲಿ ಬಂದು ಮತದ ಪ್ರಸ್ತಾಪ ಮಾಡಿದರೆ ಆಗ ನಾನು ಅವರಿಗೆ ಬೈಬಲ್ ಕೊಡುತ್ತೇನೆ". ಕ್ರಿಸ್ತನ ಬೋಧನೆಗಳ ಸತ್ಯವನ್ನು ಪ್ರತಿಭಟಿಸುವವರು ಇದ್ದಾರೆಂಬುದು ಅವರಿಗೆ ಗೊತ್ತು. "ಚರ್ಚು ಜನರಲ್ಲಿ ಪ್ರೇಮವನ್ನು ತೋರಿಸುವುದಾದರೆ, ಆಗ ಅದು ಉಳಿದುಕೊಳ್ಳುವುದು ಸರಿ. ಬರಿಯ ಮತ ಮಾತ್ರವಾದರೆ ಕ್ರಿಸ್ತ ಧರ್ಮ ಜಗತ್ತನ್ನು ಉಳಿಸಲಾರದು" ಎಂದರು. ಆದರೆ ನಾವು ಮುಂದೆ ನೋಡುವಂತೆ ಈ ನಂಬಿಕೆಯನ್ನೇ ಅವರು ಪೂರ್ಣವಾಗಿ ಹಿಡಿದು ಸ್ಥಾಪಿಸಿ ಅದಕ್ಕೆ ಅಂಟಿಕೊಳ್ಳುವಂತೆ ಕಾಣುವುದಿಲ್ಲ. ನಾನು ತಿಳಿದುದು ತಪ್ಪು ಇರಬಹುದು. ಆದರೆ ನನ್ನ ನಂಬಿಕೆ ಇದು. ಬಾಲ್ಯದಲ್ಲಿ ಆತ ತನ್ನ ಜನ ರಿಂದ ಬೇರೆಯಾದ. ಈಗ ಪ್ರೇಮದ ಕಾರಣದಿಂದ, ಯಾವ ಪ್ರಶ್ನೆ ಯಲ್ಲಿಯೂ ಜನರಿಗೆ ಎದುರಾಗಿ ಹೋಗಲು ಆತನಿಗೆ ಎದೆ ಇಲ್ಲ.

ಶಾಂತಿ ತತ್ವ ಯಾಕೆ ಜಪಾನಿನಲ್ಲಿ ಪ್ರಭಾವಶಾಲಿಯಾಗಿಲ್ಲ ಎಂದು ಕೇಳಿದೆ. ಅವರು "ಈ ಯುದ್ಧ ಸಿದ್ಧತೆ ನೋಡಿ. ಮಾತನಾಡಲು ಅವಕಾಶವಿಲ್ಲ. ಬರೆಯಲು ಅವಕಾಶವಿಲ್ಲ. ೫೦ ವರುಷಕ್ಕೆ ಕಡಿಮೆ ಯಾದವರೆಲ್ಲಾ ಸೈನ್ಯಕ್ಕೆ ಸೇರಬೇಕು" ಎಂದರು. ನಾನು "ಯುದ್ಧ ಕಾರಣದಿಂದ ಮರಣವನ್ನು ಅಪ್ಪಲು ಸಾವಿರಾರು ಜನ ಸಿದ್ಧವಾಗಿದ್ದರೆ, ತಮ್ಮ ತತ್ವಗಳಿಗಾಗಿ ಮರಣವನ್ನು ಅಪ್ಪುವವರು ದೊರೆಯುವುದಿಲ್ಲವೆ ?" ಎಂದೆ. ಅವರು ಅಪನಂಬಿಕೆಯಿಂದ ನಕ್ಕರು.

ಡಾ|| ಕಗಾವರವರನ್ನು ಪೂರ್ಣವಾಗಿ ನಾನು ತಿಳಿದುಕೊಂಡೆ ನೆಂದು ಹೇಳಲಾರೆ. ತಕ್ಕಷ್ಟು ಅವಕಾಶವಿಲ್ಲದುದರಿಂದ ಅವರು ಗಾಂಧಿ ಯವರೊಂದಿಗೂ, ಯುದ್ಧವನ್ನೂ ಕುರಿತೂ ಹೆಚ್ಚು ಹೊತ್ತು ಮಾತನಾಡ ಲಿಲ್ಲ. ಪರಿಸ್ಥಿತಿಯ ಅನೇಕ ವಿಚಿತ್ರಗಳನ್ನು ಡಾ|| ಕಗಾವ ಸ್ಪಷ್ಟವಾಗಿ ಗಾಂಧಿಯವರೊಂದಿಗೆ ಚರ್ಚಿಸಬಹುದಾಗಿದ್ದಿತು. ಜಪಾನು ಇನ್ನೂ ಒಂದು ವಿಧದಲ್ಲಿ ಹಳೆಯ ಪದ್ಧತಿಯ ರಾಷ್ಟ್ರ. ಅಲ್ಲಿ ಸೈನ್ಯದ ಜಾತಿ ಗುಂಪು, ಇನ್ನೂ ಯಜಮಾನ. ಈಗ ಸ್ವಲ್ಪ ಕಾಲದಿಂದ ಈಚೆಗೆ

ಅಲ್ಲಿ ಐವರು ಮುಖ್ಯ ಮಂತ್ರಿಗಳ ಹತ್ಯೆ ಆಗಿದೆ. ಆ ದೇಶದ ಮತ್ತು ಅದರ ಸೈನ್ಯ ತತ್ವದ ಕ್ರಮಕ್ಕೆ ಈ ವರೆಗೆ ಒಳ್ಳೆಯ ಅದೃಷ್ಟವೇ ಆಗಿದೆ. ಅಂತಹ ವಾತಾವರಣದಲ್ಲಿ ಕ್ರಾಂತಿ, ಅಥವ ಮತಹೀನ ಸಾಹಿತ್ಯ ಪ್ರಚಾರ ಸುಲಭ ವಲ್ಲ. ಅಂತಹ ವಾತಾವರಣ ಸೃಷ್ಟಿಯಾಗುವುದಕ್ಕೆ, ತಕ್ಕಷ್ಟು ಪ್ರಚಾರ ಕಾರ್ಯ ನಡೆಯಬೇಕಾಗಿದೆ. ಮತ್ತು ಬೌದ್ಧಮತ ಎಂದರೆ ಏನು ಅದರ ಆಚರಣೆ ಹೇಗೆ; ಇದು ಭಾರತದಲ್ಲಿ ತಿಳಿದಂತೆ ಅಭ್ಯಾಸದಲ್ಲಿರುವಂತೆ ಆ ಜಪಾನು ಮತ್ತು ಇತರ ದೇಶಗಳಲ್ಲಿ ಇಲ್ಲ. ಈ ಕಷ್ಟಗಳಿಂದ, ಡಾ|| ಕಗಾವ ರವರ ಸ್ಥಿತಿ ತಕ್ಕಮಟ್ಟಿಗೆ ಗೊತ್ತಾಗುತ್ತದೆ. ತಮ್ಮ ತತ್ವವನ್ನು ಸ್ಪಷ್ಟಪಡಿಸಲು ಅವರಿಗಿದ್ದ ಕಷ್ಟ; ಆ ತತ್ವದ ಸ್ವಾಭಾವಿಕವಾದ ಗುರಿಗೆ ಅನುಸಾರವಾಗಿ ಬಾಳುವ ಕಷ್ಟ, ಇವೂ ಗೊತ್ತಾಗುತ್ತವೆ.

## ಗಾಂಧಿಯುವರೊಂದಿಗೆ ಸಂಭಾಷಣೆ

ಒಬ್ಬರನೊಬ್ಬರು ಅವರು ಎಮುರುಗೊಂಡುದನ್ನು ಆಗಲೇ ಹೇಳಿದೆ. ದಕ್ಷಿಣ ಇಂಡಿಯುದ ಕ್ಷಾಮ, ಫುಳೆಯ ಅಭಾವ, ಸಹಕಾರ ಚಳುವಳಿ ಇವು ಪ್ರಾರಂಭದ ಪ್ರಶ್ನೆಗಳಾದುವು. ಸಹಕಾರ ಚಳುವಳಿ ಭಾರತದಲ್ಲಿ ಅಭಿವೃದ್ಧಿಯಾಗುತ್ತಿರುವುದೇ ಎಂದು ಡಾ|| ಕಗಾವ ಕೇಳಿದರು.

ಗಾಂಧಿಯವರು "ಅಭಿವೃದ್ಧಿಯಾಗುತ್ತಿದೆ ಎಂದು ನಾನು ಹೇಳ ಲಾರೆ, ಏನೋ ನಡೆಯುತ್ತಿದೆ. ಅದನ್ನು ದೇಶದಲ್ಲಿ ಪ್ರಾರಂಭಿಸಿದವರು ಬ್ರಿಟಿಷ್ ಸರ್ಕಾರ. ಇದು ದೇಶದ ಜನರಿಂದ ಹುಟ್ಟಲಿಲ್ಲ. ಹೊರಗಿ ನವರು ಬಂದು ಹೇರಿದರು ಒಂದು ಪಡಿಯುಚ್ಚಿನ ಮಾದರಿಯಲ್ಲಿ ಅವು ಗಳ ಕೆಲಸ ನಡೆಯುತ್ತಿದೆ. ಆದುದರಿಂದ ಅವು ಕಾಲಕ್ಕೆ ಅನುಸಾರವಾಗಿ ಬೆಳೆಯುತ್ತಿಲ್ಲ. ಆದರೆ ನಿಮ್ಮಲ್ಲಿ ದೊಡ್ಡ ಸಹಕಾರ ಚಳುವಳಿ ನಡೆಯು ತ್ತಿರುವುದು ನನಗೆ ಗೊತ್ತು."

ಡಾ|| ಕಗಾವ "ಹೌದು. ನಮ್ಮ ಚಳುವಳಿ ದಿನದಿನಕ್ಕೂ ಬೆಳೆ ಯುತ್ತಿದೆ. ಬೆಳೆಯುವವರೇ ವ್ಯವಸ್ಥೆ ಮಾಡಿಕೊಂಡಿರುವ ಸಹಕಾರ ಸಂಘಗಳು ೩೫೦೦೦೦ ಇವೆ. ರಾಷ್ಟ್ರೀಯ ಆರೋಗ್ಯ ಸಹಕಾರ ಸಂಘ, ಸುಗ್ಗಿ ಸಹಕಾರ ಸಂಘ, ಧಾನ್ಯ ಸಂಗ್ರಹ ಸಹಕಾರ ಸಂಘ ಎಲ್ಲಾ ಇವೆ."

## ಚೀನಾದೊಂದಿಗೆ ಯುದ್ಧ

ಆದರೆ ಆ ಪ್ರಶ್ನೆಯಲ್ಲ ಗಾಂಧಿಯವರಿಗೆ ಉತ್ಸಾಹ ಉಂಟುಮಾಡಿ

ಧುದು. ಅವರು ಡಾ|| ಕಗಾವ ರಿಂದ ನೇರವಾಗಿ ಈ ಪ್ರಶ್ನೆಗೆ ಉತ್ತರ ಕೇಳಬಯಸಿದರು "ಚೀಣಾದೊಂದಿಗೆ ಯುದ್ಧ ಮಾಡುವುದರಲ್ಲಿ ಜಪಾನರ ಅಭಿಪ್ರಾಯವೇನು ?"

ಡಾ|| ಕಗಾವಾ ಹೀಗೆ ಹೇಳಿದರು "ನಾನು ಜಪಾನಿನಲ್ಲಿ ಜಾತಿಭ್ರಷ್ಟ. ಆದುದರಿಂದ ನನ್ನ ಅಭಿಪ್ರಾಯವಿರಲಿ. ನನ್ನ ಸ್ಥಳದಲ್ಲಿ ನೀವು ಇದ್ದರೆ ಏನು ಮಾಡುತ್ತಿದ್ದಿರಿ. ಹೇಳಿ."

"ನನ್ನ ಅಭಿಪ್ರಾಯ ಹೇಳುವುದು ಅಧಿಕಪ್ರಸಂಗವಾಗುತ್ತದೆ"

"ಇಲ್ಲ. ನೀವು ಏನು ಮಾಡುತ್ತಿದ್ದಿರಿ ಎಂದು ತಿಳಿಯಬೇಕೆಂದು ನನಗೆ ಬಹಳ ಆಸೆ."

"ನನ್ನ ಜಾತಿಭ್ರಷ್ಟ ಅಭಿಪ್ರಾಯ ಹೇಳುವೆ. ಅದಕ್ಕಾಗಿ ಬಂದೂಕದಲ್ಲಿ ಹೊಡೆದು ಕೊಂದರೆ ಸಾಯುವೆ. ನಿಮ್ಮ ಸಹಕಾರ ಸಂಘ, ಉಳಿದುವುಗಳೆಲ್ಲಾ ಒಂದು ಕಡೆ; ನಿಮ್ಮ ದೇಶದ ಗೌರವ ಮಾನ ಒಂದು ಕಡೆ. ನಿಮ್ಮ ದೇಶದ ಮಾನ ಗೌರವ ಹೋಗುತ್ತಿರುವುದು ನಿಮಗೆ ಗೊತ್ತಾದರೆ ಜಪಾನಿಗೆ ವಿರೋಧವಾಗಿ ನಿಮ್ಮ ಅಭಿಪ್ರಾಯ ಹೇಳಿ; ಆ ಮೂಲಕ, ನಿಮ್ಮ ಸಾವಿನ ಮೂಲಕ ಜಪಾನು ಬದುಕಲಿ. ಆದರೆ ಇದಕ್ಕೆ ಅಂತಃಶ್ರದ್ಧೆ ಬೇಕು. ನಿಮ್ಮ ಸ್ಥಳದಲ್ಲಿ ನಾನು ಇದ್ದರೆ, ನೀವು ಮಾಡಬೇಕೆಂದು ನಾನು ಹೇಳಿರುವುದನ್ನೆಲ್ಲಾ ನಾನು ಮಾಡುವ ಶಕ್ತಿ ನನಗೆ ಉಂಟಾಗುವುದೋ ಇಲ್ಲವೋ ಹೇಳಲಾರೆ. ಆದರೆ ನೀವು ನನ್ನ ಅಭಿಪ್ರಾಯ ಕೇಳಿದುದರಿಂದ ನಾನು ಹೇಳಿದೆ."

"ಮನಸ್ಸು ದೃಢವಾಗಿದೆ, ಆದರೆ ಸ್ನೇಹಿತರು ಬೇಡ" ಎಂದು ಹೇಳುತ್ತಿದ್ದಾರೆ.

"ಒಳ್ಳೆಯದು. ನಿಮ್ಮ ಒಳಗಿರುವ ಸ್ನೇಹಿತ ಹೀಗೆ ಮಾಡು ಎಂದು ಹೇಳುವಾಗ ಹೊರಗಿನ ಸ್ನೇಹಿತರ ಮಾತನ್ನು ಕೇಳಬೇಡಿ. ಸ್ನೇಹಿತರು ಎಷ್ಟೇ ಒಳ್ಳೆಯವರಾಗಲಿ ಒಂದೊಂದು ಸಲ ನಮ್ಮನ್ನು ಮೋಸಪಡಿಸುತ್ತಾರೆ. ಅವರು ಬೇರೆ ರೀತಿ ವಾದ ಮಾಡಲಾರರು. ಅವರು ನಿಮಗೆ 'ಬದುಕಿರು ನಿನ್ನ ಕೆಲಸ ಮಾಡು' ಎಂದು ಹೇಳುತ್ತಾರೆ. ನಾನು ಸೆರೆ ಮನೆಗೆ ಹೋಗುವ ತೀರ್ಮಾನ ಮಾಡಿದಾಗಲೂ ನನಗೂ ಹೀಗೆಯೇ ಹೇಳಿದರು. ನಾನು ಆ ಮಾತನ್ನು ಕೇಳಲಿಲ್ಲ. ಸೆರೆ ಮನೆಯ ನಾಲ್ಕು

ಗೋಡೆಯ ಒಳಗೆ ನನಗೆ ಸ್ವಾತಂತ್ರ್ಯ ಜ್ಯೋತಿ ತೋರಿತು ಸೆರೆ ಮನೆಯ ಗೋಡೆ ಒಳಗೆ ನನಗೆ ಜಗತ್ತೆಲ್ಲಾ ಕಾಣುತ್ತಿದ್ದಿತು. ಹೊರಗೆ ಅಂಧಕಾರ ವಾಗಿದ್ದಿತು. ”

ಡಾ|| ಕಗಾವ ಈ ಚರ್ಚೆ ಮುಂದುವರಿಸಲು ಹಿಂದೆಗೆದಂತೆ ತೋರಿತು. ಅದಕ್ಕೆ ಅವಶ್ಯಕತೆ ಉಳಿಯಲಿಲ್ಲ. ಅಂತಃಶ್ರದ್ಧೆ ಇದೆ. ಆದರೆ ಅದು ಫಲಕಾರಿಯಾಗಬೇಕಾದರೆ ಕಾಲ ಬರಬೇಕು. ಆದುದರಿಂದ ಅವರು ಮತ್ತೆ ತಮ್ಮ ಸಹಕಾರ ಚಳುವಳಿಗೆ ಹಿಂದಿರುಗಿದರು. ನಿಮ್ಮ ದೇಶದಲ್ಲಿ ನೀರಾವರಿ ಸಹಕಾರ ಸಂಘಗಳಿವೆಯೇ ಎಂದರು. ಆದರೆ ಗಾಂಧಿಯವರ ಮನಸ್ಸು ಬೇರೆ ಆಲೋಚನೆಗಳಿಂದ ತುಂಬಿದ್ದಿತು.

“ ನನಗೆ ಇರುವಂತೆ ತೋರುವುದಿಲ್ಲ. ಆದರೆ ನಿಮ್ಮ ದೇಶದಲ್ಲಿ ಇವೆಲ್ಲಾ ಇದೆ. ನೀವು ಅದ್ಭುತಗಳನ್ನು ಮಾಡಿದ್ದೀರಿ. ನಾವು ನಿಮ್ಮಿಂದ ಅನೇಕ, ಕಲಿಯ ಬೇಕಾದುದು ಇದೆ. ಆದರೆ ನೀವು ಹೀಗೆ ಚೀಣವನ್ನು ಜೀವದೊಂದಿಗೆ ನುಂಗುವುದನ್ನೂ, ಅದಕ್ಕೆ ವಿಷಪಾನ ಮಾಡಿಸುವುದನ್ನೂ ಇನ್ನೂ ಇತರ ಕ್ರೂರಕೃತ್ಯಗಳನ್ನು ತಿಳಿಯಲು ನನಗೆ ಹೇಗೆತಾನೆ ಸಾಧ್ಯ ? ಯುದ್ಧವೆಂದರೆ ಏನು ಎಂಬ ಪುಸ್ತಕದಲ್ಲಿ ಇವನ್ನೆಲ್ಲಾ ವಿವರಿಸಿದೆ. ಜವಹರ್‌ಲಾಲ್ ನೆಹ್ರು ಅದನ್ನು ನನಗೆ ಕೊಟ್ಟರು. ಓದುತ್ತಿದೇನೆ. ನಿಮ್ಮ ದೇಶದ ದೊಡ್ಡ ಕವಿ ಇದು ದಯೆಯ ಯುದ್ಧ, ಚೀಣಾಕ್ಕೆ ಇದು ಒಂದು ಶುಭ ಎಂದು ಹೇಳುತ್ತಾನೆ. ”

## ಗೀತೆಯ ಬೋಧೆ

ಡಾ|| ಕಗಾವ ಮತ ಧರ್ಮಗಳ ವಿದ್ಯಾರ್ಥಿ. ಗಾಂಧಿಯವರ ಅಹಿಂಸಾ ಭೋಧೆ ಭಗವದ್ಗೀತೆಗೆ ಹೇಗೆ ಅನುಸಾರವಾಗಿದೆ ಎಂದು ಕೇಳಿದ ಆತ. ಗಾಂಧಿಯವರು ಇದನ್ನು ಇಷ್ಟು ಸ್ವಲ್ಪ ಕಾಲದೊಳಗೆ ಚರ್ಚಿಸಲು ಸಾಧ್ಯವಿಲ್ಲ. ಆದರೆ ಗೀತೆಗೆ ನಾನು ಬರೆದ ನನ್ನ ಪ್ರಸ್ತಾವನೆ ನೋಡಿ. ಅದರಲ್ಲಿ ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಈ ಉತ್ತರ ನನಗೆ ನನ್ನ ಅನುಭವದಿಂದ ದೊರೆತಿದೆ. ಬಲವಂತವಾಗಿ ಕಂಡುಹಿಡಿದ ಉತ್ತರವಲ್ಲ.

ಡಾ || ಕಗಾವ :—ನೀವು ನಿತ್ಯ ಗೀತೆಯನ್ನು ಪಠಿಸುವಿರೆಂದು ಕೇಳಿದೆ.

ಗಾಂಧಿ:—ಹೌದು ನಾವು ಪ್ರತಿವಾರವೂ ಒಂದುಸಲ ಗೀತೆ ಪೂರೈಸುತ್ತೇವೆ.

ಡಾ॥ ಕಾಗವ:—ಆದರೆ ಗೀತೆಯ ಕೊನೆಯಲ್ಲಿ ಕೃಷ್ಣ ಹಿಂಸೆಯನ್ನು ಪ್ರತಿಪಾದಿಸುತ್ತಾನೆ.

ಗಾಂಧಿ: —ನಾನು ಹಾಗೆ ಯೋಚಿಸುವುದಿಲ್ಲ. ನಾನೂ ಕಾದುತ್ತಿದ್ದೇನೆ. ಹಿಂಸಾ ಮಾರ್ಗದಲ್ಲಿ ಕಾದಿದರೆ ನನ್ನ ಯುದ್ಧ ಫಲಕಾರಿಯಾಗುವುದಿಲ್ಲ. ಎರಡನೆಯ ಅಧ್ಯಾಯದಲ್ಲಿ ಗೀತೆಯ ಉಪದೇಶ ಇದೆ. ಅಲ್ಲಿ ಕೃಷ್ಣ ಸ್ಥಿತಪ್ರಜ್ಞನ ಲಕ್ಷಣ ಹೇಳುತ್ತಾನೆ. ಎರಡನೆಯ ಅಧ್ಯಾಯದ ಕೊನೆಯ ೧೯ ಶ್ಲೋಕದಲ್ಲಿ ಈ ಸ್ಥಿತಪ್ರಜ್ಞತ್ವವನ್ನು ಹೇಗೆ ಹೊಂದಬಹುದೆಂಬುದನ್ನು ಹೇಳುತ್ತಾನೆ. ಕಾಮ ಕ್ರೋಧ ಆಸೆಗಳನ್ನೆಲ್ಲಾ ಅಡಗಿಸುವುದರಿಂದ ಮಾತ್ರ ಇದು ಸಾಧ್ಯ ನಿಮ್ಮ ಆಸೆಗಳನ್ನೆಲ್ಲಾ ಕೊಂದಮೇಲೆ ಇನ್ನು ನಿಮ್ಮ ತಮ್ಮನನ್ನು ಕೊಲ್ಲುವುದು ಹೇಗೆ? ಕಾಮುಗಳಿಲ್ಲದ ಮನುಷ್ಯ ಕೊಲ್ಲುವುದಿಲ್ಲ. ಆಸೆಗಳಿಲ್ಲದೆ ಸುಖದುಃಖಗಳನ್ನು ಸಮಾನವಾಗಿ ತಿಳಿದ ಮನುಷ್ಯನ ಮನಸ್ಸು, ಇತರ ಮನಸ್ಸಿನಂತೆ ವಿಚಲಿತವಾಗುವುದಿಲ್ಲ. ಇದನ್ನು ವಿವರಿಸಿರುವ ಭಾಷೆ ಅತಿ ಸುಂದರ. ಈ ಶ್ಲೋಕಗಳಿಂದ ಕೃಷ್ಣ ಹೇಳುವ ಹೋರಾಟ ಆತ್ಮದ ಹೋರಾಟ ಎಂದು ಗೊತ್ತಾಗುತ್ತದೆ.

ಡಾ॥ ಕಗಾವ:—ಆದರೆ ಕುರುಕ್ಷೇತ್ರದಲ್ಲಿ ನಿಜವಾಗಿ ಯುದ್ಧ ನಡೆಯಿತು. ನಿಮ್ಮ ಅರ್ಥ ನಿಮ್ಮ ಸ್ವಂತವಾದ ವಿಚಿತ್ರವಾದ ಅರ್ಥ.

ಗಾಂಧಿ:—ಇದು ನನ್ನದಾಗಿರಬಹುದು. ಆದರೆ ನನ್ನದಕ್ಕೆ ಬೆಲೆ ಇಲ್ಲ.

ಡಾ॥ ಕಗಾವ:—ಸಾಮಾನ್ಯರಿಗೆ ಅದು ನಿಜವಾದ ಹೋರಾಟವಾಗಿ ಕಾಣುತ್ತದೆ.

ಗಾಂಧಿ:—ನೀವು ಗೀತೆಯನ್ನು ಪೂರ್ತಿ ಸಾವಧಾನವಾಗಿ ಓದಬೇಕು; ಅದರ ನಿಜವಾದ ಸಂದರ್ಭ ಅರಿಯಬೇಕು. ಮೊದಲು ಯುದ್ಧದ ಮಾತು ಇದೆ. ಅನಂತರ ಇಲ್ಲವೇ ಇಲ್ಲ. ಉಳಿದುದೆಲ್ಲಾ ಅಧ್ಯಾತ್ಮ ಬೋಧೆ.

ಡಾ॥ ಕಗಾವ:—ನಿಮ್ಮಂತೆ ಮತ್ತೆ ಯಾರಾದರೂ ಇದಕ್ಕೆ ಈ ಅರ್ಥ ಹೇಳುತ್ತಾರೆಯೇ?

ಗಾಂಧಿ:—ಹೌದು, ಹೋರಾಟ ಇದೆ. ಆದರೆ ನಮ್ಮೊಳಗೆ ನಡೆಯು

ತ್ತಿರುವ ಹೊರಾಟ. ಪಾಂಡವರು ಕೌರವರು ನಮ್ಮಲ್ಲಿರುವ ಸಾತ್ವಿಕ ತಾಮಸ ಸ್ವಭಾವಗಳು. ಮನುಷ್ಯನ ಹೃದಯದಲ್ಲಿ ಸತ್ಯ ಅಸತ್ಯಕ್ಕೆ, ದೇವರಿಗೂ ರಾಕ್ಷಸರಿಗೂ ನಡೆಯುತ್ತಿರುವ ಹೋರಾಟವೇ, ಹೋರಾಟ. ಈ ಅರ್ಥಕ್ಕೆ ಸಾಕ್ಷ್ಯ ಗೀತೆಯಲ್ಲಿಯೂ ಮಹಾಭಾರತದಲ್ಲಿಯೂ ಇದೆ. ಮಹಾಭಾರತ ಎರಡು ಸಂಸಾರಗಳ ಯುದ್ಧವಲ್ಲ. ಇದು ಮನುಷ್ಯನ ಇತಿಹಾಸ. ಮನುಷ್ಯನಲ್ಲಿಯ ಆಧ್ಯಾತ್ಮ ಹೋರಾಟದ ಇತಿಹಾಸ. ಹೀಗೆ ನಾನು ಅರ್ಥ ಹೇಳಲು ನನಗೆ ಸರಿಯಾದ ಆಧಾರವುಂಟು.

ಡಾ|| ಕಗಾವ:—ಆದುದರಿಂದಲೇ ಇದು ನಿಮ್ಮ ಅರ್ಥ ಎಂದು ನಾನು ಹೇಳುವುದು.

ಗಾಂಧಿ:—ಇರಬಹುದು. ಪ್ರಶ್ನೆ ಇದು. ಅದು ನ್ಯಾಯವಾದ ಅರ್ಥವೇ? ಆ ಅರ್ಥ ನಮ್ಮ ಹೃದಯವನ್ನು ಮುಟ್ಟುತ್ತದೆಯೇ? ಮುಟ್ಟುವುದಾದರೆ ಸರಿ. ಅರ್ಥ ನನ್ನದಾದರೇನು? ಇತರರದಾದರೇನು? ಮನಸ್ಸನ್ನು ಮುಟ್ಟದಿದ್ದಲ್ಲಿ ಆ ಅರ್ಥ ನನ್ನದಾದರೂ ಅದಕ್ಕೆ ಬೆಲೆ ಇಲ್ಲ.

ಡಾ|| ಕಗಾವ:—ನನಗೆ ಅರ್ಜುನನ ಅಭಿಪ್ರಾಯ ಅದ್ಭುತವಾಗಿ ತೋರುತ್ತದೆ. ಕೃಷ್ಣ ಏನೋ ಒಂದು ಸಬೂಬು ಸಮಜಾಯಿಶಿ ಹೇಳುತ್ತಾನೆ. ಆದರೆ ಕ್ರಿಸ್ತ ಧರ್ಮಕ್ಕೆ ಮುಂಚಿತವಾಗಿ ಅದು ಆವಶ್ಯಕವಾಗಿದ್ದಿತು.

ಗಾಂಧಿ:—ಚರಿತ್ರೆಯ ದೃಷ್ಟಿಯಿಂದಲೂ ನಿಮ್ಮ ಅರ್ಥ ತಪ್ಪು. ಬುದ್ಧನು, ಏಸುವಿಗಿಂತ ಬಹಳಕಾಲದ ಹಿಂದೆ ಇದ್ದನು. ಅವನು ಬೋಧಿಸಿದುದು ಅಹಿಂಸೆಯ ಧರ್ಮ.

ಡಾ|| ಕಗಾವ:—ನನಗೆ ಅರ್ಜುನನ ಅಭಿಪ್ರಾಯಗಳು ಕೃಷ್ಣನ ಅಭಿಪ್ರಾಯಗಳಿಗಿಂತ ಹೆಚ್ಚು ಉತ್ತಮವಾಗಿ ತೋರುತ್ತವೆ.

ಗಾಂಧಿ:—ಅಂದರೆ ನಿಮ್ಮ ಅಭಿಪ್ರಾಯದಲ್ಲಿ ಗುರುವಿಗಿಂತ ಶಿಷ್ಯನೇ ದೊಡ್ಡವನು ಎಂದಂತೆ ಆಯಿತು.

ಡಾ|| ಕಗಾವ:—ಆದರೆ ನೀವು ಹೇಳುವುದನ್ನು ನಾನು ಒಪ್ಪುತ್ತೇನೆ. ನಿಮ್ಮ ಅಹಿಂಸಾ ಬೋಧೆ ಒಪ್ಪುತ್ತೇನೆ. ನಿಮ್ಮ ಅರ್ಥ ಮನಸ್ಸಿನಲ್ಲಿಟ್ಟುಕೊಂಡು ಮತ್ತೆ ಗೀತೆಯ ಅಭ್ಯಾಸ ಮಾಡುತ್ತೇನೆ.

ಡಾ|| ಕಗಾವ ಅನಂತರ ಪ್ರಶ್ನೊಂದಿಗೆ " ಅರ್ಜುನನ ಅಭಿಪ್ರಾಯವೇ

ಸರಿ. ಕೃಷ್ಣನ ಬೋಧೆ ನನಗೆ ಒಪ್ಪಿಗೆಯಾಗದುದರಿಂದಲೇ ನಾನು ಬೈಬಲ್ ಬೋಧೆ ಅತ್ಯುತ್ತಮವೆಂದು ಅದನ್ನು ಹಿಡಿದೆ" ಎಂದರು. ಆದರೆ ನಾನು ಕೃಷ್ಣನ ಬೋಧೆಯನ್ನು ಅವರಿಗೆ ವಿವರಿಸಲು ಪ್ರಯತ್ನಿಸಿದಾಗ ಅವರು ಜಪಾನು ಸೈನಿಕರೂ ಸಹ ದ್ವೇಷವಿಲ್ಲದೆಯೇ ಕಾದುತ್ತಿದ್ದಾರೆ ಎಂದರು. ನಾನು "ಹಿಂದೂ ಸಂಸ್ಕೃತಿಯ ಮೂಲ ಅಹಿಂಸೆಯಲ್ಲಿದೆ. ಗೀತೆಯ ಕಾಲಕ್ಕಿಂತ ಮುಂಚೆ, ಬುದ್ಧನ ಕಾಲಕ್ಕಿಂತ ಮುಂಚೆ ಋಷಿಗಳು ಇದನ್ನು ಬೋಧಿಸಿದ್ದರು. ಬುದ್ಧ ತನ್ನ ಸಂದೇಶವನ್ನು ಉಪನಿಷತ್ತಿನಿಂದ ತೆಗೆದುಕೊಂಡ. ಕೃಷ್ಣ ಅದನ್ನು ಸುಂದರವಾದ ಗಾನ ನಾಟಕ ಸನ್ನಿವೇಶದಲ್ಲಿ ಚಿತ್ರಿಸಿದ" ಎಂದೆ ಡಾ|| ಕಗಾವ ಉಪನಿಷತ್ತುಗಳನ್ನು "ಪೂರ್ವದೇಶದ ಪವಿತ್ರ ಗ್ರಂಥಗಳ ಮಾಲೆಯಲ್ಲಿ" ಓದಿದ್ದರು. ಆದರೆ ಅವುಗಳಲ್ಲಿ ಅಹಿಂಸಾ ಬೋಧೆ ಇದೆಯೇ ಎಂಬುದು ಅವರ ಸಂಶಯ. ನಾನು ಅವರಿಗೆ ನೀವು ಉಪನಿಷತ್ತುಗಳನ್ನು ಮತ್ತೆ ಓದಿ ಎಂದೆ.

## ಏನನ್ನು ಬದಲಾಯಿಸಬೇಕು ?

ಡಾ|| ಕಗಾವ ಮತ್ತೆ ತಮ್ಮ ಪ್ರಿಯವಾದ ವಿಷಯಕ್ಕೆ ಹಿಂದಿರುಗಿದರು. ಕ್ಷಾಮ ನಿವಾರಣೆಯ ವಿಧ ಅವರು ಹೇಳುವುದು ಕೇಳುವುದಕ್ಕೇ ಆನಂದವಾಗಿದೆ. ಡಾ|| ಕಗಾವ "ನಮ್ಮಲ್ಲಿ ಪ್ರತಿ -ಹತ್ತು ವರುಷಕ್ಕೆ ಒಂದುಸಲ ಕ್ಷಾಮ ಬರುತ್ತೆ" ಎಂದರು. ಗಾಂಧಿಯವರು "ನಮಗೆ ಪ್ರತಿ ವರುಷವೂ ಬರುತ್ತೆ ಅದು ನಮ್ಮ ಶಾಶ್ವತ ಮಿತ್ರ" ಎಂದರು. ಡಾ|| ಕಗಾವ "ಹಾಗಾದ ಮೇಲೆ ನೀವು ಇನ್ನೂ ಹೆಚ್ಚಾಗಿ ಮರಗಳನ್ನು ಬೆಳೆಸಬೇಕು. ಮರ ಬೆಳೆಸುವ ವಿದ್ಯೆ ನಿಮ್ಮಲ್ಲಿ ಹೆಚ್ಚು ಪ್ರಚಾರವಾಗಬೇಕು. ಸೌದೆಗೆ ಮರ, ದನಕರುಗಳಿಗೆ ಮೇವು ಹೆಚ್ಚಾಗಬೇಕು. ಅಕ್ಕಿ ಬಾರ್ಲಿ ಸಾಲದು. ಪುಷ್ಟಿಯಾದ ಆಹಾರ ಕೊಡುವ ಮರಗಳನ್ನು ಬೆಳೆಸಬೇಕು.—ಚೀಣಾದಲ್ಲಿರುವ "ಲೆಗುಮೆ" ಜಾತಿ ಮರವನ್ನು ಕುರಿತು ಅವರು ಹೇಳಿದರು—ನಮಲ್ಲಿ ಬಾಬುಲ್ ಮತ್ತು ಮಿಮೊಸ ಮರದಿಂದ ಸೌದೆ, ದನದ ಮೇವು ಎರಡೂ ದೊರೆಯುತ್ತವೆ—ಅವರು ಹವಾಯ್ ದ್ವೀಪದಲ್ಲಿರುವ ಕಿವೇವ್ ಅಥವ ಕಿಂಗ್ ಮರ ಎಂಬುದನ್ನೂ ಕುರಿತು ಹೇಳಿದರು.—ಈ ಮರ ವರುಷಕ್ಕೆ ಮೂರುಸಲ ಹೂವುಬಿಡುತ್ತದೆ. ಒಂದು ಮರದಲ್ಲಿ ನೂರು

ಮೂಟೆ ಬೀಜ ದೊರಕುತ್ತದೆ. ಇದು ವರುಷಕ್ಕೆ ೨೫ ಕುದುರೆಗಳಿಗೆ ಆಹಾರವಾಗುತ್ತದೆ. ಇವು ಯಾವ ಮಣ್ಣಿನಲ್ಲಿ ಬೇಕಾದರೂ ಬೆಳೆಯುತ್ತವೆ. ಹಣ್ಣಿಗೆ ಬರಲು ಆರು ವರುಷ ಹಿಡಿಯುತ್ತದೆ. ಹೀಗೆ ಪ್ರಾಣಿಗಳಿಗೆ ಮೇವು ಸಿದ್ಧವಾದ ಮೇಲೆ ರೈತ ಹೆಚ್ಚಾಗಿ ಆಡುಗಳನ್ನು ಇಟ್ಟುಕೊಳ್ಳಬೇಕು. ಜಪಾನರು ತಮ್ಮ ದೇಶದಲ್ಲಿ ಎರಡು ಬಗೆಯ ಕುರಿಗಳನ್ನು ಪ್ರಚಾರಕ್ಕೆ ತಂದಿದ್ದಾರೆ. ಇವು ಸ್ವೀಡನ್ ದೇಶದವು. ಇವುಗಳಲ್ಲಿ ತುಪಟ ಹೆಚ್ಚು. ಹಾಲನ್ನು ಬೇಕಾದಂತೆ ಕೊಡುತ್ತವೆ. ಗರಿಕೆ ಹುಲ್ಲು ತಿಂದು ಜೀವಿಸುತ್ತವೆ. ಮಂಗೋಲಿಯದಲ್ಲಿ ರೈತರು ಕ್ಷಾಮ ಕಾಲದಲ್ಲಿ ಆಡು ಕುರಿಗಳ ಹಾಲು ಮೊಸರು ಕೆನೆ ಸೇವಿಸುತ್ತಾರೆ. ಭಾರತದವರೂ ಹಾಗೆಯೇ ಮಾಡಬೇಕು. ನಿಮಗೆ ಬೇಕಾದುದು ವ್ಯವಸಾಯದಲ್ಲಿ ಬದಲಾವಣೆ."

ಗಾಂಧಿಯವರು ನಗುತ್ತಾ "ಅಲ್ಲ. ಸರ್ಕಾರದ ಬದಲಾವಣೆ" ಎಂದರು

ಡಾ|| ಕಗಾವ ಅದೇ ಸಾಯಂಕಾಲ ಬೊಂಬಾಯಿಗೆ ಹೊರಡುವವರಾಗಿದ್ದರು. ಅವರಿಗೆ ಹೆಚ್ಚು ಹೊತ್ತು ನಿಲ್ಲಲು ಅವಕಾಶವಿಲ್ಲದುದು ವಿಷಾದ. ಮುಖ್ಯಪ್ರಶ್ನೆಗಳು ಮುಗಿದಮೇಲೆ ಗಾಂಧಿಯವರು "ನಾವು ಕೆಲವು ಗಂಟೆಗಳಲ್ಲ.. ಕೆಲವು ದಿನಗಳು ಒಟ್ಟಾಗಿ ಇರಬೇಕಾಗಿದ್ದಿತು" ಎಂದರು. ಕಗಾವ ಅಹಿಂಸಾವಾದಿ "ಹಾಗೆ ಶಾಂತವಾಗಿ ವಿರಾಮವಾಗಿರುವುದು ನನ್ನ ದೃಷ್ಟಿಯಲ್ಲಿ ಬಾಳಿನ ಗುರಿ. ಅದೇ ಮನುಷ್ಯನ ಮಾರ್ಗ. ಹೀಗೆ ಅಶಾಂತಿಯಿಂದ ಓಡುವುದು ಪಿಶಾಚಿಯ ಮಾರ್ಗ" ಎಂದರು. ಅದು ನಿಜವಾಗಿದ್ದಿದ್ದರೆ ಡಾ|| ಕಗಾವ ಹಾಗೆ ಅಮೆರಿಕದವರಂತೆ ಓಡುತ್ತಿರಲಿಲ್ಲ. ತಮ್ಮ ಸಹಕಾರ ತತ್ವದ ವಿಸ್ತಾರವಾದ ಚರ್ಚೆಗಾಗಿ ಯಾದರೂ ಅವರು ಭಾರತದ ಮುಖಂಡರ ಜತೆ ಹೆಚ್ಚುಕಾಲ ಇರಬಹುದಾಗಿದ್ದಿತು. ಆದರೆ ಗಾಂಧಿಯವರು ಬೇರೆ ದೃಷ್ಟಿಯಿಂದ ಅವರನ್ನು ಆಕರ್ಶಿಸ ತೊಡಗಿದರು. ಅವರು "ಶಾಂತಿನಿಕೇತನವನ್ನು ನೋಡದೆ ನೀವು ಭಾರತ ಹೇಗೆ ಬಿಡಬಲ್ಲಿರಿ" ಎಂದರು.

ಡಾ|| ಕಗಾವ "ನಾನು ಕವಿಯ ಕೃತಿಗಳನ್ನು ನೋಡಿದ್ದೇನೆ, ಅವರನ್ನು ಪ್ರೀತಿಸುತ್ತೇನೆ"

ಗಾಂಧಿ:—ಆದರೆ ನೀವು ಕವಿಯನ್ನು ಪ್ರೀತಿಸಬೇಕಲ್ಲ.

ಡಾ|| ಕಗಾವ—“ನಿತ್ಯ ನಾನು ಗೀತಾಂಜಲಿಯನ್ನು ಉಚ್ಚರಿಸಿದರೆ, ಎದುರಿಗೆ ಕವಿ ಕಾಣುತ್ತಾರೆ. ನಾನು ನಿತ್ಯ ಕವಿಯನ್ನು ಕಾಣುತ್ತೇನೆ. ಅವರನ್ನು ನಾನು ಪ್ರೀತಿಸುವುದಿಲ್ಲವೆ? ಅವರು ತಮ್ಮ ಕೃತಿಗಳಿಗಿಂತ ದೊಡ್ಡವರಾಗಿರಬಹುದು ಎಂಬುದನ್ನು ಒಪ್ಪುತ್ತೇನೆ.”

ಗಾಂಧಿ:—ಕೆಲವು ವೇಳೆ ಅದರ ವಿರೋಧ, ಸತ್ಯವಾಗಿರುತ್ತದೆ. ಆದರೆ ಕವಿಯ ವಿಷಯದಲ್ಲಿ, ಕವಿ ತನ್ನ ಕೃತಿಗಳಿಗಿಂತ ಹಿರಿಯ. ಇನ್ನೊಂದು ಪ್ರಶ್ನೆ. ನಿಮ್ಮ ಕಾರ್ಯಕ್ರಮದಲ್ಲಿ ಪಾಂಡಿಚೇರಿ ಸೇರಿಸಿದ್ದೀರಾ? ಆಧುನಿಕ ಭಾರತವನ್ನು ತಿಳಿಯಬೇಕಾದರೆ ಶಾಂತಿನಿಕೇತನ ಮತ್ತು ಅರವಿಂದ ಘೋಷರ ಆಶ್ರಮ ನೋಡಲೇಬೇಕು. ನಿಮ್ಮ ಸಲಹೆಗಾರರು ಯಾರೋ ಕಾಣೆ. ನನ್ನನ್ನು ಈ ಭಾಗದಲ್ಲಿ ನಿಮ್ಮ ಸಲಹೆಗಾರರನ್ನಾಗಿ ಮಾಡಿ ಕೊಳ್ಳಬೇಕಾಗಿದ್ದಿತೆಂದು ನನ್ನ ಆಸೆ.

ಡಾ|| ಕಗಾವ ನಗುತ್ತಾ “ಬೇಡ. ನೀವು ಬಾಳಿಗೆ ಒಳ್ಳೆಯ ಮಾರ್ಗ ದರ್ಶಕರು” ಎಂದರು.

“ನೀವು ಇನ್ನು ಯಾವ ಇತರ ಪುಸ್ತಕ ನಿತ್ಯ ಓದುತ್ತೀರಿ” ಎಂದು ಡಾ|| ಕಗಾವ ಕೇಳಿದರು. ಗಾಂಧಿಯವರು ರಾಮಾಯಣದ ಹೆಸರನ್ನು ಹೇಳಿದರು. “ಇದರಲ್ಲಿಯೂ ಬೇಕಾದಷ್ಟು ಶಿಡಿಲು ಗುಡುಗು ರಕ್ತ ಇದೆ ಎನ್ನುತ್ತಾರೆ ಆದರೆ ಅವು ನನಗೆ ಅಲ್ಲ” ಎಂದರು. ಡಾ|| ಕಗಾವ “ಸೀತೆಯ ಪಾತಿವ್ರತ್ಯ ಅದ್ಭುತ. ನಾನು ರಾಮಾಯಣವನ್ನು ಪ್ರೀತಿಸು ತ್ತೇನೆ” ಎಂದರು. ಗಾಂಧಿಯವರು “ಆ ಅದ್ಭುತ ಕಾವ್ಯದಲ್ಲಿ ಇನ್ನೂ ಅನೇಕ ಸೌಂದರ್ಯಗಳಿವೆ; ನಾನು ಮೂಲ ಓದಿಲ್ಲ. ಅದು ಅದ್ಭುತ ಕಾವ್ಯ. ಭಕ್ತ ತುಲಸೀದಾಸ ಹಿಂದಿಗೆ ಮಾಡಿರುವ ರಾಮಾಯಣ, ಭಾರ ತದ ಸಾಮಾನ್ಯ ಜನರ ವೇದ. ಉತ್ತರ ಭಾರತದಲ್ಲಿ ತುಲಸೀ ರಾಮಾ ಯಣ ಅನೇಕ ಶತಮಾನಗಳಿಂದ ಜನರಿಗೆ ಸ್ಫೂರ್ತಿದಾಯಕವಾಗಿದೆ” ಎಂದರು.

ಡಾ|| ಕಗಾವ, ಶಂಕರಾಚಾರ್ಯ ರಾಮಾನುಜಾಚಾರ್ಯರ ಪ್ರಸ್ತಾಪ ಮಾಡಿದರು. ಶಂಕರಾಚಾರ್ಯರ ಅದ್ಭುತ ತರ್ಕ, ಜ್ಞಾನವನ್ನು ಗಾಂಧಿ ಪ್ರಶಂಸಿಸಿದರು. ಗಾಂಧಿಯವರು ಮತ್ತೆ ಡಾ|| ಕಗಾವರವರ ಪ್ರಯಾಣ

ಕಾರ್ಯದ ಕಡೆ ಹೊರಳಿದರು. ನಿಮ್ಮ ಸಂಚಾರ ವ್ಯವಸ್ಥಾಪಕರಾದ ರೆವರೆಂಡ್ ಹಾಡ್ಜ್‌ರವರು ನನ್ನಲ್ಲಿ ಪಕ್ಷಪಾತದಿಂದ, ಬರಡೋಲಿ ಸೇರಿಸಿ ಶಾಂತಿನಿಕೇತನ ಬಿಟ್ಟಿದ್ದಾರೆಂದರು. ನೀವು ಕಲ್ಕತಾಕ್ಕೆ ಹೋಗುತ್ತೀರಿ. ಆದರೆ ಶಾಂತಿನಿಕೇತನಕ್ಕಲ್ಲ! ಇದು ವಿಷಾದ. ಗೋಸಾಬವಿಗೆ ಹೋಗು ವುದಾಗಿ ಹೇಳುತ್ತೀರಿ. ಸರಿ. ಗೋಸಾಬ, ಗೋಸಾಬವೇ. ಆದರೆ ಶಾಂತಿನಿಕೇತನವೇ ಭಾರತ.

ಭೇಟಿಯ ಕೊನೆಯಲ್ಲಿ "ನಿಮ್ಮ ಸಂಚಾರ ಕಾರ್ಯಕ್ರಮ ಸ್ವಲ್ಪ ಬದ ಲಾಯಿಸಿ" ಎಂದು ಡಾ|| ಕಗಾವರವರಿಗೆ ಹೇಳಿದೆವು. ಅವರು ಕಲ್ಕತ್ತದಲ್ಲಿ ಸಿರಾಂಪುರ್ ಕಾಲೇಜ್ ಮತ್ತು ಗೋಸಾಬದಲ್ಲಿ ಸರ್ ಡೇನಿಯಲ್ ಹಾಮಿ ಲ್‌ಟನ್‌ರ ಜಮೀನ್‌ದಾರಿ ನೋಡಲು ೬ ದಿನ ನಿಲ್ಲುವವರಾಗಿದ್ದರು. ಶಾಂತಿನಿಕೇತನಕ್ಕೆ ಒಂದು ದಿನ ಯಾಕೆ ಕೊಡಬಾರದು? ಉಳಿದ ಸ್ಥಳ ಬಿಟ್ಟು ಗಾಂಧಿಯವರೊಂದಿಗೆ ಯಾಕೆ ಇನ್ನು ಹೆಚ್ಚುದಿನ ನಿಲ್ಲಬಾರದು? ಆದರೆ ಅವರ ಕಾರ್ಯಕ್ರಮವು—ಅಧಿಕಾರಿಗಳಿಂದ ಅಥವ ಗುಮಾಸ್ತರಿಂದ ಶೀರ್ಮಾನವಾಗಿದ್ದಿತು. ಅವರ ಸಲಹೆಗಾರರು, ಅವರಿಗೂ ಭಾರತಕ್ಕೂ ಅನ್ಯಾಯ ಮಾಡಿದರೆಂಬ ಭಾವ, ದುಃಖದಿಂದ ನಮ್ಮ ಮನಸ್ಸನ್ನು ಆವರಿಸಿತು.

೨೧-೧-೧೯೩೯

---

## ೯. ಶ್ರದ್ಧೆ, ನಂಬಿಕೆಗೆ ಸಂಚಕಾರ

ನಾನು ಕಳೆದ ಕೆಲವು ವಾರಗಳಲ್ಲಿ ಅನೇಕ ವಿದ್ಯಾರ್ಥಿಗಳೊಂದಿಗೆ ಮಾತು ಕತೆ ನಡೆಸಿದೆ. ಇಂದಿನ ವಿದ್ಯಾರ್ಥಿ, ಒಂದು ತಲೆ ಮಾರಿನ ಹಿಂದಲ ವಿದ್ಯಾರ್ಥಿಗಿಂತ ಹೆಚ್ಚು ಉತ್ಸಾಹಿ; ಪ್ರಪಂಚದ ಆಗು ಹೋಗುಗಳಲ್ಲಿ ಹೆಚ್ಚು ಕುತೂಹಲ ತೋರಿಸುತ್ತಾನೆ. ಇದು ನಿಜವಾದರೂ, ವಿದ್ಯಾರ್ಥಿಗಳು ಸರಿ ಯಾಗಿ ವಿಷಯ ಸಂಗ್ರಹ ಮಾಡದೆ ಅರ್ಧಜ್ಞಾನವನ್ನೇ ಪೂರ್ತಿಜ್ಞಾನ ವೆಂದುಕೊಂಡು ಹೋಗುತ್ತಿರುತ್ತಾರೆ. ಅವರ ಮಾತುಗಳಲ್ಲಿ ಸಾಧಾರಣ ವಾಗಿ ತೋರುವ ಶ್ರದ್ಧಾರಾಹಿತ್ಯದಿಂದ ನನಗೆ ಬಹಳ ವಿಷಾದವಾಗಿದೆ.

## ಜಂಬ ಮತ್ತು ಅಹಂಕಾರದ ಮಾತುಗಳು

ಆ ದಿನ ಯುವಕರ ಒಂದು ಗುಂಪು ಬೈಸಿಕಲ್ಲುಗಳ ಮೇಲೆ ಬಂದರು. ನಾನು ನೂಲುತ್ತಾ ಕುಳಿತಿದ್ದುದನ್ನು ಕಂಡು ನನ್ನಲ್ಲಿ ಬಂದು "ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುತ್ತೀರಾ" ಎಂದರು. ನಾನು "ಬೇಕಾದುದು ಕೇಳಿ" ಎಂದೆ.

ಅವರ ಮುಖಂಡನಾಗಿ ತೋರಿದ ಒಬ್ಬ ಕೇಳಿದ "ಚರಕದಿಂದ ಸ್ವಾತಂತ್ರ್ಯ ಬರುತ್ತದೆ ಎಂದು ಹೇಗೆ ಹೇಳುತ್ತೀರಿ. ಅದರಿಂದ ಮುದುಕಿಯರಿಗೆ ದಿನಕ್ಕೆ ನಾಲ್ಕು ಕಾಸು ಸಿಕ್ಕಬಹುದು. ಆದರೆ ಅದು ಸ್ವಾತಂತ್ರ್ಯಕ್ಕೆ ಹೇಗೆ ದಾರಿ ?"

ನಾನು ಹೇಳಿದೆ "ಅದು ಸ್ವಾತಂತ್ರ್ಯಕ್ಕೆ ದಾರಿಯಲ್ಲ. ಲಕ್ಷಾಂತರ ಸ್ತ್ರೀಯರು ಕೂಲಿಗಾಗಿ ನೂತರೂ ಅದರಿಂದ ಸ್ವಾತಂತ್ರ್ಯ ಬರುವುದಿಲ್ಲ. ೧೫೦ ವರ್ಷಗಳ ಹಿಂದೆ ಅವರು ನೂಲುತ್ತಲೇ ಇದ್ದರು. ಆದರೆ ನೂಲುವುದನ್ನು ಸರಿಯಾದ ಮನೋಭಾವದಿಂದ ಮಾಡಬೇಕು. ನೂಲುವುದನ್ನು ಸಾರ್ವಜನಿಕ ಮಾಡುವುದರಿಂದ, ಸಾಧ್ಯವಾದಷ್ಟು ಜನರಿಗೆ ಅನ್ನ ಒದಗಿಸಬಹುದೆಂಬುದೇನೋ ಸರಿ. ಆದರೆ ರಾಟೆಯಿಂದ ನಮಗೆ, ಹೆಚ್ಚು ಶಿಸ್ತು, ಹಿಡಿದು ಕೆಲಸಮಾಡುವ ಶಕ್ತಿ, ಸರಳಜೀವನ ಉಪಾತ್ತಧ್ಯೇಯ, ಅಹಿಂಸೆ ಇವು ಹೆಚ್ಚಾಗದಿದ್ದರೆ, ಬರಿಯ ನೂಲುವುದರಿಂದ ಸ್ವಾತಂತ್ರ್ಯ ಹತ್ತಿರ ಬರುವುದಿಲ್ಲ."

"ಈ ಶಿಸ್ತು ಅಹಿಂಸೆ ಮುಂತಾದುವೆಲ್ಲಾ ನನಗೆ ಯಾಕೆಬೇಕು ?"

"ಸತ್ಯಾಗ್ರಹ ಜಯಶಾಲಿಯಾಗಲು"

"ಆದರೆ ಸತ್ಯಾಗ್ರಹದಿಂದ ಏನು ಪ್ರಯೋಜನ ?"

"ಅದರಿಂದ ನಮಗೆ ಏನೂ ಪ್ರಯೋಜನವಿಲ್ಲ ಎಂಬುದು ನಿಮ್ಮ ಅಭಿಪ್ರಾಯವಾದರೆ ನಾವು ಮುಂದೆ ಚರ್ಚಿಸಬೇಕಾದುದಿಲ್ಲ. ನೀವು ಒಂದು ಪದಾರ್ಥ ಕಪ್ಪು ಎಂದು ಹೇಳುತ್ತೀರಿ. ನಾನು ಬಿಳುಪು ಎನ್ನುತ್ತೇನೆ. ಇನ್ನು ಚರ್ಚೆಗೆ ಅವಕಾಶವೆಲ್ಲಿ ?"

"ಅಲ್ಲ. ಹಾಗಲ್ಲ; ಸತ್ಯಾಗ್ರಹದಿಂದ ನಮಗೆ ಏನು ಸಹಾಯವಾಗಿದೆ ಹೇಳಿ"

"ನಾವು ೨೦೦ ವರುಷದಲ್ಲಿ ಸಾಧಿಸಲಾರದೆ ಇದ್ದುದನ್ನು ಸತ್ಯಾ

ಗ್ರಹದ ಮೂಲಕ ಇಪ್ಪತ್ತು ವರುಷದಲ್ಲಿ ಸಾಧಿಸಿದ್ದೇವೆ. ಸತ್ಯಾಗ್ರಹ ಪ್ರಾರಂಭವಾಗುವುದಕ್ಕೆ ಮುಂಚೆ ನಾವು ದನಗಳಂತೆ ಮೂಕ ಪ್ರಾಣಿಗಳಾಗಿದ್ದೆವು. ನಮಗೆ ಅನ್ಯಾಯವನ್ನು ಎದುರಿಸುವ ಶಕ್ತಿ ಇರಲಿಲ್ಲ. ಬಲಿಷ್ಟರ, ದೃಢಕಾಯರ ಗುಂಪನ್ನು ಸಹ ಒಬ್ಬ ಪೋಲೀಸಿನವನು ಸುಲಭವಾಗಿ ಚದುರಿಸುತ್ತಿದ್ದ ; ಈವತ್ತಿನ ಸ್ಥಿತಿ ಏನು ?"

"ನನ್ನ ಅಭಿಪ್ರಾಯದಲ್ಲಿ ಹಿಂದೆ ಇದ್ದಂತೆಯೇ !"

"ನಿನ್ನ ಮಾತು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಪೋಲೀಸಿನವರಾದಿಯಾಗಿ ಸರ್ಕಾರಿ ನೌಕರರು ಹಿಂದಲಂತೆ ನಮ್ಮನ್ನು ತಿರಸ್ಕಾರದಿಂದ ನೋಡುವುದಿಲ್ಲ. ಸರ್ಕಾರಿ ಅಧಿಕಾರಿಗಳು ಪ್ರಜೆಗಳು ಸೇವಕರೆಂದು ತಿಳಿದುಕೊಂಡಿದ್ದಾರೆಯೇ ಹೊರತು ಯಜಮಾನರಂತಲ್ಲ ಎಂಬುದನ್ನು ಒಪ್ಪುತ್ತೀಯ ?"

"ಸ್ವಲ್ಪ ಕಾಲದವರಗೆ ಅವರು ಹಾಗೆ ಮಾಡಿರಬಹುದು. ಸತ್ಯಾಗ್ರಹವಾದ ನಂತರ ಯಾವಾಗಲೂ ನಮ್ಮಶಕ್ತಿ ಕುಂದಿದೆ. ಸತ್ಯಾಗ್ರಹ ಮುಗಿದ ಕೂಡಲೇ, ಅಧಿಕಾರಿಗಳು ಮೊದಲಿಗಿಂತ ಕ್ರೂರರಾಗಿ ನಮ್ಮ ಮೇಲೆ ಬಿದ್ದಿದ್ದಾರೆ."

"ನನ್ನ ಅನುಭವ ಇದಕ್ಕೆ ವಿರೋಧವಾಗಿದೆ. ಪ್ರತಿ ಸತ್ಯಾಗ್ರಹದ ನಂತರವೂ ನಾವು ಹೆಚ್ಚು ದೃಢಚಿತ್ತರೂ, ಧೈರ್ಯಶಾಲಿಗಳೂ, ಶಕ್ತರೂ ಆಗಿದ್ದೇವೆ. ಬೊರ್‌ಸಾದ ಸತ್ಯಾಗ್ರಹದ ಹೆಸರು ನೀವು ಕೇಳಿದ್ದೀರಾ ?"

"ಇಲ್ಲ."

"ಬರಡೋಲಿ ಸತ್ಯಾಗ್ರಹದ ಹೆಸರು ಕೇಳಿದ್ದೀರಾ ?

"ಏನೋ ಸ್ವಲ್ಪ ತಿಳಿದಿದೆ. ಆದರೆ ಅಲ್ಲಿ ಇಗಲೂ ಪೋಲೀಸ್ ರಾಜ್ಯ ಒಂದೇ ಸಮನಾಗಿದೆ.

"ನಮ್ಮ ಜತೆ ಬನ್ನಿ. ಅಲ್ಲಿ ಪೋಲಿಸ್ ರಾಜ್ಯ ಹೆಚ್ಚಾಗಿಲ್ಲ. ಸ್ವರಾಜ್ಯವೇ ಹೆಚ್ಚಾಗಿದೆ ಎಂಬುದನ್ನು ತೋರಿಸುತ್ತೇನೆ."

"ನನಗಂತೂ ಇದು ಹೊಸ ವಿಚಾರ. ಆದರೆ ಸತ್ಯಾಗ್ರಹದ ಮೂಲಕ ಸ್ವರಾಜ್ಯ ಎಂದಿಗೂ ಬರುವುದಿಲ್ಲ."

"ನಿಮ್ಮೊಂದಿಗೆ ಚರ್ಚೆ ಮಾಡುವುದರಿಂದ ಪ್ರಯೋಜನವಿಲ್ಲವೆಂದು ನಾನು ಹೇಳಿದುದು ಇದಕ್ಕಾಗಿಯೇ. ನಿಮಗೆ ಬೇರೆ ಮಾರ್ಗ ಗೊತ್ತಿದ್ದರೆ

ನೀವು ಅದನ್ನು ಅನುಸರಿಸಬಹುದು. ಆದರೆ ನನ್ನೊಂದಿಗೆ ಚರ್ಚಿಸುವು ರಿಂದ ನಿಮಗೆ ಏನೂ ಪ್ರಯೋಜನವಿಲ್ಲ."

"ನಮಗೆ ಅನುಕೂಲವಿದೆ. ಸಾವಿರಾರು ಜನರನ್ನು ಸಿದ್ಧ ಮಾಡಿದ್ದೇವೆ. ಬಂದು ನೋಡಿ."

ನಿಮ್ಮ ಸಿದ್ಧತೆ ಕೆಲಸ ಎಲ್ಲಿ? ನಿಮ್ಮದು ಯಾವ ತರಹ ಕೆಲಸ? ಆರೋಗ್ಯ? ಸಾಮಾಜಿಕ ಕೆಲಸ? ಪ್ರಚಾರ? ಯಾವುದು."

"ಈ ಬಗೆಯ ಕೆಲಸಗಳಲ್ಲಿ ನನಗೆ ನಂಬಿಕೆ ಇಲ್ಲ."

ಆದರೆ ನಿಮಗೆ ಯಾವುದಾದರೂ ಕೆಲಸದಲ್ಲಿ ನಂಬಿಕೆ ಇರಬೇಕಲ್ಲ? ಚರಕನಾಶ, ಪರದೇಶಿ ವಸ್ತ್ರಧಾರಣೆ ಯಾವುದಾದರೂ ಸರಿ. ನಿಮಗೆ ಸತ್ಯಾಗ್ರಹದಲ್ಲಿ ನಂಬಿಕೆ ಇಲ್ಲ. ಆದರೆ ಮತ್ತಾವುದರಲ್ಲಿಯಾದರೂ ನಂಬಿಕೆ ಇರಬೇಕಲ್ಲ? ನೀವು ಏನು ಮಾಡುತ್ತಿದ್ದೀರಿ ಹೇಳಿ?"

"ನಾನು ರೇಡಿಯೋದಲ್ಲಿ, ಸಂಗೀತ ಹಾಡುತ್ತೇನೆ. ನಮ್ಮಲ್ಲಿ ಕೆಲವರು ವಿದ್ಯಾರ್ಥಿಗಳು."

"ನೀವು ಎಂದಾದರೂ ಚರಕದಲ್ಲಿ ನೂಶಿದ್ದೀರಾ?

"ಕೆಲವು ವರುಷಗಳ ಹಿಂದೆ. ಆದರೆ ನೂತು ಸೆರೆಮನೆಗೆ ಹೋದ ನಮ್ಮ ಅನೇಕ ಸ್ನೇಹಿತರಿಗೆ ನಿರಾಶೆಯಾಯಿತು."

"ಆದುದರಿಂದಲೇ ನಿಮಗೆ ಇನ್ನಾವುದಾದರೂ ಕೆಲಸದಲ್ಲಿ ಶ್ರದ್ಧಾ ಭಕ್ತಿ ನಂಬಿಕೆ ಇರಬೇಕೆಂದು ನಾನು ಸೂಚಿಸಿದುದು."

## ಅರ್ಥ ಶಾಸ್ತ್ರಜ್ಞ

ನಾನು ಅರ್ಥಶಾಸ್ತ್ರಜ್ಞ; ಮಾರ್ಷಲ್ ಶಿಷ್ಯ ಎಂದು ಹೇಳಿಕೊಂಡು ಬಂದ ಒಬ್ಬ ಯುವಕ ಗಾಂಧಿಯವರನ್ನು ನೋಡ ಬಯಸಿದ. ಆಗ ಮಧ್ಯಾಹ್ನ ಮೀರಿತ್ತು. ಹವ ಸುಮಾರು ೧೫೦ ಡಿಗ್ರಿ; ಶಖೆಯಾಗಿದ್ದಿತು. "ಗಾಂಧಿಯವರು ಸದ್ಯಕ್ಕೆ ಅನಿರೀಕ್ಷಿತ ಕಾಲದವರೆಗೆ ಮೌನ. ಈಗ ಅವರಿಗೆ ವಿಶ್ರಾಂತಿ. ಗಾಂಧಿಯವರನ್ನು ಸುಮ್ಮನೆ ದರ್ಶನ ಮಾಡಬೇಕಾದರೂ ಸಂಧ್ಯಾಕಾಲದವರೆಗೆ ಕಾಯಬೇಕು" ಎಂದೆ. "ಆತ ಹಾಗಾದರೆ ನಾನು ಕೆಲವು ಪ್ರಶ್ನೆಗಳನ್ನು ಕೇಳಬಹುದೇ" ಎಂದು ಹೇಳಿ ಕೇಳಲು ಪ್ರಾರಂಭಿಸಿದ.

" ಗಾಂಧಿಜಿ ಸಂತಾನ ನಿರೋಧವನ್ನು ಯಾಕೆ ವಿರೋಧಿಸುತ್ತಾರೆ? ಸಂತಾನ ನಿರೋಧ ಪ್ರಕೃತಿ ನಿಯಮಕ್ಕೆ ಪೂರ್ಣವಾಗಿ ಅನುಸಾರವಾಗಿದೆ."

" ಈ ಮಾತನ್ನು ನಿನ್ನಿಂದ ಹೊಸದಾಗಿ ಕೇಳಿದೆ. ಸಂತಾನ ನಿರೋಧ ಆತ್ಮ ನಾಶವೆಂದು ನಾನು ಹೇಳುತ್ತೇನೆ."

" ಯಾಕೆ ಹಾಗೆ ಹೇಳುತ್ತೀರಿ? ಪ್ರಕೃತಿಗೆ ಅನುಸಾರವಾಗಿ ಜೀವಿಸುವುದರಲ್ಲಿ ನಿಮ್ಮ ಅಭ್ಯಂತರವೇನು? ಪ್ರಾಣಿಗಳು ಸ್ವತಂತ್ರವಾಗಿ ಪ್ರಕೃತಿಗೆ ಅನುಸಾರವಾಗಿ ಜೀವಿಸುತ್ತವೆ."

" ಹಾಗಾದನೆ.ಲೆ ನೀವು ಯಾಕೆ ಪ್ರಾಣಿಗಳಂತೆ ಜೀವಿಸುವುದಿಲ್ಲ. ಅವು ಉಡುಪು ಧರಿಸುವುದಿಲ್ಲ. ಹುಲ್ಲು ತಿನ್ನುತ್ತವೆ. ಕೊಳಕಿನಲ್ಲಿರುತ್ತವೆ. ಒಳ್ಳೆಯದು ಕೆಟ್ಟದ್ದು ಎರಡೂ ಅವಕ್ಕೆ ಒಂದೇ. ನೀನು ಅವನ್ನು ಯಾಕೆ ಅನುಸರಿಸಬಾರದು?"

" ಆದರೆ ಗಾಂಧಿಯವರು, ಸಂತಾನೋತ್ಪತ್ತಿಗಾಗಿ ಮಾತ್ರ ಸೇರಬೇಕೆಂದು ಹೇಳುತ್ತಾರೆ. ಹಿಂದಲಕಾಲಕ್ಕೆ ಅದು ಒಳ್ಳೆಯದಾಗಿದ್ದಿರಬಹುದು. ಆದರೆ ಇವತ್ತಿಗಲ್ಲ."

" ಯಾಕೆ "

ಈಗಲೇ ನಮ್ಮ ದೇಶದಲ್ಲಿ ಜನ ಹೆಚ್ಚು ಇನ್ನು ಸಂತಾನವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು.

ಹಾಗಾದಮೇಲೆ ನಿಮ್ಮ ಮಾತಿನ ಅಸಂಬದ್ಧತೆ ನಿಮಗೆ ಗೊತ್ತಾಗುವುದಿಲ್ಲವೇ? ಈಗ ನಮ್ಮ ದೇಶದಲ್ಲಿ ಜನ ಹೆಚ್ಚು. ಹಿಂದಲ ಕಾಲದಲ್ಲಿ ಹಾಗೆ ಇರಲಿಲ್ಲ. ಹಿಂದಲವರು ಬೇಕಾದಷ್ಟು ಸಂತಾನೋತ್ಪತ್ತಿ ಮಾಡಬಹುದಾಗಿದ್ದಿತು. ಆದರೂ ನಿಮ್ಮ ಅಭಿಪ್ರಾಯದಂತೆ ಅವರು ಸಂತಾನವನ್ನು ಮಿತಿಯಲ್ಲಿಟ್ಟರು. ನಾವು ನಮ್ಮ ಪೂರ್ವಿಕರಿಗಿಂತ ಹೀನ. ಸಂತಾನ ಹೆಚ್ಚಿಸುವುದು ತಪ್ಪು. ಆದರೂ ಹೆಚ್ಚಿಸುತ್ತಿದ್ದೇವೆ. ನಾವು ಪ್ರಾಣಿಗಳನ್ನು ಅನುಕರಿಸಬೇಕೆಂದು ನೀನು ಹೇಳುವೆ. ಆದರೆ ಪ್ರಾಣಿಗಳಲ್ಲಿ ಬಹುಭಾಗ ಸಂತಾನಕ್ಕಾಗಿ ಮಾತ್ರ ಸೇರುತ್ತವೆ."

" ನಿಮ್ಮ ವಾದ ನಾನು ತಿಳಿದೆ. ಆದರೆ ದೇಶದ ಜನಸಂಖ್ಯೆ ಈಗಾಗಲೇ ಹೆಚ್ಚಲ್ಲ, ಅದಕ್ಕೆ ಏನು ಹೇಳುವಿರಿ "

" ಏನೂ ಇಲ್ಲ"

"ಭಾರತ ೪೦ ಕೋಟಿ ಜನರನ್ನು ಸಾಕಲಾರದೆಂದು ನೀವು ಒಪ್ಪುತ್ತೀರಾ ?"

"ನನಗೆ ಹಾಗೆ ತೋರುವುದಿಲ್ಲ. ಎಲ್ಲರನ್ನೂ ಸಾಕಲು ಸಾಕಾದಷ್ಟು ನಮ್ಮ ದೇಶದಲ್ಲಿ ಬೆಳೆಯುತ್ತದೆ. ಆದರೆ ಅದರ ಹಂಚಿಕೆ ಸರಿಯಾಗಿಲ್ಲ. ಸರಿಯಾದ ಅರ್ಥಶಾಸ್ತ್ರಾನುಸಾರವಾಗಿ ಹಂಚಿಕೆಯಾದರೆ ನಮ್ಮ ದೇಶದ ಬೆಳೆಗಳಿಂದಲೇ ಶಕ್ತಿಗಳಿಂದಲೇ, ಎಲ್ಲರಿಗೂ ಅನ್ನ ಬಟ್ಟೆ ಒದಗಿಸಬಹುದು".

"ಹಾಗಾದಮೇಲೆ ನಿಮ್ಮ ಅಭಿಪ್ರಾಯದಲ್ಲಿ ಎಷ್ಟರಿಂದ ಆಚೆಗೆ (ಹೆಚ್ಚಾಗಿ) ಜನಸಂಖ್ಯೆ ಬೆಳೆಯಬಾರದು ?"

"ಅರ್ಥಶಾಸ್ತ್ರಜ್ಞರಾದ ನೀವು ಇದಕ್ಕೆ ಉತ್ತರ ಕೊಡಬಹುದು. ನಾನು ದೇವರ ಸ್ಥಳ ಆಕ್ರಮಿಸಲಾರೆ".

"ಆದರೆ ನಮ್ಮ ಅನುಕೂಲಗಳನ್ನು ಹೆಚ್ಚಿಸಿಕೊಳ್ಳಲು ನಿಮ್ಮ ಅಭ್ಯಂತರವೇನು ? ಅಮೆರಿಕದಲ್ಲಿರುವಂತೆ ಪ್ರತಿಯೊಬ್ಬರಿಗೆ ಯಾಕೆ ಒಂದು ಮೋಟಾರು ಕೂಡದು ? "

"ಅಮೆರಿಕ ಸಹ ಅದನ್ನು ಸಾಧಿಸಿಲ್ಲ. ಅಲ್ಲಿ ಸುಮಾರು ೨ ಕೋಟಿ ಕಾರುಗಳಿವೆ. ಅಂದರೆ ಏಳು ಜನಕ್ಕೆ ಒಂದರಂತೆ. ಆದರೆ ಆ ಮಾರ್ಗ ನಾಶದ ಮಾರ್ಗ. ಯೂರೋಪಿನ ಕಡೆ ನೋಡಿ"

"ನಮಗೆ ಬೇಕಾದಷ್ಟು ವಿರಾಮ ಯಾಕೆ ಕೂಡದು ? ನಾವೆಲ್ಲಾ ದಿನಕ್ಕೆ ಒಂದೇ ಗಂಟೆ ಕೆಲಸ ಮಾಡಿದರೆ, ನಮ್ಮ ಉಳಿದ ಶಕ್ತಿಯನ್ನೆಲ್ಲಾ ಯಾಕೆ ಉತ್ಪತ್ತಿ ಕಾರ್ಯಗಳಿಗೆ (ಕಲಾ ಕಾವ್ಯಗಳಿಗೆ) ವಿನಿಯೋಗಿಸಬಾರದು ? "

"ಆ ಶಕ್ತಿ ನಾಶ ಕಾರ್ಯಗಳಿಗೆ ವಿನಿಯೋಗವಾಗುವುದು. ಗಾದೆ ಗೊತ್ತಿಲ್ಲವೇ ? "ಸೋಮಾರಿಗಳಿಗೆ ಪಿಶಾಚಿ ಕೆಲಸ ಒದಗಿಸುತ್ತದೆ".

ಇನ್ನೊಂದು ಪ್ರಶ್ನೆ ಕೇಳಲೇ. ರಾಜಕೋಟೆಯ ಮೇಲೆ, ನಾನು ಗಾಂಧಿಯವರ ಹೇಳಿಕೆ ಎಚ್ಚರಿಕೆಯಿಂದ ಓದಿದೆ. ಅದು ನಿರಾಶಾಜನಕ. ಉಪವಾಸ ಆಯುಧವಲ್ಲವೆಂದು ಗಾಂಧಿ ಒಪ್ಪಿದ್ದಾರೆ. ಉಪವಾಸ ಬಲಾತ್ಕಾರವೆನ್ನುತ್ತಾರೆ. ದೇಶೀಯ ರಾಜ್ಯಗಳೊಂದಿಗೆ ವ್ಯವಹರಿಸುವುದು ಪ್ರಯೋಜನವಿಲ್ಲವೆನ್ನುತ್ತಾರೆ.

"ನನ್ನ ಮಾತು ಕೇಳಿ. ನೀವು ಗಾಂಧಿಯವರ ಹೇಳಿಕೆ ಲೇಖನ

ಓದಿಲ್ಲ. ಓದಿದ್ದರೂ ನಿಮಗೆ ಅದು ಅರ್ಥವಾಗಿಲ್ಲ. ರಾಜಕೋಟೆ ಉಪವಾಸ ಬಲಾತ್ಕಾರ ಎಂದು ಗಾಂಧಿ ಯಾವಾಗಲೂ ಹೇಳಲಿಲ್ಲ. ಆ ಉಪವಾಸ ಸರಿ ಎಂದೇ ಅವರು ಹೇಳಿದರು. ಸರ್ ಮಾರಿಸ್ ಗ್ವಾಯರ್ ತೀರ್ಮಾನವೆ ಅದಕ್ಕೆ ಸಾಕ್ಷಿ—ಆದರೆ ತಾವು ಅನುಸರಿಸಿದ ಉಪವಾಸ ಮುಕ್ತಾಯ ಮಾರ್ಗ ತಪ್ಪೆಂದು ಗಾಂಧಿ ಹೇಳಿದರು. ಅಂತಹ ಪರಿಸ್ಥಿತಿ ಬಂದರೆ ನಿಸ್ಸಂದೇಹವಾಗಿ ಅವರು ಮತ್ತೆ, ಮತ್ತಾವುದಾದರೂ ರಾಜರಿಗೆ ವಿರೋಧ ವಾಗಿ ಆ ಉಪವಾಸ ಮಾಡುವವರೇ. ಆದರೆ ಉಪವಾಸದ ಕಾರಣದಿಂದ ತನಗೂ ರಾಜರಿಗೂ ಮಧ್ಯೆ ವೈಸರಾಯರನ್ನು ಪ್ರವೇಶಗೊಳಿಸುವುದಿಲ್ಲ."

"ಹಾಗಾದ ಮೇಲೆ ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿಕೊಳ್ಳು ವುದು ಪ್ರಯೋಜನವಿಲ್ಲವೆಂದು ಗಾಂಧಿ ಒಪ್ಪುತ್ತಾರೆ."

"ಸ್ವಲ್ಪ ತಾಳ್ಮೆಯಿಂದಿರಿ. ನನ್ನ ವಾದವನ್ನು ಅನುಸರಿಸಿ; ನಾವು ಮಾತನಾಡುತ್ತಿರುವುದು ರಾಜಕೋಟೆ ಉಪವಾಸವನ್ನು ಕುರಿತು. ಎಲ್ಲಾ ಉಪವಾಸಗಳನ್ನೂ ಕುರಿತು ಅಲ್ಲ. ರಾಜಕೋಟೆ ಉಪವಾಸ ಗಾಂಧಿ ಮತ್ತು ರಾಜಕೋಟೆ ರಾಜರಿಗೆ ಸಂಬಂಧಿಸಿದುದು. "ದೇವರು ರಾಜರ ಮನಸ್ಸನ್ನು ಬದಲಾಯಿಸಬೇಕಾಗಿದ್ದಿತು. ತಾವು ಇನ್ನೂ ಶಾಂತಿಯಿಂದ ಇನ್ನೂ ಕೆಲವು ಕಾಲ ಉಪವಾಸ ಮಾಡಿದ್ದರೆ ತಮ್ಮ ಉಪವಾಸ ಫಲಕಾರಿ ಯಾಗುತ್ತಿದ್ದಿತು. ಆದರೆ ದೇವರನ್ನು ನಂಬುವ ಬದಲು ನಾನು ವೈಸ ರಾಯರಿಗೆ ಮನವಿ ಮಾಡಿಕೊಂಡೆ. ಆದುದರಿಂದ ಅದು ಫಲರಹಿತ ವಾಯಿತು." ಇದು ಗಾಂಧಿಯವರ ಅಭಿಪ್ರಾಯ. ಇನ್ನು ಬ್ರಿಟಿಷ್ ಸರ್ಕಾರಕ್ಕೆ ದೇಶೀಯ ರಾಜರುಗಳ ವಿಚಾರದಲ್ಲಿ ಮನವಿ ಮಾಡಲೇಬೇಕಾ ಗುತ್ತದೆ. ರಾಜಕೋಟೆಯಲ್ಲಿ ಉಪವಾಸ ಆಗದೆ ಇದ್ದಿದ್ದರೂ, ಮುಂಚೆ ಮಾಡುತ್ತಿದ್ದಂತೆ, ವೈಸರಾಯರಿಗೆ ಮನವಿ ಮಾಡುವುದು ಆಗುತ್ತಿದ್ದಿತು. ಉಪವಾಸದ ಕಾಲದಲ್ಲಿ ವೈಸರಾಯ್ ತಾವಾಗಿಯೇ ರಾಜಕೋಟೆ ವ್ಯವ ಹಾರದಲ್ಲಿ ಕೈ ಹಾಕಿದ್ದರೆ—ಗಾಂಧಿಯವರ ಪ್ರಾರ್ಥನೆಯಿಲ್ಲದೆ—ಆಗ ಉಪವಾಸ ಸಾಧುವಾಗುತ್ತಿದ್ದಿತು. ಅರ್ಥವಾಯಿತೆ ?

"ಆಯಿತು. ಆದರೆ ದೇಶೀಯ ರಾಜ್ಯಗಳಲ್ಲಿ ಸ್ವಾತಂತ್ರ್ಯದ ಹೋರಾಟವೋ ?"

"ಅದು ನಡೆಯುತ್ತಲೇ ಇದೆ ಬ್ರಿಟಿಷ್ ಸರ್ಕಾರದ ಮೇಲೂ,

ಆದರ ಅಧೀನಗಳಾದ ದೇಶೀಯ ರಾಜ್ಯಗಳ ಮೇಲೂ ಹೋರಾಟ ನಡೆಯುತ್ತಲೇ ಇದೆ.

ಈ ಹೋರಾಟ ಹೇಗೆ ಮಾಡಬೇಕು. ಅದರ ಕ್ರಮ, ಮಾರ್ಗ, ಏನು ಎಂಬುದು ಆಯಾ ಸಂದರ್ಭಕ್ಕೆ ಅನುಸಾರವಾಗಿ ಬದಲಾಯಿಸುತ್ತದೆ."

"ಆದರೆ ಎಲ್ಲಾ ಉಪವಾಸಗಳು ಬಲಾತ್ಕಾರವೇ ಅಲ್ಲವೇ? ರೈತರನ್ನು ಹಿಂಸಿಸಿದನೆಂದು ನಾನು ಒಬ್ಬ ಜಮೀನದಾರನ ಮೇಲೆ ಉಪವಾಸ ಮಾಡುತ್ತೇನೆ. ಉಪವಾಸ ಬಲಾತ್ಕಾರವಲ್ಲವೆ? ಜಮೀನ್‌ದಾರ ಸೋಲುತ್ತಾನೆ ಎನ್ನೋಣ. ಸೋಲಬಾರದು ಎಂದು ತಿಳಿದಿದ್ದರೂ ಆತ ಭಯಕ್ಕಾಗಿ ಸೋತಂತೆ ಆಗುವುದಿಲ್ಲವೆ?

ಅದು ಪರಿಸ್ಥಿತಿಯ ಮೇಲೆ ಅವಲಂಬಿಸುತ್ತದೆ. ಜಮೀನ್‌ದಾರ ತನ್ನ ತತ್ವವನ್ನು ಅವಲಂಬಿಸಿ ದೃಢವಾಗಿರಬಹುದು. ಅವನ ನಡತೆ ನ್ಯಾಯವಾಗಿದ್ದರೆ ನಿಮ್ಮನ್ನು ಸಾಯಲು ಬಿಡಬಹುದು ಈಗ ಯಾರ ಸತ್ಯಾಗ್ರಹ ಸರಿ ಎಂಬ ಪ್ರಶ್ನೆ ಏಳುತ್ತದೆ. ದೇವರೇ ತೀರ್ಮಾನ ಮಾಡುವವ. ನಮ್ಮ ಆಯುಧ ಎಷ್ಟೇ ಶುದ್ಧವಾಗಿದ್ದರೂ ಅದರಲ್ಲಿ ಸ್ವಲ್ಪ ಬಲಾತ್ಕಾರವಿದ್ದೇ ಇರುತ್ತದೆ. ಯಾಕೆಂದರೆ ನಾವು ತಪ್ಪು ಮಾಡುವ ಜಂತುಗಳು. ನೀತಿಯ ಬಲಾತ್ಕಾರ ಅನೀತಿಯ ಬಲಾತ್ಕಾರ, ಹಿಂಸೆಯ ಬಲಾತ್ಕಾರ ಅಹಿಂಸೆಯ ಬಲಾತ್ಕಾರ, ಇವುಗಳನ್ನು ನೋಡಿ ಆರಿಸಿಕೊಳ್ಳಬೇಕು."

"ಇನ್ನು ರಾಜಕೀಯವನ್ನು ಚರ್ಚಿಸೋಣವೆ?"

"ಬೇಡ, ಸಾಕು. ಇದೆಲ್ಲಾ ರಾಜಕೀಯವಲ್ಲವೆ? ಇದರ ಹೊರತು ಬೇರೆ ರಾಜಕೀಯ ನೀವು ಚರ್ಚಿಸುವುದಾದರೆ ಅದು ನನಗೆ ತಿಳಿಯುವುದೇ ಇಲ್ಲ."

ಸೇವಾಗ್ರಾಮ

೩-೬-೧೯೪೦

(೨)

ಹಿಂದೆ ಹೇಳಿದ ವಿದ್ಯಾರ್ಥಿಗಳೊಡನೆ ಮಾಡಿದ ಚರ್ಚೆಯಲ್ಲಿ ಬಂದ ಒಂದೆರಡು ವಿಷಯಗಳ ಮೇಲೆ ಮತ್ತೆ ಹೇಳುತ್ತೇನೆ. ಯುದ್ಧ ಎಲ್ಲವನ್ನೂ ಗೊಂದಲದಲ್ಲಿ ಕೆಡವಿದೆ. ಅರ್ಥಶಾಸ್ತ್ರಗಳ ಪ್ರಿಯವಾದ ನಿರ್ಣಯಗಳನ್ನೂ ತಲೆಕೆಳಗುಮಾಡಿದೆ. ಪ್ರಪಂಚಕ್ಕೆ ಯುದ್ಧ, ಹಿಂಸೆ, ಸಾಕು ಎನ್ನುತ್ತಾರೆ.

೧೯೧೪—೧೮ರ ನರಮೇಧದ ನಂತರವೂ ಹೀಗೆಯೇ ಹೇಳಿದರು. ಇಪ್ಪತ್ತು ವರುಷಗಳೊಳಗಾಗಿ ಮೊದಲಿನದಕ್ಕಿಂತ ಹೆಚ್ಚು ಭಯಂಕರವಾದ ಯುದ್ಧದಲ್ಲಿ ತೊಡಗಿದ್ದೇವೆ. ಇದು ದ್ವೇಷವನ್ನೂ ಸೇಡನ್ನೂ ಇನ್ನೂ ಆಳವಾಗಿ ಬಿಡಬಹುದು. ಇದರ ಕಾರಣ ಇಷ್ಟು. ನಮಗೆ ಹಿಂಸೆ ಅಂತ್ಯವಾಗಬೇಕೆಂದು ಆಸೆ. ಆದರೆ ಅದರ ಸಾಧನೆಯು ಕಷ್ಟ ನಮಗೆ ತಿಳಿಯದು. ಈ ಮಾರ್ಗದಲ್ಲಿ ಅನೇಕ ಕಷ್ಟಗಳಿವೆ. ಕೆಲವು ವಿಷಯಗಳು ನಮ್ಮ ಬಾಳಿನ ಭಾಗಗಳೇ ಆಗಿವೆ. ಯಂತ್ರಗಳೂ ಯಂತ್ರ ಕೈಗಾರಿಕೆಗಳೂ ಜಗತ್ತಿನ ಕೊನೆಯವರೆಗೂ ಉಳಿಯುತ್ತೇಬೇಕೆಂದು ನಾವು ಭಾವಿಸಿಕೊಂಡಿದ್ದೇವೆ. ನಿರುದ್ಯೋಗ ದೊಡ್ಡ ಕೆಡಕು ಎಂದು ನಾವು ಒಪ್ಪುತ್ತೇವೆ. ಆದರೆ ಆ ರೋಗದ ಔಷಧಿ ಹುಡುಕುವಾಗ ಯಂತ್ರಗಳ ಕೈಗಾರಿಕೆ ಇರಬೇಕಾದುದೇ ಎನ್ನುತ್ತೇವೆ. ಬಂಡವಾಳತನ ಕೆಟ್ಟದ್ದು. ಆದರೆ ಅದು ನಾಶವಾಗಬೇಕೆನ್ನುವುದರ ಜತೆಯಲ್ಲಿ, ನಾವು ಯಂತ್ರ ಕೈಗಾರಿಕೆಗಳೂ ಉಳಿಯಬೇಕೆನ್ನುತ್ತೇವೆ.

ನ್ಯೂ ರಿವ್ಯೂ ಎಂಬ ಪತ್ರಿಕೆಯ ಈಚಿನ ಸಂಚಿಕೆಯಲ್ಲಿ ದೊಡ್ಡ ದೊಡ್ಡ ಕೈಗಾರಿಕಾ ಯಂತ್ರ ಯುಗದ ಫಲಗಳು ವರ್ಣಿತವಾಗಿವೆ. ಅದನ್ನು ಬರೆದವರು ಪಾದ್ರಿ ಲಾಲ್‌ಮಂಡ್ ಎಂಬುವರು. ಲೇಖಕರು ಬರಿಯ ಅರ್ಥಶಾಸ್ತ್ರದ ದೃಷ್ಟಿಯಿಂದ ಮಾತ್ರ ಫಲಗಳನ್ನು ಪರಿಗಣಿಸಿದ್ದಾರೆ ಎಂಬುದು ಜ್ಞಾಪಕವಿರಬೇಕು. ಆತ ತನ್ನ ಅಂಕಿ ಅಂಶಗಳಿಂದ ತೀರ್ಮಾನ ಮಾಡಿರುವ ಸಿದ್ಧಾಂತಗಳು, ನಾನು ಹೊಂದಬಯಸುವ ತೀರ್ಮಾನಗಳಿಗಿಂತ ಬೇರೆಯಾಗಿವೆ. ಆದರೆ ಆತ ೧೯೩೭ನೇ ಇಸವಿಯ "ಲಾ ವೈ ಇಂಟಲೆಕ್ಚುಯಲ್" ಎಂಬುದರಿಂದ ಆರಿಸಿರುವ ಅಂಕಿ ಅಂಶಗಳನ್ನು ನಾವು ತೆಗೆದುಕೊಳ್ಳೋಣ. ಆತ ಹೀಗೆ ಹೇಳುತ್ತಾನೆ. ಯಂತ್ರ ಯುಗದ ಮೊದಲನೆಯ ಫಲ ಇದು; ಅದು ಜನರನ್ನು ಉದ್ಯೋಗದಿಂದ ತಪ್ಪಿಸಿದೆ.

"ಈಗ ಇಂಗರ ಸಾಲ್ ಮಾದರಿಯ ಗುದ್ದಲಿಯಿಂದ ಭೂಮಿಗಳನ್ನು ಅಗೆದ ಶೋಧನೆ ಮಾಡುವ, ಲೋಹ ತೆಗೆಯುವ ಕೆಲಸ ಮಾಡುತ್ತಾರೆ. ಆ ಗುದ್ದಲಿ ೪೦೦ ಜನರ ಕೆಲಸ ಮಾಡುತ್ತದೆ. ೧೮೫೦ರಲ್ಲಿ ಒಬ್ಬ ಮನುಷ್ಯ ಗುದ್ದಲಿಯಿಂದ ವರುಷಕ್ಕೆ ೮೦೦ ಟನ್ ಲೋಹ ಶಿಲೆ ಅಗೆಯುತ್ತಿದ್ದ. ಇಂದು

ವಿದ್ಯುಚ್ಛಕ್ತಿಯ ಗುದ್ದಲಿಯಿಂದ ಸುಲಭವಾಗಿ ೨೪೦೦೦ ಟನ್ ಅಗೆಯುತ್ತಾನೆ. ೧೮೫೦ರಲ್ಲಿ ತಯಾರಾಗುತ್ತಿದ್ದುದರ ೨೦ರಷ್ಟು ವಿದ್ಯುಚ್ಛಕ್ತಿಯಿಂದ ಈಗ ತಯಾರಾಗುತ್ತಿದೆ. ಒಟ್ಟಿನಲ್ಲಿ ಮನುಷ್ಯ ತನ್ನನ್ನು ತಾನು ಅತಿ ಅಗ್ಗ ಮಾಡಿಕೊಂಡಿದ್ದಾನೆ. ತನ್ನನ್ನು ತಾನು ಸಾಧ್ಯವಾದಷ್ಟು ಅಗ್ಗಮಾಡಿಕೊಳ್ಳಲು ಇನ್ನೂ ದುಡಿಯುತ್ತಿದ್ದಾನೆ.

"ಅಭಿವೃದ್ಧಿ, ಸುಧಾರಣೆ" ಎಂದರೆ ಮನುಷ್ಯನ ಬೆಲೆ ಇಳಿಯುತ್ತಿದೆ ಎಂದು ಅರ್ಥ.

೧೯೧೪ರಲ್ಲಿ ಒಂದು ಮೋಟಾರ್‌ಕಾರ್ ಮಾಡಲು ೧೧೯೭ಗಂಟೆ ಬೇಕಾಗುತ್ತಿದ್ದಿತು. ೧೯೩೪ರಲ್ಲಿ ೯೩ ಗಂಟೆ ಸಾಕು. ೧೯೩೨ರಲ್ಲಿ ಒಬ್ಬ ಕೂಲಿ ದಿನಕ್ಕೆ ೪೫೩ ಇಟ್ಟಿಗೆಗಳನ್ನು ಮಾಡುತ್ತಿದ್ದನು. ೧೯೩೪ರಲ್ಲಿ ಈ ಸಂಖ್ಯೆ ೧೫೦೦ಕ್ಕೆ ಏರಿತು. ಫ್ರಾನ್ಸಿನ ಒಂದು ಸಿಗರೇಟ್ ಕಾರ್ಖಾನೆಯಲ್ಲಿ ನಿಮಿಷಕ್ಕೆ ೨೪೦೦ ಸಿಗರೇಟು ತಯಾರಾಗುತ್ತಿದೆ. ಇಲ್ಲಿ ೧೯೩೨ರಲ್ಲಿ ೨೫೦ ಸ್ತ್ರೀಯರು ಕೆಲಸ ಮಾಡುತ್ತಿದ್ದರು. ೧೯೩೪ರ ವೇಳೆಗೆ ಇಬ್ಬರು ಕೂಲಿಗಳೇ ಸಾಕಾದರು. ಮೂರು ವರುಷ ಕಾಲದಲ್ಲಿ, ಯಂತ್ರಗಳು ಮನುಷ್ಯನ ಕೆಲಸವನ್ನು ೧೨೫ರಿಂದ ಭಾಗಿಸಿ ಬಿಟ್ಟವು. ೧೯೩೪ರಲ್ಲಿ ಅಟ್ಲಾಂಟಿಕ್ ದಾಟುವ ಹಡಗಿಗೆ ಇದ್ದಿಲು ತುಂಬಲು ೨೫೦ ಕೂಲಿಗಳು ಒಟ್ಟು ೨೦೦೦ ಗಂಟೆ ಕೆಲಸ ಮಾಡಬೇಕಾಗಿದ್ದಿತು. ಆದರೆ ಮುಂದಲ ವರುಷ ಇಬ್ಬರು ಕೂಲಿಗಳು ಎಣ್ಣೆ ಯಂತ್ರದ ಸಹಾಯದಿಂದ ಈ ಕೆಲಸವನ್ನು ೧೬ ಗಂಟೆಗಳಲ್ಲಿ ಮಾಡಬಲ್ಲವರಾದರು. ಹನ್ನೆರಡು ತಿಂಗಳಲ್ಲಿ ಮನುಷ್ಯನ ಕೂಲಿ ೪೧೨೫ರಷ್ಟು ಆಗಿ ಹೋಯಿತು."

ಈ ಅಂಕಿಗಳು ಇದ್ದಲು ತುಂಬುವುದಕ್ಕೆ ಅನ್ವಯಿಸಿದವು. ಇತರ ಬಾಬಿನ ಕೆಲಸಗಳಲ್ಲಿ ಮನುಷ್ಯನ ಕೂಲಿ ಇನ್ನೂ ತಗ್ಗಿದೆ. ಈ ಕಡಿಮೆಯಿಂದ ಮನುಷ್ಯನಿಗೆ ಹಾಲು ಚೀನು ಸುಖ ಹೆಚ್ಚಲಿಲ್ಲ. ಅವನ ಶಕ್ತಿಯೂ ಹೆಚ್ಚಲಿಲ್ಲ. ಅದರ ಬದಲು ಕಡಿಮೆಯೇ ಆಗಿದೆ. ಅನೇಕ ಜನರ ಮುಖ್ಯ ಕೆಲಸ ದೇಹದ ದುಡಿಮೆ. ಯಂತ್ರಗಳು ಅವರನ್ನೆಲ್ಲಾ ಕಸಬು ಇಲ್ಲದವರನ್ನಾಗಿ ಮಾಡಿವೆ ಬುದ್ಧಿವಂತಿಕೆಯ ಕೂಲಿ ಸಹ ಈ ಹೊಡೆತಕ್ಕೆ ಸಿಕ್ಕಿದ್ದಾನೆ. "ಯಂತ್ರ ದಿನದಿನವೂ ಶಕ್ತಿಯನ್ನು ಸೃಷ್ಟಿ ಮಾಡುತ್ತಲೇ ಇದೆ. ಬುದ್ಧಿವಂತರಾದ ಕೂಲಿಗಳ ಅವಶ್ಯಕತೆಯೂ ದಿನದಿನಕ್ಕೆ ಕಡಿಮೆ

ಯಾಗುತ್ತಿದೆ. ಒಬ್ಬನೇ ಕೂಲಿ ೨೦೦೦ ವೋಲ್ಟು ಶಕ್ತಿಯನ್ನು ಸೃಷ್ಟಿಸಬಲ್ಲ. ಅಷ್ಟೇ ಸುಲಭವಾಗಿ ೨೦೦೦೦ ವೋಲ್ಟನ್ನೂ ಸೃಷ್ಟಿಸಬಲ್ಲ."

ಯಂತ್ರಗಳು ಹೆಚ್ಚುವುದರಿಂದ ಉಂಟಾಗುವ ನಿರುದ್ಯೋಗ, ಹೊಸ ಹೊಸ ಉದ್ಯೋಗಗಳಿಂದ ಕಡಿಮೆಯಾಗುವುದೆಂದು ಯೋಚಿಸುವುದು ಬರಿಯ ಮಂಕು.

ಪಾದ್ರಿ ಲಾಲ್‌ಮಂಡ್ ಹೀಗೆ ಹೇಳುತ್ತಾರೆ. "ಅಂಕಿ ಅಂಶಗಳಿಂದ, ಆ ಹಿತವಾದ ಫಲ ದೊರೆಯುತ್ತಿಲ್ಲವೆಂದು ಹೇಳಬಹುದು. ಹಿಂದಲ ಅಭಿವೃದ್ಧಿಯ ಕಾಲದಲ್ಲಿ, ನಿರುದ್ಯೋಗ ಸಮೃದ್ಧಿಯ ಜತೆಯಲ್ಲಿ ಬೆಳೆಯುತ್ತಲೇ ಹೋಯಿತು. ೧೯೨೦ರಲ್ಲಿ ಅದು ಪೂರಾ ಎದ್ದಿತು. ಅಮೆರಿಕದಲ್ಲಿ ನಿರುದ್ಯೋಗ ಬೆಳೆಯಿತು. ಆ ದೇಶದ ಶಕ್ತಿ ಸ್ವಲ್ಪವೂ ಕುಂದಿಲ್ಲದಿದ್ದರೂ ಸರ್ಕಾರ ದಿನ ದಿನವೂ ಹೊಸ ಹೊಸ ಅಸಂಖ್ಯಾತ ನಿರುದ್ಯೋಗ ನಿವಾರಣಾ ಕ್ರಮವನ್ನು ಕಲ್ಪಿಸತೊಡಗಿತು. ಎಂ.ಪಿ. ಬರಾಡ್‌ರ ಅಭಿಪ್ರಾಯದಲ್ಲಿ, ಮೂರು ಕೋಟಿ ಜನರಿಗೆ ದೇಹಶಕ್ತಿಯ ಹೊರತು ಮತ್ತಾವ ಆಸ್ತಿಯೂ ಇಲ್ಲ. ಈ ಮೂರು ಕೋಟಿ ಜನ ೧೦ ಕೋಟಿ ಆಶ್ರಿತರನ್ನು ಸಾಕುತ್ತಿದ್ದರು. ಈಗ ಈ ೧೦ ಕೋಟಿ ಜನಗಳ ಜಾಗವನ್ನು ಯಾವ ಯಾವುವೋ ಯಂತ್ರಗಳು ತೆಗೆದುಕೊಂಡಿವೆ. ಅವರಿಗೆ ಅನ್ನ ಕೊಡುವವರು ಯಾರು ? ಈ ಸಮಸ್ಯೆ ಎದುರಿಗೆ ಕುಳಿತಿದೆ. ಅಭಿವೃದ್ಧಿ ಹೆಚ್ಚು ಹೆಚ್ಚಾದಂತೆ ಈ ಸಮಸ್ಯೆ ಆಳವೂ ಗಾಢವೂ ಆಗುತ್ತಿದೆ. ಯಂತ್ರಗಳು ಮನುಷ್ಯನ ಕೂಲಿಯ ಸ್ಥಳವನ್ನು ಆಕ್ರಮಿಸುತ್ತಿವೆ. ಯಾಕೆಂದರೆ ಪೈಪೋಟಿಯ ಕೈಗಾರಿಕೆಗಳಿಗೆ, ಅಗ್ಗವಾದ ಕೂಲಿ ಅವಶ್ಯಕ."

ದಿನಕ್ಕೆ ಕೆಲಸ ಮಾಡುವ ಗಂಟೆಗಳನ್ನು ಕಡಿಮೆ ಮಾಡಿ, ಕೆಲಸಗಾರರಿಗೆ ಹೆಚ್ಚು ವಿರಾಮವನ್ನು ಕೊಡುವುದರಿಂದ ಹುಟ್ಟಿಕೊಳ್ಳುವ ಸಮಸ್ಯೆಗಳಿಗೆ ಪರಿಹಾರ, "ಹೆಚ್ಚು ಬೆಲೆ ಮತ್ತು ಕಠಿಣ".

ಪ್ರೊಫೆಸರ್ ಲಾಲ್‌ಮಂಡ್ ಯಂತ್ರಗಳ ಫಲವನ್ನು ಇನ್ನೂ ಹೇಳುತ್ತಾರೆ ; ಪದಾರ್ಥಗಳ ಸೃಷ್ಟಿ ಅತಿ ಹೆಚ್ಚಾಗಿದೆ.

"ಈ ಕಳೆದ ೨ ಶತಮಾನದಲ್ಲಿ ಪದಾರ್ಥಗಳನ್ನು ಸೃಷ್ಟಿಸುವ ಶಕ್ತಿ ೧/೮ ರಿಂದ ಲಕ್ಕೆ ಏರಿದುದರಿಂದ, ಜಗತ್ತಿನಲ್ಲಿ ತಯಾರಾದ ಆಹಾರ ಸಾಮಗ್ರಿಗಳ ಜೀವಶಕ್ತಿ ಒಬ್ಬ ಮನುಷ್ಯನಿಗೆ ೨೦೦೦ ರಿಂದ ೧೬೦೦೦೦ಕ್ಕೆ ಏರಿತು.

ಇದರಿಂದ ಎಲ್ಲರಿಗೂ ಇಷ್ಟು ಶಕ್ತಿಯ ಆಹಾರ ದೊರೆತಿದೆ ಎಂದು ಅರ್ಥವಲ್ಲ. ಆದರೆ ಜಗತ್ತಿನಲ್ಲಿ ೧೯೩೩ರಲ್ಲೆ ಆಹಾರ ಶಕ್ತಿ ಅಷ್ಟು ಇದ್ದಿತು. ಜಗತ್ತಿನ ಜನಸಂಖ್ಯೆ ಎಷ್ಟೇ ಹೆಚ್ಚಿರಲಿ. ಪ್ರತಿಯೊಬ್ಬ ಮನುಷ್ಯನಿಗೂ ೮೦ರಷ್ಟು ಆಹಾರ ಹೆಚ್ಚಾಗಿ ಸೃಷ್ಟಿಯಾಗಿದೆ. ಈ ಅಸಾಧ್ಯವಾದ ಆಹಾರ ಧಾನ್ಯಗಳ ರಾಸಿ ಎಲ್ಲರಿಗೂ ಸರಿಯಾಗಿ ಸಿಗಲಿಲ್ಲ. ಅದರ ಫಲವಾಗಿ ಬೆಲೆ ಕಡಿಮೆಯಾಯಿತು ಪದಾರ್ಥ ತಯಾರಿಕೆಯೂ ಕಡಿಮೆಯಾಯಿತು. ಕೂಲಿ ಬೆಲೆ ಕಡಿಮೆಯಾಯಿತು. ಕೂಲಿಗಳ, ಸಾಮಾನ್ಯ ಜನರ, ಕೊಳ್ಳುವ ಶಕ್ತಿ ಕಡಿಮೆಯಾಯಿತು. ಅದರ ಫಲವಾಗಿ ಆಹಾರ ವಸ್ತುಗಳಿಗೆ ಗಿರಾಕಿಯೂ ಕಡಮೆಯಾಯಿತು.

ದೊಡ್ಡ ದೊಡ್ಡ ವ್ಯಾಪಾರದ ಕೈಗಾರಿಕೆಗಳಿಗೆ ಅಂಕಿ ಅಂಶಗಳು ಹುಚ್ಚು ನಂಬಿಕೆ. ಅವರ ಜಮಾಖರ್ಚು ಪಟ್ಟಿಯಲ್ಲಿ ಲಾಭ ಸರಿಯಾಗಿ ತೋರದೆ ಇದ್ದರೆ ಅವರು ಆಹಾರ ಪದಾರ್ಥಗಳನ್ನು ನಾಶಮಾಡಿ, ಸಾಮಗ್ರಿಗಳನ್ನು ಅಪರೂಪಮಾಡಿ ಬೆಲೆ ಏರಿಸಿ ಹಸಿವಿನ ಸಮೃದ್ಧಿ ಸೃಷ್ಟಿಸುತ್ತಾರೆ. "೧೯೩೪ರಲ್ಲಿ ಇದು ಶಿಖರ ಮುಟ್ಟಿತು. ೮೮೬೬೦೦ ಗಾಡಿ ಗೋಧಿ, ೧೪೪೦೦೦ ಗಾಡಿ ಅಕ್ಕಿ, ೮೨೦೦೦ ಚೀಲ ಕಾಫಿಬೀಜ ೧ಕೋಟಿ ೨೦ಲಕ್ಷ ಟನ್ ಸಕ್ಕರೆ, ೬೦ ಲಕ್ಷ ಹಂದಿಗಳು, ೪೦೦೦೦೦ ದನಗಳು, ಇಷ್ಟನ್ನೂ ನಾಶ ಮಾಡಿದರು. ಕೆಲವು ಸಂದರ್ಭಗಳಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ದ್ರಾಕ್ಷಾರಸದ ಬಳ್ಳಿ ನಾಶ ಮಾಡಿದುದು ಮಾತ್ರವೇ ಅಲ್ಲ. ಇದ್ದ ದ್ರಾಕ್ಷಾರಸವನ್ನೆಲ್ಲಾ ನಾಶ ಮಾಡಿದರು. ಆಹಾರ ವಸ್ತುಗಳನ್ನು ಗೊಬ್ಬರಕ್ಕೆ ಹಾಕಿದರು ; ಯಂತ್ರಗಳಿಗೆ ಸೌದೆಯಾಗಿ ಸುಟ್ಟರು. ಇಷ್ಟಬಂದಂತೆ ನಾಶಮಾಡಿದರು. ಇವನ್ನು ಹಗುರವಾದ ಮನಸ್ಸಿನಿಂದಲೇ ಮಾಡಿದರು. ನಿರುದ್ಯೋಗಿಗಳಾದ ೩ ಕೋಟಿ ಜನರೂ ನಿರಾಹಾರಿಗಳಾದ ೭ ಕೋಟಿ (ಅಥವಾ ಹತ್ತು ಕೋಟಿಯೊ ?) ಜನರೂ ಅವರ ಕಡೆ ನೋಡುತ್ತಿರುವಾಗಲೇ ಸುಟ್ಟರು. ಆದುದರಿಂದ ಪದಾರ್ಥ ಸೃಷ್ಟಿ ಹೆಚ್ಚಾಯಿತು. ಮಿತಿಮೀರಿತು ಎಂಬುದು ನಿಜವಲ್ಲ. ಹೆಚ್ಚಾಯಿತು ಎಂದು ತೋರಿದುದು ಸರಿಯಾದ ಹಂಚಿಕೆ ಇಲ್ಲದುದರಿಂದ ಮಾತ್ರ."

ಪ್ರೊ—ಲಾಲ್‌ಮಂಡ್ ಯಂತ್ರಗಳ ಮತ್ತೊಂದು ಮುಖವನ್ನು ಕುರಿತು ಚರ್ಚಿಸಿದ್ದಾರೆ, ಆದರೆ ಅದು ನಮಗೆ ಅವಶ್ಯಕವಲ್ಲ. ಆ ಅಂಶ,

ಬಂಡವಾಳ ಒಂದೇ ಕಡೆ ಸಾಯುತ್ತಿದೆ ಕೊಳೆಯುತ್ತಿದೆ ಎಂಬುದರ ಫಲ ಈ ವಾದದ ವಿಷಾದ ಇದು. ಯಂತ್ರ ಯುಗದಿಂದ ಮನುಷ್ಯನಿಗೆ ನಾಶ ಎಂಬುದು ಇದರಿಂದ ಸ್ವಾಭಾವಿಕವಾಗಿ ಹೊರಡುವ ನಿರ್ಣಯ. ಆದರೆ ಈ ಲೇಖಕನ ನಿರ್ಣಯ ಇದರಿಂದ ಬೇರೆಯಾಗಿದೆ. "ಪ್ರತಿಯೊಬ್ಬ ಮನುಷ್ಯನಿಗೂ ಊಟ, ಮನೆ, ಕಾರು, ರೇಡಿಯೋ, ಟೆಲಿವಿಶನ್, ವಿರಾಮ, ನಿವೃತ್ತ ವೇತನ ಇವು ದೊರೆಯುವವರೆಗೆ ನಮಗೆ ಯಂತ್ರಗಳು ಎಷ್ಟಾದರೂ ಕಡಿಮೆಯೇ. ಕೆಲವರಿಗೆ ಅಜೀರ್ಣವಾಗುವುದಕ್ಕೆ ಮುಂಚೆ ಎಲ್ಲರಿಗೂ ಹೊಟ್ಟೆತುಂಬ ಬೇಕು ಎನ್ನುತ್ತಾರೆ." ಇದು ಪರಸ್ಪರ ವಿರುದ್ಧವಾದ ವಾದವಲ್ಲವೆ? ಯಂತ್ರಗಳಿಂದ ಪ್ರತಿಯೊಬ್ಬರಿಗೂ ಹೊಟ್ಟೆ ತುಂಬಲಿಲ್ಲ. ಕಾರು ದೊರೆಯಲಿಲ್ಲ ಎಂಬುದನ್ನು ನಾವು ನೋಡಿದ್ದೇವೆ. ಅದರ ಬದಲು ಒಬ್ಬೊಬ್ಬ ವ್ಯಕ್ತಿ ಕೋಟ್ಯಾಧಿಪತಿಯಾದ ಅಷ್ಟೆ. ಒಬ್ಬನಿಗೆ ಅನೇಕ ಮನೆಗಳು ಅನೇಕ ಕಾರುಗಳು ಸಮೃದ್ಧಿ ತೊರೆತಿವೆ. ಹಂಚುವಿಕೆ ಸರಿಯಾದರೆ ಈ ಕುಂದಕ ಪರಿಹಾರವಾಗುವುದೆ? ಒಬ್ಬ ಮನುಷ್ಯ ಮತ್ತೊಬ್ಬನ ಶ್ರಮದಿಂದ ಜೀವಿಸುವವರೆಗೆ, ಹಂಚಿಗೆ ಹೇಗೆ ಸರಿಯಾಗುತ್ತದೆ. ದೊಡ್ಡ ದೊಡ್ಡ ಯಂತ್ರ ಪ್ರಚಾರದಲ್ಲಿ, ಮನುಷ್ಯ ತನ್ನ ದುಡಿಮೆಯಿಂದ ಜೀವಿಸುವ ಬದಲು, ಇತರರ ದುಡಿಮೆಯಿಂದ ಜೀವಿಸುವ ತಂತ್ರವಿದೆ. ನೀವು ಹಂಚಿಕೆಯ ವ್ಯವಸ್ಥೆ ಸರಿಪಡಿಸಬಹುದು. ಯಂತ್ರ ಪ್ರಚಾರ ಫಲಗಳಲ್ಲಿ ತೋರುವ ವಿಷವನ್ನು ಇಲ್ಲದಂತೆ ಮಾಡಬಹುದು. ಆದರೆ ಯಂತ್ರದಿಂದ, ಜನರಿಗೆ ನಿರುದ್ಯೋಗ ಖಂಡಿತ. ಅದು ಯಂತ್ರದ ಸ್ವಭಾವ. ಆ ಸ್ವಭಾವ ಬದಲಾಯಿಸುವುದು ಸಾಧ್ಯವಿಲ್ಲ. ಅಮೇರಿಕಾದಲ್ಲಿ ದೇಹಶ್ರಮಕ್ಕೆ ಮಾತ್ರ ಅರ್ಹರಾದ ೩ ಕೋಟಿ ಜನ ನಿರುದ್ಯೋಗಿಗಳೂ ಅವರ ಮೇಲೆ ಅವಲಂಬಿಸಿರುವ ೭ ಕೋಟಿ ಜನರೂ ಇರುವುದಾದರೆ, ಭಾರತದಲ್ಲಿ ದೇಹಶ್ರಮದ ಮೇಲೆ ಅವಲಂಬಿಸಿರುವ ೧೫ ಕೋಟಿ ಜನರೂ ಅವರ ಸಂಸಾರಗಳೂ ಇದ್ದಾರೆ. ಈ ನಿರುದ್ಯೋಗ ಉಪವಾಸವನ್ನು ಯಾವ "ಸರಿಯಾದ ಹಂಚಿಕೆಯಿಂದಲೂ" ಮಂತ್ರ ಹಾಕಿ ಓಡಿಸುವುದು ಸಾಧ್ಯವಿಲ್ಲ.

ಹಂಚಿಕೆಯ ವ್ಯವಸ್ಥೆಯನ್ನು ಪ್ರೊ॥ ಲಾಲ್‌ಮಂಡ್ ಹೀಗೆ ವಿವರಿಸುತ್ತಾರೆ:

"ನಿಜವಾದ ಮನುಷ್ಯತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು ಪದಾರ್ಥ, ಕೆಲಸ ಇವುಗಳ ಹಂಚಿಕೆ ಮಾಡಬೇಕು. ಅದು ಮನುಷ್ಯನ ಯೋಗ್ಯತೆಯ ಮೇಲೆ ಅವಲಂಬಿಸಬೇಕು. ಮನುಷ್ಯತ್ವದ ಗೌರವ ಅವರ ಮೂಲವಾಗಿರಬೇಕು. ನಮ್ಮ ಅರ್ಥಶಾಸ್ತ್ರಾನುಸಾರವಾದ ಪದ್ಧತಿ, ಮನುಷ್ಯನ ಯೋಗ್ಯತೆಗೆ ಅನುಗುಣವಾಗಿದ್ದಿದ್ದರೆ ಉದ್ಯೋಗ ಎಲ್ಲರಿಗೂ ದೊರೆಯುತ್ತಿದ್ದಿತು. ಪ್ರತಿಫಲ ಮನುಷ್ಯನ ಯೋಗ್ಯತೆ ಕೆಲಸಗಳಿಗೆ ಅನುಗುಣವಾಗಿರುತ್ತಿದ್ದಿತು. ಉಳಿದ ಎಲ್ಲಾ ಚಟುವಟಿಕೆಗಳಿಗೂ ಅವಶ್ಯಕವಾದ ವಿರಾಮ ಸಹ ಮನುಷ್ಯನಿಗೆ ದೊರೆಯುತ್ತಿದ್ದಿತು."

ಸರಿ. ಮನುಷ್ಯತ್ವದ ನಿಜವಾದ ದೃಷ್ಟಿ, ಅವನು ಇತರರಿಗಾಗಿ ದುಡಿಯಬೇಕಾದುದಿಲ್ಲವೆಂಬುದೇ, ತನ್ನ ಲಾಭಕ್ಕಾಗಿ ಇತರರನ್ನು ಲೂಟಿ ಮಾಡುವುದಿಲ್ಲವೆಂಬುದೇ. ಇವು ಕೈಯಿನ ಕೈಗಾರಿಕೆಗಳ ಮೇಲೆ ಅವಲಂಬಿಸಿ, ತನ್ನಿಂದಾದ ಕೆಲಸವನ್ನು ಸಂತೋಷದಿಂದ ಮಾಡಿ ಅದರ ಫಲವನ್ನು ಹೊಂದುವ ಸಮಾಜದಲ್ಲಿ ಮಾತ್ರ ಸಾಧ್ಯ. ಎಡ್ವರ್ಡ್ ಕಾರ್ಪೆಂಟರ್‌ರು "ಇತರರ ಶ್ರಮದ ಫಲವನ್ನು ಅನುಭವಿಸುವುದನ್ನು ಬಿಟ್ಟು ಹೊರತು ಏನೂ ಸಾಧ್ಯವಿಲ್ಲ. ಬೇರೆ ಮಾರ್ಗವಿಲ್ಲ. ವ್ಯಕ್ತಿಗಳಿಗೇ ಆಗಲಿ ರಾಷ್ಟ್ರಗಳಿಗೇ ಆಗಲಿ, ಜಗತ್ತಿನ ಸೃಷ್ಟಿಯಿಂದ ಇಂದಿನವರೆಗೆ ಯುದ್ಧದ ಕಾರಣ ಇದೇಯೆ" ಎಂದಿದ್ದಾರೆ.

ಪದಾರ್ಥಗಳ ತಯಾರಿಕೆಯನ್ನು ಮಾತ್ರ ಸರ್ಕಾರ ತನ್ನ ಕೈಯಲ್ಲಿ ಇಟ್ಟುಕೊಂಡರೆ ಏನೂ ಸಾಧ್ಯವಿಲ್ಲ. ದೊಡ್ಡ ದೊಡ್ಡ ಯಂತ್ರಗಳೂ ದೊಡ್ಡ ಕೈಗಾರಿಕೆಗಳೂ ನಡೆಯುವುದು ಮರೆಯಾಗುವವರೆಗೆ, ಒಂದು ದೇಶ ಒಂದು ದೇಶವನ್ನು ಲೂಟಿ ಮಾಡುವುದು ನಿಲ್ಲುವುದಿಲ್ಲ. ಯಂತ್ರಗಳು ಮರೆಯಾಗುವವರೆಗೆ ಮನುಷ್ಯನ ಶಕ್ತಿಗೆ ಬೆಲೆ ಇಲ್ಲ. ಮನುಷ್ಯ ಯಂತ್ರದ ಗುಲಾಮ. ಇಂದಿನ ವ್ಯವಸ್ಥೆಯಲ್ಲಿ, ಜನಸಂಖ್ಯೆ ಹೆಚ್ಚಾದಂತೆ ಕಾಣುತ್ತಿದೆ. ಆದರೆ ನಿಜವಾಗಿ ಜನಸಂಖ್ಯೆ ಹೆಚ್ಚಿಲ್ಲ. ಸೋಮಾರಿಗಳಾದ ಧನಿಕರ ಸಂಖ್ಯೆ ಹೆಚ್ಚಾಗಿದೆ. ಸಮತಾವಾದ ಅಥವ ಕಮ್ಯುನಿಸ್ಟ (ಪ್ರಜಾ ಸಮಸ್ತ ಸಾಮ್ಯವಾದ) ಪದ್ಧತಿಯಿಂದ ಸೋಮಾರಿಗಳಾದ ಧನಿಕರು ಇಲ್ಲದಂತೆ ಮಾಡಬಹುದು. ಆದರೆ ಅಲ್ಲಿ ಕೈಗಾರಿಕಾ ಯಂತ್ರಗಳು ಬೇಕೆಂದು ಆ ತತ್ವ ಪ್ರತಿಪಾದಕರು ಹೇಳುವುದರಿಂದ ಅಲ್ಲಿಯೂ ಪರಾವಲಂಬನೆ ಇದ್ದೇ

ಇರುತ್ತವೆ. ಒಬ್ಬನ ಮೇಲೆ ಒಬ್ಬ ಜೀವಿಸುವ ರೋಗ ವಾಸಿಯಾಗುವ ವರೆಗೆ ಯುದ್ಧ ನಡೆದೇ ನಡೆಯುತ್ತದೆ. ದೇಶಕ್ಕೆ ಕ್ಷೇಮವಾಗುವುದಿಲ್ಲ. ರಾಷ್ಟ್ರದ ಮತ್ತು ವ್ಯಕ್ತಿಯ ಪ್ರತಿಯೊಂದು ಕಾರ್ಯದಲ್ಲಿಯೂ ಸತ್ಯ ಅಹಿಂಸೆ ತೋರುವವರೆಗೆ ಪರಾವಲಂಬನೆ ನಿಲ್ಲುವುದಿಲ್ಲ. ಇದು ಕೈ-ಕೈಗಾರಿಕೆಯ ಮೇಲೆ ಅವಲಂಬಿಸಿರುವ ದೇಶಗಳಲ್ಲಿ ಮಾತ್ರ ಸಾಧ್ಯ. ಎಡ್ವರ್ಡ್ ಕಾರ್ಪೆಂಟರ್ ಅವರ ಅಭಿಪ್ರಾಯವನ್ನೇ ಮತ್ತೆ ಉದಾಹರಿಸುತ್ತೇನೆ.

"ಸತ್ಯ ಮತ್ತು ಸರಳಜೀವನ ಬರಿಯ ಹುಚ್ಚುಭಾವನೆಗಳು ಮಾತ್ರವೇ ಅಲ್ಲ ಅವು ಬರಿಯ ಭಾವನೆಗಳಿಗಿಂತ ಹೆಚ್ಚಾದುವು; ಸ್ವಂತ ಗುಣಗಳಿಗಿಂತ ಹೆಚ್ಚಾದುವು ರಾಷ್ಟ್ರದ ಮಂಗಳಕ್ಕೆ ಅವೇ ಮೂಲ. ಅವುಗಳನ್ನು ಅವಲಂಬಿಸುವುದು, ತಿರಸ್ಕರಿಸುವುದು, ಸಾರ್ವಜನಿಕ ಜೀವನದ, ಒಂದು ಒರೆಗಲ್ಲು ನಿಮ್ಮ ಸ್ವಂತ ಶ್ರಮದಿಂದ ಜೀವಿಸುವುದು ಎಂದರೆ ಪ್ರಪಂಚದೊಂದಿಗೆ ಸಮಾನವಾಗಿ ಶಾಂತಿಯಿಂದ ಇರುವುದೆಂದು ಅರ್ಥ. ಇತರರ ಶ್ರಮದಿಂದ ಬಾಳುವುದು ಎಂದರೆ, ನಿಮ್ಮ ಮನೆಯಲ್ಲಿಯೇ ನಿಮ್ಮ ಬಾಳು ಸುಳ್ಳು ಆಗುತ್ತದೆ. ದ್ವೇಷ ಎದುರುಪಕ್ಷ ಪ್ರಾರಂಭವಾಗುತ್ತದೆ. ಈ ತತ್ವವನ್ನು ಒಂದು ದೇಶ ಅಥವ ಜನಾಂಗ ಅನುಸರಿಸಿದರೆ ಆಗ ದೇಶದಲ್ಲಿ ಒಳಜಗಳವುಂಟಾಗುತ್ತದೆ ದೇಶವನ್ನು ನಾಶಮಾಡುವ ಶತ್ರುಗಳು ಸುತ್ತ ಬೆಳೆಯುತ್ತಾರೆ."

ಒಟ್ಟಿನಲ್ಲಿ ಅಹಿಂಸೆಯ ದೃಷ್ಟಿಯಿಂದ ರಾಜಕೀಯ ಆರ್ಥಿಕ ಬಾಳನ್ನು ವ್ಯವಸ್ಥೆಗೊಳಿಸಿಕೊಂಡ ದೇಶದಲ್ಲಿ ಒಳ ಜಗಳವೂ ಇರುವುದಿಲ್ಲ. ಅದಕ್ಕೆ ಹೊರಗಿನ ಶತ್ರುಗಳೂ ಇರುವುದಿಲ್ಲ.

೨೪–೬–೪೦

———

## ೧೦. ಹಿಂದಲತ್ಯಾಗಕ್ಕೆ ಇಂದು ಬೆಲೆ

ನಮ್ಮ ಮಂತ್ರಿಗಳ ಕಷ್ಟಗಳಿಗೆ ಕೊನೆಯೇ ಇಲ್ಲ. ಪ್ರಾರಂಭದಲ್ಲಿ ಅವರು ಸರ್ವಶಕ್ತರೆಂದು ಜನರು ಭಾವಿಸಿದರು. ಸ್ವಲ್ಪ ತೊಂದರೆ ಇದ್ದವರೂ— ಅದು ನಿಜವಾದರೂ ಕಲ್ಪಿಸಿಕೊಂಡುದಾದರೂ— ನೇರವಾಗಿ ಅವರಲ್ಲಿಗೇ ಹೋದರು. ಒಂದುಸಲ ಎರಡು ಪದವೀಧರರ ಒಂದು ಸಂದರ್ಶನ ಕಾಗದವನ್ನು ಆಳು ತಂದು ಮಂತ್ರಿಗೆ ಕೊಟ್ಟ. ಬಂದಿದ್ದವರು ವಿದ್ಯಾ ಶಿಕ್ಷಣದಲ್ಲಿ ಪರಿಚಿತರಾದುವರಿಂದ ಶಿಕ್ಷಣದ ವಿಷಯ ಕುರಿತು ಚರ್ಚಿಸಲು ಬಂದಿರಬಹುದೆಂದು ಮಂತ್ರಿ ಭಾವಿಸಿದರು. ಆದರೆ ಆತ ಬಂದಿದ್ದುದು ತನ್ನ ಮನೆಯಲ್ಲಿ ಬಾಡಿಗೆಗೆ ಇದ್ದ ಒಬ್ಬ ಮನುಷ್ಯ ಏನು ಮಾಡಿದರೂ ಮನೆ ಬಿಟ್ಟು ಹೋಗದೆ ಕಿರುಕುಳ ಕೊಡುತ್ತಿದ್ದಾನೆಂಬ ದೂರುವುದಕ್ಕೆ. ಇದನ್ನು ಕೇಳಿ ಮಂತ್ರಿಗಳಿಗೆ ಉಂಟಾದ ಆಶ್ಚರ್ಯ ಊಹಿಸಿ. ರೈತರು ಕುಡಿಯುವ ನೀರಿನ ಭಾವಿಗಳಿಗಾಗಿ, ರಸ್ತೆಗಳಿಗಾಗಿ ಪಾಠಶಾಲೆಗಳಿಗಾಗಿ ಮಂತ್ರಿಗಳಿಗೆ ಬರೆದುಕೊಂಡರೆ ಅದು ಅರ್ಥವಾಗುತ್ತದೆ ಈ ದೂರನ್ನು ಕೇಳಲು ಮಂತ್ರಿಯೇ ಸರಿಯಾದ ಅಧಿಕಾರಿ. ಆದರೆ ವಿದ್ಯಾವಂತರೆನ್ನಿಸಿಕೊಂಡವರು ಮೇಲೆ ಹೇಳಿದಂತಹ ದೂರುಗಳನ್ನು ಮಂತ್ರಿಗೆ ತರುವುದೆಂದರೆ—ಇನ್ನು ಸಾಕು.

ಮಂತ್ರಿಗಳ ಟಪಾಲಿನ ಬಹುಭಾಗ ನೌಕರಿಗಾಗಿ ಅರ್ಜಿಗಳು. ಅನೇಕ, ಸಾಧಾರಣ ಅರ್ಜಿಗಳು ; ಕೆಲವರು ನೌಕರಿ ತಮ್ಮ ಹಕ್ಕು ಎಂದೇ ಕೇಳುತ್ತಾರೆ. ನೌಕರಿ ಸಿಕ್ಕದಿದ್ದರೆ ಕಾಂಗ್ರೆಸ್ ವಿರೋಧಿಗಳಾಗುತ್ತಾರೆ. ಕೆಲವರ ಹಕ್ಕುಗಳು ನೋಡುವುದಕ್ಕೆ ನ್ಯಾಯವಾಗಿ ಕಾಣುತ್ತವೆ. ೧೯೨೧ ರಲ್ಲಿ ಖಾದಿ ಧರಿಸಿದುದಕ್ಕಾಗಿಯೂ ಮಗಳು ತಿಲಕ್ ಸ್ವರಾಜ್ಯನಿಧಿಗೆ ಐದು ರೂ. ಕೊಟ್ಟುದುದಕ್ಕಾಗಿಯೂ, ಕೆಲಸ ಕಳೆದುಕೊಂಡ ಒಬ್ಬ ಪೋಸ್ಟ್ ಮಾಸ್ಟರು ಇಂದು ತಮಗೆ ಮತ್ತೆ ನೌಕರಿ ದೊರಕಬೇಕೆಂದು ಬಯಸುತ್ತಾರೆ. ಸರ್ಕಾರದಲ್ಲಿ ಮುಗಿಯದಷ್ಟು ಹಣವಿದ್ದರೆ ಈ ಬಗೆಯ ಕುಂದಕಗಳನ್ನೆಲ್ಲಾ ಸರಿಮಾಡಲೇ ಬೇಕು, ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಪರಿಸ್ಥಿತಿಯ ಮತ್ತೊಂದು ಕಡೆಯನ್ನೂ ಪರಿಗಣಿಸೋಣ. ಮೊದಲನೆಯದಾಗಿ ಪೋಸ್ಟು ಇಲಾಖೆ ಪ್ರಾಂತ್ಯ ಇಲಾಖೆಯಲ್ಲ. ಒಂದು ಪಕ್ಷ ಆಗಿದ್ದರೂ

೧೯೨೧ರಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದವನು, ಇಂದು ೧೭ ವರುಷಗಳ ನಂತರ, ಆ ನೌಕರಿ ಮಾಡಲು ಸಾಧ್ಯವಿಲ್ಲದಷ್ಟು ಮುದುಕನಾಗಿರುತ್ತಾನೆ. ಕೆಲಸಕ್ಕೆ ಸೇರಿಸಿಕೊಳ್ಳಬೇಕಾದರೆ ೨೫ ವರುಷದೊಳಗೆ ಇರಬೇಕೆಂಬ ಸರ್ಕಾರಿ ನಿಯಮ ಬೇರೆ ಇದೆ.

ಎರಡನೆಯ ಬಗೆಯ ಅರ್ಜಿ ರಾಷ್ಟ್ರಕ್ಕಾಗಿ, ಹಿಂದೆ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟವರದು. ಇಂದು ಅವರಿಗೆಲ್ಲಾ ತಮ್ಮ ನೌಕರಿ ಮತ್ತೆ ಬೇಕು. ರಾಷ್ಟ್ರ ರಾಜೀನಾಮೆ ಕೊಡಿ ಎಂದ. ಸರ್ಕಾರಿ ನೌಕರರನ್ನು ಕರೆಯಲಿಲ್ಲ ಎಂಬುದು ಜ್ಞಾಪಕವಿರಲಿ. ಆದರೆ ಅದು ಇರಲಿ. ಈ ಅರ್ಜಿಯನ್ನು ತೆಗೆದುಕೊಳ್ಳೋಣ. ನಾನು ಅರ್ಜಿಯಿಂದಲೇ ಇದನ್ನು ಎತ್ತಿಕೊಳ್ಳುತ್ತೇನೆ.

"ನಾನು ೧೯೧೬ ರಲ್ಲಿ ಸರ್ಕಾರಿ ನೌಕರಿ ಸೇರಿದೆ. ಕಲೆಕ್ಟರ್ ಆಫೀಸಿನ ಸ್ಪೆಶಲ್ ಬ್ರಾಂಚ್ ಗುಮಾಸ್ತನಾಗಿ ಸೇರಿ ೬ ವರುಷ ಕೆಲಸಮಾಡಿ, ರಾಷ್ಟ್ರದ ಕರೆ ಕೇಳಿ ರಾಜಿನಾಮೆ ಕೊಟ್ಟೆ. ಅಲ್ಲಿಂದ ಪ್ರಚಾರಕನಾಗಿ, ಕಾರ್ಯದರ್ಶಿಯಾಗಿ ಕಾಂಗ್ರೆಸ್ ಸೇವೆಯಲ್ಲಿ ಇದ್ದೇನೆ. ೧೯೩೦ ರಲ್ಲಿ ೩೨ ರಲ್ಲಿ ನನಗೆ ಎರಡು ಸಲ ಸೆರೆವಾಸ ಆಯಿತು. ಅಲ್ಲಿಂದ ಈಚೆಗೆ ನಿರುದ್ಯೋಗ. ಜೀವನ ನಡೆಯುವುದು ಕಷ್ಟವಾಗಿದೆ. ನಾನು ನೌಕರಿಯಲ್ಲಿ ಮುಂದು ವರಿದಿದ್ದರೆ ನನ್ನ ಸ್ಥಿತಿ ಬೇರೆಯಾಗಿರುತ್ತಿದ್ದಿತು. ಯಾಕೆಂದರೆ ನನ್ನ ಜತೆಯ ಗುಮಾಸ್ತ ಸಬ್ ಮ್ಯಾಜಿಸ್ಟ್ರೇಟ್ ಆಗಿದ್ದಾನೆ. ಇನ್ನು ಕೆಲವರ ಹೆಸರು ಸಬ್ ಮ್ಯಾಜಿಸ್ಟ್ರೇಟರ ಪಟ್ಟಿಯಲ್ಲಿದೆ. ಆದುದರಿಂದ ನನಗೆ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿಯೋ ಅಥವಾ ಮತ್ತಾವುದಾದರೂ ಡಿಪಾರ್ಟ್‌ಮೆಂಟಿನಲ್ಲಿಯೋ ಕೆಲಸ ಕೊಡಬೇಕು. ನಾನು ಇಲ್ಲಿಯವರೆಗೆ ನೌಕರಿಯಲ್ಲಿ ಇದ್ದಿದ್ದರೆ ನನಗೆ ಯಾವ ಗ್ರೇಡು ಬತ್ತಿ ದೊರೆಯುತ್ತಿದ್ದಿತೋ ಆ ಗ್ರೇಡಿನಲ್ಲಿ ನೌಕರಿ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ."

ಇದು ಮಿತಿ ಮೀರಿತು. ಮಂತ್ರಿ ಇಂತಹ ಪ್ರಾರ್ಥನೆ ತಿರಸ್ಕರಿಸಲೇ ಬೇಕು. ಈ ಅರ್ಜಿದಾರರು ರಾಷ್ಟ್ರದ ಕರೆ ಕೇಳಿ ರಾಜಿನಾಮೆ ಕೊಟ್ಟುದು ಸಂತೋಷದಿಂದಲೇ. ಸ್ವಾತಂತ್ರ್ಯದ ಸನ್ನಿಧಿಯಲ್ಲಿ ಅದು ತ್ಯಾಗ. ಈಗ ಅವರು ತಮ್ಮ ನೌಕರಿ ಹಿಂದಕ್ಕೆ ಬೇಕು ಎನ್ನುವುದೂ, ಹಿಂದಲ ಗ್ರೇಡ್ ನಲ್ಲಿಯೇ ಬೇಕು ಎನ್ನುವುದೂ, ಆ ತ್ಯಾಗವನ್ನೆಲ್ಲಾ ಹಿಂದಕೆ ತೆಗೆದು

ಕೊಂಡಂತೆ. ತ್ಯಾಗವನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಇಂತಹ ಹಿಂದಕ್ಕೆ ತೆಗೆದುಕೊಳ್ಳುವ ತ್ಯಾಗದಿಂದ ಸ್ವಾತಂತ್ರ್ಯ ಬರುವುದಿಲ್ಲ. ರಾಜಿನಾಮೆ ಕೊಟ್ಟವರನ್ನು ಮತ್ತೆ ನೌಕರಿಗೆ ಸೇರಿಸುವುದಾದ ಮೇಲೆ ಜುಲ್ಮಾನೆ ತೆತ್ತವರಿಗೆ ಜುಲ್ಮಾನೆ ಹಿಂದಕ್ಕೆ ಕೊಡಿಸಬೇಕು. ಸೆರೆವಾಸ ಅನುಭವಿಸಿದವರಿಗೆ, ನಿರುದ್ಯೋಗಕ್ಕಾಗಿ ಪ್ರತಿಫಲ ಕೊಡಬೇಕು. ಇಷ್ಟರನ್ನೂ ಆಪ್ತರನ್ನೂ ಕಳೆದುಕೊಂಡವರಿಗೆ ಯಾವ ಪ್ರತಿಫಲ ಕೊಡೋಣ? ಮಾಡಿದ ತ್ಯಾಗವೆಲ್ಲಾ ಮುಂದಲ ಲಾಭದ ದೃಷ್ಟಿಯಿಂದ ಮಾಡಿದುವೆ? ಇಲ್ಲ. ಸ್ವಾತಂತ್ರ್ಯ ಪರಿಶುದ್ಧವೂ ಪವಿತ್ರವೂ ಆದದು. ಆದಕ್ಕೆ ಬೇಕಾದ ತ್ಯಾಗ ಸಹ ಪವಿತ್ರ ಪರಿಶುದ್ಧ. ಮುಂದೆ, ಸರ್ಕಾರಿ ನೌಕರಿ ರೂಪದಲ್ಲಿ ಪ್ರತಿಫಲ ಹೊಂದುವ ತ್ಯಾಗದಿಂದ ಸ್ವಾತಂತ್ರ್ಯ ದೊರಕುವುದಿಲ್ಲ.

೭-೫-೧೯೩೮.

---

## ೧೧. ಹೊಸ ಡೆಲ್ಲಿಯ ಒಂದು ನೋಟ

### (೧)

ಹೊಸ ಡೆಲ್ಲಿಯಲ್ಲಿ ಒಂದು ಪ್ರತಿಮೆ ನಿಲ್ಲಿಸಲು ಏರ್ಪಾಡಾಗುತ್ತಿದ್ದ ಉತ್ಕೃಷ್ಟ ಪ್ರದೇಶವನ್ನು ಹಾಯ್ದು ನಾನೂ ನನ್ನ ಸ್ನೇಹಿತನೂ ಮೋಟಾರಿನಲ್ಲಿ ಹೋಗುತ್ತಿದ್ದೆವು. ನನ್ನ ಆಂಗ್ಲೇಯ ಮಿತ್ರ ಹೀಗೆ ಹೇಳಿದರು, "ಸ್ವರ್ಗೀಯ ಚಕ್ರವರ್ತಿ ಜಾರ್ಜರ ಅಭಿಪ್ರಾಯವನ್ನು ಕೇಳಿದ್ದರೆ, ಪ್ರಾಯಶಃ ಅವರು ತಮ್ಮ ಪ್ರತಿಮೆ ಇಲ್ಲಿ ನಿಲ್ಲಿಸುವುದರ ಬದಲು ಅದರ ಹಣವನ್ನು, ಹೊಸ ಡೆಲ್ಲಿಯ ಹರಿಜನ ಝಾಡಮಾಲಿಗಳ ಸೌಕರ್ಯಕ್ಕಾಗಿ ಉಪಯೋಗಿಸಿ" ಎಂದು ಹೇಳುತ್ತಿದ್ದರೆಂದು ಭಾವಿಸುತ್ತೇನೆ. ಮಿತ್ರರು ಝಾಡಮಾಲಿಗಳ ಮನೆಗಳನ್ನು ನೋಡಿ ಅನುಭವದಿಂದ ಮಾತನಾಡುತ್ತಿದ್ದರು. ಮಾತನಾಡುತ್ತಾ "ಒಳ್ಳೆಯವರಾದ ವೈಸರಾಯ್, ತಮ್ಮ ಮನೆಯ ಹತ್ತಿರದಲ್ಲಿಯೇ ಇರುವ ತಮ್ಮ ಸಹ ಪೌರರಾದ ಹರಿಜನರ ಕೇರಿಗಳನ್ನು ಎಂದಾದರೂ ನೋಡಿರಬಹುದೇ" ಎಂದು ನಾವು ಆಶ್ಚರ್ಯಪಟ್ಟೆವು. ಆದರೆ ನಾನು ಆ ಯೋಚನೆ ದೂರೀಕರಿಸಿ

ಅನೇಕ ನ್ಯಾಯವಿಧಾಯಕ ಸಭಾಸದಸ್ಯರು, ಈ ಬೀದಿ ನೋಡಿರಬಹುದೇ ? ನಾನು ನೋಡಿದ್ದೇನೆಯೇ ? ಎಂದು ಕೇಳಿಕೊಂಡ "ಆದರೆ, ಎಲ್ಲಿ ಕಾಲಾವಕಾಶವಿದೆ ! ನನಗೆ ಅವಕಾಶವಿಲ್ಲದ ಮೇಲೆ ಇತರರಿಗೆ ಎಲ್ಲಿದೆ ಅವಕಾಶ ? ನಾನು ಈ ಮನೋಭಾವದಲ್ಲಿದ್ದಾಗ ಪಂಚಕೋಶೆ ಎಂಬಲ್ಲಿ, ಹರಿಜನ ಝಾಡಮಾಲಿಗಳ ಸಭೆಯಲ್ಲಿ ನನ್ನನ್ನು ಭಾಷಣ ಮಾಡಿ ಎಂದು ಕೇಳಿದರು. ನಾನು ತತ್‌ಕ್ಷಣ ಒಪ್ಪಿಕೊಂಡೆ. ಈ ಒಪ್ಪಿಕೊಳ್ಳುವುದಕ್ಕೆ ಕಾರಣ, ನಾನು ಸಭೆಯಲ್ಲಿ ಮಾತನಾಡಲು ಬಹಳ ಉತ್ಸಾಹಿಯಾಗಿದ್ದೆ ಎಂಬುದಲ್ಲ. ಆದರೆ ನನ್ನ ಸಹೋದರರಾದ, ನನ್ನ ನೆರೆಯಲ್ಲಿ ವಾಸಿಸುವ ಝಾಡಮಾಲಿಗಳ ಪರಿಚಯ ಮಾಡಿಕೊಳ್ಳದುದು ತಪ್ಪು ಎಂದು ಬಹಿರಂಗವಾಗಿ ತಪ್ಪು ಒಪ್ಪಿಕೊಳ್ಳಬೇಕೆಂಬುದು ನನ್ನ ಇಷ್ಟವಾಗಿದ್ದಿತು. ಸಭೆಯಲ್ಲಿ ಮಾತನಾಡುವಾಗ ನನ್ನ ತಪ್ಪನ್ನು ಒಪ್ಪಿದೆ. ಸಾಧ್ಯವಾದಷ್ಟು ಬೇಗ ಝಾಡಮಾಲಿಗಳ ಕೇರಿಗೆ ಹೋಗಿ ತಕ್ಕಮಟ್ಟಿಗೆ ಅವರ ಪರಿಚಯ ಮಾಡಿಕೊಂಡೆ. ಸಭೆ ಚೆನ್ನಾಗಿ ಸೇರಿದ್ದಿತು. ಝಾಡಮಾಲಿಗಳಿಗಾಗಿ ಜಗಲ್ ಕಿಶೋರ್ ಭಿರ್ಲಾ ಮತ್ತು ಹರಿಜನ ಸೇವಕ ಸಂಘದ ನಿಧಿಗಳಿಂದ ಕಟ್ಟಿದ ದೇವಸ್ಥಾನದಲ್ಲಿ ಸಭೆ ನಡೆಯಿತು. ಸಭೆ ನಡೆದ ನಂತರ ಕೆಲವು ಬಂಗಾಳಿಗಳು ಹಾಡಿದ ಕೀರ್ತನೆ ಮತ್ತು ಅವರ ಜತೆಯಲ್ಲಿದ್ದ ಒಬ್ಬ ಪೂಜ್ಯಳಾದ ಮಹಿಳೆಯು ಗೌರವಾರ್ಥವಾಗಿ ಹಂಚಿದ ಮಿಠಾಯಿ, ಇವುಗಳಿಂದ ನನಗೆ ಬಹಳ ಆನಂದವಾಯಿತು. ದೇವಸ್ಥಾನದ ಆವರಣವನ್ನು ಆಗಾಗ್ಗೆ ಈ ಬಗೆಯ ಸಭೆಗಳಿಗಾಗಿ ಉಪಯೋಗಿಸುತ್ತಾರೆ. ಹೀಗೆ ದೇವಸ್ಥಾನ, ಸವರ್ಣಗಳೂ ಹರಿಜನರೂ ಸೇರುವ ಸ್ಥಳವಾಗಿದೆ. ನನಗೆ ಬಹಳ ಸಂತೋಷ ಉಂಟುಮಾಡಿದ ಇನ್ನೊಂದು ವಿಷಯ ಹರಿಜನರ ಹಿತಕ್ಕಾಗಿ ದುಡಿಯುತ್ತಿದ್ದ ಕೆಲಸಗಾರರ ಸಂಖ್ಯೆ. ಅವರ ಪೈಕಿ ಹೊಸ ಡಿಲ್ಲಿ ವಾಲ್ಮೀಕಿ ಸಭೆಯ ಅಧ್ಯಕ್ಷ, ಲಾಲಾ ಬನವರಿಲಾಲ್ ಮುಖ್ಯರಾದವರು.

ಈ ಮಿತ್ರರ ಜತೆಯಲ್ಲಿ ನಾನು ಝಾಡಮಾಲಿಗಳ ಕೇರಿಗೆ ಹೋದೆ. ಅಲ್ಲಿ ಸಭೆಯಲ್ಲಿ ನೋಡುವುದಕ್ಕಿಂತ, ಇನ್ನೂ ಹತ್ತಿರದಲ್ಲಿ ಅವರ ಸ್ಥಿತಿ ನೋಡಲು ಸಾಧ್ಯವಾಯಿತು. ನನಗೆ ಅಲ್ಲಿ ಚೆನ್ನಾಗಿ ಕಂಡುದು ಅವರ ಗುಡಿಸಲುಗಳ ನಡುವೆ ಇದ್ದ ಬಯಲು. ಅಲ್ಲಿ ಮಕ್ಕಳು ಓಡಾಡುತ್ತಾರೆ. ಬೇಸಿಗೆ ಕಾಲದಲ್ಲಿ ಬಯಲಿನ ಪೂರ್ಣ ಪ್ರಯೋಜನ ಅವರಿಗೇಯೆ. ಆದರೆ

ಆ ಗುಡಿಸಲುಗಳೊ ! ಅಬ್ಬ ! ಅವು ಸಣ್ಣ ನಗರಗಳಿಗೇನೋ ಸಾಕಾಗ ಬಹುದು. ಯಾಕೆಂದರೆ ಸಣ್ಣ ನಗರಗಳಲ್ಲಿ ಜನರ ದೃಷ್ಟಿ, ಸಾಧಾರಣ ವಾಗಿ ಆರೋಗ್ಯ, ನೈರ್ಮಲ್ಯದ ಕಡೆ ಇರುವುದಿಲ್ಲ. ಆದರೆ ಹೊಸ ಡಿಲ್ಲಿಗೆ ಇವು ಶುದ್ಧ ನಾಚಿಕೆಗೇಡು ಈ ಕೇರಿಯಿಂದ ಕೆಲವೇ ಫರ್ಲಾಂಗ್ ದೂರದಲ್ಲಿ. ಇದರಿಂದ ತೀರ ಭಿನ್ನವಾದ ಪೋಲಿಸ್‌ನವರ ಭವನಗಳಿವೆ. ಆದರೆ ಝಾಡಮಾಲಿಗಳಿಂದ, ಸಮಾಜಕ್ಕೆ ಪೋಲಿಸಿನವರಿಗಿಂತ ಕಡಿಮೆ ಉಪಯೋಗವೇ? ಡಿಲ್ಲಿಯ ಉಳಿದ ಭಾಗದಲ್ಲಿ ಯಾವಾಗಲೂ ದೀಪಾ ವಳಿಯೇ. ಆದರೆ ಈ ಝಾಡಮಾಲಿಗಳಿಗೆ ಒಂದೆರಡು ದೀಪದ ಕಂಬದ ಮೇಲೆ ಇಲ್ಲ ಮಕ್ಕಳು ಈ ದೀಪದ ಕಂಬಗಳ ಬೆಳಕಿನಲ್ಲಿ ಓದುತ್ತಾರೆ. ಅವರ ಪಾಠಶಾಲೆ ಬಯಲಿನಲ್ಲಿ ನಡೆಯುತ್ತದೆ

ಈ ಗುಡಿಸಲುಗಳೊ ? ಡಿಲ್ಲಿಯಲ್ಲಿ ಏಳು ಕೇರಿಗಳಿವೆ. ಅತ್ಯಂತ ದೊಡ್ಡದು ಪಂಚಕಣ. ಕೊಠಡಿಯ ಅಳತೆ ೯॥ · ೯॥ ಅಡಿ. ಅಂಗಳ ೫॥ ಅಡಿ. ಈ ಕೊಠಡಿಗಳಿಗೆ ಕಿಟಕಿಗಳಿಲ್ಲ. ಗೋಡೆಯ ತುದಿಯಲ್ಲಿ, ನಾಲ್ಕು ಚದುರ ಅಡಿಯ ಒಂದು ತೂತು ಇದೆ. ಅದರಿಂದ ಸ್ವಲ್ಪ ಗಾಳಿ ಬೆಳಕು ಬರು ತ್ತದೆ. ಕೆಲವು ಕೇರಿಗಳಲ್ಲಿನ ಮನೆಗಳಿಗೆ ಮಣ್ಣಿನ ಗೋಡೆ ಹಾಕಿ ಸ್ವಲ್ಪ ಸ್ಥಳ ಹೆಚ್ಚು ಮಾಡಿಕೊಂಡಿದ್ದಾರೆ. ದೊಡ್ಡ ಕೇರಿಗಳಲ್ಲಿ ಅದೂ ಇಲ್ಲ. ಕೆಲವು ಕೇರಿಯ ಮನೆಗಳಲ್ಲಿ, ಮೂಲೆಯಲ್ಲಿ ಅಡಿಗೆಯ ಒಲೆ, ಹೊಗೆ ಕೊಳವೆ ಇವೆ. ಸಾಧಾರಣವಾಗಿ ಇಂತಹ ಗುಡಿಸಲುಗಳಲ್ಲಿ ಐದು ಜನ ವಾಸಿಸುತ್ತಾರೆ (ಗಂಡ ಹೆಂಡತಿ ಮೂವರು ಮಕ್ಕಳು). ಒಂದೆರಡು ಗುಡಿ ಸಲುಗಳಲ್ಲಿ ಏಳು ಜನ ವಾಸಿಸುತ್ತಿದ್ದುದು ನನ್ನ ಕಣ್ಣಿಗೆ ಬಿದ್ದಿತು. ಇಂತಹ ಗುಡಿಸಲುಗಳಲ್ಲಿ ಇರಲು ಅವರಿಗೆ ಹೇಗೆ ಮನಸ್ಸು ಒಗ್ಗುತ್ತದೋ ದೇವರೇ ಬಲ್ಲ. ಪಂಚಕೋಣಿ ಕೇರಿಯಲ್ಲಿ ೫೫೦ ಜನ ಇದ್ದಾರೆ. ಅವರ ಉಪ ಯೋಗಕ್ಕೆ ೧೩ ಪಾಯಖಾನೆ ಮನೆ, ೨ ಕೊಳಾಯಿ ಮಾತ್ರ ಇವೆ.

ಈ ಝಾಡಮಾಲಿಗಳ ಸಂಬಳ ತಿಂಗಳಿಗೆ ೧೨ ರೂಪಾಯಿ. ಆಫೀಸು ಜವಾನರ ಸಂಬಳ ತಿಂಗಳಿಗೆ ಎಷ್ಟೋ? ಪ್ರಾಯಶಃ ಇನ್ನೂ ಬಹಳ ಹೆಚ್ಚಾಗಿರಬಹುದು—ಈ ಝಾಡಮಾಲಿಗಳ ಮಕ್ಕಳೂ, ಯಾವ ಪ್ರತಿ ಫಲವೂ ಇಲ್ಲದೆ ತಂದೆಗಳಿಗೆ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಈ ಮಕ್ಕಳಿಗೆ ವಯಸ್ಸಾಗಿ ಅವರು ಬೆಳೆದನಂತರ ಅವರಿಗೆ ಇದೇ ಕೆಲಸ

ಸಿಕ್ಕಬೇಕಾದರೆ, ದರೋಗ ಅಥವ ಜಮಾದಾರನಿಗೆ ೨೫ ರೂಪಾಯಿ ಲಂಚ ಕೊಡದೆ ಸಾಧ್ಯವಿಲ್ಲ ಡಿಲ್ಲಿಯಲ್ಲಿರುವ ೨೫ ಜಮಾದಾರರ ಪೈಕಿ, ಝಾಡ ಮಾಲಿಗಳಿಂದ ಮೇಲೆ ಏರಿ ಜಮಾದಾರರಾಗಿರುವವರು, ನಾಲ್ವರು ಮಾತ್ರ.

ಜಮಾದಾರನ ಸಂಬಳ ೨೦ ರಿಂದ ೨೫ ರ ಒಳಗೆ. ಈ ಬಡ ಗುಡಿಸುವವರನ್ನು ಖಾಯಂ ಚಾಕರರನ್ನಾಗಿ ಮಾಡಿಲ್ಲ. ಅವರನ್ನು ಬೇಕಾದಾಗ ಪೂರ್ವಭಾವಿಯಾಗಿ ತಿಳಿಸದೆ ಸಹ ತೆಗೆದು ಹಾಕಬಹುದು. ಅವರಿಗೆ ಯಾವಾಗಲೂ ಜಮಾದಾರ, ದರೋಗ ಇವರನ್ನು ಕಂಡರೆ ಮರಣಭಯ. ಈ ಜಮಾದಾರರು ಗುಡಿಸುವವರಿಗೆ ಸಾಲ ಕೊಡುತ್ತಾರೆ. ಅಸಾಧ್ಯವಾದ ದರದಲ್ಲಿ ಬಡ್ಡಿ ವಸೂಲಿ ಮಾಡುತ್ತಾರೆ. ಪೌರಸಭೆಯ ಇತರ ನೌಕರರು ಖಾಯಂ ನೌಕರರು. ಅವರಿಗೆ ರಜ, ಅರ್ಧ ಸಂಬಳ ಪೂರ್ತ ಸಂಬಳದ ರಜ, ಪ್ರಾವಿಡೆಂಟ್ ಫಂಡು ಎಲ್ಲಾ ಉಂಟು. ಆದರೆ ಈ ಬಡ ಗುಡಿಸುವವರಿಗೆ ಯಾಕೆ ಆ ಸೌಕರ್ಯಗಳು ಇಲ್ಲ? ವಯಸ್ಸಾಗಿ ಕೆಲಸಮಾಡಲು ಅಶಕ್ತರಾದನಂತರ, ಅವರಿಗೆ ಈ ಮುರುಕಲು ಗುಡಿಸಲುಗಳು ಸಹ ಇಲ್ಲ. ಅವರಿಗೆ ಕೊಡುವ ಉಡುಪು—ಪಾಯಿಜಾಮ, ಬನೀನು, ರುಮಾಲು ಮತ್ತು ಎರಡು ವರುಷಕ್ಕೆ ಒಂದುಸಲ ಕೊಡುವ ಉಣ್ಣೆಯ ಅಂಗಿ— ಇವು ಪೌರಸಭೆಯವರ ಮನುಷ್ಯತ್ವಕ್ಕೇ ನಾಚಿಕೆಗೇಡು.

ಈ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು ಅಸಾಧ್ಯವೆ? ಸಾಧ್ಯ. ಡಿಲ್ಲಿ ನಗರದ ಇತರ ಪ್ರಜೆಗಳು ತಮ್ಮ ಕೆಲವು ಸುಖಗಳು ಎಲ್ಲ ಗುಡಿಸುವವರಿಗೂ ದೊರೆತರೆ ಮಾತ್ರ ತಾವೂ ಅನುಭವಿಸುತ್ತೇವೆ ಎನ್ನಬೇಕು. ಈ ಗುಡಿಸುವವರ ಕೇರಿಗಳನ್ನು ಆಗಾಗ್ಗೆ ನೋಡಿ, ಅವರ ಆರೋಗ್ಯ, ವಿದ್ಯೆ ಮಕ್ಕಳ ಯೋಗಕ್ಷೇಮ ಇವುಗಳನ್ನು ಗಮನಿಸಬೇಕು. ತಮ್ಮ ವಿರಾಮದಲ್ಲಿ ಸ್ವಲ್ಪ ಭಾಗವನ್ನು ಗುಡಿಸುವವರ ಸೇವೆಗೆ ಮೀಸಲಾಗಿ ಇಡಬೇಕು.

(೨)

ನಾನು ಹೊಸ ಡಿಲ್ಲಿಯ ಗುಡಿಸುವವರ ಕೇರಿಗಳನ್ನು ಸಂದರ್ಶಿಸಿದೆ ಎಂಬುದು ಹಳೆಯ ಡಿಲ್ಲಿಯ ಗುಡಿಸುವವರಿಗೆ ತಿಳಿದಕೂಡಲೇ ಅವರು "ನಮ್ಮನು ಸಂದರ್ಶಿಸದೆ ಯಾಕೆ ಬಿಟ್ಟಿರಿ" ಎಂದು ಕೇಳಿದರು. ಹಳೆ ಡಿಲ್ಲಿಯ ಗುಡಿಸುವವರಿಗೆ ಸಂಬಳ, ಹೊಸ ಡಿಲ್ಲಿಯವರಿಗಿಂತ ಸ್ವಲ್ಪ ಹೆಚ್ಚು

ಎಂದು ಕೇಳಿದೆ. ಆದರೆ ಹಳೆ ಡಿಲ್ಲಿ ಗುಡಿಸುವವರ ಕೇರಿಗಳು ಹೊಸಡಿಲ್ಲಿಯವರ ಕೇರಿಗಳಿಗಿಂತ ಹೆಚ್ಚು ಹೊಲಸಾಗಿವೆ. ನಾನು ಹೊಸ ಡಿಲ್ಲಿಯ ಕೇರಿಯವರ ವಿಚಾರ ಬರೆದಾಗ, ಹಳೆಯ ಡಿಲ್ಲಿಯ ಗುಡಿಸುವವರ ವಸತಿಗಳನ್ನು ಉತ್ತಮಪಡಿಸುವರೆಂದು ನಂಬಿದ್ದೆ. ಅವರ ಕೇರಿಗಳನ್ನು ನೋಡಬೇಕೆಂಬ ಸೂಚನೆ ಬಂದಾಗ, ನಾನು ತತ್‌ಕ್ಷಣ ಒಪ್ಪಿಕೊಂಡು ಎರಡು ಮೂರು ಕೇರಿಗಳನ್ನು ಸಂದರ್ಶಿಸಿದೆ. ನಾನು ಹಾಗೆ ಮಾಡಿದುದು ಒಳ್ಳೆಯದಾಯಿತು. ಹರಿಜನ ಪತ್ರಿಕೆಯಲ್ಲಿ ಶ್ರೀಮತಿ ನೆಹರು ಮುಂತಾದವರು ಅವರನ್ನು ಕುರಿತು ಬರೆದುದು ನನಗೆ ಜ್ಞಾಪಕ ಬಂದಿತು. ನಾನು ಆ ಕೇರಿಗಳನ್ನು ನೋಡಿ ಆಗಲೇ ಒಂದು ವಾರವಾಯಿತು. ಆದರೂ ಮನುಷ್ಯ, ಮನುಷ್ಯನಿಗೆ ಮಾಡಿರುವ ಅನ್ಯಾಯದ ಭಯಂಕರವಾದ ದೃಶ್ಯ ನನ್ನ ಮನಸ್ಸಿನಿಂದ ಅಳಿಸಿ ಹೋಗಿಲ್ಲ. ಶ್ರೀಮತಿ ರಾಜಕುಮಾರಿ ಅಮೃತ ಕುವರಿ, ದಯವಿಟ್ಟು ನನ್ನೊಂದಿಗೆ ಬಂದಿದ್ದರು. ಮನುಷ್ಯ ವಾಸಕ್ಕೇ ಅನರ್ಹವಾದ ಆ ಕೇರಿಯಲ್ಲಿ ನಾವು ಇನ್ನು ಹೆಚ್ಚು ಕಾಲವಿದ್ದಿದರೆ, ಆಕೆ ಖಂಡಿತವಾಗಿಯೂ ಅಲ್ಲಿ ಮೂರ್ಛೆ ಹೋಗುತ್ತಿದ್ದರು. ಹೊಸ ಡಿಲ್ಲಿಯ ಗುಡಿಸುವವರ ಮನೆಗಳು, ಈ ನರಕಕ್ಕೆ ಹೋಲಿಸಿದರೆ ಸ್ವರ್ಗವೆಂದೇ ಹೇಳಬೇಕು. ಈ ಕೃತಘ್ನ ಜಗತ್ತಿನ ಸೇವಕರು, ಇಂತಹ ನರಕದಲ್ಲಿ ವಾಸಿಸುವುದನ್ನು ಸುಮ್ಮನೆ ನೋಡುತ್ತಿರುವ ನಾವೆಲ್ಲಾ ಅಪರಾಧಿಗಳು ; ಈ ಅವಮಾನ ಡಿಲ್ಲಿಯ ಪ್ರತಿಯೊಬ್ಬ ನಾಗರಿಕನಿಗೂ ಸೇರಿದುದು ಎಂದು ನನಗೆ ತೋರಿತು.

ಡಿಲ್ಲಿಯಲ್ಲಿ ಈ ಕೇರಿಗಳನ್ನು ಕಟ್ಟಿರುವ ಸ್ಥಳಕ್ಕೆ ಹೊಸ ಬಜಾರ್ ಅಥವ ಶ್ರದ್ಧಾನಂದ ಬಜಾರ್ ಎಂದು ಹೆಸರು. ಶ್ರದ್ಧಾನಂದರ ಕೊಲೆಯಾದ ನಂತರ ಅವರ ಹೆಸರಿನ ಗೌರವಕ್ಕಾಗಿ ಈ ಎರಡನೆಯ ಹೆಸರನ್ನು ಪ್ರಾಯಶಃ ಇಟ್ಟಿದ್ದಾರೆ. ಹೀಗೆ ಆ ಮಹಾತ್ಮರಾದ ಸ್ವಾಮಿಗಳ ಹೆಸರನ್ನು ಈ ನರಕಕೂಪಕ್ಕೆ ಇಟ್ಟ ಪೌರಪಿತೃಗಳಿಗೆ, ಈ ಬಜಾರಿನ ಕೊಳಕು ತಿಳಿಯಲೇ ಇಲ್ಲವೇನೋ ? ಈ ದುರ್ಗಂಧದ ಮನೆಗಳನ್ನು ನಾಶಮಾಡಿದ ಹೊರತು, ಸ್ವಾಮಿ ಶ್ರದ್ಧಾನಂದರ ಕೀರ್ತಿಗೆ ಗೌರವ ಮಾಡಿದಂತಾಗಲಿಲ್ಲವೆಂದು ಅವರಿಗೆ ಗೊತ್ತಾಗಲಿಲ್ಲವೆ ?

ಈ ಕೇರಿಗಳನ್ನು ನರಕ ಎಂದರೂ ಸಾಲದು. ಒಂದು ಚೌಕದಲ್ಲಿ

ಮೂರು ಕಡೆಯೂ ಈ ಗುಡಿಸಲುಗಳನ್ನೆಲ್ಲಾ ತುಂಬಿಸ್ವಾರೆ. ಅವುಗಳ ಒಳಗೆ ಪೂರ್ಣವಾಗಿ ಕತ್ತಲೆ. ನನ್ನನ್ನು ಗುಡಿಸಲಿನೊಳಕ್ಕೆ ಕರೆದು ಕೊಂಡು ಹೋದವನು, ನಾನು ಏನನ್ನಾ ಎಡವದೆ ಇರಲಿ ಎಂದು ಒಂದು ಬೆಂಕಿ ಕಡ್ಡಿ ಹತ್ತಿಸಿದ ಆ ಅಂಧಕಾರದ ಕೋಣೆಯಲ್ಲಿ ಮೂವ್ವರು ಅಣ್ಣ ತಮ್ಮಂದಿರು ಅವರ ಹೆಂಡತಿಯರು ತಂದೆತಾಯಿ ಇಬ್ಬರು ಮಕ್ಕಳು ಹೀಗೆ ಹತ್ತು ಜನ ವಾಸಿಸುತ್ತಿರುವರೆಂದು ಗೊತ್ತಾಯಿತು. ಅವರೆಲ್ಲಾ ಆ ಒಂದು ಕೊಠಡಿಯಲ್ಲಿ ಹೇಗೆ ವಾಸಿಸುತ್ತಿರುವರೆಂಬುದನ್ನು ಕೇಳಲು ನನಗೆ ಮನಸ್ಸು ಬರಲಿಲ್ಲ. ಆದರೆ ನೂರು ಜನ ಅಥವ ಆರು ಜನ ಸಂಪಾದಿಸುತ್ತಿದ್ದರೆ, ಯಾಕೆ ಬೇರೆ ಬೇರೆ ವಾಸಿಸದೆ ಎಲ್ಲರೂ ಒಂದೇ ಕೋಣೆಯಲ್ಲಿ ಇದ್ದಾರೆ ಎಂದು ಆಶ್ಚರ್ಯ ಪಟ್ಟೆ. ಆಗ ತಿಳಿಯಿತು. ಒಬ್ಬ ಮಗನೂ ಅವನ ಹೆಂಡತಿಯೂ ಮಾತ್ರ ಸಂಪಾದಿಸುತ್ತಿದ್ದರು. ಉಳಿದವರೆಲ್ಲಾ ನಿರುದ್ಯೋಗಿಗಳಾಗಿದ್ದರು. ಈ ಹತ್ತು ಜನರ ಜೀವನಕ್ಕೆ ಆ ಇಬ್ಬರ ಇಪ್ಪತ್ತಾರು ರೂಪಾಯಿ ಮಾತ್ರ ! ಈ ಕೇರಿಯ ಮಧ್ಯದಲ್ಲಿ, ಈ ನತದೃಷ್ಟರ ಪಾಯಖಾನೆ ಗೃಹವಿದ್ದಿತು. ಗುಡಿಸಲುಗಳಿಗೂ ಈ ಪಾಯಖಾನೆ ಗೃಹಗಳಿಗೂ ನಡುವೆ, ಎಲ್ಲೋ ಒಬ್ಬ ಮನುಷ್ಯ ಮಾತ್ರ ತಿರುಗಬಹುದಾದ, ಕೆಲವೇ ಅಡಿ ಸ್ಥಳವಿದೆ. ನಾವು ಪಾಯಖಾನೆಯ ಸುತ್ತ ತಿರುಗಿದೆವು. ಆ ಇಪ್ಪತ್ತು ಗವಿಗಳನ್ನೂ ನೋಡಿದೆವು. ಇನ್ನೂ ಸ್ವಲ್ಪ, ಶುದ್ಧವಾದ ವಾಸನೆಯಿಲ್ಲದ ಗಾಳಿ ಇರಬಾರದೇ ? ಎಂದು ಕೊರಗಿದೆವು ಆದರೆ ಅದು ವ್ಯರ್ಥ. ಯಾಕೆಂದರೆ ಮನೆಯ ಮುಂದಲ ಬಯಲಿನಲ್ಲಿ, ಪಾಯಖಾನೆ ತುಂಬಿದ ತರೆದು ಬಂಡಿಗಳ ದುರ್ನಾತ. “ ಪಾಯಖಾನೆ ಎತ್ತುವುದು ಝಾಡಮಾಲಿಯ ತಪ್ಪು ! ಪಾಪ. ಆದುದರಿಂದ ಆ ಗಾಡಿ ಅವನ ಮನೆಯ ಮಗ್ಗುಲಲ್ಲಿಯೇ ಇರಬೇಕು ! ಗುಡಿಸಲುಗಳಲ್ಲಿ ಈಗಲೇ ರೋಗವಿರುವಾಗ ಈ ಗಾಡಿಗಳ ದುರ್ನಾತದಿಂದೇನೂ ರೋಗ ಹೆಚ್ಚುವುದಿಲ್ಲ ! ” ಮನುಷ್ಯ ಎನ್ನಿಸಿಕೊಳ್ಳುವವನು ಹೇಗೆತಾನೆ ಈ ವಾತಾವರಣದಲ್ಲಿ ಊಟ, ತಿಂಡಿ, ನಿದ್ರೆ, ಪ್ರಜೋತ್ಪತ್ತಿ ಮಾಡುತ್ತಾನೆಂಬುದು ಊಹಿಸುವುದಕ್ಕೂ ಅಸಾಧ್ಯವಾದುದು. ಆದರೆ ಡಿಲ್ಲಿಯ ಝಾಡಮಾಲಿಗಳು ಹೀಗೆ ಮಾಡುತ್ತಿದ್ದಾರೆ ಸರಿ. ಅವರು ಹೀಗೆ ಮಾಡಲು ಅವಕಾಶ ಕೊಟ್ಟ ಡಿಲ್ಲಿಯ ನಾಗರೀಕರಿಗೆ ಏನೂ ನಾಚಿಕೆ

ಯಾದಂತೆಯೇ ತೋರುವುದಿಲ್ಲ. ಮಳೆ ಹೆಚ್ಚಾದ ಕಾಲದಲ್ಲಿ ಈ ಜನರು ಮಧ್ಯದಲ್ಲಿರುವ ಪಾಯಖಾನೆ ಗೃಹಗಳಲ್ಲಿ ಆಶ್ರಯ ಹೊಂದುತ್ತಾರೆಂದೂ ನಮಗೆ ತಿಳಿಯಿತು !

ನಾವು ಮತ್ತೊಂದು ಕೇರಿಗೆ ಹೋದೆವು. ಆ ಕೇರಿಯ ಮನೆಗಳ ವಿಸ್ತಾರ ಇದರಷ್ಟೇ. ಆದರೆ ಅವು ಊರ ಹೊರಗಡೆ ಇದ್ದವು ಅವುಗಳ ಮುಂದೆ ವಿಶಾಲವಾದ ಬಯಲೂ ಗಾಳಿಯೂ ಅವಕಾಶವೂ ಇತ್ತು. ಸದ್ಯ ಬದುಕಿದವೆಂದು ಉಸಿರು ಬಿಟ್ಟೆವು. ಆದರೆ ಪರಿಸ್ಥಿತಿ ಅಷ್ಟು ಹಿತವಾಗಿರಲಿಲ್ಲ. ಮುಂದಕ್ಕೆ ಹೋದಂತೆ, ಕೆಲವು ಗುಡಿಸಲುಗಳ ಹೊರತು ಉಳಿದವೆಲ್ಲಾ, ಆಳವಾದ ಒಂದು ಚರಂಡಿಯ ಎದುರಿಗೇ ನಿಂತಿದ್ದವು. ಚರಂಡಿಗೂ ಪಟ್ಟಣದ ಗೋಡೆಗೂ ನಡುವೆ ಇರುವ ಈ ಪ್ರದೇಶವನ್ನು ದುರಾಶಾಪೀಡಿತರಾದ ಪೌರಪಿತೃಗಳು ವ್ಯರ್ಥಮಾಡದೆ, ಈ ಗುಡಿಸುವವರಿಗಾಗಿ ಅಲ್ಲಿ ಮನೆಗಳನ್ನು ಕಟ್ಟಿದ್ದಾರೆ ಈ ಚರಂಡಿಯನ್ನು ಮುಚ್ಚದೆ ತೆರೆದು ಬಿಟ್ಟಿರುವುದು ಡಿಲ್ಲಿ ಪೌರಸಭೆಯ ತಪ್ಪು. ಈ ಚರಂಡಿಯಿಂದ ಆಚೆ ಹೊಸ ಡಿಲ್ಲಿ ಇದೆ ಆದರೆ ಈ ಗುಡಿಸಲುಗಳ ಕೆಟ್ಟ ನೋಟ, ಅವರ ಕಣ್ಣಿಗೆ ಬೀಳದಿರಲೆಂದು, ಹೊಸ ಡಿಲ್ಲಿ ಹಳೆ ಡಿಲ್ಲಿಗಳ ನಡುವೆ ದೊಡ್ಡ ಮರಗಳ ಬೇಲಿ ಬೆಳೆಸಿದ್ದಾರೆ. ಕತ್ತಲೆಯಲ್ಲಿ ಮಕ್ಕಳೂ ಸ್ತ್ರೀಯರೂ ಈ ಚರಂಡಿಗೆ ಬಿದ್ದು ಪ್ರಾಣಾಪಾಯಕ್ಕೆ ಸಹ ಒಳಗಾಗಿರುವರೆಂದು ಕೇಳಿದೆ ಆದರೆ ಈ ಚರಂಡಿಗಳನ್ನು ಮುಚ್ಚುವ ವಿವೇಕ ಸಹ ಯಾರಿಗೂ ಉಂಟಾಗಿಲ್ಲ. ಇದಕ್ಕೆ ಖರ್ಚು ಬಹಳವಾಗುವುದೆಂದು ಭಾವಿಸುತ್ತೇನೆ.

ನಾನೂ ರಾಜಕುಮಾರಿ ಅಮೃತ ಕೌರರಿಯೂ ಏನು ಮಾಡಬೇಕೆಂದು ಯೋಚಿಸಿದೆವು. ಪೌರಸಭೆಯ ಕಾಂಗ್ರೆಸ್ ಸದಸ್ಯರನ್ನು ನೋಡುವುದು ಪ್ರಯೋಜನವಿರಲಿಲ್ಲ. ಅವರ ಸಂಖ್ಯೆ ಅತ್ಯಲ್ಪ. ಅವರ ಮಾತು ನಡೆಯುವುದಿಲ್ಲ. ಆದರೆ ಪೌರಸಭೆಯಲ್ಲಿ ಅವರು ಇರುವುದು ತಪ್ಪು. ನಾವು ಜವಾಬ್ದಾರಿಯುಳ್ಳ ಅನೇಕ ಅಧಿಕಾರಿಗಳನ್ನು ನೋಡಿದೆವು ಈ ಅವಮಾನ ಅವರು ಒಪ್ಪಿದರು. ನಾನು ಈ ಹಿಂದೆ ವಿವರಿಸಿರುವ ಕೇರಿಗಳನ್ನು ವೈಸರಾಯ್‌ರು ನೋಡಿದ್ದಾರೆಂದು ಸಹ ನನಗೆ ತಿಳಿಯಿತು. ಹರಿಜನ ಕೇರಿಗಳು ಮಾತ್ರವೇ ಅಲ್ಲ. ಇತರ ಕೇರಿಗಳು ಸಹ ಇಷ್ಟೇ ಹೀನವಾಗಿರುವುದೆಂದೂ ಇದಕ್ಕೆ ತತ್‌ಕ್ಷಣ ಏನೂ ಪ್ರತೀಕಾರವಿಲ್ಲವೆಂದೂ

ನಮಗೆ ಹೇಳಿದರು. ಒಂದು ಹೊಸ ಯೋಜನೆಯನ್ನು ನಮಗೆ ತೋರಿಸಿದರು. ಆ ಯೋಜನೆಗೆ ಅನುಸಾರವಾಗಿ, ನಾಲ್ಕುನೂರು ಸಂಸಾರಗಳಿಗೆ ಹೊಸ ಮನೆಗಳಾಗುತ್ತಿವೆ ಆದರೆ ಅವುಗಳ ಪೈಕಿ ಹರಿಜನರ ಗೃಹಗಳು ಅತ್ಯಲ್ಪ. ನಾನು ಹೇಳಿರುವ ಕೇರಿಗಳಲ್ಲಿಯ ಹರಿಜನರಿಗೆ, ಸದ್ಯದಲ್ಲಿ ಒಳ್ಳೆಯ ಮನೆಯ ಅವಕಾಶವಿಲ್ಲ ಡಿಲ್ಲಿಯ ಹೊರಗಡೆ ವಿಶಾಲವಾದ ಬಯಲುಗಳಿವೆ. ಅವುಗಳನ್ನು, ಈ ಮನೆ ಕಟ್ಟಲು ಯಾಕೆ ಉಪಯೋಗಿಸಿಲ್ಲ ಎಂದು ನಾವು ಕೇಳಿದೆವು; ಆಶ್ಚರ್ಯ ಪಟ್ಟೆವು. "ಅವುಗಳನ್ನು ಪೌರಸಭೆಯ ಸ್ವಾಧೀನ ಪಡಿಸಿಕೊಳ್ಳುವುದು ಹೇಗೆ? ಸಂಸಾರಗಳನ್ನು ಅಲ್ಲಿಗೆ ಸಾಗಿಸಿದರೆ ನೀರು ಮುಂತಾದ ಸೌಕರ್ಯ ಅಲ್ಲಿ ಒದಗಿಸುವುದು ಹೇಗೆ?" ಎಂಬುದು ನಮಗೆ ಉತ್ತರವಾಯಿತು.

ನಗರದ ಆರೋಗ್ಯದ ಮುಖ್ಯ ಜವಾಬ್ದಾರಿ ವಹಿಸಿರುವ ಈ ಗುಡಿಸುವವರಿಗೆ ಮನೆಗಳನ್ನು ಒದಗಿಸುವುದು ಯಾಕೆ ಇಷ್ಟು ಕಷ್ಟ ಎಂದು ನಮಗೆ ಆಶ್ಚರ್ಯ? ಪ್ಲೇಗು ತಲೆದೋರಿದರೆ ಈ ಗುಡಿಸುವವರನ್ನೆಲ್ಲಾ ದೂರ ಬಯಲಿಗೆ ಸಾಗಿಸಬೇಡವೆ? ಈ ಕೇರಿಗಳು ಪ್ಲೇಗು ಪ್ರದೇಶಗಳಿಗಿಂತ ಉತ್ತಮವಾಗಿಲ್ಲ. ಲೇಡಿ ವಿಲ್ಲಿಂಗ್‌ಡನ್ ಪಾರ್ಕ್ ಮುಂತಾದ ವಿಶಾಲವಾದ ಬಯಲುಗಳಿವೆ. ಇಲ್ಲಿ ನಲ್ಲಿಯ ನೀರು ಯಾವಾಗಲೂ ಸೇಚನವಾಗುತ್ತಿರುವುದರಿಂದ, ಆ ಸ್ಥಳ ಹಸುರಾಗಿ ಹಚ್ಚಗಿದೆ.

ಜನತೆಯ ಒಂದು ಭಾಗ ಅಶುಚಿ, ಕೊಳಕಿನಲ್ಲಿ ಬಾಳುತ್ತಿರುವಾಗ, ಈ ಸುಂದರವಾದ ಉದ್ಯಾನವನ್ನು ಅನುಭವಿಸಲು ಪಟ್ಟಣಿಗರಿಗೆ ಯಾವ ಹಕ್ಕು ಇದೆ? "ಹರಿಜನರನ್ನು ದೂರಕ್ಕೆ ಸಾಗಿಸಿದರೆ ಅವರಿಗೆ ನೀರು ಮುಂತಾದ ಸೌಕರ್ಯ ಒದಗಿಸಲು ಸಾಧ್ಯವಿಲ್ಲ. ಅವರಿಗೆ ಕೆಲಸ ಮಾಡಬೇಕಾದ ಸ್ಥಳಕ್ಕೆ ಬರಬೇಕಾದರೆ, ಬಹಳ ಕಷ್ಟವಾಗುತ್ತದೆ" ಎಂದು ಹೇಳಿದರು. ಆದರೆ ಆ ಹೊಸ ಕೇರಿಗಳಿಗೆ ಕೆಲವು ನೀರಿನ ನಲ್ಲಿಗಳನ್ನು ಯಾಕೆ ಹಾಕಬಾರದು? ದೂರವಾಗಿದ್ದರೂ ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಬಸ್ಸುಗಳಲ್ಲಿ ಹೋಗುತ್ತಾರೆ. ಈ ಸೌಕರ್ಯಗಳನ್ನು ಪೌರಸಭೆ ತನ್ನ ನೌಕರರಾದ ಗುಡಿಸುವವರಿಗೆ ಯಾಕೆ ಮಾಡಬಾರದು? ರಿಡ್ಜ್ ಎಂಬಲ್ಲಿ ಭವ್ಯವಾದ ಕಾಲೇಜ್ ಕಟ್ಟಡಗಳನ್ನು ಕಟ್ಟಲು ಸರ್ಕಾರ ಉದಾರವಾಗಿ ಧನ ಕೊಡುತ್ತಿದೆ. ನಗರಕ್ಕೆ ಅತ್ಯಂತ ಆವಶ್ಯಕವಾದ ಝಾಡ

ಮಾಲಿಗಳ ಗುಡಿಸಲುಗಳಿಗೆ ಯಾಕೆ ಅಂತಹ ಧನ ಸಹಾಯ ಮಾಡ ಬಾರದು ? ಅವರ ಸ್ಥಿತಿಯನ್ನು ಉತ್ತಮಪಡಿಸುವ ಮನಸ್ಸು ಇದ್ದರೆ, ಮಾರ್ಗ ನಿಜವಾಗಿಯೂ ಗೊತ್ತಾಗಿಯೇ ಗೊತಾಗುತ್ತಿದ್ದಿತು. ಆದರೆ ಆ ಮನಸ್ಸು ಇಲ್ಲ. ಪುರಜನರ ವಿಚಾರ ಹೇಳುವುದಾದರೆ, ಅವರಿಗೆ ದಯೆ, ದಾಕ್ಷಣ್ಯ ಹೃದಯವೇ ಇಲ್ಲ.

ನಾನು ಡಿಲ್ಲಿಯ ಖಾಯಂ ನಿವಾಸಿಯಾಗಿದ್ದರೆ, ಯಾವುದಾದರೂ ಒಂದು ವಿಪರೀತ ಕಾರ್ಯಕ್ರಮದಿಂದ, ಈ ಪರಿಸ್ಥಿತಿಗೆ ಜವಾಬ್ದಾರರಾದವರ ಹೃದಯವನ್ನು ಪರಿವರ್ತಿಸಲು ಪ್ರಯತ್ನಿಸುತ್ತಿದ್ದೆ. ಮುಷ್ಕರ ಅಥವ ಮತ್ತಾವುದಾದರೂ ಬಗೆಯ ಸತ್ಯಾಗ್ರಹ, ಈ ಪರಿಸ್ಥಿತಿಯಲ್ಲಿ ನ್ಯಾಯ ವಾದುದು. ಆ ದುರದೃಷ್ಟಶಾಲಿಗಳಾದ ಗುಡಿಸುವವರೊಂದಿಗೆ ನಾನು ಮಾತನಾಡಲಿಲ್ಲ ಪರಿಸ್ಥಿತಿಗೆ ಹೊಂದಿಕೊಂಡಿರುವುದು ಅವರ ದೋಷ ವಾಗಿದೆ. ಅದೇ ಅವರ ಶಾಪ. ಆದರೆ ಈ ಸಹಿಸಲಸಾಧ್ಯವಾದ ಅನ್ಯಾಯವನ್ನು ಎದುರಿಸಲು ಅವರನ್ನು ಎಚ್ಚರಿಸುವುದು ಪ್ರತಿಯೊಬ್ಬರ ಕರ್ತವ್ಯವೆಂದು ನಾನು ಭಾವಿಸುತ್ತೇನೆ.

ನಾನು ಜವಾಬ್ದಾರಿಯರಿತು ಇದನ್ನು ಬರೆಯುತ್ತಿದ್ದೇನೆ. ಇಂಗ್ಲೆಂಡಿನ ಕ್ಲೈಡ್ ಎಂಬ ಜಿಲ್ಲೆಯಿಂದ ಪಾರ್ಲಿಮೆಂಟಿಗೆ ವೀಟ್ಲಿ ಎಂಬುವರು ಆರಿಸಿ ಬಂದರು. ಅವರು ಸಮತಾವಾದಿಗಳ ಮುಖಂಡರು. ಇಂಗ್ಲೆಂಡಿನ ಮೊದಲನೆಯ ಲೇಬರ್ ಸರ್ಕಾರದಲ್ಲಿ ಅವರು ಒಬ್ಬ ಮಂತ್ರಿಯಾದರು. ಈ ಮಂತ್ರಿ, ದೊರೆಯನ್ನು ಮೊದಲು ನೋಡಿದಾಗ ಧೊರೆಯು "ನೀವು ಯಾಕೆ ಕ್ರಾಂತಿಕಾರರಾಗಿದ್ದೀರಿ" ಎಂದು ಕೇಳಿದರು. ಆಗ ವೀಟ್ಲಿ, ಜಾರ್ಜ್ ದೊರೆಗೆ ತನ್ನ ಕತೆ ಹೇಳಿದರು. "ತಾನು ಅತ್ಯಂತ ಬಡತನದಲ್ಲಿ ಬೆಳೆದುದು, ತಾನು ಹನ್ನೊಂದು ಜನರೊಂದಿಗೆ ಅನೇಕ ವರುಷಗಳು ಲಾನಾರ್ಕ್ ಶೈರ್‌ನಲ್ಲಿ ಒಂದೇ ಕೊಠಡಿಯಲ್ಲಿ ವಾಸ ಮಾಡಿದುದು ; ಜನ ತುಂಬಿದ ಕೊಠಡಿಯಲ್ಲಿ ವೀಟ್ಲಿಯವರು ತನ್ನ ಮಾತಾಪಿತೃಗಳೊಂದಿಗೆ—ಒಂದು ದಿನವಲ್ಲ ಒಂದು ವರುಷವಲ್ಲ—೨೪ ವರುಷ ಜೀವಿಸಿದರು. ಆತನಿಗೆ ಹನ್ನೆರಡು ವಯಸ್ಸಿದ್ದಾಗ, ಅವನನ್ನು ಶಾಲೆಯಿಂದ ಬಿಡಿಸಿ ಕಲ್ಲಿದ್ದಲಿನ ಗಣಿಯಲ್ಲಿ ಕೆಲಸಕ್ಕೆ ಹಾಕಿದರು." ಧೊರೆ, ಈ ಕ್ರೂರವಾದ ಕತೆಯನ್ನು ಸಹಾನುಭೂತಿಯಿಂದ ಕೇಳಿದರು. ಅವರಿಗೆ ಆಶ್ಚರ್ಯವೂ

ಜಿಗುಪ್ಸೆಯೂ ಉಂಟಾಯಿತು. "ನನ್ನ ಪ್ರಜೆಗಳು ಇಂತಹ ಸಹಿಸಲ ಸಾಧ್ಯವಾದ ಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆಯೇ ?" ಎಂದರು. ಈ ಸಮ ತಾವಾದಿ ಮಂತ್ರಿಯನ್ನು ಬೀಳ್ಕೊಳ್ಳುವಾಗ ಧೊರೆ ಹೀಗೆ ಹೇಳಿದರು ; "ಮಿಸ್ಟರ್ ವೀಟ್ಲೆ ನಾನು ಹೀಗೆ ಹೇಳುತ್ತೇನೆ. ಅಂತಹ ಸ್ಥಿತಿಯಲ್ಲಿ ನಾನು ಜೀವಿಸಿದ್ದರೆ, ನಾನೂ ಕ್ರಾಂತಿಕಾರನೇ ಆಗುತ್ತಿದ್ದೆ" (ರಾಮಸೆ ಮ್ಯಾಕ್ ಡೋನಾಲ್ಡರ ವಿಷಯದ ಪ್ರಕರಣ, ಗ್ರಂಥಕರ್ತ ಎಲ್. ಮ್ಯಾಕ್ ನೀರ್ ವೀರ್).

ಹೇಗೆ ನೋಡಿದರು, ನಾನು ಮೇಲೆ ವಿವರಿಸಿರುವ ಗುಡಿಸಲು ಗಳನ್ನು ಸುಡಬೇಕು ಇಲ್ಲವೇ ನಾಶ ಮಾಡಬೇಕು. ಈ ಝಾಡ ಮಾಲಿಗಳ ಪೈಕಿ ಒಬ್ಬ ಕ್ರಾಂತಿಕಾರ ತನ್ನನ್ನು ಕರ್ತವ್ಯಮುಖರಾಗು ವಂತೆ ಮಾಡುವವರಿಗೆ, ಡಿಲ್ಲಿಯ ಪೌರರು ಕಾಯುತ್ತಾ ಕುಳಿತಿರು ತ್ತಾರೆಯೆ ?

೧೫–೪–೩೯, ೨೨–೪–೧೯೩೯.

---

## ೧೨. ಒಬ್ಬ ಬೌದ್ಧನೊಂದಿಗೆ ಸಂಭಾಷಣೆ.

### ಪ್ರಾರ್ಥನೆಯ ಅರ್ಥ.

ಗಾಂಧಿಯವರು ಈಸಲ ಅಬೊಟಾಬಾದ್‌ಗೆ (೧೯೩೯ ನೇ ಇಸವ ಗಡಿನಾಡ ಪ್ರವಾಸ) ಹೋದಾಗ, ಅವರಿಗೆ ಯೋಚಿಸಲು ಬರೆಯಲು ತಕ್ಕಷ್ಟು ಕಲಾವಕಾಶ ವಿದ್ದಿತು. ದರ್ಶನಕ್ಕೆ ಬಂದವರಿಗೆ ಅವಕಾಶ ಕೊಡದೆ ಇದ್ದುದೇ ಇದಕ್ಕೆ ಮುಖ್ಯಕಾರಣ. ಆದರೆ ಅಲ್ಲಿಗೂ ಕೆಲವು ದರ್ಶನಾರ್ಥಿಗಳು ಬಂದಿದ್ದರು. ಆದರೆ ಅವರು, ಇಂದಿನ ಪ್ರಪಂಚ ರಾಜ ಕೀಯ ಇವುಗಳ ಕಿರುಕುಳಕ್ಕೊಳಗಾದ, ಯಾವಾಗಲೂ ಬರುವ ಸಂದರ್ಶ ನಾರ್ಥಿಗಳಲ್ಲ. ಪ್ರಪಂಚೇತರ ಸಮಸ್ಯೆಗಳ ತೊಡಕಿಗೆ ಸಿಲುಕಿದವರು. ಬುದ್ಧನ ಅನುನಾಯಿಗಳ ಪಾದಸ್ಪರ್ಶದಿಂದ ಪವಿತ್ರವಾದ ಈ ಪ್ರದೇಶದಲ್ಲಿ ಇಂತಹ ಪ್ರಶ್ನೆಗಳ ಮೇಲೆ ಹಿಂದೆ ಚರ್ಚೆ ನಡೆಯುತ್ತಿದ್ದಿತೆಂದು ಇತಿಹಾಸ ದಲ್ಲಿ ಹೇಳಿದೆ. ಸಂದರ್ಶನಕ್ಕೆ ಬಂದಿದ್ದವರು ಗಾಂಧಿಯವರೊಂದಿಗೆ,

"ನಾನು ಬೌದ್ಧ" ಎಂದು ಹೇಳಿ ತನ್ನ ಮತಕ್ಕೆ ಸಂಬಂಧಪಟ್ಟ ಒಂದು ಸಮಸ್ಯೆಯನ್ನು ಕುರಿತು ಚರ್ಚಿಸಿದರು. ಅವರು ಪ್ರಾಕೃತ ವಿಮರ್ಶನ ದವರು. ಪ್ರಾಚೀನದ ಕನಸುಗಳಲ್ಲಿ ಬಾಳುವುದು ಅವರ ಇಷ್ಟ. ಡಾಕ್ಟರ್ ಫಾಬ್ರಿ ಎಂಬುದು ಅವರ ಹೆಸರು. ಅವರು ಕೆಲವು ವರುಷಗಳಿಂದ ಭಾರತ ದಲ್ಲಿ ಇದ್ದಾರೆ ಅವರು ಪ್ರೊಫೆಸರ್ ಸಿಲ್ವನ್ ಲೆವಿಯವರ ಶಿಷ್ಯರು. ಪ್ರಸಿದ್ಧ ಪ್ರಾಕ್ತನವಿಮರ್ಶನರಾದ ಸರ್ ಆರಲ್ ಸ್ಟೈನ್‌ರವರ ಸಹಾಯ ನೌಕರರಾಗಿ ಅವರು ಭಾರತಕ್ಕೆ ಬಂದರು ಭೂಗರ್ಭ ಶಾಸ್ತ್ರದ ಶೋಧನೆ ಯಲ್ಲಿ ಅನೇಕ ವರುಷ ಕೆಲಸಮಾಡಿದರು. ಲಾಹೋರಿನ ಪ್ರದರ್ಶನಾಲ ಯವನ್ನು ಪುನರ್‍ರಚಿಸುವುದರಲ್ಲಿ ಸಹಾಯಕರಾದರು. ತಮಗೆ ಕೀರ್ತಿ ತಂದಿರುವ ಕೆಲವು ಶೋಧನೆಗಳನ್ನೂ ಮಾಡಿದ್ದಾರೆ. ಬುದ್ಧ ಗ್ರಂಥಗಳನ್ನು ಆಳವಾಗಿ ವ್ಯಾಸಂಗಮಾಡಿ ಅವರು ತೀರ ಕಾರಣವಾದಿಗಳಾಗಿ ಬಿಟ್ಟಿ ದ್ದಾರೆ. ಇವರ ದೇಶ ಹಂಗೇರಿ. ಇವರು ಹಿಂದೆ ಗಾಂಧಿಯವರೊಂದಿಗೆ ಪತ್ರವ್ಯವಹಾರ ನಡೆಸಿದ್ದರು. ಅವರೊಡನೆ ಸಹಾನುಭೂತಿಯ ಉಪವಾಸ ಸಹ ಮಾಡಿದ್ದರು. ಗಾಂಧಿಯವರನ್ನು ನೋಡುವ ಉದ್ದೇಶದಿಂದಲೇ ಅವರು ಅಬಟೌಬಾದಿಗೆ ಬಂದಿದ್ದರು.

ಪ್ರಾರ್ಥನೆಯ ವಸ್ತು, ಅದರ ಕ್ರಮ, ಮಾರ್ಗ, ಸ್ವಭಾವ, ಇವು ಅವರ ಮನಸ್ಸನ್ನು ಬಹಳ ಚಲಿಸಿದ್ದವು. ಗಾಂಧಿಯವರು ಮಾಡುವ ಪ್ರಾರ್ಥನೆ ಯಾವ ತರಹೆಯದು ಎಂಬುದನ್ನು ತಿಳಿಯಲು ಅವರು ಬಹಳ ಕುತೂಹಲಿಗಳಾಗಿದ್ದರು. "ಪ್ರಾರ್ಥನೆಯಿಂದ ದೇವರ ಮನಸ್ಸನ್ನು ಬದ ಲಾಯಿಸಬಹುದೆ? ಪ್ರಾರ್ಥನೆಯಿಂದ ಇದನ್ನು ತಿಳಿಯಲು ಸಾಧ್ಯವೇ?" ಎಂಬುದು ಅವರ ಪ್ರಶ್ನೆ.

ಗಾಂಧಿಯವರು "ನಾನು ಪ್ರಾರ್ಥನೆ ಮಾಡುವಾಗ ಏನು ಮಾಡು ತ್ತೇನೆ ಎಂಬುದನ್ನು ಪೂರ್ಣವಾಗಿ ವಿವರಿಸುವುದು ಕಷ್ಟ. ಆದರೆ ನಿಮ್ಮ ಪ್ರಶ್ನೆಗೆ ಉತ್ತರ ಕೊಡಲು ಪ್ರಯತ್ನಿಸುತ್ತೇನೆ ಭಗವಂತನ ಮನಸ್ಸು, ಬದಲಾವಣೆಗೆ ಒಳಗಾಗುವುದಲ್ಲ. ಆದರೆ ಆ ದೇವತ್ವ ಎಲ್ಲಾ ಪ್ರಾಣಿ ಪದಾರ್ಥಗಳಲ್ಲೂ ಇದೆ ಪ್ರಾರ್ಥನೆಯ ಅರ್ಥ ಇದು. ನನ್ನಲ್ಲಿರುವ ದೇವತ್ವವನ್ನು ನಾನು ಪ್ರಜ್ವಲಿಸಲು ಪ್ರಯತ್ನಿಸುತ್ತೇನೆ. ಈಗ ನನ್ನ ಬುದ್ಧಿಗೆ ನನಲ್ಲಿರುವ ದೇವರು ಗೊತ್ತಾಗಿರಬಹುದು. ಆದರೆ ಅದು ನನ್ನ

ಜೀವದೊಂದಿಗೆ ಜೀವವಾಗಿಲ್ಲ. ನಾನು ಭಾರತಕ್ಕೆ ಸ್ವರಾಜ್ಯ ಬರಲಿ ಎಂದು ಪ್ರಾರ್ಥಿಸುವಾಗ, ಸ್ವರಾಜ್ಯವನ್ನು ಸಂಪಾದಿಸುವ ಶಕ್ತಿ ನನಗೆ ಬರಲಿ ಎಂದು ಪ್ರಾರ್ಥಿಸುತ್ತೇನೆ. ಸ್ವರಾಜ್ಯ ಸಂಪಾದನೆಗೆ ನನ್ನಿಂದ ಸಾಧ್ಯವಾದಷ್ಟು ಸೇವೆ ನಡೆಯಲಿ ಎಂದು ಪ್ರಾರ್ಥಿಸುತ್ತೇನೆ. ನನ್ನ ಪ್ರಾರ್ಥನೆಯಿಂದ ನನಗೆ ಈ ಶಕ್ತಿ ಬರುವುದೆಂದು ನನ್ನ ಸಿದ್ಧಾಂತ."

"ಹಾಗಾದಮೇಲೆ ಅದು ಪ್ರಾರ್ಥನೆ ಎಂದು ಹೇಳಲು ನಿಮಗೆ ಕಾರಣವಿಲ್ಲ. ಪ್ರಾರ್ಥನೆ ಎಂಬುದಕ್ಕೆ ಬೇಡು ಅಥವಾ ಕೇಳು ಎಂದು ಅರ್ಥ" ಎಂದರು ಡಾಕ್ಟರ್ ಫಾಬ್ರಿ. ಗಾಂಧಿ" ಹೌದು. ನಾನು, ನನ್ನ ಆತ್ಮವನ್ನೇ ಬೇಡುತ್ತೇನೆ ಎನ್ನಬಹುದು. ಆ ಆತ್ಮನೊಂದಿಗೆ ನಾನು ಇನ್ನೂ ಒಂದಾಗಿಲ್ಲ; ಜಗತ್ತನ್ನೆಲ್ಲಾ ಆವರಿಸಿರುವ ದೇವತ್ವದಲ್ಲಿ ಲೀನ ವಾಗಿ ಹೋಗಲು ನಾನು ಪ್ರಯತ್ನಿಸುತ್ತೇನೆ ಎನ್ನಬಹುದು."

## ಧ್ಯಾನವೇ? ಪ್ರಾರ್ಥನೆಯೇ?

ಡಾ|| ಫಾಬ್ರಿ-"ಇದನ್ನು' ಸಾಧಿಸಲು ನೀವು ಹಳೆ ಮಾರ್ಗ ಹಿಡಿದಿದ್ದೀರಿ."

ಗಾಂಧಿ-" ಹೌದು. ಜೀವಮಾನವೆಲ್ಲಾ ನಡೆಸಿರುವ ಅಭ್ಯಾಸ ಬೆನ್ನು ಹತ್ತುತ್ತದೆ. ಹೊರಗಿನ ಒಂದು ವಸ್ತುವನ್ನು ಕುರಿತು ನಾನು ಪ್ರಾರ್ಥಿಸುತ್ತೇನೆ. ಎಂದು ಹೇಳಿದರೆ ನನ್ನ ಆಕ್ಷೇಪಣೆಯಿಲ್ಲ. ನಾನು ಬುದ್ಧಿಯಿಂದ ನಿಮಗೆ ಸಮಜಾಯಿಷಿ ಕೊಡುತ್ತಿರುವೆನಾದರೂ, ದೇವತ್ವದೊಂದಿಗೆ ಒಂದಾಗದಿದ್ದಲ್ಲಿ ನಾನು ಅತ್ಯಲ್ಪನೆಂಬ ಭಾವ ನನಗೆ ಬರುತ್ತದೆ. ನಾನು ಇದನ್ನು ಮಾಡುತ್ತೇನೆ, ಅದನ್ನು ಮಾಡುತ್ತೇನೆ ಎಂದು ಹೇಳಲು ಪ್ರಾರಂಭಿಸಿದ ಕೂಡಲೇ ನಾನು ಅಲ್ಪ. ನನಗೆ ಏನೂ ಯೋಗ್ಯತೆ ಇಲ್ಲ ಎಂಬ ಭಾವ ನನಗೆ ಬರುತ್ತದೆ. ನಮ್ಮನ್ನು ಮೀರಿದ ಒಂದು ಶಕ್ತಿ ನನಗೆ ಸಹಾಯಮಾಡಬೇಕು ಎಂಬ ನಂಬಿಕೆ ನನಗೆ ಖಂಡಿತವಾಗುತ್ತದೆ.

ಡಾ||—ಟಾಲಸ್ಟಾಯ್ ಹೀಗೆಯೇ ಹೇಳುತ್ತಾರೆ. ಪ್ರಾರ್ಥನೆ ಎಂಬುದು ಆತ್ಮನೊಂದಿಗೆ ಲೀನವಾಗುವುದು. ಆದರೆ ಒಂದೊಂದು ಸಲ ಇದು ಮಾರ್ಗ ತಪ್ಪಿ ಬೇಡಿಕೆಯೂ ಆಗಬಹುದು, ಮಗು ತಂದೆಯನ್ನು ಬೇಡುವಂತೆ.

ಗಾಂಧಿ—“ ಕ್ಷಮಿಸಿ, ಇದನ್ನು ಮಾರ್ಗ ತಪ್ಪುವುದು ಎಂದು ನಾನು ಹೇಳಲಾರೆ. ದೇವರು ಎಲ್ಲೋ ಅಂತರಿಕ್ಷದಲ್ಲಿ ದೂರದಲ್ಲಿದ್ದಾನೆ. ಎಂದು ಕೊಳ್ಳೋಣ, ಅವನು ದೂರವಾಗಿದ್ದಷ್ಟೂ ಅವನನ್ನು ನೋಡುವ ಆಸೆ ನನಗೆ ಹೆಚ್ಚುತ್ತಿದೆ. ದೂರವಾಗಿದ್ದರೂ ಯೋಚನೆಯಲ್ಲಿ ಹತ್ತಿರವಲ್ಲಿಯೇ ಇದ್ದಾನೆ. ಯೊಚನೆಗೆ ಬೆಳಕಿಗಿಂತ ಹೆಚ್ಚು ವೇಗವಾಗಿ ಹೋಗುವ ಶಕ್ತಿ ಇದೆ. ಆದುದರಿಂದ ದೇವರಿಗೂ ನಮಗೂ ಮಧ್ಯೆ ಇರುವ ದೂರ ಅಸಾಧ್ಯವಾದರೂ, ಆ ದೂರ ದೂರವಾಗುವುದಿಲ್ಲ. ಆತ ಅತಿ ದೂರ ದಲ್ಲಿದ್ದಾನೆ. ಆದರೆ ಅತಿ ಹತ್ತಿರದಲ್ಲಿಯೂ ಇದ್ದಾನೆ.”

## ನನ್ನ ಪ್ರಾರ್ಥನೆ ಬೇರೆಯಲ್ಲ

ಡಾ|| ಫಾಬ್ರಿ—“ ಇದು ನಂಬಿಕೆಯ ಪ್ರಶ್ನೆ. ನನ್ನಂತಹ ಕೆಲವರಿಗೆ ವಿಮರ್ಶಾ ಬುದ್ಧಿ ತೀಕ್ಷ್ಣವಾಗಿರುವುದು ಒಂದು ಶಾಪ. ನನ್ನಮಟ್ಟಿಗೆ ಬುದ್ಧನಿಗಿಂತ ದೊಡ್ಡ ಗುರು ಇಲ್ಲ. ಬುದ್ಧ ಹೇಳಿದುದಕ್ಕಿಂತ ದೊಡ್ಡ ಸತ್ಯವಿಲ್ಲ. ಜಗದ್ಗುರುಗಳ ಪೈಕಿ ಬುದ್ಧನು ಮಾತ್ರ ಹೀಗೆ ಹೇಳಿದನು. ‘ ನಾನು ಹೇಳುವುದನ್ನೆಲ್ಲಾ ಸುಮ್ಮನೆ ನಂಬಬೇಡಿ. ಯಾವ ತತ್ವವೂ ಯಾವ ಗ್ರಂಥವೂ ನಿರ್ದೋಷ, ಪೂರ್ಣ ಎಂದು ಒಪ್ಪಬೇಡಿ ’—ನನ್ನ ಮಟ್ಟಿಗೆ ನಿರ್ದೋಷವಾದ ಗ್ರಂಥ ಜಗತ್ತಿನಲ್ಲಿ ಯಾವುದೂ ಇಲ್ಲ. ಯಾರಿಂದ ಸ್ಫೂರ್ತಿ ಬಂದಿದ್ದರೂ, ಪುಸ್ತಕಗಳನ್ನು ಬರೆದವರು ಮನು ಷ್ಯರೇ. ಆದುದರಿಂದ ‘ ದೇವರು ಒಂದು ವ್ಯಕ್ತಿ, ಸಿಂಹಾಸನದ ಮೇಲೆ ಕುಳಿತು ನಮ್ಮ ಪಾರ್ಥನೆಗಳನ್ನು ಲಾಲಿಸುವ ಮಹಾರಾಜ ಎಂದು ನಾನು ನಂಬಲಾರೆ. ನಿಮ್ಮ ಪ್ರಾರ್ಥನೆಯ ಮಟ್ಟ ಬೇರೆಯಾದುದರಿಂದ ನನಗೆ ಸಂತೋಷ. ”

ಈ ವಿದ್ವಾಂಸರು ಭಗವತ್‌ಗೀತೆ ಮತ್ತು ಧರ್ಮಪದದ ಭಕ್ತರು. ಆ ಎರಡು ಪುಸ್ತಕಗಳನ್ನು ಹೋದ ಕಡೆಗಳಿಗೆಲ್ಲಾ ತೆಗೆದುಕೊಂಡು ಹೋಗುತ್ತಾರೆ. ಆದರೆ ಅವರು ವಾದ ಮಾಡುತ್ತಿದ್ದುದು ಬರಿಯ ಬುದ್ಧಿ ದೃಷ್ಟಿಯಿಂದ. ಅವರು, ವಾದ ಸರಣಿಯ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಗಾಂಧಿಯವರು ಅವರನ್ನು ತಡೆದರು.

ಗಾಂಧಿ—“ ನಿಮಗೆ ಜ್ಞಾಪಕ ಕೊಡಬೇಕು. ನನ್ನ ಪ್ರಾರ್ಥನೆಯ

ಮಟ್ಟಿ ಬೇರೆ ಎಂದು ಹೇಳಿರುವುದರಲ್ಲಿ, ಅರ್ಧ ಮಾತ್ರ ಸತ್ಯ. ನಾನು ಪ್ರಾರ್ಥನೆ ಮಾಡುವಾಗಲೆಲ್ಲಾ, ನನ್ನ ಬುದ್ಧಿಗೆ ನಂಬಿಕೆಯಾಗಿರುವುದಿಲ್ಲ. ಭಗವಂತನಲ್ಲಿ ಪೂರ್ಣವಾಗಿ ಲೀನವಾಗುವ ಭಕ್ತಿ ಮಾತ್ರ ನನಗೆ ಇರುತ್ತದೆ. ಆದುದರಿಂದ ನಾನು ಆ ಕೆಲಸ ಮಾಡಿದೆ ಎನ್ನುವುದರ ಬದಲು ದೇವರು ನನಗಾಗಿ ಆ ಕೆಲಸ ಮಾಡಿದ ಎನ್ನುವುದು ಹೆಚ್ಚು ಸತ್ಯ. ನಾನು ಮಾಡಬೇಕೆಂದು ಪೂರ್ಣವಾಗಿ ಬಯಸಿದ ಅನೇಕ ಸಂಗತಿಗಳು ನನ್ನ ಜೀವನದಲ್ಲಿ ನಡೆದು ಹೋಗಿವೆ. ಆದರೆ ನನಗೆ ಅವುಗಳನ್ನು ಸಾಧಿಸಲು ಶಕ್ತಿ ಎಂದಿಗೂ ಉಂಟಾಗುತ್ತಿರಲಿಲ್ಲ. ಅವೆಲ್ಲಾ ನನ್ನ ಪ್ರಾರ್ಥನೆಗೆ ಉತ್ತರ ಎಂದು ನಾನು ನನ್ನ ಸಹೋದ್ಯೋಗಿಗಳಿಗೆ ಹೇಳಿದ್ದೇನೆ, ನನ್ನ ಬುದ್ಧಿ ಶಕ್ತಿಯಿಂದ ನಾನು ದೇವರಲ್ಲಿ ಲೀನವಾಗಿರುವುದರಿಂದ ನನ್ನ ಕೆಲಸಗಳು ಸಾಧಿಸಿವೆ ಎಂದು ನಾನು ಅವರಿಗೆ ಹೇಳಲಿಲ್ಲ! "ದೇವರು ನನ್ನನ್ನು ಕಷ್ಟದಿಂದ ಪಾರುಮಾಡಿದ್ದಾನೆ" ಎಂದು ಹೇಳಿದೆ.

## ಬರಿಯ ಕರ್ಮವೇ ಸಾಲದು

ಡಾ|| ಫಾಬ್ರಿ. "ಆದರೆ ಅದು ನಿಮ್ಮ ಕರ್ಮದಿಂದ ನಿಮಗೆ ದೊರೆತಿದೆ. ದೇವರು ನ್ಯಾಯ; ಕರುಣೆ ಅಲ್ಲ. ನೀವು ಒಳ್ಳೆಯವರು; ನಿಮಗೆ ಒಳ್ಳೆಯದೇ ಆಗುತ್ತದೆ."

ಗಾಂಧಿ—"ಇಲ್ಲ. ಎಲ್ಲಾ ಹಾಗೆ ನಡೆಯುವಷ್ಟು ಒಳ್ಳೆಯವನಲ್ಲ ನಾನು. ಕರ್ಮದ ವಿಷಯದಲ್ಲಿ ಈ ತತ್ವ ಇಟ್ಟುಕೊಂಡು ನಾನು ಹೊರಟರೆ ನಾನು ಅನೇಕ ವೇಳೆ ಕಿರುಕುಳಕ್ಕೆ ಒಳಗಾಗಬೇಕಾದೀತು. ನನ್ನ ಕರ್ಮದಿಂದ ನನಗೆ ಸಹಾಯವಾಗುವುದಿಲ್ಲ. ನನಗೆ ಕರ್ಮದ, ಬದಲಾವಣೆಯಾಗದ ಫಲದಲ್ಲಿ ನಂಬಿಕೆಯುಂಟು. ಆದರೆ ನಾನು ಯಾವಾಗಲೂ ಅನೇಕ ಕೆಲಸಗಳಲ್ಲಿ ತೊಡಗಿದ್ದೇನೆ. ನನ್ನ ಬಾಳಿನ ಪ್ರತಿ ಗಳಿಗೆಯೂ ಒಂದು ಸಾಧನೆ; ನನ್ನ ಪರವಾಗಿ ಒಳ್ಳೆ ಕರ್ಮ ಶೇಖರಿಸಲು, ಹಳೆ ಕರ್ಮ ನಾಶಪಡಿಸಿ ಹೊಸದನ್ನು ಬೆಳೆಸಲು ಪ್ರಯತ್ನ; ಆದುದರಿಂದ ನನ್ನ ಕಳೆದ ಕರ್ಮ ಒಳ್ಳೆಯದಾದುದರಿಂದ ನನಗೆ ಈಗ ಒಳ್ಳೆಯದಾಗುತ್ತಿದೆ ಎಂದು ಹೇಳುವುದು ತಪ್ಪು. ಹಿಂದಲ ಕರ್ಮ ಬೇಗ ಮುಗಿಯುತ್ತದೆ. ಪ್ರಾರ್ಥನೆಯಿಂದ ಹೊಸದನ್ನು ಬೆಳೆಸಬೇಕು. ಬರಿಯ ಕರ್ಮದಿಂದ

ಏನೂ ಆಗುವುದಿಲ್ಲ ಈ ಬೆಂಕಿ ಕಡ್ಡಿ ಹತ್ತಲಿ ಎಂದು ನಾನು ಹೇಳು ತ್ತೇನೆ. ಆದರೆ ಹೊರಗಿನ ಸಹಾಯವಿಲ್ಲದಿದ್ದರೆ ಅದು ಹತ್ತುವುದಿಲ್ಲ. ಕಡ್ಡಿ ಹತ್ತಿಸುವುದಕ್ಕೆ ಮುಂಚೆ ನನ್ನ ಕೈ ಸೋಲಬಹುದು ; ಅಥವ ಇರುವ ಒಂದೇ ಕಡ್ಡಿಯನ್ನು ಗಾಳಿ ಹಾರಿಸಿ ಬಿಡಬಹುದು. ಏನೂ ಆಗದೆ ಹತ್ತಿ ಸುವುದು ಆಕಸ್ಮಿಕವೋ, ದೇವರೋ, ಕಣ್ಣಿಗೆ ಕಾಣದ ಶಕ್ತಿಯೋ ? ನಮ್ಮ ಪೂರ್ವಿಕರು, ನಮ್ಮ ಮಕ್ಕಳು, ಉಪಯೋಗಿಸುವ ಮಾತನ್ನೇ ಉಪ ಯೋಗಿಸುತ್ತೇನೆ. ನಾನು ಮಕ್ಕಳಿಗಿಂತ ಬುದ್ಧಿವಂತನಲ್ಲ. ನಾವು ವಿವೇಕವಾಗಿ ಪುಸ್ತಕಗಳ ವಿಷಯ ಸಹ ಕುರಿತು ಮಾತನಾಡಬಹುದು. ಆದರೆ ಸಂಕಟ ಬಂದಾಗ, ಕೆಟ್ಟಪರಿಸ್ಥಿತಿ ನಮ್ಮ ಎದುರಿಗೆ ನಿಂತಾಗ, ನಾವು ಮಕ್ಕಳಂತೆ ಆಡುತ್ತೇವೆ ; ಅಳುತ್ತೇವೆ ; ಬೇಡುತ್ತೇವೆ ; ಪ್ರಾರ್ಥಿಸುತ್ತೇವೆ. ನಮ್ಮ ಬುದ್ಧಿಗೆ ಸಮಾಧಾನವಾದ ಮಾತ್ರದಿಂದ ನಮಗೆ ಸಮಾಧಾನ ವಾಗುವುದಿಲ್ಲ.

### ಬುದ್ಧ ಪ್ರಾರ್ಥಿಸಲಿಲ್ಲವೆ ?

ಡಾ|| ಫಾಬ್ರಿ—ಮಹಾತ್ಮರಾದವರಿಗೂ ಕೂಡ, ದೇವರಲ್ಲಿ ನಂಬಿಕೆ ಯಿಂದ ತಮ್ಮ ಯೋಗ್ಯತೆ ಬೆಳೆಯಲು ಬಹಳ ಸಹಾಯವಾಗುವುದೆಂಬುದು ನನಗೆ ಗೊತ್ತು. ಆದರೆ ಅತ್ಯಂತ ಮಹತ್ತಾದ ಕೆಲವು ಆತ್ಮಗಳಿಗೆ ಈ ನಂಬಿಕೆ ಬೇಕಿಲ್ಲ. ಇದು ಬುದ್ಧನ ಬೋಧನೆ. ”

ಗಾಂಧಿ-“ ಆದರೆ ಬೌದ್ಧ ಮತವೇ ಒಂದು ಉದ್ದವಾದ ಪ್ರಾರ್ಥನೆ. ”

ಡಾ|| ಫಾಬ್ರಿ—“ ಬುದ್ಧ ನಿಮ್ಮ ಮುಕ್ತಿಯನ್ನು ನೀವು ಕಂಡು ಕೊಳ್ಳಿ ಎಂದು ಎಲ್ಲರಿಗೂ ಹೇಳಿದರು. ಆತ ಪ್ರಾರ್ಥಿಸಲಿಲ್ಲ. ಧ್ಯಾನ ಮಾಡಿದರು. ”

ಗಾಂಧಿ—“ ಅದಕ್ಕೆ ಯಾವ ಹೆಸರು ಬೇಕಾದರೂ ಹೇಳಿ. ಎಲ್ಲಾ ಒಂದೆ. ಬುದ್ಧನ ವಿಗ್ರಹಗಳನ್ನು ನೋಡಿ. ”

ಡಾ|| ಫಾಬ್ರಿ—“ ಈ ವಿಗ್ರಹಗಳು ಅಷ್ಟು ಹಳೆಯುವೂ ಅಲ್ಲ. ಅವು ಜೀವನದ ಪ್ರತಿಕೃತಿಗಳೂ ಅಲ್ಲ. ಅವು ಬುದ್ಧನ ಅನಂತರ, ೪೦೦ ವರುಷ ಗಳಾದರೂ ಈಚೆಯವು. ”

ಗಾಂಧಿಯವರು, ಈ ಕಾಲದ ವ್ಯತ್ಯಾಸದ ಸಂಗತಿಯಿಂದ

ಸೋಲನ್ನು ಒಪ್ಪುವವರಾಗಿರಲಿಲ್ಲ. ಅವರು ಹೀಗೆ ಹೇಳಿದರು : "ಒಳ್ಳೆಯದು. ನೀವು ಕಂಡುಹಿಡಿದಿರುವ ಬುದ್ಧನ ಚರಿತ್ರೆಯನ್ನೇ ಹೇಳಿ. ಬುದ್ಧ, ಪ್ರಾರ್ಥನೆ ಮಾಡಿದ ಬುದ್ಧ ಎಂದು ನಾನು ಸಾಧಿಸುತ್ತೇನೆ. ಬುದ್ಧಿಯ ವಾದ, ನನ್ನನ್ನು ತೃಪ್ತಿಪಡಿಸುವುದಿಲ್ಲ. ನಿಮ್ಮ ಆ ಯೋಚನೆಯನ್ನು ವಿವರಿಸಲು ನಿಮಗೆ ಸಾಧ್ಯವಿಲ್ಲದುದರಿಂದ, ನಾನು ಪೂರ್ಣವಾದ ಮತ್ತು ಸ್ಪಷ್ಟವಾದ ಸೂತ್ರ ಹೇಳಿಲ್ಲ. ವಿವರಿಸುವ ಪ್ರಯತ್ನವೇ ಒಂದು ಪರಿಮಿತಿ. ಅದನ್ನು ವಿವರಿಸುವುದು ಸಾಧ್ಯವಿಲ್ಲ. ವಿವರಿಸುವುದಕ್ಕೆ ಹೋದರೆ ಅದರ ಫಲ, ಅಪ ನಂಬಿಕೆ. "

ಇಂತವರ ವಿಷಯದಲ್ಲಿಯೇ ಇರಬಹುದು ಪೋಪ್ ಹೀಗೆ ಹೇಳಿದುದು :

"With too much knowledge for the seeptic side
with too much weakness for the stoic's pride.
He hangs between, in doubt to act or rest.
In doubt to deem himself a god or beast.
In doubt his mind or body to prefer.
Born but to die and reasoning but to err.
Sole Judge of truth, in endless error hurled.
The Glory, jest and riddle of the world"

## ನಮ್ರರಾಗಿ

ಡಾ॥ ಫಾಬ್ರಿ–"ಪ್ರಾರ್ಥನೆ ಮಾಡಲಾರದವರ ವಿಚಾರ ಹೇಗೆ" ಎಂದರು.

ಗಾಂಧಿ—" ಅವರಿಗೆ ನಾನು ಹೀಗೆ ಹೇಳುತ್ತೇನೆ. ನಮ್ರರಾಗಿರಿ, ನೀವು ಬುದ್ಧನನ್ನು ಏನೆಂಬುದಾಗಿ ತಿಳಿದಿದ್ದೀರೋ ಅದೇ ನಿಜವಲ್ಲ. ಬುದ್ಧ ಪ್ರಾರ್ಥನೆ ಮಾಡುವಷ್ಟು ನಮ್ರನಾಗಿ ಇಲ್ಲದಿದ್ದಿದ್ದರೆ, ಜನರ ಮನಸ್ಸನ್ನು ಹಾಗೆ ಆಳುತ್ತಿರಲಿಲ್ಲ. ಇಂದೂ ಆಳಲಾರ. ನಮ್ಮನ್ನು ಆಳುವುದು, ಬುದ್ಧಿಗಿಂತ ಮೀರಿದ ಯಾವುದೋ ವಸ್ತು. ನಂಬಿಕೆಯಿಲ್ಲದವರನ್ನೂ ಆಳುವುದು ಅದೇಯೇ. ಬಾಳಿನ ಪರೀಕ್ಷಾ ಸಂದರ್ಭದಲ್ಲಿ,

ಕಷ್ಟಕಾಲದಲ್ಲಿ, ತನ್ನ ಬುದ್ಧಿಯಿಂದಲೂ ವೇದಾಂತದಿಂದಲೂ ಜನರಿಗೆ ಸಹಾಯವಾಗುವುದಿಲ್ಲ. ಅವರನ್ನು ಪೋಷಿಸಲು ಅವರಿಗೆ ತಮ್ಮಿಂದ ಹೊರತಾದ ಉತ್ತಮವಾದ ಆಶ್ರಯ ಆವಶ್ಯಕ. ಆದ್ದರಿಂದ ಯಾರಾದರೂ ಒಂದು ಒಗಟೆ ನನ್ನ ಮುಂದೆ ಹಾಕಿದರೆ ಹೀಗೆ ಹೇಳುತ್ತೇನೆ. "ನೀನು ಪೂರ್ಣವಾಗಿ ಸೊನ್ನೆಯಾದ ಹೊರತು ದೇವರು, ಪ್ರಾರ್ಥನೆ ಇವುಗಳ ಅರ್ಥ ನಿನಗೆ ತಿಳಿಯುವಂತೆ ಇಲ್ಲ. ನೀನು ಮಹನೀಯನಾದರೂ, ನಿನ್ನ ಬುದ್ಧಿ ಅತಿ ತೀಕ್ಷ್ಣವಾದರೂ, ಈ ಬ್ರಹ್ಮಾಂಡದಲ್ಲಿ ನೀನು ಅಣು ಮಾತ್ರ ಎಂಬುದನ್ನು ತಿಳಿಯುವಷ್ಟು ನಮ್ರನಾಗಬೇಕು. ಬಾಳನ್ನು ಬರಿಯ ಬುದ್ಧಿಯ ದೃಷ್ಟಿಯಿಂದ ಮಾತ್ರ ತಿಳಿವರೆ ಸಾಲದು. ಆತ್ಮದ ದೃಷ್ಟಿಯಿಂದ ತಿಳಿಯಬೇಕು. ಈ ಆತ್ಮಜ್ಞಾನ ಸುಲಭವಲ್ಲ. ಆದರೆ ಈ ಜ್ಞಾನದಿಂದ ಮಾತ್ರವೇ ಶಾಂತಿ ಸಮಾಧಾನ ಉಂಟಾಗುವುದು. ಹಣಗಾರರಿಗೆ ಸಹ ಬಾಳಿನಲ್ಲಿ ವಿಷಮಕಾಲ ಉಂಟು. ಹಣ ಕೊಡಬಹುದಾದ ಎಲ್ಲಾ ಸುಖಗಳಿಂದಲೂ ಅವರು ಆವೃತರಾಗಿದ್ದರೂ, ಅನೇಕ ವೇಳೆ ಅವರ ಬಾಳೂ ಪೂರ್ಣವಾಗಿ ಶೂನ್ಯವಾಗಿರುತ್ತದೆ. ಇಂತಹ ಸಮಯಗಳಲ್ಲಿ ನಮಗೆ ದೇವರ ದರ್ಶನ ಆಗುತ್ತದೆ. ನಮ್ಮ ಪ್ರತಿ ಹೆಜ್ಜೆಯನ್ನೂ ನಡೆಸುವವನು ಅವನೇ. ಅದೇ ಪ್ರಾರ್ಥನೆ."

ಡಾ|| ಫಾಬ್ರಿ–ನೀವು ಹೇಳುವುದರ ಅರ್ಥ "ಪ್ರಾರ್ಥನೆ ನಿಜವಾದ ಧರ್ಮದ ಅನುಭವ. ಬುದ್ಧಿಗೆ ಸಮಾಧಾನವಲ್ಲ." ಅಲ್ಲವೇ. ನನಗೆ ಬಾಳಿನಲ್ಲಿ ಎರಡು ಸಲ ಆ ಅನುಭವ ಉಂಟಾಯಿತು. ಈಚೆಗೆ ಅದು ನನ್ನ ಕೈ ಬಿಟ್ಟು ಹೋಗಿದೆ. ಆದರೆ ಈಗ ಬುದ್ಧನ ಒಂದೆರಡು ಮಾತುಗಳಲ್ಲಿ ನನಗೆ ಬಹಳ ಸುಖ ಶಾಂತಿ ಉಂಟಾಗುತ್ತಿದೆ. "ಸ್ವಾರ್ಥ, ದುಃಖದ ಮೂಲ" "ಪ್ರತಿಯೊಂದೂ ಅಶಾಶ್ವತ" ಇವುಗಳನ್ನು ಕುರಿತು ಯೋಚಿಸಿದರೆ, ಅವು ನಂಬಿಕೆಗಳೇ ಆಗುತ್ತವೆ.

ಗಾಂಧಿಯವರು ಅದೇ ಪ್ರಾರ್ಥನೆ ಎಂದು ಶ್ರದ್ಧೆಯಿಂದ ಹೇಳಿದರು. ಆ ಮಾತು ಡಾ|| ಫಾಬ್ರಿಯವರ ಹೃದಯವನ್ನು ಮುಟ್ಟಿತು.

## ಆತ್ಮಹತ್ಯದ ಹಕ್ಕು

ಈ ಮಾತನ್ನು ಗಾಂಧಿಯವರೊಂದಿಗೆ ಮುಂದುವರಿಸುವುದು

ಡಾ|| ಫಾಬ್ರಿಗೆ ಸಾಧ್ಯವಾಗಲಿಲ್ಲ. ಆದರೂ ಅವರು ಇನ್ನೂ ಒಂದು ಪ್ರಶ್ನೆ ಕೇಳಿದರು. "ಆತ್ಮಹತ್ಯೆ ಮಾಡಿಕೊಂಡ ಭಿಕ್ಷುಗಳನ್ನು ಬುದ್ಧ ಕ್ಷಮಿಸಿದ್ದರು. ತನ್ನ ಪ್ರಾಣ ತಾನು ನಾಶ ಮಾಡಿಕೊಳ್ಳಲು ಮನುಷ್ಯನಿಗೆ ಹಕ್ಕು ಇದೆಯಲ್ಲವೆ? ನನಗೇನೋ ಜೀವ ಎಂಬುದು ಅತ್ಯಲ್ಪ."

ಗಾಂಧಿ–"ಮನುಷ್ಯನಿಗೆ ತನ್ನ ಜೀವವನ್ನು ಕೆಲವು ಸಂದರ್ಭಗಳಲ್ಲಿ ನಾಶಪಡಿಸಿಕೊಳ್ಳಲು ಪೂರ್ಣವಾದ ಅಧಿಕಾರವಿದೆ ಎಂದು ನನ್ನ ಅಭಿಪ್ರಾಯ. ಒಬ್ಬ ಸಹೋದ್ಯೋಗಿ ತೊನ್ನು ರೋಗದಿಂದ ನರಳುತ್ತಿದ್ದ, 'ಈ ರೋಗ ವಾಸಿಯಾಗುವುದಿಲ್ಲ. ಈ ಜೀವ ಕೊನೆಗಾಣಿಸಿದರೆ ನನಗೂ ಒಳ್ಳೆಯದು. ನನ್ನ ಸೇವೆ ಮಾಡುವ ಇತರರಿಗೂ ಒಳ್ಳೆಯದು. ಆದುದರಿಂದ ಅನ್ನ ನೀರು ಬಿಟ್ಟು ಪ್ರಾಣ ಬಿಡುತ್ತೇನೆ' ಎಂದ. 'ಕಷ್ಟ ಸಹಿಸಲು ನಿನಗೆ ಶಕ್ತಿಯಿರುವುದಾದರೆ ಮಾಡು.' ಎಂದು ನಾನು ಆಶೀರ್ವದಿಸಿದೆ. ಯಾಕೆಂದರೆ ನೀರಿನಲ್ಲಿ ಮುಳಗಿಯಾಗಲಿ ಅಥವ ವಿಷಪಾನ ಮಾಡಿಯಾಗಲಿ ಒಂದೇ ಸಲ ಸಾಯುವುದರಷ್ಟು ಸುಲಭವಲ್ಲ, ಈ ಸ್ವಲ್ಪ ಸ್ವಲ್ಪವಾಗಿ ಸಾಯುವುದು." ನನ್ನ ಎಚ್ಚರಿಕೆ ನ್ಯಾಯವೇ ಆಯಿತು. ಯಾಕೆಂದರೆ ಯಾರೋ ಒಬ್ಬರು 'ತೊನ್ನು ಗುಣಪಡಿಸುವವರು ಇದ್ದಾರೆ' ಎಂದು ಆಸೆ ತೋರಿಸಿದರು. ಈಗ ಆ ಸ್ನೇಹಿತರು ಮತ್ತೆ ಊಟ ಪ್ರಾರಂಭಿಸಿ ಅವರ ಕೈಲಿ ಔಷಧಿ ತೆಗೆದುಕೊಳ್ಳುತ್ತಿದ್ದಾರೆಂದು ಕೇಳಿದೆ!"

ಡಾ|| ಫಾಬ್ರಿ—"ನೋವಿನಿಂದ ಮನಸ್ಸು ಪೂರ್ಣವಾಗಿ ವಿಕಾರವಾಗಿದ್ದರೆ, ನಿರ್ವಾಣವನ್ನು ಹೊಂದುವುದೇ ಉತ್ತಮ ಮಾರ್ಗ. ಮನುಷ್ಯನಿಗೆ ರೋಗವಿಲ್ಲದೆ ಇರಬಹುದು. ಆದರೆ ಸಂಸಾರ ಸಾಕಾಗಿರಬಹುದು."

ಗಾಂಧಿಯವರು ಆ ಅಭಿಪ್ರಾಯವನ್ನು ತಿದ್ದಿದರು. "ಇಲ್ಲ. ಈ ಆತ್ಮಹತ್ಯ ನಾನು ಒಪ್ಪುವುದಿಲ್ಲ. ಮನುಷ್ಯನಿಗೆ ಬಾಳಿನಲ್ಲಿ ಬೇಜಾರಾಗಿದೆ ಎಂಬ ಕಾರಣದಿಂದ ಆತ್ಮಹತ್ಯೆ ಕೂಡದು. ತನ್ನ ಬಾಳಿನಿಂದ ಇತರರಿಗೆ ಕಷ್ಟ. ಆದುದರಿಂದ ಪ್ರಪಂಚವನ್ನು ಬಿಡೋಣ ಎಂಬ ಭಾವ ಬಂದರೆ ಬಿಡಬಹುದು. ನೋವಿನಿಂದ ತಪ್ಪಿಸಿಕೊಳ್ಳುವುದಲ್ಲ ಉದ್ದೇಶ. ಇತರರ ಮೇಲೆ ಹೊರೆಯಾಗುವುದನ್ನು ತಪ್ಪಿಸಿಕೊಳ್ಳುವುದು. ಬಲಾತ್ಕಾರವಾಗಿ ತನ್ನ ಪ್ರಾಣವನ್ನು ತೆಗೆದುಕೊಳ್ಳುವಾಗ ಅಸಾಧ್ಯವಾದ ನೋವು ಉಂಟಾಗುತ್ತದೆ. ಆದರೆ ನನಗೆ ಕ್ಷಯ ರೋಗವಿದೆ ಎಂದು ಇಟ್ಟುಕೊಳ್ಳೋಣ.

ಇವತ್ತಲ್ಲ. ನಾಳೆ ಸಾಯಲೇಬೇಕು. ಆಗ ಶಾಶ್ವತವಾದ ನಿದ್ರೆಗೆ ಒಂದು ಔಷಧಿ ಕೊಡಿ ಎಂದು ನಾನೇ ವೈದ್ಯರನ್ನು ಕೇಳುತ್ತೇನೆ."

"ಇನ್ನೂ ಅನೇಕ ವರುಷ ನೀವು ಚಟುವಟಿಕೆಯಿಂದ ಸೇವೆ ಮಾಡುತ್ತೀರಿ" ಎಂದು ಹರಸುತ್ತಾ ಡಾ|| ಫಾಬ್ರಿ ಎದ್ದರು.

ಗಾಂಧಿಯವರು ನಗುತ್ತಾ "ನಿಮ್ಮ ತತ್ವದಂತೆ ನನ್ನ ಕರ್ತವ್ಯ ಮುಗಿದಿದೆ ಎಂಬ ಭಾವ ನನಗೆ ಬಂದರೆ ನಾನು ಇನ್ನು ಬದುಕಕೂಡದು. ನನಗೆ ನಿಜವಾಗಿಯೂ ಆ ಭಾವ ಬಂದಿದೆ" ಎಂದರು.

ಡಾ|| ಫಾಬ್ರಿ–"ಇಲ್ಲ. ನೀವು ಇನ್ನೂ ಅನೇಕ ವರುಷ ಜನತೆಯ ಸೇವೆ ಮಾಡಬಲ್ಲಿರೆಂದು ನನಗೆ ನಂಬಿಕೆ. ಅನೇಕ ಕೋಟಿ ಜನ ನಿಮ್ಮ ಜೀವಕ್ಕಾಗಿ ಪ್ರಾರ್ಥಿಸುತ್ತಿದ್ದಾರೆ. ನಾನು ಪ್ರಾರ್ಥನೆ ಮಾಡಲಾರೆ. ಏನೂ ಬೇಕೆಂದೂ ಬಯಸಲಾರೆ.

ಗಾಂಧಿ (ಅವರ ಮಾತನ್ನು ತಡೆದು) ಇಂಗ್ಲಿಷ್ ಭಾಷೆ ಬಹಳ ನವಿರು. ಬೇರೆ ಮಾತಿನಲ್ಲಿ ಅದನ್ನೇ ಹೇಳಬಹುದು.

ಡಾ|| ಫಾಬ್ರಿ–"ನಾನು ನಿಸ್ವಾರ್ಥತೆಯಿಂದ ನೀವು ಇನ್ನೂ ಅನೇಕ ವರುಷ ಬಾಳುವವರು ಎಂದು ಅಭಿಪ್ರಾಯ ಪಡಬಲ್ಲೆ."

ಗಾಂಧಿ–"ಅದು ಸರಿ. ನಿಮಗೆ ಮಾತು ಸಿಕ್ಕಿತು ? ಮನುಷ್ಯನು ಬಾಳುವುದಕ್ಕಾಗುವುದಿಲ್ಲ ಎಂಬುದು ಇಲ್ಲಿಯೂ ಬರಿಯ ಬುದ್ಧಿಯ ವಾದ. ಬಾಳಬೇಕು ಎಂಬ ಆಸೆ ಮನುಷ್ಯನಿಗೆ ಇರಬೇಕು. ಆ ಆಸೆ ಇಲ್ಲದಿದ್ದರೆ ಆಸೆಯೊಂದಿಗೆ ಪ್ರಾಣವೂ ಹೋಗುವುದು."

ಡಾ|| ಫಾಬ್ರಿ ಹೊರಟಾಗ "ಗಾಂಧಿಯವರ ಹಸ್ತಾಕ್ಷರ ದೊರಕುತ್ತದೆಯೇ" ಎಂದರು. "ಆದರೆ ಆಸೆ ಬಹು ದಿನದಿಂದ ಇದೆ" ಎಂದರು. (ಬರಿಯ ಬುದ್ಧಿಯ ಮೇಲೆಯೇ ಅವಲಂಬಿಸಿರುವವರ ಮಾತಿನಲ್ಲಿರುವಂತೆ ಇವರ ಮಾತಿನಲ್ಲಿಯೂ ಪರಸ್ಪರ ವಿರುದ್ಧವಿದ್ದಿತು.) ನಾನು ಹೀಗೆ ಹೇಳಿದೆ. "ಗಾಂಧಿ ನನಗೆ ಆಸೆ ಇಲ್ಲ ಎಂದು ಎಲ್ಲಿಯೂ ಹೇಳಿಲ್ಲ. ಅವರು ಕೊಡುವ ಪ್ರತಿ ಹಸ್ತಾಕ್ಷರದೊಂದಿಗೂ ೫. ರೂಪಾಯಿ ಆಶಿಸುತ್ತಾರೆ" ಎಂದೆ.

ಡಾ|| ಘಾಟ್ರಿ ನಗುತ್ತಾ "ನನಗೆ ಗೊತ್ತು—ಹರಿಜನರಿಗಾಗಿ ಕೊಳ್ಳಿ" ಎಂದರು.

೧೯-೪-೧೯೩೯

## ೧೩. ಒಂದು ವಿಷಾದ ಪ್ರಸಂಗ

(೧)

ನಾನು ಹರಿಜನ ಪತ್ರಿಕೆಯಲ್ಲಿ ಗಾಂಧಿಯವರ ಆರೋಗ್ಯವನ್ನು ಕುರಿತು ಹೆಮ್ಮೆಯಿಂದ ಬರೆಯುತ್ತಿದ್ದೇನೆ, ಆರೋಗ್ಯ ಕೆಡಲು ಕಾರಣ ವಿವರಿಸಿ, ಜನರು ಗಾಂಧಿಯವರಿಗೆ ಹೆಚ್ಚು ವಿಶ್ರಾಂತಿ ಕೊಡಬೇಕೆಂದು ಹೇಳುತ್ತಿದ್ದೇನೆ. ಅವರನ್ನು ನೋಡಲು ಬಂದವರನ್ನು ನಿರ್ದಯದಿಂದ ಓಡಿಸಿದ್ದೇನೆ. ಗಾಂಧಿಯವರ ರಕ್ತದ ಒತ್ತಡ ಹೆಚ್ಚಾದೀತು ಎಂಬ ಭಯದಿಂದ ಮಾತನಾಡುತ್ತಿದ್ದವರನ್ನು ಅರ್ಧದಲ್ಲಿ ಬಿಡಿಸಿದ್ದೇನೆ. ಹೀಗಿರುತ್ತಾ ಡಿಲಾಂಗ್‌ನಲ್ಲಿ ಒಂದು ದಿನ ಅವರ ದೃಷ್ಟಿಯಲ್ಲಿ ನನ್ನ ಒಂದು ದೊಡ್ಡ ಅಪರಾಧದಿಂದ ಅವರ ರಕ್ತದ ಒತ್ತಡ ಅತ್ಯಂತ ಹೆಚ್ಚಾಗಿ ಅನರ್ಥ ಸಂಭವಿಸಿದಂತಾದಾಗ, ನನ್ನ ವಿಷಾದವನ್ನು ಊಹಿಸಿಕೊಳ್ಳಿ. ಒರಿಸ್ಸದ ವಾತಾವರಣದಲ್ಲಿ ಅತ್ಯಂತ ಸುಂದರವಾಗಿರಬೇಕಾದ ೨೯,೩೦, ೩೧ (೧೯೩೮ನೆ ಮಾರ್ಚಿ) ಆ ಮೂರು ದಿನಗಳು ಗಾಂಧಿಯವರಿಗೆ ಇನ್ನೂ ಹೆಚ್ಚು ಹೃದಯ ವಿದ್ರಾವಕವಾದ ದಿನಗಳಾಗಿದ್ದುವೆಂಬುದು ೩೦ನೇ ತಾರೀಖಿನ ಗಾಂಧಿಯವರ ಮಾತುಗಳಿಂದ ಗೊತ್ತಾಯಿತು. ಆ ಬೆಳಗ್ಗೆ ನೆರೆದಿದ್ದವರೊಂದಿಗೆ, ಗಾಂಧಿಯವರ ಆರೋಗ್ಯ ಅನರ್ಥಕ್ಕೆ ನಾನು ಹೇಗೆ ಕಾರಣನೆಂಬುದನ್ನು ಹೇಳಿ ಪ್ರಾಯಶ್ಚಿತ್ತ ಮಾಡಿಕೊಂಡೆ, ಎಂದು ತಿಳಿದುಕೊಂಡಿದ್ದೆ. ಆದರೆ ನಾನು ಮಾತನಾಡಿದಾಗ ಗಾಂಧಿ ಇರಲಿಲ್ಲ. ಆದರೆ ನಾನು ಆ ಪ್ರಸಂಗ ಕುರಿತು ಮಾತನಾಡಿದ್ದೆ ಎಂಬುದು ಗಾಂಧಿಯವರಿಗೆ ಗೊತ್ತಾದುದರಿಂದ, ಅವರೂ ಆ ವಿಷಯವನ್ನೇ ಕುರಿತು ಮಾತನಾಡಿದರು. ಹೀಗೆ ನನ್ನ ಸ್ವಂತದ ವಿಷಾದದ ಕತೆಯನ್ನು ಹೇಳುವುದಕ್ಕಾಗಿ ವಾಚಕರ ಕ್ಷಮೆ ಬೇಡುತ್ತೇನೆ. ಆದರೆ ಕತೆಯ ಕೊನೆಯಲ್ಲಿ ಗೊತ್ತಾಗುವಂತೆ, ಇದನ್ನು ಸಾರ್ವಜನಿಕ ದೃಷ್ಟಿಯಿಂದಲೇ ಹೇಳುತ್ತಿದ್ದೇನೆ.

ನಡೆದದ್ದು ಹೀಗೆ. ನನ್ನ ಹೆಂಡತಿ ಸಾಧಾರಣವಾಗಿ ಗಾಂಧೀ ಸೇವಾ

ಸಂಘದ ಸಭೆಗಾಗಲಿ, ಮತ್ತಾವ ಸಭೆಗಾಗಲಿ ಬರುವುದಿಲ್ಲ. ಆದರೆ ನನಗೆ ಈಚೆಗೆ ತಿಳಿದು ಬಂದಂತೆ ಆಕೆ ಪುರಿ-ಜಗನ್ನಾಥಕ್ಕೆ ಹೋಗುವ ಉದ್ದೇಶ ದಿಂದ ಡಿಲಾಂಗ್‌ಗೆ ಬಂದಳು. ಆಕೆ ಪುರಿಗೆ ಹೋಗಲು ನಾನು ಎಲ್ಲಾ ಏರ್ಪಾಡುಗಳನ್ನು ಮಾಡಬೇಕೆಂದು ಗಾಂಧಿ ನನಗೆ ಹೇಳಿದರು. ನನ್ನ ಮಟ್ಟಿಗೆ ಪುರಿಗೆ ಹೋಗಲು ಅವರು ಬಂದುದು ನನಗೆ ಇಷ್ಟವಿರಲಿಲ್ಲ. ಏರ್ಪಾಡು ಮಾಡಲು ನನಗೆ ಇಷ್ಟವಿರಲಿಲ್ಲ. ಗಾಂಧಿ, ಎರಡನೆಯ ಸಲ ಮತ್ತೆ ಏರ್ಪಾಡು ಮಾಡಿದೆಯ ಎಂದು ಕೇಳಿದರು. ಮತ್ತೆ ಮೂರನೆಯ ಸಲ ಕೇಳಿದರು. ಪುರಿ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶವಿಲ್ಲ ಎಂಬುದು ನನ್ನ ಹೆಂಡತಿಗೆ ತಿಳಿಯದಿದ್ದುದು ನನಗೆ ಆಶ್ಚರ್ಯವಾಯಿತು. ಗಾಂಧಿ ಹರಿಜನ ಪ್ರವಾಸ ಕೈಕೊಂಡಾಗ ಆಕೆ ಸೆರೆಯಲ್ಲಿದ್ದಳು. ಆದರೆ ಅಜ್ಞಾನ, ಅಜ್ಞಾನವೇ. ಮೊದಲನೆಯ ದಿನವೇ ಗಾಂಧಿ ಒಂದು ಭಾಷಣ ಮಾಡಿದ್ದರು. ಅದರಲ್ಲಿ " ' ಜಗನ್ನಾಥ ' ನ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ಎಲ್ಲಿಯವರೆಗೆ ಹರಿಜನರಿಗೆ ಪ್ರವೇಶವಿಲ್ಲವೋ ಅಲ್ಲಿಯವರೆಗೆ ಜಗನ್ನಾಥ ದೇವರು ಜಗತ್ತಿಗೆ ನಾಥನಲ್ಲ. ಆತ ತನ್ನ ಆಶ್ರಯದಲ್ಲಿ ಹೊಟ್ಟೆ ತುಂಬಿಕೊಳ್ಳುವವರ ದೇವರು " ಎಂದಿದ್ದರು. ಈ ಭಾಷಣ ಎಲ್ಲ ರಿಗೂ, ನನ್ನ ಹೆಂಡತಿಗೂ, ಎಚ್ಚರಿಕೆಯಾಗುವುದೆಂದು ಅವರು ಭಾವಿಸಿ ದ್ದರು. ನನಗೇನೋ ನನ್ನ ಹೆಂಡತಿ ದೇವಸ್ಥಾನಕ್ಕೆ ಹೋಗಬಹುದೆಂಬ ಭಯವಿದ್ದಿತು. ಇನ್ನೊಂದು ವಿಷಯ ಹೇಳಬೇಕು. ನನ್ನ ಹೆಂಡತಿ ಪುರಿಗೆ ಹೋಗಲು ಏರ್ಪಾಡುಮಾಡು ಎಂದು ಗಾಂಧಿ ಪದೇ ಪದೇ ಹೇಳಿದುದರಿಂದ, ನಾನು ಇದು ಅವರ ಅಹಿಂಸೆ ಎಂದು ತಿಳಿದೆ. ಜುಲು ದಂಗೆಯಲ್ಲಿ ಸಿಪಾಯಿಗಳಿಗೆ ಮದ್ಯವನ್ನೂ, ದಕ್ಷಿಣ ಆಫ್ರಿಕಾದಲ್ಲಿ ಅತಿಥಿ ಗಳಿಗೆ ಮಾಂಸವನ್ನೂ ಈ ಅಹಿಂಸೆಯ ದೃಷ್ಟಿಯಿಂದಲೇ ಗಾಂಧಿ ಕೊಟ್ಟಿ ದ್ದರು. ನನಗೆ ಇನ್ನೂ ಒಂದು ಆಸೆ ಇದ್ದಿತು. ನನ್ನ ಹೆಂಡತಿ ಅನೇಕ ಸ್ನೇಹಿತರ ಜತೆಯಲ್ಲಿ ಹೊರಟಿದ್ದಳು. ಅವರ ಜತೆಯಲ್ಲಿ ಗಾಂಧಿಯವರ ಎರಡನೆಯ ಮಗ ಮಣಿಲಾಲ್ ಸಹ ಇದ್ದರು. ಇವರೆಲ್ಲಾ ಒಳಕ್ಕೆ ಹೋಗದ ಮೇಲೆ, ಅವಳೂ ಹೋಗುವುದಿಲ್ಲ ಎಂದು ಆಶಿಸಿದ್ದೆ. ದೇವಸ್ಥಾನಕ್ಕೆ ಹೋದರೆ ಗಾಂಧಿಯವರ ಹೃದಯ ಒಡೆಯುತ್ತೆ ಎಂದು

ನನ್ನ ಹೆಂಡತಿಗೆ ಒತ್ತಿ ಒತ್ತಿ ಹೇಳಲಿಲ್ಲ. ನಾನು ಮೊದಲೇ ಹೇಳಿದಂತೆ ಇದರ ಪ್ರತಿಕ್ರಿಯೆ ಏನಾಗಬಹುದು ಎಂಬುದನ್ನು ನಾನು ತಿಳಿಯದ ಮೂರ್ಖನಾದೆ. ಗಾಂಧಿಯವರು ತಮ್ಮ ಹೃದಯದ ಅಪಾರವಾದ ಔದಾರ್ಯದಲ್ಲಿ, ದೇವಸ್ಥಾನಕ್ಕೆ ಹೋಗುವವಳಾದ ನನ್ನ ಹೆಂಡತಿಯನ್ನೂ ಸಹ ಕ್ಷಮಿಸುವರೆಂದು ಅರಿತೆ. ಆದುದರಿಂದ, ದೇವಸ್ಥಾನಕ್ಕೆ ಹೋಗುವ ಮುಂಚೆ, ನಾನು ಹೋಗಬೇಕೆಂದು ನಿಶ್ಚಯಿಸಿದ್ದೇನೆ ಎಂದು ನನ್ನ ಹೆಂಡತಿ ಹೇಳಿದ್ದರೂ, ನಾನು ಅವಳನ್ನು ತಡೆಯುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಅವಳ ನಂಬಿಕೆಯನ್ನು ಕೆಡಿಸುವುದು ನನ್ನ ಉದ್ದೇಶವಾಗಿರಲಿಲ್ಲ. ನಾನು ದೇವಸ್ಥಾನ ವಿರೋಧಿ ಎಂದು ಅವಳಿಗೆ ಗೊತ್ತಿದ್ದಿತು. ಈ ದೇವ ಸ್ಥಾನಗಳನ್ನು ಕಂಡರೆ ನನಗೆ ವೈ ಜುಮ್ಮೆನ್ನುತ್ತದೆ ಎಂದೂ ಅವಳಿಗೆ ಗೊತ್ತು. ಈ ದೇವಾಲಯಗಳಲ್ಲಿ ಹರಿಜನರ ಪ್ರವೇಶವಾದರೂ, ಈ ಘಾತುಕರಾದ ಪೂಜಾರಿ ಷಂಡರು ಇವನ್ನು ಬಿಡುವವರೆಗೆ ಈ ದೇವಾ ಲಯ ಉತ್ತಮವಾಗುವುದಿಲ್ಲ. ನನ್ನ ಹೆಂಡತಿಯು ದೇವಸ್ಥಾನಕ್ಕೆ ಹೋಗುವುದರಿಂದ ತನ್ನ ಆತ್ಮಕ್ಕೆ ಒಳ್ಳೆಯದಾಗುವುದೆಂದು ನಂಬಿದರೆ, ಅದನ್ನು ತಪ್ಪಿಸಲು ನನ್ನ ಮನಸ್ಸು ಖಂಡಿತ ಒಪ್ಪಲಿಲ್ಲ. ಇನ್ನು ಕಸ್ತೂರಿಬಾ ರವರ ಮಾತು. "ಆಕೆ ದೇವಸ್ಥಾನದ ಒಳಕ್ಕೆ ಹೋಗುವುದಿಲ್ಲ. ಅವೇ ನನ್ನ ಹೆಂಡತಿಯನ್ನು ಬಹುಶಃ ತಡೆಯುತ್ತದೆ" ಎಂದು ಭಾವಿಸಿದೆ. ಆದರೆ ನಡೆದುದೇ ಬೇರೆ. ನನ್ನ ಹೆಂಡತಿ ಒಳಕ್ಕೆ ಹೋದಳು. ಅನಂತರ ಮತ್ತಾರೋ ಹೋದರು. ಆ ಮೇಲೆ ಕಸ್ತೂರಿ ಬಾ ಸಹ ಹೋದರು. ಹೋಗಿದ್ದವರ ಪೈಕಿ ಕೆಲವರು ಹೊರಗೆ ನಿಂತರು. ನನ್ನ ಚಿಕ್ಕ ಮಗನೂ, ಪೂಜಾರಿಗಳೊಂದಿಗೆ ಜೋರಾಗಿ ವಾದಿಸುತ್ತಾ ಹೊರಗೆ ನಿಂತನು.

ಸೋಮವಾರ ಸಾಯಂಕಾಲ ಅವರೆಲ್ಲಾ ಹಿಂದಿರುಗಿದ ಮೇಲೆ ನಡೆದ ಸಂಗತಿ ಗಾಂಧಿಗೆ ತಿಳಿಯಿತು. ಅವರಿಗೆ ಬಹಳ ದುಃಖವಾಯಿತು. ಅವರಿಗೆ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ನನ್ನನ್ನೂ ಕಸ್ತೂರಿಬಾವನ್ನೂ ನನ್ನ ಹೆಂಡತಿಯನ್ನೂ ಅವರು ವಿಚಾರಿಸಿದರು. ನಮ್ಮ ಸಮಜಾಯಿಷಿ ಯಿಂದ—ಮೇಲೆ ಹೇಳಿರುವ ಮಾತುಗಳೂ ಅದರಲ್ಲಿವೆ—ಅವರಿಗೆ ಸಮಾ ಧಾನವುಂಟಾಗಲಿಲ್ಲ. ಅವರಿಗೆ ಬೇಸರಿಕೆಯೂ ಆಯಿತು. ನನ್ನದೇ

ಮುಖ್ಯ ತಪ್ಪು ಎಂದು ಅವರು ಹೇಳಿದರು. " ಈ ಚಳುವಳಿ ಅವರಿಗೆ ವಿವರಿಸಬೇಕಾಗಿದ್ದಿತು. ನಾನು ೧೯೩೪ ರಲ್ಲಿ ಪುರಿಗೆ ಹೋದುದು. ಅಲ್ಲಿ ನನಗೆ ಎದುರಾಗಿ ಹಿಂಸೆಯ ಏರ್ಪಾಡಾದುದು. ಅನಂತರ ನಾನು ಒರಿಸ್ಸಾದಲ್ಲಿ ಕಾಲುನಡಿಗೆಯಲ್ಲಿ ಹೋದುದು ಹರಿಜನರನ್ನು ಈ ದೇವ ಸ್ಥಾನಕ್ಕೆ ಸೇರಿಸುವವರಿಗೆ ಸುಧಾಕರು ಈ ದೇವಸ್ಥಾನಕ್ಕೆ ಹೋಗಕೂಡ ದೆಂದು ಹೇಳಿದುದು " ಇವನ್ನೆಲ್ಲಾ ವಿವರಿಸಬೇಕಾಗಿದ್ದಿತು. " ಆದರೂ ನಿನ್ನ ಹೆಂಡತಿ ಕೇಳದೆ ಇದ್ದಿದ್ದರೆ ನನ್ನ ಸಹಾಯವನ್ನೂ ತೆಗೆದುಕೊಳ್ಳ ಬೇಕಾಗಿದ್ದಿತು. ಆದರೂ ನಿನ್ನ ಹೆಂಡತಿ ಒಪ್ಪದಿದ್ದರೆ ಆ ಮೇಲೆ ಅವಳ ದಾರಿಗೆ ಅವಳನ್ನು ಬಿಡಬೇಕಾಗಿದ್ದಿತು. ನೀನು ಎಚ್ಚರಿಕೆಯಿಂದ ವರ್ತಿಸ ಲಿಲ್ಲ. ಅದರಿಂದ ನನಗೂ ನಿನಗೂ ನಿನ್ನ ಹೆಂಡತಿಗೂ ಈ ಚಳುವಳಿಗೂ ಅನ್ಯಾಯವಾಗಿದೆ " ಎಂದರು. ಗಾಂಧಿಯವರು ತಮ್ಮ ಹೃದಯವನ್ನು ಬಿಚ್ಚಿ ಹೀಗೆ ನುಡಿದರು.

" ಮಹದೇವ್, ನಡೆದ ಸಂಗತಿಯ ಮೇಲೆ ಕೆಲವು ಮಾತು ಹೇಳಿ ದುದು ಸಂತೋಷ. ಆತ ಕೆಲವು ಮಾತುಗಳನ್ನು ಹೇಳಿರುವುದರಿಂದ, ನನ್ನ ಹೃದಯದಲ್ಲಿ ತುಂಬಿರುವುದನ್ನೆಲ್ಲಾ ಹೊರಕ್ಕೆ ಸುರಿಯಬೇಕೆಂದೆನ್ನಿಸು ತ್ತಿದೆ. ನನಗೆ, ನೀವು ಮಾಡುತ್ತಿರುವ ಬೇರೆ ಬೇರೆ ರಚನಾತ್ಮಕ ಕಾರ್ಯ ಗಳು, ಅಹಿಂಸೆ ಮತ್ತು ಸತ್ಯದ ಬಾಹ್ಯ ಪ್ರಕಟನೆಗಳು. ಅಹಿಂಸೆ ಮತ್ತು ಸತ್ಯದ ಮಾರ್ಗದಲ್ಲಿ, ಕೊನೆಗೆ ಸ್ವಾತಂತ್ರ್ಯಕ್ಕೆ ಎಷ್ಟು ದೂರ ಈ ಚಟು ಪಟಿಕೆಗಳು ನಿಮ್ಮನ್ನು ಕೊಂಡುಹೋಗಬಲ್ಲವು ; ಎಂಬುದನ್ನು ಅವು ತೋರಿಸುತ್ತವೆ. ಅಸ್ಪೃಶ್ಯತಾ ನಿವಾರಣೆಯು ಅಹಿಂಸೆಯ ಅತ್ಯಂತ ದೊಡ್ಡ ಪ್ರಕಟನೆ. ಅಸ್ಪೃಶ್ಯತೆ ನಾಶವಾಗದಿದ್ದಲ್ಲಿ, ಹಿಂದು ಧರ್ಮವೇ ನಾಶವಾಗುವುದು ಒಳ್ಳೆಯದೆಂದು ನನ್ನ ನಿತ್ಯದ ಪ್ರಾರ್ಥನೆ. ನಿಮ್ಮೆಲ್ಲರ ಪ್ರಾರ್ಥನೆಯೂ ಇದೇ ಆಗಿರಬೇಕು. ಈ ಪ್ರಾರ್ಥನೆ ನನ್ನ ಹರಿಜನ ಪ್ರವಾಸದಲ್ಲಿ ವ್ಯಕ್ತವಾದ ತೀವ್ರವಾದ ರೂಪವನ್ನು ಹೊಂದಿತು. ಆ ಪ್ರವಾಸದ ಮುಖ್ಯ ಉದ್ದೇಶ, ಹರಿಜನರಿಗೆ ದೇವಸ್ಥಾನಗಳನ್ನು ತೆರೆಯಿಸುವುದಾಗಿದ್ದಿತು. ಅಸ್ಪೃಶ್ಯತಾ ನಿವಾರಣೆಯಲ್ಲಿ ನಂಬಿಕೆಯುಳ್ಳ ವರು ಹರಿಜನ ಪ್ರವೇಶವಿಲ್ಲದ ದೇವಾಲಯಗಳಿಗೆ ಹೋಗಕೂಡದೆಂದು

ನಾನು ಎಡಬಿಡದೆ ಒಂದೇ ಸಮನಾಗಿ ಬೋಧಿಸಿದೆ. ಹೀಗಿರುವಲ್ಲಿ ನನ್ನ ಹೆಂಡತಿ ಮಕ್ಕಳು ಅಂತಹ ದೇವಸ್ಥಾನಕ್ಕೆ ಹೋದರೆ ಹೇಗೆ ಸಹಿಸಲಿ ? ಅವರನ್ನು ಪ್ರಾರ್ಥಿಸುತ್ತೇನೆ. ಅವರ ಕಾಲು ಕಟ್ಟಿಕೊಳ್ಳುತ್ತೇನೆ. ಕೊನೆಗೂ ನನ್ನ ಪ್ರಾರ್ಥನೆ ವ್ಯರ್ಥವಾದರೆ ಅವರೊಂದಿಗಿರುವ ಸಂಬಂಧ ವನ್ನೂ ತ್ಯಜಿಸುತ್ತೇನೆ. ಈ ತತ್ವಕ್ಕೆ ಅನುಸಾರವಾಗಿ ನಾನು ಬಾಳಲು ಇಷ್ಟು ವರುಷವೂ ಪ್ರಯತ್ನಿಸಿದ್ದೇನೆ. ನನ್ನ ಹೆಂಡತಿಯೂ, ನನ್ನ ಮಕ್ಕಳುಗಳೋಪಾದಿಯ ಇಬ್ಬರು ಆಶ್ರಮವಾಸಿ ಮಹಿಳೆಯರೂ, ಪುರಿ ದೇವಾಲಯಕ್ಕೆ ಹೋದುದು ತಿಳಿದಾಗ ನಾನು ದೀನನಾದೆ, ತಲೆ ತಗ್ಗಿಸಿದೆ. ಸಂಕಟದಿಂದ ನನ್ನ ದೇಹ ಪೂರ್ಣವಾಗಿ ನಿಶ್ಯಕ್ತವಾಯಿತು. ದೇಹ ಯಂತ್ರ ರಕ್ತದ ಒತ್ತಡವನ್ನು ಬಹಳ ಹೆಚ್ಚಾಗಿ ತೋರಿಸಿತು. ಆದರೆ ಈ ಯಂತ್ರಕ್ಕಿಂತ ನನಗೆ ಚೆನ್ನಾಗಿ ಗೊತ್ತು. ನನ್ನ ಸ್ಥಿತಿ, ಅದು ತೋರಿಸಿ ದುದಕ್ಕಿಂತ ಹೆಚ್ಚು ವಿಷಮವಾಗಿದ್ದಿತು. ಗೀತೆ ಅನಾಸಕ್ತಿಯನ್ನು ಬೋಧಿಸುತ್ತದೆ. ಆದರೆ ಆ ಅನಾಸಕ್ತಿ ಇಂತಹ ಅನರ್ಥ ಸಂದರ್ಭಗಳಿಗಲ್ಲ. ಪ್ರಿಯರಾದವರು ಕರ್ತವ್ಯ ವಿಮುಖರಾದಾಗ ಅನಾಸಕ್ತಿಯಿಲ್ಲ. ಹೋದ ಮೂವರ ಮೇಲೆ ತಪ್ಪು ಹೆಚ್ಚು ಇಲ್ಲ. ಅವರು ಅಜ್ಞಾನಿಗಳು. ತಪ್ಪು ನನ್ನದು, ನನಗಿಂತ ಹೆಚ್ಚಾಗಿ ಮಹದೇವನದು. ಮಹದೇವ ಅವರ ಧರ್ಮ ಏನು ಎಂಬುದನ್ನು ಅವರಿಗೆ ಹೇಳಬೇಕಾಗಿದ್ದಿತು. ಹೇಳಲಿಲ್ಲ. ನನ್ನ ಹೃದಯ ವಿದೀರ್ಣವಾಗುತ್ತದೆ ಎಂದು ಹೇಳಬೇಕಾಗಿದ್ದಿತು. ಇದರ ಸಾಮಾಜಿಕ ಪ್ರತಿಕ್ರಿಯೆ ಏನು ಎಂಬುದನ್ನೂ ಆತ ಯೋಚಿಸಬೇಕಾಗಿ ದ್ದಿತು. ಹೋದವರದು ಅಜ್ಞಾನ, ನನಗೆ ಗೊತ್ತು. ಆದರೆ ಅಜ್ಞಾನಕ್ಕೆ ನಾವೇ ಕಾರಣ. ಆ ಅಜ್ಞಾನವನ್ನು ಹೋಗಲಾಡಿಸದಿರುವುದು ಅಹಿಂಸೆ ಯಲ್ಲ. ನಾನು ಅವರನ್ನು ಪುರಿಗೆ ಕಳುಹಿಸಿದುದು ದೇವಸ್ಥಾನದೊಳಕ್ಕೆ ಹೋಗುವುದಕ್ಕಲ್ಲ. ಹರಿಜನರನ್ನು ಎಲ್ಲಿಂದ ಮುಂದಕ್ಕೆ ಬಿಡುವುದಿಲ್ಲವೋ ಅಲ್ಲಿ ಪ್ರತಿಭಟಿಸುತ್ತಾ ನಿಲ್ಲಬೇಕೆಂದು. ಅದು ಸರಿಯಾದ ಪ್ರಚಾರವಾಗು ತ್ತಿದ್ದಿತು. ಆ ಮೂಲಕ ಹರಿಜನರ ಸೇವೆಯಾಗುತ್ತಿದ್ದಿತು. ನಮ್ಮ ಬಾಂಧವರಾದ ಹರಿಜನರಿಗೆ ದೇವಸ್ಥಾನ ಪ್ರವೇಶವಿಲ್ಲದಿರುವಾಗ ನಾವೂ ಆ ಸುಖ ಬಿಡಬೇಕು. ಹಾಗೆ ಮಾಡದೆ ಸುಮ್ಮನೆ ಹರಿಜನರ ಜತೆಯಲ್ಲಿ

ಕೆಲಸ ಮಾಡುವುದು, ಅವರೊಂದಿಗೆ ಊಟ ಮಾಡುವುದು, ಅವರಿಗೆ ಅನ್ನ ಹಾಕುವುದು ಇಷ್ಟೇ ಸಾಲದು.

ಈ ಪ್ರಶ್ನೆಯು ಮತ್ತೊಂದು ಮುಖವಿದೆ. ಸನಾತನಿಗಳು ಅಸ್ಪೃಶ್ಯತೆ ಹಿಂದೂ ಧರ್ಮದ ಒಂದು ಭಾಗ ಎಂದೇ ನಂಬುತ್ತಾರೆ. ಹಾಗೆಯೇ ಅಸ್ಪೃಶ್ಯತೆಯಿಲ್ಲದುದು ಹಿಂದೂ ಧರ್ಮವೇ ಅಲ್ಲವೆನ್ನುತ್ತಾರೆ. ಅಹಿಂಸೆಯ ಮಾರ್ಗದಿಂದ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿದ ಹೊರತು ಹಿಂದೂ ಮುಸಲ್ಮಾನ್ ಪ್ರಶ್ನೆ ತೀರ್ಮಾನವಾಗುವುದಿಲ್ಲ. ಆಗ ಮುಸಲ್ಮಾನರು ನಾವು ದೈವ ವಿರೋಧಿಗಳಲ್ಲ ಎನ್ನುತ್ತಾರೆ.

ಇನ್ನು ಹರಿಜನರ ಮಾತು. "ಈ ಅಸ್ಪೃಶ್ಯತಾ ನಿವಾರಣೆಯ ಚಳುವಳಿಯಲ್ಲಿ ನಮ್ಮ ಹೆಂಡತಿ ಮಕ್ಕಳನ್ನೇ ನಮ್ಮ ಜತೆ ಕರೆದುಕೊಂಡು ಹೋಗಲು ಸಾಧ್ಯ ಇಲ್ಲದ ಮೇಲೆ, ನಾವು ಯಾವಾಗಲೂ ಅವರ ಮಿತ್ರರೆಂಬ ನಂಬಿಕೆ ಹೇಗೆ ಬರುವುದು ?"

ಹೀಗೆ ಗಾಂಧಿ ತನ್ನ ಹೃದಯದ ದುಃಖ ತೋಡಿಕೊಂಡದು, ನನ್ನ ದುಃಖ ಮತ್ತಷ್ಟು ಹೆಚ್ಚಿತು. ಅವರು ಬಹಳ ಖೇದಗೊಂಡಿದ್ದರು. ಮರು ದಿನ ಅವರು ಮಾತನಾಡಲೂ ಅಶಕ್ತರಾಗಿದ್ದರು. ಆದುದರಿಂದ ಮೌನವನ್ನೇ ಅನುಸರಿಸಿದರು. ವಾದ ಮಾಡುವುದರಿಂದ ಪರಿಸ್ಥಿತಿ ಕೆಡಬಹುದೆಂದು ನನಗೆ ಭಯವಾಯಿತು. ಅವರ ಆರೋಗ್ಯವೂ ಶಕ್ತಿಯೂ ಮೊದಲಿನಂತೆ ಆಗುವವರೆಗೆ ಕಾಯೋಣ ಎನ್ನಿಸಿತು ನನಗೆ. ಆದರೆ ಗಾಂಧಿಯವರ ಅನಾರೋಗ್ಯಕ್ಕೆ ನಾನು ಕಾರಣ ಎಂಬ ಯೋಚನೆ ನನ್ನನ್ನು ಹಿಂಸಿಸಿತು. ನನ್ನದು ತಪ್ಪು ತೀರ್ಮಾನವಾದ ಮೇಲೆ, ನಾನು ಹೇಗೆ ತಾನೇ ಅವರ ಸೇವಕನಾಗಬಲ್ಲೆ ? ನಾನು ಇವರ ಪ್ರತಿನಿಧಿಯಾಗಿ ಹೇಗೆ ತಾನೇ ಹರಿಜನರ ಸೇವೆ ಸರಿಯಾಗಿ ಮಾಡಬಲ್ಲೆ ? ಅವರ ಬಾಗಿಲು ಕಾಯಲು ನನಗೆ ಏನು ಅಧಿಕಾರ ? ರಾತ್ರಿಯೆಲ್ಲಾ ನಾನು ನರಕ ಅನುಭವಿಸಿದೆ. ಇನ್ನೇನೂ ಮಾಡುವುದಕ್ಕೆ ತೋರದೆ "ದಯವಿಟ್ಟು ನನ್ನನ್ನು ನಿಮ್ಮಿಂದ ಬಿಟ್ಟು ಕಳುಹಿಸಿ ಎಂದು ಒಂದು ಚೀಟಿ ಗಾಂಧಿಗೆ ಬರೆದೆ. ಇದರಿಂದ ಅವರಿಗೆ ಇನ್ನೂ ಹೆಚ್ಚು ಕೋಪ ಬಂತು. ದುಃಖ ಸಹಿಸುವುದು ಕಷ್ಟವಾಯಿತು, "ನನ್ನನ್ನು ಪ್ರೀತಿಸುವವರು ನನ್ನನ್ನು ಕೊಂದರೂ

ಚಿಂತೆಯಿಲ್ಲ. ಪ್ರೀತಿಸದವರ ಜತೆ ಜೀವನ ಬೇಡ" ...........ಮಾಡಿದ ತಪ್ಪನ್ನು ಅರಿತು ಪುರಿಗೆ ಒಂದು ಗುಂಪು ಸತ್ಯಾಗ್ರಹಿಗಳೊಂದಿಗೆ ಹೋಗುವುದನ್ನು ಬಿಟ್ಟು ಹುಚ್ಚನಂತೆ ಅಳುತ್ತಿ. ನಾನು ಬೈದುದು ನಿನ್ನ ಒಳ್ಳೆಯದಕ್ಕಾಗಿಯೇ ಎಂದರು ಗಾಂಧಿ. ನಿನ್ನ ಹೆಂಡತಿಗೆ ಮಾರ್ಗ ತೋರಿಸುವ ಬದಲು ಕುರುಡು ಪ್ರೇಮದಿಂದ ಅವಳ ಮೂಢ ನಂಬಿಕೆಗಳನ್ನೇ ಪ್ರೋತ್ಸಾಹಿಸಿದೆ" ಎಂದರು.

ನನಗೆ ಮಾತನಾಡುವುದೇ ಕಷ್ಟವಾಯಿತು. ಗಾಂಧಿ, ಆತ್ಮ ಸಂಬಂಧವಾದ ಶಸ್ತ್ರಚಿಕಿತ್ಸೆ ಮಾಡುವಾಗ, ಪ್ರೇಮವೆಂಬ ಕ್ಲೋರೋಫಾರಂ ಉಪಯೋಗಿಸುತ್ತಿದ್ದವರು ಈಗ ಆ ಕ್ಲೋರೋಫಾರಂ ಇಲ್ಲದ ಈ ಶಸ್ತ್ರ ಚಿಕಿತ್ಸೆ ಮಾಡುತ್ತಿರುವಂತೆ ನನಗೆ ಭಾಸವಾಯಿತು. ಕೋಪದಿಂದ ನಾನು ಹೀಗೆ ಹೇಳಿದೆ: "ಸ್ವರ್ಗದಲ್ಲಿ ಯೋಗಿಗಳೊಂದಿಗೆ ವಾಸಿಸುವುದು ಒಂದು ಆನಂದ; ಒಂದು ವೈಭವ. ಆದರೆ ಭೂಮಿಯ ಮೇಲೆ ಸನ್ಯಾಸಿಯೊಂದಿಗೆ ವಾಸಿಸುವುದು—ಅದರ ಕತೆಯೇ ಬೇರೆ" ಗಾಂಧಿ ಅಲ್ಪ ವಿಷಯವನ್ನು ಅತಿ ದೊಡ್ಡದು ಮಾಡಿರಬಹುದೆಂದು ಭಾವಿಸಿದೆ.

ಆದರೆ ಅದನ್ನು ತೀರ್ಮಾನಿಸಲು ನಾನು ಯಾರು? ಈಗ ಇದನ್ನು ಬರೆಯುತ್ತಿರುವಾಗ, ನನ್ನ ದುಃಖ ನನಗೆ ಹೆಚ್ಚಾಗಿದ್ದುದರಿಂದ ಗಾಂಧಿಯವರ ಸೂಕ್ಷ್ಮವಾದ ಮನಸ್ಸಿನ ಸ್ವಭಾವ ನನಗೆ ತಿಳಿಯಲಿಲ್ಲವೆಂದು ಭಾವಿಸುತ್ತೇನೆ. ಐವತ್ತು ವರುಷಕಾಲ ಅಹಿಂಸೆ, ಸತ್ಯದ ಅನುಯಾಯಿಯಾದ ಅವರಿಗೆ, ಯಾವ ಕಾಲದಲ್ಲಿ ಹೇಗೆ ನಡೆಯಬೇಕು ಗೊತ್ತು; ಆಶಿ ಕೋಪದಿಂದ ಓಲಾಡುವ ನನಗಲ್ಲ. ನನಗೆ ಅಲ್ಪವಾಗಿ ತೋರಿದ ಪ್ರಸಂಗಗಳು ಅವರಿಗೆ ಜೀವನ ಮರಣದ ಪ್ರಶ್ನೆಯಾಗಿರಬಹುದು. ಅವರ ಜತೆ ಜೀವಿಸುವುದು ಎಷ್ಟೇ ಕಷ್ಟವಾದರೂ ಅವರಿಂದ ಬೇರೆಯಾಗಿರುವುದು ಇನ್ನೂ ಕಷ್ಟವೆಂದು ನನಗೆ ಆಗ ಅನುಭವಕ್ಕೆ ಬಂತು. ನಾನು ಯೋಗಿಯಲ್ಲ. ಅಲ್ಪರಿಗಿಂತ ಅಲ್ಪ ಎಂದು ಗಾಂಧಿ ಹೇಳುತ್ತಾರೆ. ಗಾಂಧಿ ಯೋಗಿಯಾಗಿರಲಿ ಅಥವ ನಮ್ಮಂತೆ ಸಮಾನ್ಯರೇ ಆಗಿರಲಿ "ನಾನು ಬಿಟ್ಟು ಹೋಗುತ್ತೇನೆ" ಎಂದುದು ಒಂದು ಹುಚ್ಚು ಕೂಗು ಎಂಬುದು ನನಗೆ ಗೊತ್ತಾಯಿತು. ಯಾಕೆಂದರೆ ಅವರಿಗೆ ಬರೆದ ಕಾಗದ ನಾನು

ಈಗ ಮತ್ತೆ ನೋಡಿದರೆ, ನಾನು ಅವರನ್ನು ಬಿಟ್ಟು ಐದು ಹೆಜ್ಜೆ ಹೋಗು ವುದರೊಳಗಾಗಿ ಮತ್ತೆ ಪಶ್ಚಾತ್ತಾಪದಿಂದ ಹಿಂದಿರುಗುತ್ತಿದ್ದೆನೆಂಬುದರಲ್ಲಿ ಸಂದೇಹವಿಲ್ಲ.

ಎಲ್ಲವನ್ನೂ ಹೇಳಿದ ಮೇಲೆ, ಒಂದು ಸಂಗತಿ ಸ್ಪಷ್ಟ. ಗಾಂಧಿ ಯವರ ಹರಿಜನ ಪ್ರೇಮ ; ಅವರಿಗಾಗಿ ಪ್ರಾಣ ಸಹ ಕೊಡುವ ಕಾತರ. ಅವರ ದುಃಖದ ಮಾತು, ಹರಿಜನ ಸೇವೆ ಹೆಚ್ಚಾಗಿ ಮಾಡಬೇಕೆಂಬ ಸಂದೇಶವೇ ಆಯಿತು. ಈ ಮುಖ್ಯವಾದ ರಚನಾತ್ಮಕ ಕಾರ್ಯಕ್ರಮ ವನ್ನು ಯಾರೂ ಮೀರಕೂಡದು. ಎಲ್ಲರೂ ಎಚ್ಚರಿಕೆಯಿಂದ ಇರಬೇಕು ಎಂಬ ಸಂದೇಶಕ್ಕೆ ಈ ಸಂಗತಿ ದಾರಿಯಾಯಿತು. ಪವಿತ್ರವಾದ ಒರಿಸ್ಸದಲ್ಲಿ ಈ ವಾರ ಗಾಂಧಿಯವರ ಈ ಸಂದೇಶದಿಂದ ಜನ ಪರಿಶುದ್ಧರಾಗಿ ತಮ್ಮ ಮನೆಗಳಿಗೆ ಹೋದರು. ಈ ಸಂದೇಶವನ್ನು ಅವರು ಬೇಗ ಮರೆಯು ವಂತೆ ಇಲ್ಲ.

(೨)

ಪುರಿಗೆ ನಮ್ಮವರು ಹೋದುದಕ್ಕೆ ಗಾಂಧಿಯವರಲ್ಲಿ ಉಂಟಾದ ಪ್ರತಿಕ್ರಿಯೆ ಸರಿ ಎಂಬಂತೆ, ಪುರಿ ಮಹಂತರು ಗಾಂಧಿಯವರನ್ನು ನೋಡಲು ಬಂದರು. ಈ ಸಂದರ್ಶನ ಮೊದಲೇ ಏರ್ಪಾಡಾಗಿದ್ದಿತು. ಮಹಂತರು ಗಾಂಧಿಯನ್ನು "ವೈಷ್ಣವರಲ್ಲೆಲ್ಲಾ ಅತ್ಯಂತ ಶ್ರೇಷ್ಠ" ಎಂದು ಸಂಬೋಧಿಸಿದರು. ಆದರೆ ಈ ಅತ್ಯಂತ ಶ್ರೇಷ್ಠ ವೈಷ್ಣವ ಹೇಳಿದ ದೇವಸ್ಥಾನ ಹರಿಜನರಿಗೆ ತೆರೆಯಿರಿ ಎಂಬ ಸೂಚನೆ ಮಹಂತ್ ಅಂಗೀ ಕರಿಸುವವರಾಗಿರಲಿಲ್ಲ.

ಮಹಂತ್ ಬಂದಾಗ ರಾಜೇಂದ್ರಬಾಬುಗಳ ಸಹೋದರಿ ಗಾಂಧಿ ಯವರ ಜತೆ ಕುಳಿತಿದ್ದರು. ಆಕೆ ಪುರಿಗೆ ಹೋಗದಂತೆ ಗಾಂಧಿ ತಡೆ ದಿದ್ದರು. ತಮ್ಮ ಸಂದೇಶ ಒತ್ತಿಹೇಳಲು ಗಾಂಧಿಗೆ ಅದರಿಂದ ಅವಕಾಶ ವಾಯಿತು. ಆದರೆ ಮಹಂತ್ ಯಾತರಿಂದಲೂ ಚಲಿಸಲಿಲ್ಲ. ಗಾಂಧಿ ಯವರು "ಈಗ ಎಲ್ಲಾ ಮತಗಳನ್ನೂ ಒರೆಗೆ ಹಚ್ಚುತ್ತಿದಾರೆ. ಹಿಂದೂ ಧರ್ಮ ಆ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಅದು ನಾಶವಾಗುವುದು" ಎಂದೂ ಹೇಳಿದರು. ಆದರೆ ಮಹಂತನಿಗೆ ಆಗಬೇಕಾದುದೇನು ?

ಬಹುಶಃ ತನ್ನ ಜೀವಮಾನದ ಕಾಲದಲ್ಲಿ ಅಂತಹ ಯಾವ ಅವಾಂತರವೂ ಆಗುವುದಿಲ್ಲವೆಂಬುದು ಆತನಿಗೆ ಚೆನ್ನಾಗಿ ಗೊತ್ತಾಗಿದ್ದಿರಬೇಕು. ತಾನು ರಂಗಸ್ಥಳದಿಂದ ಆಚೆ ಹೋದ ಮೇಲೆ ಏನುಬೇಕಾದರೂ ಆಗಲಿ ! ಗಾಂಧಿಯವರು ಹೀಗೂ ಹೇಳಿದರು. “ತಿರುವಾಂಕೂರಿನಲ್ಲಿ ಹರಿಜನರನ್ನು ದೇವಾಲಯಕ್ಕೆ ಸೇರಿಸಿದರು. ಸ್ವರ್ಗವೇನೂ ಕೆಳಕ್ಕೆ ಬಿದ್ದುಹೋಗಲಿಲ್ಲ. ಅದರ ಬದಲು ಭೂಮಿಯೇ ಸ್ವಲ್ಪ ಸ್ವರ್ಗವಾಯಿತು.” ಎಂದರು. ಇದೆಲ್ಲಾ “ಗೋರ್ಕಲ್ಲ ಮೇಲೆ ನೀರ್ಕರದಂತೆ” ಆಯಿತು. ಮಹಂತ್ ಕೊಟ್ಟ ಸಬೂಬು ವಿಚಿತ್ರ ಆ ಸಬೂಬನ್ನು ಕೇಳಿದಕೂಡಲೇ ಈತ ಆಷಾಢಭೂತಿಗಳಿಗೆಲ್ಲಾ ಗುರು ಎಂದು ನನಗೆ ಗೊತ್ತಾಯಿತು. ಹಿಂದೆ ೧೯೩೨ ನೆ ಇಸವಿಯಲ್ಲಿ ಯರವಾಡ ಸೆರೆಮನೆಯಲ್ಲಿ ಗಾಂಧಿಯವರನ್ನು ನೋಡಿದ ಒಬ್ಬ ಪಂಡಿತ “ಹರಿಜನರು ೯೯ ವರುಷ ತಪಸ್ಸು ಮಾಡಿದರೆ ಅವರ ಪಾಪ ಪರಿಹಾರವಾಗುವುದು” ಎಂದು ನಿಜವಾಗಿಯೇ ಹೇಳಿದ. ಮಹಂತ್ ಆ ಪಂಡಿತನನ್ನೂ ಹಿಂದಕ್ಕೆ ಕೆಡವಿದ. ನಾವು ಮಾನ್ಯರಾದ ಅತಿಥಿಗಳನ್ನು ಮನೆಯ ಹೊರಗಡೆ ಹೋಗಿ ಎದುರುಗೊಳ್ಳುವಂತೆ ಜಗನ್ನಾಥ, ದೇವಸ್ಥಾನದ ಹೊರಗಡೆಯೇ ಹರಿಜನರನ್ನು ಎದುರುಗೊಳ್ಳುತ್ತಾನೆ. ಭಗವಂತನ ಈ ಕೃಪೆಯನ್ನು ತಿಳಿಯದ ನಾವು ಮೂರ್ಖರಲ್ಲವೆ ?” ಆದರೆ ಮಹಂತ್ ಒಂದು ವಿಷಯ ಮರೆತರು. ಮಾನ್ಯರಾದ ಅತಿಥಿಯನ್ನು ಬಾಗಿಲಿನಲ್ಲಿ ಎದುರುಗೊಂಡರೂ ಒಳಕ್ಕೆ ಕರೆದುಕೊಂಡು ಬಂದು ಅವರಿಗೆ ಗೌರವಸ್ಥಾನ ಕೊಡುತ್ತೇವೆ. ಆದರೆ ಹರಿಜನರನ್ನು ಹೊರಗೇ ನಿಲ್ಲಿಸುತ್ತೇವೆ. ಮಹಂತ್ ಹೀಗೆಯೂ ಹೇಳಬಹುದಾಗಿದ್ದಿತು. “ದೇವಸ್ಥಾನದ ಒಳಗೆ ಕತ್ತಲೆ. ಉಸಿರು ಕಟ್ಟಿಕೊಳ್ಳುತ್ತೆ. ಹರಿಜನರು ಯಾಕೆ ಅಲ್ಲಿಗೆ ಬಂದು ಕಷ್ಟಪಡಬೇಕು. ಅದರ ಬದಲು ಹೊರಗಿನ ಶುದ್ಧವಾದ ಗಾಳಿಯಲ್ಲಿಯೇ ಇರಲಿ ಎಂಬುದು ಜಗನ್ನಾಥನ ಇಚ್ಛೆ”.

ಆದರೆ ದೇವಸ್ಥಾನಕ್ಕೆ ಹರಿಜನರನ್ನು ಒಂದು ದಿನ ಸೇರಿಸಲೇ ಬೇಕೆಂಬುದು ಆತನಿಗೂ ಗೊತ್ತು. ಆದರೆ ಅದು ನಿಧಾನವಾಗಿ ಆಗಬೇಕು. ಪದೇಪದೇ ಹೇಳುವ ಹಳೆಯ ಶ್ಲೋಕ “ಶನೈಃ ಪಂಥಾಃ, ಶನೈಃ ಪಂಥಾಃ, ಶನೈಃ ಪರ್ವತ ಲಂಘನಮ್, ನಿಧಾನವಾಗಿ ನಿಧಾನವಾಗಿ ನಿಧಾನವಾಗಿ

ಬೆಟ್ಟ ಏರಬೇಕು" ಮಹಂತರ ಬಾಯಲ್ಲಿ ಇದ್ದೇ ಇದ್ದಿತು.

(೩)

ಈ ಪತ್ರಿಕೆಯಲ್ಲಿ "ವಿಷಾದ ಪ್ರಕರಣ" ಎಂದು ನಾನು ಬರೆದ ಲೇಖನವನ್ನು ಓದಿದ ಅನೇಕ ವಾಚಕರು ನನಗೆ ಸಹಾನುಭೂತಿಯ ಕಾಗದಗಳನ್ನು ಬರೆದಿದ್ದಾರೆ. ಕೆಲವರು ನಾವೂ ನಿಮ್ಮ ಹಾಗೆಯೇ ಮಾಡುತ್ತಿದ್ದೆವು ಎಂದು ಬರೆದಿದ್ದಾರೆ. ಕೆಲವರು ಒಬ್ಬಿಬ್ಬರು ನಾನು ಅಜ್ಞಾನದಿಂದ ತಪ್ಪು ಮಾಡಿದೆನೆಂದು ಹೇಳಿದ್ದಾರೆ. ನನ್ನಲ್ಲಿ ಸಹಾನು ಭೂತಿಯಿಂದ ಒಬ್ಬರು ಈ ವಿಚಿತ್ರವಾದ ವಾದ ಹೂಡಿದ್ದಾರೆ "ಗಾಂಧಿ ಯವರು ವೃಥಾ ನಮ್ಮ ಮೇಲೂ ನಿಮ್ಮಮೇಲೂ ಆಶ್ರಮದ ಸ್ತ್ರೀಯರ ಮೇಲೂ ಕೋಪಿಸಿಕೊಂಡರು. ನೀವು ಅಂದರೆ ಆಶ್ರಮದವರು ಸರಾಗ ವಾಗಿ ಹರಿಜನರೊಡನೆ ಸೇರುತ್ತಿದ್ದೀರಿ; ಅವರೊಡನೆ ಊಟಮಾಡುತ್ತೀರಿ. ಅವರೊಡನೆ ವಾಸಿಸುತ್ತಿದ್ದೀರಿ. ಇದು ಎಲ್ಲರಿಗೂ ಗೊತ್ತು. ನೀವು ವೈಷ್ಣವರೆನ್ನಿಸಿಕೊಂಡರೂ ಹರಿಜನರೇ; ದೇವಸ್ಥಾನದವರಿಗೂ ಅದು ಗೊತ್ತು. "ಹರಿಜನರೇ ಆದ" ನಿಮ್ಮ ಮಹಿಳೆಯರು ದೇವಸ್ಥಾನಕ್ಕೆ ಹೋಗಲು ಅವಕಾಶವಾದುದು ಮುಖ್ಯ. ಇದರಿಂದ ಹರಿಜನರ ಚಳು ವಳಿಗೆ ಹೇಗೆ ವಿರೋಧ? ಹಾಗೆ ನೋಡಿದರೆ ಸ್ವಲ್ಪ ಸಹಾಯವೇ, ಆದರೆ ಪೂಜಾರಿಗಳಿಗೂ ಇವರು ಇಂಥವರೆಂದು ಗೊತ್ತಾಯಿತು. ಅದೇ ಅದರ ವಿಷಾದ. ಆಶ್ರಮದ ಸ್ತ್ರೀಯರೊಡನೆ ಕೆಲವು ಜನ ಹರಿಜನರಿದ್ದರೆ ಅವರಿಗೂ ಒಳಕ್ಕೆ ಹೋಗಲು ಅವಕಾಶ ಸಿಕ್ಕುತ್ತಿದ್ದಿತೆಂಬುದರಲ್ಲಿ ಸಂದೇಹ ವಿಲ್ಲ. ಆದರೆ ಅದು ಗಾಂಧಿಯವರ ಹೆಸರು ಮತ್ತು ಪ್ರಸಿದ್ಧಿಯ ಕಾರಣ ದಿಂದ. ಪೂಜಾರಿಗಳ ಅಭಿಪ್ರಾಯ ಇದು. 'ಯಾವ ನಿಯಮಕ್ಕೂ ಅಪವಾದ ಇದ್ದೇ ಇದೆ. ನೀವು ಹರಿಜನರ ದೊಡ್ಡ ಸೈನ್ಯದೊಂದಿಗೆ ಬಂದು ದೇವಸ್ಥಾನದ ಬಾಗಿಲು ಒಡೆಯಲು ಪ್ರಯತ್ನಿಸಿದರೆ, ನಿಮಗೆ ವಿರೋಧವುಂಟು. ನೀವು ಒಬ್ಬರು ಇಬ್ಬರು ಹರಿಜನರನ್ನು ನಿಮ್ಮವ ರೆಂದುಕೊಂಡರೆ, ಸಹಿಸಿಕೊಳ್ಳುತ್ತೇವೆ" ಇದು ಅವರ ವಾಗ್ವಾದದ ಸಾರಾಂಶ. ಆಶ್ರಮದ ಸ್ತ್ರೀಯರು ದೇವಸ್ಥಾನಕ್ಕೆ ಹೋದುದರಿಂದ ಒಂದು ವಿಷಯ ಸ್ಪಷ್ಟ. ಅಸಂಖ್ಯಾತ ಹರಿಜನರಿಗೆ ದೇವಸ್ಥಾನದಲ್ಲಿ

ಪ್ರವೇಶವಿಲ್ಲದು ಅವರ ಹೃದಯವನ್ನು ಹಿಂಸಿಸಲೇ ಇಲ್ಲ. ಗಾಂಧಿಯವರಿಗೆ ಬೇಸರಿಕೆಯುಂಟುಮಾಡಿದುದೇ ಅದು. ಗಾಂಧಿ ಹೊಂದಿದ ಆ ಅತಿದುಃಖ ಗೀತೆಯ ದೃಷ್ಟಿಯಲ್ಲಿ ಹೇಗೆ ಅನಾಸಕ್ತಿ ಎಂದು ಈ ಸ್ನೇಹಿತರು ಕೇಳುತ್ತಾರೆ. "ಅನಾಸಕ್ತಿ ಎಂದರೆ ಸುಖ ದುಃಖ ದ್ವಂದ್ವರಹಿತವಾಗಿರುವುದು ಗಾಂಧಿಯವರನ್ನು ಆ ಗಳಿಗೆಯಲ್ಲಿ ಈ ದ್ವಂದ್ವಗಳು ಹಿಂಸಿಸಲಿಲ್ಲವೆ ? ತಮ್ಮ ಅಸಮಾಧಾನವನ್ನು ಅವರು ಇನ್ನೂ ದಯೆಯಿಂದ, ನಿಮಗೂ ಹೆಚ್ಚು ಹಿಂಸೆಯಾಗದಂತೆ ತೋರಿಸಲು ಅವಕಾಶವಿರಲಿಲ್ಲವೆ ? ಗಾಂಧಿಯವರ ಮನಃಪ್ರಸಾದ ಎಲ್ಲಿ ಹೋಯಿತು ? ಎಂದು ಆ ಸ್ನೇಹಿತರು ಕೇಳುತ್ತಾರೆ. ಆದರೆ ಆ ಅತಿದುಃಖ ಒಂದು ಗಳಿಗೆಯ ಅನುಭವಮಾತ್ರ, ಅನಂತರ ತಪ್ಪಿತಸ್ಥರು ತಮ್ಮ ತಪ್ಪನ್ನು ಅರಿತು ತಿದ್ದುಕೊಂಡುದರಿಂದ ಅವರಿಗೆ ಮನಃಪ್ರಸಾದ, ಮನಶ್ಶಾಂತಿ ಉಂಟಾಯಿತು. ಆದರೆ ತಮ್ಮ ತಪ್ಪಿನಿಂದ ತಮ್ಮನ್ನು ಪ್ರೀತಿಸುವ ಜನರ ಹೃದಯಕ್ಕೆ ಎಂತಹ ಏಟು ಉಂಟಾಗುತ್ತದೆ ಎಂಬುದನ್ನು ನಿರ್ಣಯಿಸುವುದು ತಪ್ಪು ಮಾಡುವವರ ಕರ್ತವ್ಯವಲ್ಲ.

ಮತ್ತೊಬ್ಬ ಸ್ನೇಹಿತರು, ತೆರೆದ ಮನಸ್ಸಿನಿಂದಲೂ ವಿವೇಕಯುತವಾದ ಸಹಾನುಭೂತಿಯಿಂದಲೂ ಬರೆದಿದ್ದಾರೆ. ಆ ಗಳಿಗೆಯಲ್ಲಿ ನನಗೆ ತಿಳಿದುದಕ್ಕಿಂತ, ಗಾಂಧಿಯವರ ತತ್ವಗಳು ಅವರಿಗೆ ಚೆನ್ನಾಗಿ ಅರ್ಥವಾಗಿವೆ. ನಾನು ಕೃತಜ್ಞತೆಯಿಂದ ಆ ಕಾಗದ ಇಲ್ಲಿ ಕೊಡುತ್ತೇನೆ.

"ನನಗೆ ಈವತ್ತು ಹರಿಜನ್ ಬಂದಿತು. ಅದರಲ್ಲಿ ನಿಮ್ಮ ಲೇಖನ ಓದಿದಾಗ ನನ್ನ ಕಣ್ಣಿನಿಂದ ನೀರು ಸುರಿಯುವುದನ್ನು ತಡೆಯಲು ಆಗಲಿಲ್ಲ. ನನ್ನ ಹೃದಯ ನಿಮಗಾಗಿ ಬಹಳ ದುಃಖಿತವಾಗಿದೆ. ನೀವು ಅನುಭವಿಸಿದ ದುಃಖ ನಾನು ಅರಿಯಬಲ್ಲೆ. ಆ ಗಳಿಗೆಯಲ್ಲಿ ಅತಿ ಬೇಸರಿಕೆಯಿಂದ ನೀವು ಬಾಪುಗೆ ಹಾಗೆ ಬರೆದುದೂ ನನಗೆ ಅರ್ಥವಾಗುತ್ತದೆ. ಈಗ ಅದೆಲ್ಲಾ ಮುಗಿಯಿತಲ್ಲ. ನೀವು, ನಾವು, ಎಲ್ಲರೂ ಕಲಿಯಬೇಕಾಗಿದೆ. ಇಂತಹ ತಪ್ಪುಗಳಿಂದ ನಾವೆಲ್ಲಾ ಕಲಿಯಬೇಕು ಎಂಬುದು ಬಾಪುರವರ ಇಚ್ಛೆ. ನಿಮಗೆ ಇನ್ನು ಯಾಕೆ ಬೇಜಾರು ? ಬಾಪುರವರಿಗೆ ಈ ಸಂಗತಿಯಿಂದ ಬಹಳ ನೋವಾಯಿತು. ಇತರರ ಪಾಪಕ್ಕಾಗಿ, ಅದರಲ್ಲಿಯೂ ತಮ್ಮ ಸಮೀಪವರ್ತಿಗಳ ಮತ್ತು ಆಪ್ತರ ಪಾಪಕ್ಕಾಗಿ ದುಃಖಿ

ಸುವುದು ಅವರ ಸ್ವಭಾವ; ತಮ್ಮ ಆಪ್ತರಿಗೆ ತಮ್ಮ ಬಾಳಿನ ಆದರ್ಶ ಗೊತ್ತಾಗಲಿಲ್ಲವಲ್ಲ ಎಂಬುದರಿಂದ, ತಮ್ಮಲ್ಲಿಯೇ ಏನೋ ಕೊರೆ ಇದೆ ಎಂದು ಅವರಿಗೆ ದುಃಖವಾಗುವುದು ಸ್ವಾಭಾವಿಕ. ನೀವೂ ಅವರೂ ಆ ಸ್ತ್ರೀಯರಿಗೆ ಸರಿಯಾದ ಎಚ್ಚರಿಕೆ ಕೊಡಲಿಲ್ಲವೆಂಬುದರಿಂದಲೂ ಅವರಿಗೆ ಬಹಳ ದುಃಖವಾಯಿತು. ಅವರು ನಿಮ್ಮನ್ನು ಬೈದುದರಿಂದ ನಿಮ್ಮಲ್ಲಿ ಅವರಿಗೆ ಇರುವ ಗೌರವವೂ, ಅವರ ನಿರೀಕ್ಷಣೆಯಲ್ಲಿ ನಿಮ್ಮ ನಡತೆ ಎಷ್ಟು ಆದರ್ಶವಾಗಿರಬೇಕು ಎಂಬುದೂ ಗೊತ್ತಾಗುತ್ತದೆ. ನಿಮ್ಮನ್ನು ತಿದ್ದಿದುದರಿಂದ ಅವರು ತಮ್ಮನ್ನೇ ತಿದ್ದಿಕೊಂಡರು. ನಿಮ್ಮಲ್ಲಿಯೂ, ತನ್ನ ಸುತ್ತಮುತ್ತ ಇರುವವರಲ್ಲಿಯೂ, ಅವರಿಗೆ ಇರುವ ಅಪಾರ ಪ್ರೇಮ ಇದರಿಂದ ವ್ಯಕ್ತವಾಗುತ್ತದೆ. ಆ ಪ್ರೇಮ ನಿನುಗೆ ಕಾಣಲಿಲ್ಲ ಎಂಬುದರಿಂದ ಪ್ರೇಮ ಅಲ್ಲಿ ಇರಲಿಲ್ಲ ಎಂದಲ್ಲ. ಆ ಪ್ರೇಮ ನಿಮುಗೆ ಕಾಣಲಿಲ್ಲ ಎಂಬುದರಿಂದ ಬಾಪುವಿಗೆ ಇನ್ನೂ ಹೆಚ್ಚು ದುಃಖವಾಗಿರಬೇಕು. ತಾವು ಮಾಡಿದ ಕರ್ತವ್ಯ ನಿಮಗೆ ತಿಳಿಯಲಿಲ್ಲವಲ್ಲಾ ಎಂದು ಬಾಪು ಮತ್ತೆ ದುಃಖಿತರಾಗಿದ್ದಿರಬೇಕು. ಬಾಪು ಅನುಭವಿಸಿದ ದುಃಖ ಎಷ್ಟು ಎಂಬುದು ಈಗ ನನಗೂ ಅನುಭವವಾಗುತ್ತಿದೆ. ಆದರೆ ಇನ್ನು ದುಃಖ ಸಂಶಯ ಪಶ್ಚಾತ್ತಾಪಗಳಿಗೆ ಎಡೆ ಇರಕೂಡದು—ಇಲ್ಲವೆಂದು ಬಲ್ಲೆ—ಇನ್ನು ಉಳಿದಿರುವುದು ಹೆಚ್ಚಾದ ತಿಳಿವು, ಸೇವೆಯ ಆಸೆ. ಇವೇಯೆ ".

ಈ ಮಿತ್ರರಿಗೆ ನಾನು ಆಶ್ವಾಸನ ಕೊಡುತ್ತೇನೆ. ನನ್ನ ತಪ್ಪನ್ನು ನೋಡಿದ ಕೂಡಲೇ ಪ್ರೀತಿಯನ್ನೂ ನೋಡಿದೆ. ಆ ಪ್ರೀತಿಯ ಎಳ ಬಿಸಿಲಿನಲ್ಲಿ ಆನಂದಿಸಿದ ನನಗೆ ಕಾರ್ಮೋಡ ಸ್ವಲ್ಪ ಬಂದರೂ ಅಶಾಂತಿ ಯುಂಟಾಗುತ್ತದೆ. ಆದರೆ ಮೋಡದಿಂದ ಅಂತರಿಕ್ಷ ಆವೃತವಾದಾಗಲೂ ಅಲ್ಲಿ ಸೂರ್ಯ ಇರುವಂತೆ, ಇಲ್ಲಿ ಪ್ರೇಮದ ಸೂರ್ಯ ಹಗಲೂ ರಾತ್ರಿಯೂ ನಮ್ಮೊಡನೆ ಹೊಳೆಯುತ್ತಿದೆ.

೭-೫-೧೯೩೮.

---

## ೧೪. ಬಾಲ್ಯ ವಿವಾಹ ಇನ್ನು ಸಾಕು.

ಬಾಲ್ಯವಿವಾಹ ಇನ್ನು ಸಾಕು ಎಂಬ ಧ್ವನಿ ಹೊಸದಲ್ಲ. ಮೊದಲು

ಮೊದಲು ಈ ಕೂಗನ್ನು ಎಬ್ಬಿಸಿದವರು ಕೆಲವು ಸಮಾಜಸುಧಾರಕರು. ಯಾರಲ್ಲಿ ಬಾಲ್ಯವಿವಾಹ ಪ್ರಚಾರದಲ್ಲಿದೆಯೋ ಆ ಜನರಿಗೂ ಈ ಸುಧಾರಕರಿಗೂ ಸಂಬಂಧವೇ ಇರಲಿಲ್ಲ. ಅನಂತರ ಜನರಲ್ಲಿ ಜ್ಞಾನೋದಯವಾಯಿತು. ಬಾಲ್ಯವಿವಾಹಕ್ಕೆ ವಿರೋಧವಾದ ಒಂದು ನೆಪಮಾತ್ರದ ಕಾನೂನು ಶಾರದ ಆಕ್ಟ್ ಬಂದಿತು. ಸಾರ್ವಜನಿಕರು ಆ ಕಾನೂನಿಗೆ ಸಿದ್ಧರಾಗಿರಲಿಲ್ಲ. ಆದುದರಿಂದ ಅವರು ಅದನ್ನು ಮೀರಿದರು. ಅದರಿಂದ ಪ್ರಯೋಜನವೇ ಇಲ್ಲ ಎನ್ನುವಮಟ್ಟಿಗೆ ಆ ಕಾನೂನಿಗೆ ವಿರೋಧವಾಗಿ ಆಚರಿಸಿದರು. ಅಖಿಲಭಾರತ ಮಹಿಳಾ ಸಮ್ಮೇಳನದ, ಬಾಲ್ಯವಿವಾಹದ ಉಪಸಮಿತಿಯ ಸಂಚಾಲಕರಾದ ಶ್ರೀಮತಿ ಸರೋಜನಿ ಮೆಹತ, ಅನೇಕ ಉಪಯುಕ್ತ ಅಂಶಗಳೊಡಗೂಡಿದ ಒಂದು ಲೇಖನ ಪ್ರಕಟಿಸಿದ್ದಾರೆ. ೧೯೨೧ರ ವರೆಗೆ ಬಾಲ್ಯವಿವಾಹ ಹೆಚ್ಚುತ್ತಲೇ ಇದ್ದಿತೆಂದು ಅವರು ತೋರಿಸಿದ್ದಾರೆ. ಹತ್ತು ವರುಷಕ್ಕಿಂತ ಕಡಿಮೆ ವಯಸ್ಸಿನವರ ವಿವಾಹದ ಸಂಖೆ ಪ್ರತಿ ವರುಷವೂ ಹೀಗೆ ಇದೆ.

| ವರುಷ | ಹುಡ್ಗರು | ಹುಡುಗಿಯರು |
|---|---|---|
| ೧೮೭೧-೧೮೮೧ | ೧೭೫೫ | ೩೬೫೫ |
| ೧೮೮೧-೧೮೯೧ | ೨೩೧೧ | ೪೪೦೫ |
| ೧೮೯೧-೧೯೦೧ | ೧೬೨೫ | ೨೧೬೫ |
| ೧೯೦೧-೧೯೧೧ | ೧೯೧೧ | ೩೫೪೧ |
| ೧೯೧೧-೧೯೨೧ | ೧೭೯೧ | ೩೭೫೫ |

೧೯೩೧ ರಲ್ಲಿ ಬಾಲವಿಧವೆಯರ ಸಂಖ್ಯೆ ಹೀಗೆ

| ವಯಸ್ಸು | ವಿಧವೆಯರ ಸಂಖ್ಯೆ |
|---|---|
| ೦—೧ | ೧೫೧೫ |
| ೧—೨ | ೧೭೮೫ |
| ೨—೩ | ೩೪೮೫ |
| ೩—೪ | ೯೦೭೬ |
| ೪—೫ | ೧೫೦೧೯ |
| ೫—೧೦ | ೧೦೫೪೮೨ |
| ೧೦—೧೫ | ೧೮೫೩೮೯ |

೧೯೨೧ನೆ ವರುಷ, ಜನಗಣತಿಯ ಲೆಕ್ಕಕ್ಕೆ ಅನುಸಾರವಾಗಿ, ಒಂದು ವರುಷದೊಳಗಿನ ೯೦೯೬ ಹೆಣ್ಣುಗಳಿಗೆ ವಿವಾಹವಾಗಿದ್ದಿತು. ೭೫೯. ವಿಧವೆಯರಿದ್ದರು. ೧೯೩೧ರಲ್ಲಿ ಒಂದು ವರುಷದೊಳಗೆ ಮದುವೆಯಾದ ಹುಡುಗಿಯರ ಸಂಖ್ಯೆ ೪೪೦೮೨. ವಿಧವೆಯರ ಸಂಖ್ಯೆ ೧೫೧೫. ಈ ರೋಗ ಸಾಮಾನ್ಯವೇ ? ಎಂಬುದನ್ನು ಚೆನ್ನಾಗಿ ಅರಿಯಬೇಕು. ಇವು ಯಾವುದಾದರೂ ಒಂದು ಪಂಗಡದವಾದರೆ ಆ ಪಂಗಡದಲ್ಲಿ ಬಹಳ ಚಳುವಳಿ ನಡೆಸಬೇಕು. ಒಂದು ವರುಷದೊಳಗಿನ ವಿವಾಹಿತ ಶುಕ್ಕಳು ಮತ್ತು ವಿಧವೆಯರನ್ನು ಅರ್ಥವಿಲ್ಲವೆಂದು, ಬಿಡೋಣ. ಇವು ಆ ಪಂಗಡಗಳ ಜನರ ಮೂಢ ಭಕ್ತಿಯನ್ನೂ ಅಜ್ಞಾನವನ್ನೂ ತೋರಿಸುತ್ತವೆ. ಆದರೂ ಹತ್ತು ವರುಷದಿಂದ ೧೫ ವರುಷಗಳ ವರೆಗಿನ ವಿಧವೆಯರ ಸಂಖ್ಯೆ ಸಹ ಗಾಬರಿ ಹುಟ್ಟಿಸುವುದಾಗಿದೆ. ವೈದೀಕರು ೧೯೨೯ರಲ್ಲಿ ಶಾರದ ಕಾನೂನನ್ನು ಬಹಳ ವಿರೋಧಿಸಿದರು. ಆದರೆ ೧೯೩೮ರ ವೇಳೆಗೆ ಸಾರ್ವಜನಿಕ ಅಭಿಪ್ರಾಯ ಬಹಳ ರೂಪಗೊಂಡಿತು. ಶಾರದ ಆಕ್ಟಿನ ತಿದ್ದುಪಡಿಯಾಗಿ ಬಂದ ಎರಡು ಕಾನೂನುಗಳೂ ಹೆಚ್ಚು ಪ್ರತಿಭಟನೆಯಿಲ್ಲದೆ ಅಂಗೀಕೃತವಾದವು. ಶ್ರೀಯುತ ಬಿ. ದಾಸ್‌ರ ಮಸೂದೆ ೮೭ ಮತಗಳಿಂದ ಅಂಗೀಕೃತವಾಯಿತು. ೧೬ ಮತಗಳು ಮಾತ್ರ ಇದಕ್ಕೆ ವಿರೋಧವಾಗಿ ಬಂದವು. ಲಾಲ್‌ಚಂದ್ ನವಲ್‌ಲಾಲ್‌ರವರ ತಿದ್ದುಪಡಿ, 'ಬ್ರಿಟಿಷ್ ಭಾರತದಿಂದ ದೇಶೀಯ ರಾಜ್ಯಗಳಿಗೆ ಓಡಿಹೋಗಿ ಬಾಲ್ಯ ವಿವಾಹ ಮಾಡುವವರಿಗೂ ಈ ಕಾನೂನು ಅನ್ವಯಿಸಬೇಕೆಂಬುದು, ಸ್ವಲ್ಪವೂ ವಿರೋಧವಿಲ್ಲದೇ ಅಂಗೀಕೃತವಾದವು.' ಲಾಲ್‌ಚಂದ್ ನವಲ್‌ಲಾಲ್‌ರವರ ಮಸೂದೆಯ ಆ ಭಾಗ ಹೀಗಿದೆ.

" ಬ್ರಿಟಿಷ್ ಭಾರತದ ಪ್ರಜೆಗಳು, ದೇಶೀಯ ಸಂಸ್ಥಾನಗಳಿಗೆ ಹೋಗಿ ಈ ತಪ್ಪನ್ನು ಮಾಡಿದರೆ, ಅವರು ಈ ತಪ್ಪನ್ನು ಭಾರತದಲ್ಲಿ ಮಾಡಿದಂತೆಯೇ ಶಿಕ್ಷಾರ್ಹರು. "

ಶ್ರೀಯುತ ಬಿ. ದಾಸ್‌ರು ಸೂಚಿಸಿದ ಮಸೂದೆ, ಶಾರದಾ ಮಸೂದೆಗೆ ಇನ್ನೂ ಹೆಚ್ಚು ಬಲ ಕೊಡುವುದಾಗಿದ್ದಿತು. ಈ ಮಸೂದೆಗೆ ವಿರೋಧವಾಗಿ ನಡೆಯುವ ವಿವಾಹಗಳನ್ನು ನಿಲ್ಲಿಸಲು ಕೋರ್ಟುಗಳಿಗೆ ಇಂಜಂಕ್ಷನ್ ಕೊಡುವ ಅಧಿಕಾರ, ಈ ಸಂದರ್ಭದಲ್ಲಿ ನ್ಯಾಯಸ್ಥಾನಗಳಿಗೆ ಹೆಚ್ಚಿಗೆ

ಅಧಿಕಾರದಿಂದ ಇಂತಹ ಮದುವೆ ನಡೆಯದಂತೆ ಮಾಡುವುದು.

ಆದರೆ ಇದಕ್ಕಾಗಿ ಆರಿಸಿದ ಸಮಿತಿ ರಚಿಸಿದ, ಈಗ ಕಾನೂನಾಗಿ ರುವ ಮಸೂದೆ, ಮೇಲಿನ ಎಲ್ಲಾ ಉದ್ದೇಶಗಳನ್ನೂ ಒಳಗೊಳ್ಳದೆ ಇರುವುದು ವಿಷಾದ.

(೫) "ಈ ಕಾನೂನಿಗೆ ವಿರೋಧವಾಗಿ ನಡೆದ ತಪ್ಪು ಅಪಾದನೆಯ ಫಿರ್ಯಾದನ್ನು ನ್ಯಾಯಸ್ಥಾನ ಅಂಗೀಕರಿಸಿ, ಅಪಾದಿತನನ್ನು ಹಾಜರಾಗು ಎಂದು ಬಲಾತ್ಕರಿಸುವುದಕ್ಕೆ ಮುಂಚೆ, ಫಿರ್ಯಾದಿ ನೂರು ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಹಣ ಠೇವಣಿ ಇಡಬೇಕೆಂದು ಕೇಳಬಹುದು ಹಾಗೆ ಫಿರ್ಯಾದಿ ಠೇವಣಿ ಇಡದಿದ್ದರೆ, ನ್ಯಾಯಸ್ಥಾನ ಫಿರ್ಯಾದನ್ನು ವಜಾ ಮಾಡ ಬಹುದು.

(೬) ಈ ಮುಂದಲ ಸೆಕ್ಷನ್ನನ್ನು ಎರಡನೆಯ ಸೆಕ್ಷನ್‌ನೊಂದಿಗೆ ಸೇರಿಸಿ ಓದಬೇಕು.

೧೨ (೧) "ಈ ಆಕ್ಟ್‌ನಲ್ಲಿ ಏನೇ ಇರಲಿ ಬಾಲ್ಯ ವಿವಾಹ ನಡೆಯು ತ್ತಿದೆ ಎಂದು ನ್ಯಾಯಸ್ಥಾನಕ್ಕೆ ನಂಬಿಕೆಯಾದರೆ, ನ್ಯಾಯಸ್ಥಾನ ೩, ೪, ೫, ೬ ನೆ ಸಕ್ಷನ್‌ಗಳಲ್ಲಿ ಹೇಳಿರುವವರ ಮೇಲೆ "ನೋಟೀಸ್ ಜಾರಿ" ಮಾಡ ಬಹುದು.

(೨) ಒಂದನೆಯ ಸಬ್ ಸೆಕ್ಷನ್‌ಗೆ ಅನುಸಾರವಾಗಿ ಕೋರ್ಟು ಯಾರ ಮೇಲೆ "ನೋಟೀಸು ಜಾರಿ" ಮಾಡಬೇಕಾದರೂ, ನಿಮ್ಮ ಮೇಲೆ ಯಾಕೆ ನೋಟೀಸು ಕೊಡಬಾರದು ಎಂದು ಅವರನ್ನು ಕೇಳಿ ಅವರ ಸುಮಾಜಾಯಿಶಿ ತೆಗೆದುಕೊಳ್ಳಬೇಕು.

(೩) ನ್ಯಾಯಸ್ಥಾನ, ಒಂದನೆ ಸಬ್ ಸೆಕ್ಷನ್‌ಗೆ ಅನುಸಾರವಾಗಿ ಮಾಡಿದ ಯಾವ ತೀರ್ಮಾನವನ್ನು ಬೇಕಾದರೂ ತನ್ನ ಸ್ವಂತ ಇಚ್ಛೆಯಿಂದ ಲಾಗಲಿ, ಅಥವ ಶಿಕ್ಷೆಗೆ ಒಳಗಾದವರ ಪ್ರಾರ್ಥನೆಯಿಂದಲಾಗಲಿ ಬದಲಾಯಿಸಬಹುದು ಅಥವ ವಜ ಮಾಡಬಹುದು.

(೪) ಅಂತಹ ಅರ್ಜಿ ನ್ಯಾಯಸ್ಥಾನದ ಮುಂದೆ ಬಂದಾಗ, ನ್ಯಾಯ ಸ್ಥಾನ, ಅರ್ಜಿದಾರನು ತಾನೇ ನೇರವಾಗಿಯಾಗಲಿ ಅಥವ ವಕೀಲರ ಮೂಲಕವಾಗಿಯಾಗಲಿ ತಮ್ಮ ಮುಂದೆ ಬರಲು ಅವನಿಗೆ ಅವಕಾಶ

ಕೊಡಬೇಕು. ನ್ಯಾಯಸ್ಥಾನ ಅಂತಹ ಅರ್ಜಿಯನ್ನು ವಜಾ ಮಾಡಿದರೆ ಆ ತೀರ್ಮಾನವನ್ನು ಆ ತೀರ್ಮಾನದ ಕಾರಣವನ್ನೂ ಬರವಣಿಗೆಯಲ್ಲಿಡಬೇಕು.

(ಇ) ಸಬ್ ಸೆಕ್ಷನ್ ಒಂದಕ್ಕೆ ಅನುಸಾರವಾಗಿ, ತನ್ನ ಮೇಲೆ ಜಾರಿಯಾದ ನೋಟಿಸನ್ನು ಯಾರು ತಿರಸ್ಕರಿಸುತ್ತಾರೆಯೋ ಅವರಿಗೆ ೩ ತಿಂಗಳ ಸಜ, ೧೦೦೦ ರೂಪಾಯಿ ಜುಲ್ಮಾನೆ ಅಥವ ಎರಡನ್ನೂ ಹಾಕ ಬಹುದು.

ಸ್ತ್ರೀಯರಿಗೆ ಸಜ ಇಲ್ಲ.

ಮೇಲೆ ಹೇಳಿದ ೨ ನೆಯ ಸೆಕ್ಷನ್‌ನಿಂದ "ನೋಟೀಸಿಗೆ" ಬಲ ಕಡಿಮೆಯಾಯಿತು. ಇದನ್ನು ಈ ಸಮಿತಿ ಹೊಸದಾಗಿ ಸೇರಿಸಿದೆ. ನ್ಯಾಯ ಸ್ಥಾನಕ್ಕೆ ತಪ್ಪಿತ ನಡೆಯುತ್ತಿದೆ ಎಂದು ತಿಳಿದಕೂಡಲೆ ಅದನ್ನು ತಡೆಗಟ್ಟುವ ಶಕ್ತಿ ಅವರಿಗೆ ಇರಬೇಕು. ಅದಕ್ಕಾಗಿ ಒಂದು ಸಲ ಅಪರಾಧ ಮಾಡು ವವರನ್ನು ನಿಮ್ಮ ಮೇಲೆ ಯಾಕೆ ನೋಟೀಸು ಕೊಡಬಾರದು ಎಂದು ಕೇಳಬೇಕಾದುದಿಲ್ಲ. ಹಾಗೆ ಕೇಳಿದರೆ, ಇಂಜಂಕ್ಷನ್ ಕೊಡುವುದರೊಳ ಗಾಗಿ ಅವರು ತಮ್ಮ ಕೆಲಸಮಾಡಿಕೊಂಡು ಬಿಡುವರು. ಈ ನೋಟೀಸು ಬೇಕಿಲ್ಲ ಎಂದು ಎನ್. ಎಂ. ಜೋಷಿ, ಅಸಫ್ ಆಲಿ, ಅಬ್ದುಲ್ ಕ್ವಯಾಮ್ ಮುಂತಾದವರು ವಾದಿಸಿದರು. ಆದರೆ ಸಮಿತಿ ಅದನ್ನು ಒಪ್ಪದುದು ವಿಷಾದ. ಇನ್ನೂ ವಿಷಾದವೇನೆಂದರೆ ಸಮಿತಿಯವರು ಮೂಲ ಮಸೂದೆಯ ಈ ಕೆಳಗಿನ ಸೆಕ್ಷನ್ ತೆಗೆದುಹಾಕಿದುದು.

"ಈ ಮಸೂದೆಗೆ ಅನುಸಾರವಾಗಿ ಅಪರಾಧಿಗೆ ಶಿಕ್ಷೆ ಆದಮೇಲೆ, ನ್ಯಾಯಸ್ಥಾನ, ಅಪರಾಧಿಯು, ಹುಡುಗಿಯಾದ ಹೆಂಡತಿ ದೊಡ್ಡವಳಾಗುವ ವರೆಗೆ ಅವಳೊಡನೆ ಶರೀರಸಂಬಂಧ ಬೆಳೆಸುವುದಿಲ್ಲವೆಂದೂ ಜತೆಯಲ್ಲಿ ವಾಸಿಸುವುದಿಲ್ಲವೆಂದೂ ಮುಚ್ಚಳಿಕೆ ಬರೆದುಕೊಡುವಂತೆ ಅಪರಾಧಿ ಯನ್ನು ಬಲಾತ್ಕರಿಸಬಹುದು. "ಪ್ರಸ್ತುವು ನ್ಯಾಯಸ್ಥಾನ ನೇಮಿಸುವ ದಿನದನಂತರವೇ ನಡಿಯತಕ್ಕದ್ದು."

ಇದು ಬಹಳ ಆರೋಗ್ಯಕರವಾದ ನಿಯಮವಾಗಿದ್ದಿತು. ಕಾನೂ ನನ್ನು ಮೀರುವವರಿಗೂ ಇದು ತಡೆಯಾಗಿದ್ದಿತು. ಸದಸ್ಯರೆಲ್ಲಾ ಈ ಸೆಕ್ಷನ್ ಇರಲೇಬೇಕೆಂದು ಹೇಳಿದರು. ಮಿ. ಗಯಾಸುದ್ದೀನರು ಈ ಸೆಕ್ಷನ್‌ನ್ನು

ಮತ್ತ್ರಿ ಜಾರಿಗೆ ಕೊಡುವ ಮಸೂದೆ ತರುತ್ತೇನೆ ಎಂದು ಹೇಳಿದರು. ಅವರು ಹಾಗೆ ಮಾಡುವರೆಂದು ಭಾವಿಸುತ್ತೇವೆ.

ಲಾ ಮೆಂಬರ್ ಹೀಗೆ ಆಶ್ವಾಸನವಿತ್ತರು, "ವಿವಾಹವನ್ನು ಪ್ರತಿಬಂಧಿಸುವುದಕ್ಕಿಂತ ಮುಂಚೆ ಕೊಡುವ ಕಡೆ ನೋಟೀಸಿನಿಂದ ಪ್ರಯೋಜನವಾಗದಿದ್ದರೆ, ಸರ್ಕಾರ ಕಾನೂನನ್ನು ಬದಲಾಯಿಸುತ್ತದೆ."

ಈ ಪ್ರಶ್ನೆಯಲ್ಲಿ ಪೂರ್ಣ ಶ್ರದ್ಧೆಯುಳ್ಳ ಶ್ರೀಮತಿ ರಾಜಕುಮಾರಿ ಅಮೃತ ಕುವರಿ ಹೀಗೆ ಹೇಳುತ್ತಾರೆ :

"ಇದರಲ್ಲಿಯೂ ಇತರ ಸಮಾಜ ಸುಧಾರಣೆಯಲ್ಲಿಯೂ ಸರ್ಕಾರಿ ಕಾನೂನಿಗಿಂತ ಹೆಚ್ಚು ಮುಖ್ಯವಾದುದು ಸ್ತ್ರೀಯರಿಗೆ ವಿದ್ಯೆ, ನಮ್ಮ ಸಮಾಜದ ಇಂದಿನ ಸ್ಥಿತಿಯಲ್ಲಿ ಹುಡುಗಿ ಚಿಕ್ಕವಳಾಗಿದ್ದರೂ ನಿಷೇಕಪ್ರಸ್ತ ನಡೆಯದಂತೆ ಮಾಡುವುದು ಕಷ್ಟ. ಬಾಲ್ಯ ವಿವಾಹವನ್ನು ಪೂರ್ಣವಾಗಿ ರದ್ದು ಮಾಡುವುದು ಇದಕ್ಕಿಂತ ಒಳ್ಳೆಯದು. ಹೇಗಾದರೂ ನಮ್ಮ ಸಮಾಜದ ಇಂದಿನ ಜನರ ಅಜ್ಞಾನದ ಪರಿಸ್ಥಿತಿಯಲ್ಲಿ ಕಷ್ಟ, ಹೇಗೂ ಹುಡುಗಿಗೆ ತಪ್ಪಿದುದಲ್ಲ."

ಆದರೆ ಶಾರದ ಕಾನೂನನ್ನು ತಪ್ಪದೆ ಜಾರಿ ಮಾಡಿದರೂ, ಭಾರತದಲ್ಲಿ ಬಾಲ್ಯ ವಿವಾಹ ನಿಲ್ಲುವುದಿಲ್ಲ. ೨೧ ವರುಷಕ್ಕಿಂತ ಕಡಿಮೆ ವಯಸ್ಸಿನವರ ಮದುವೆ ಕಾನೂನು ವಿರುದ್ಧ ಎಂದು ಆಗುವವರೆಗೆ, ಸುಧಾರಕರು ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ. ಸರ್ ಹೆನ್ರಿ ಕ್ರೇಕ್ ಹೇಳಿದಂತೆ 'ವಿವಾಹ ಪವಿತ್ರ ಬಂಧನ. ಆದರೆ ಪವಿತ್ರ ಬಂಧನ ಮಾತ್ರವೇ ಅಲ್ಲ. ಜೀವಾವಧಿಯ ಸಂಬಂಧ. ಇಂತಹ ಸಂಬಂಧದಲ್ಲಿ ಹೆಣ್ಣು ಗಂಡಿಗೆ ನ್ಯಾಯ ದೊರೆಯುವಂತೆ ಮಾಡುವುದು ಸರ್ಕಾರದ ಕೆಲಸ. ಗಂಡು ಹೆಣ್ಣುಗಳ ಪೈಕಿ, ಒಬ್ಬರು ಅತಿ ಚಿಕ್ಕವರಾಗಿ ವಿವಾಹ ಬಂಧನದ ಅರ್ಥವೇ ತಿಳಿಯದಿರುವಾಗ, ನ್ಯಾಯ ಎಲ್ಲಿ?' ೧೪-೧೬ ವರುಷದ ಹುಡುಗ ಹುಡುಗಿಯರು ಮಕ್ಕಳೇ. ಈ ಜೀವನ ಮರಣ ಪ್ರಶ್ನೆ ಅವರಿಗೆ ತಿಳಿಯುವುದಿಲ್ಲ. ನಾಗರೀಕವೆನ್ನಿಸಿಕೊಳ್ಳುವ ಯಾವ ಸರ್ಕಾರವೂ ಇಂತಹ ಮದುವೆಗಳಿಗೂ ಪ್ರಸ್ತಗಳಿಗೂ ಅವಕಾಶ ಕೊಡುವುದಿಲ್ಲ

೩೦-೪-೧೯೩೮.

## ೧೫. ಒಂದು ಬದಲಾವಣೆಯ ಕತೆ

ಕೆಲವು ವರುಷಗಳಿಂದ ಪರಿಚಿತರಾದ ಒಬ್ಬ ವ್ಯಾಪಾರಿ, ಗಾಂಧಿಯವರು ತಮ್ಮ ಹತ್ತಿರದ ಪ್ರದೇಶಗಳಿಗೆ ಬಂದಾಗ ಬರುತ್ತಾರೆ. ಗಾಂಧಿಯವರಿಗೆ ಕೆಲವು ಅಡಿ ನೂಲುಗಳನ್ನೂ, ನೂರು ರೂಪಾಯಿ, ನೂರು ಒಂದು, ನೂರ ಎರಡು, ನೂರ ಮೂರು, ರೂಪಾಯಿಗಳನ್ನು, ಕೊಡುತ್ತಾರೆ. ನಾವು ಜುಹುವಿನಲ್ಲಿರುವಾಗ ಆತ ಹೀಗೆ ಎರಡು ಸಲ ಬಂದ. ಒಂದು ಸಲ ಗಾಂಧಿಯವರು ಬೇರೆ ಕೆಲಸದಲ್ಲಿ ತೊಡಗಿದ್ದುದರಿಂದ ನಾನು ಆತನನ್ನು ಕಾಯಿಸಬೇಕಾಯಿತು. ಆಗ ಆತನ ಪರಿಚಯ ಮಾಡಿಕೊಳ್ಳೋಣ ಎನ್ನಿಸಿತು. ಆತ ಆಗಲೇ ನಾಲ್ಕು ಗಂಟೆ ಕಾದಿದ್ದ. ಆದರೂ ವರ್ಕಿಂಗ್ ಕಮಿಟಿ ಚರ್ಚೆ ಇನ್ನೂ ನಡೆದೇ ಇದ್ದಿತು. ನಾನು "ನಮ್ಮೊಂದಿಗೆ ಊಟ ಮಾಡಿ" ಎಂದೆ. ಆತ "ಗಾಂಧಿಯವರನ್ನು ನೋಡಿ ನೂಲನ್ನೂ ಕಾಣಿಕೆಯನ್ನೂ ಅರ್ಪಿಸುವವರೆಗೆ ಊಟವಿಲ್ಲ" ಎಂದ. ನಾನು ಬಹಳ ಹೊತ್ತಾಗಬಹುದು. ಈಗ ೧೨ ಗಂಟೆ. ಮೀಟಿಂಗ್ ಇನ್ನೂ ನಡೆಯುತ್ತಿದೆ. ಗಾಂಧಿಯವರು ಇನ್ನೂ ಸ್ನಾನ ಮಾಡಿಲ್ಲ. ಊಟ ಮಾಡಿ ಕಾಯುತ್ತಯಾಕೆ ಕುಳಿತುಕೊಳ್ಳಬಾರದು ? ಎಂದೆ. ಆತ ಗೆಲುವಾಗಿ "ಇಲ್ಲ ನಾನು ಸಾಯಂಕಾಲದವರೆಗೆ ಕಾಯಲು ಸಿದ್ಧನಾಗಿದ್ದೇನೆ." ಎಂದ.

"ನೀವು ಆಗಾಗ್ಗೆ ಹೀಗೆ ಬಂದು ಈ ರೀತಿ ಕಾಣಿಕೆ ಕೊಡುತ್ತಿರುವ ರಹಸ್ಯವೇನು" ಎಂದು ಕೇಳಿದೆ. ಆತ ಹೀಗೆ ಹೇಳಿದ ; "ಬಹಳ ವರುಷದ ಹಿಂದೆ, ೧೮ನೆ ಮಾರ್ಚಿ ಗಾಂಧಿಯವರ ಬಂಧನವಾದಾಗ ನಾನು ನಿತ್ಯ ನೂಲುವುದಾಗಿಯೂ, ಪ್ರತಿ ೧೮ನೆ ತಾರೀಖು ಒಂದು ರೂಪಾಯಿ ಕಾಣಿಕೆ ತೆಗೆದಿಡುವುದಾಗಿಯೂ ಪ್ರತಿಜ್ಞೆ ಮಾಡಿಕೊಂಡೆ. ದೇವರ ದಯದಿಂದ ಅದರಂತೆ ನಡೆಯುತ್ತಿದ್ದೇನೆ. ಗಾಂಧಿಯವರ ಸಮೀಪಕ್ಕೆ ಬಂದಾಗ ನನ್ನ ನೂಲು ಮತ್ತು ಕಾಣಿಕೆ ಅವರಿಗೆ ಅರ್ಪಿಸುತ್ತೇನೆ."

"ಆದರೆ ನೀವು ಆಗಾಗ್ಗೆ ಒಂದುನೂರು ರೂಪಾಯಿ ನೋಟು ಕೊಡುತ್ತೀರಲ್ಲ ?"

"ಅದೇನು ಮಹಾ. ನಾನು ಸಂಪಾದನೆ ಮಾಡಿದಾಗ ಮತ್ತು ನನ್ನ ಜೇಬಿನಲ್ಲಿ ಹಣವಿದ್ದಾಗ ಅದನ್ನು ಕೊಡುತ್ತೇನೆ. ಆದರೆ ಇದನ್ನು

(ತಿಂಗಳಿಗೆ ೧೦ರೂ. ಮತ್ತು ನೂಲು) ಕೊಟ್ಟೇ ತೀರಬೇಕು. ಈ ಪ್ರತಿಜ್ಞೆ ನನ್ನ ಜೀವಮಾನ ಪರ್ಯಂತವೂ ; ಇದರಿಂದಲೇ ನಾನು ಸರಿಯಾಗಿರುವುದು. "

"ದಯುವಿಟ್ಟು ಇನ್ನೂ ಸ್ಪಷ್ಟವಾಗಿ ವಿವರಿಸಿ" ಎಂದೆ.

ಆತ ಸಾಚಾ ಮನುಷ್ಯ. ಅನವಶ್ಯಕವಾದ ಉಪಚಾರದ ಮಾತು, ಪದ್ಧತಿಯ ಮಾತು ಇಲ್ಲ. ನೇರವಾಗಿ ಹೇಳಿದ "ನಾನು ಹಿಂದೆ ಒಳ್ಳೆಯ ಕುಡಕನಾಗಿದ್ದೆ" ಎಂದು.

"ಯಾವಾಗ ಬಿಟ್ಟಿರಿ ?. ಪ್ರತಿಜ್ಞೆ ಮಾಡಿದಾಗಲೇ ?"

"ಇಲ್ಲ. ಬಿಡಬೇಕು ಎಂಬ ಆಸೆಯೇನೋ ಇದ್ದಿತು. ಆದರೆ ಇಚ್ಛಾ ಶಕ್ತಿ ಇರಲಿಲ್ಲ. ಇಚ್ಛಾಶಕ್ತಿಯೂ ಇದ್ದಿತು. ಆದರೆ ದೇಹ ಕೇಳಲಿಲ್ಲ. ಪ್ರತಿಸಲ ಕುಡಿದಾಗಲೂ ನಾನು ಮಾಡುತ್ತಿರುವುದು ತಪ್ಪು ಎಂದು ನನಗೆ ಗೊತ್ತಾಗಿದ್ದಿತು. ಆದರೆ ಮಾಡುವುದೇನು ? ನನಗೆ ಅದನ್ನು ಜಯಿಸುವ ಶಕ್ತಿ ಇರಲಿಲ್ಲ."

"ಹೀಗೆ ಎಷ್ಟು ವರುಷ ನಡೆಯಿತು ? "

"ಎರಡು ವರುಷಗಳು"

"ಅದನ್ನು ಬಿಡಲು ನಿಮಗೆ ಕೊನೆಗೆ ಯಾತರಿಂದ ಶಕ್ತಿ ಉಂಟಾಯಿತು ?"

"ನನಗೆ ತಿಳಿಯದು. ದೇವರಿಗೆ ಗೊತ್ತು. ನಾನು ಸ್ನಾನಮಾಡಿ ಭಗವದ್ ಗೀತೆ ಓದಿದ ಹೊರತು ಊಟ ಮಾಡುತ್ತಿರಲಿಲ್ಲ"

"ಆದರೆ ಕುಡಿಯುತ್ತಲೇ ಇದ್ದಿರಿ ? "

"ಹೌದು. ಗೀತೆ ಓದಿದುದರಿಂದ ಪ್ರಯೋಜನವಾಗಲಿಲ್ಲ. ನಾನು ಆರ್ಯಸಮಾಜಕ್ಕೆ ಸೇರಿದವನು, ನಾನು ಭಗವದ್ಗೀತೆ ತಪ್ಪದೆ ಓದುತ್ತೇನೆ "

"ಸಂಸ್ಕೃತವೇ—ನೀವು ಏನು ವಿದ್ಯೆ ಕಲಿತಿದ್ದೀರಿ ?"

ಸಂಸ್ಕೃತವಲ್ಲ. ನನಗೆ ಯಾವ ವಿದ್ಯೆಯೂ ಇಲ್ಲ. ಉರ್ದುವಿನಲ್ಲಿ ಗೀತೆ ಓದುತ್ತೇನೆ. ತಿಲಕ್ ಮಹಾರಾಜರ ವ್ಯಾಖ್ಯಾನ ನಿತ್ಯ ಒಂದು ಪುಟ ಓದುತ್ತೇನೆ."

"ಆಮೇಲೆ ನಿಧಾನವಾಗಿ ಕುಡಿಯುವುದನ್ನು ಬಿಡಲು ತೀರ್ಮಾನಿಸಿದಿರಿ".

"ಇಲ್ಲ ಕುಡಿತವನ್ನು ನಿಧಾನವಾಗಿ ಬಿಡಬಹುದೆಂಬುದು ಹುಚ್ಚು. ಅದನ್ನು ನಿಧಾನವಾಗಿ ಬಿಡುವುದು ಸಾಧ್ಯವಿಲ್ಲ. ಒಂದುಸಲ ನಾನು ಕುಡಿತ ಬಿಟ್ಟು ೫ ತಿಂಗಳು ಇದ್ದೆ. ಮತ್ತೆ ಒಂದು ಸೀಸೆ ಪ್ರಾರಂಭಿಸಿದೆ. ತಾರೀಖು ತಿಂಗಳು ಸರಿಯಾಗಿ ಜ್ಞಾಪಕವಿಲ್ಲ. ಆದರೆ ಗಾಂಧಿಯವರು ಬಿಡುಗಡೆಯಾದ ಕಾಲ ಅದು. (೧೯೨೪) ನಿತ್ಯಾ ನೂಲುವುದು, ಕಾಣಿಕೆ ಕೊಡುವುದು ಮಾಡುತ್ತಾ, ಅದರ ಜತೆಯಲ್ಲಿ ಕುಡಿಯುತ್ತಿರುವುದು ನಾಚಿಕೆಗೇಡು ಎಂದುಕೊಂಡು ಸೀಸೆ ಒಡೆದೆ. ಅಲ್ಲಿಂದ ಈಚೆಗೆ ಮುಟ್ಟಲಿಲ್ಲ. ಸುಮಾರು ೧೪ ವರುಷವಾಯಿತು."

"ಆದರೆ ಕುಡಿತದ ಇತರ ಮಿತ್ರರಿದ್ದಾರಲ್ಲಾ ? ಅವುಗಳಿಗೂ ನೀವು ಬಲಿಯಾಗಿದ್ದಿರಾ ?"

"ಇಲ್ಲ, ನನಗೆ ಸಂಗೀತ ಇಷ್ಟವಾಗಿದ್ದಿತು. ಆದುದರಿಂದ ನಾನು ವೇಶ್ಯೆಯರ ಮನೆಗೆ ಹೋಗುತ್ತಿದ್ದೆ ಅಷ್ಟೇ. ಅದರ ಆಚೆ ಹೋಗಲಿಲ್ಲ. ಅದು ನನ್ನ ಸ್ವಭಾವದಲ್ಲಿಲ್ಲ. ನಾನು ಹೆಚ್ಚಾಗಿ ಕುಡಿಯುತ್ತಿದ್ದರೂ ಯಾವಾಗಲೂ ಕುಡಿದು ಹೊರಗೆ ಹೋಗುತ್ತಿರಲಿಲ್ಲ. ನನ್ನ ಗೌರವ ಎಲ್ಲಿ ಹೋಗುತ್ತೋ ಎಂದು ನನಗೆ ಭಯವಾಗಿದ್ದಿತು. ನಾನು ಕುಡಿಯುತ್ತಿದ್ದುದು ಯಾರಿಗೂ ಪತ್ತೆಯಾಗಲಿಲ್ಲ."

"ಅದಲ್ಲ. ನಾನು ಹೇಳಿದುದು ಇತರ ದುಶ್ಚಟಗಳು. ಉದಾಹರಣೆಗೆ ನೀವೂ ದೊಡ್ಡ ವ್ಯಾಪಾರಿ. ಕುಡಿಯುವವರು ದುಡ್ಡನ್ನು ಬೇಕಾದಂತೆ ಆಚೆ ಈಚೆ ಎಸೆಯುತ್ತಾರೆ. ಈ ಕಾರಣದಿಂದ ಅವರ ವ್ಯಾಪಾರ ವ್ಯವಹಾರದಲ್ಲಿ ನೀತಿ ಇರುವುದಿಲ್ಲ."

"ನಾನು ನೀತಿವಂತ. ಯಾರನ್ನೂ ಮೋಸಪಡಿಸಿಲ್ಲ."

ಸ್ವಲ್ಪ ಹೊತ್ತು ಮೌನ. ಇನ್ನು ಹೆಚ್ಚು ಪ್ರಶ್ನೆಹಾಕಿ ತೊಂದರೆ ಪಡಿಸಲು ನನಗೆ ಇಷ್ಟವಿರಲಿಲ್ಲ. ಆದರೆ ಅವರ ನಿಷ್ಕಪಟವಾದ ಮಾತಿನಿಂದ ಸ್ಫೂರ್ತಿಯುಂಟಾಗುವುದಾಗಿದ್ದಿತು. ಆದುದರಿಂದ ಇನ್ನೂ ಕೆಲವು

ಪ್ರಶ್ನೆ ಕೇಳೋಣ ಎನ್ನಿಸಿತು ನನಗೆ. ಆದರೆ ಹೇಳಬೇಕಾದುದನ್ನೆಲ್ಲಾ ಹೇಳಿಯಾಗಿದೆ ಎಂದು ಅವರು ಭಾವಿಸಿದಂತೆ ತೋರಲಿಲ್ಲ. ಆತ ಮುಂದು ವರಿಸಿದ "ನನ್ನ ಮತ್ತೊಂದು ಮಹತ್ತಾದ ಪಾಪ ಹೊಗೇಸೊಪ್ಪಿನ ವಿಚಾರ, ನಿಮಗೆ ಹೇಳಲಿಲ್ಲ ಕುಡಿತವನ್ನು ಬಿಡುವುದು ಸುಲಭವಾಯಿತು ಆದರೆ ಹೋಗೇಸೊಪ್ಪು ಬಿಡುವುದು ಸುಲಭವಾಗಲಿಲ್ಲ. ಕುಡಿತ ಬಿಡಬೇಕು ಎಂಬ ಆಸೆಯಂತೆ ಹೊಗೇಸೊಪ್ಪನ್ನೂ ಬಿಡಬೇಕು ಎಂಬ ಆಶೆ ಇದ್ದಿತು. ಆದರೆ ಭಗವದ್‌ಗೀತೆ ಓದುತ್ತಾ ನಾನು ಸಾತ್ವಿಕನಾಗಿ ತೋರುತ್ತಿದ್ದರೂ ಹೊಗೇಸೊಪ್ಪು ಬಿಡಲೇ ಇಲ್ಲ. ನಾನು ಹೊರೆ ಹೊರೆ ಸಿಗರೇಟ್ ಸೇದುತ್ತಿದ್ದೆ. ಆ ಮೇಲೆ ಹುಕ್ಕ ಪ್ರಾರಂಭಿಸಿದೆ. ದಿನಕ್ಕೆ ೨೦–೨೫ ಸಲ ಸೇದುತ್ತಿದ್ದೆ. ಹೊಗೇಸೊಪ್ಪಿನಿಂದ ಜೀರ್ಣ ಶಕ್ತಿಗೆ ಅನುಕೂಲ ಮಲಬದ್ಧತೆ ಕಡಿಮೆಯಾಗುತ್ತದೆ ಎಂದು ಭಾವಿಸಿದೆ. ಈ ತಪ್ಪು ನಂಬಿಕೆ ಬಹು ವರುಷಗಳು ಇದ್ದಿತು. ನಿಧಾನವಾಗಿ ಹೊಗೇಸೊಪ್ಪನ್ನು ಬಿಡ ಬಹುದು. ಅದರಿಂದ ಪ್ರಯೋಜನ ಎಂದು ಭಾವಿಸಿದೆ. ಸೀಗರೇಟನ್ನೂ ನಿತ್ಯ ಪಾಯಿಖಾನೆಗೆ ಹೋಗುವುದಕ್ಕೆ ಮುಂಚಿತವಾಗಿ ಬಲವಾಗಿ ಹುಕ್ಕವನ್ನೂ ಸೇದುತ್ತಿದ್ದೆ. ಐದುವರುಷಗಳ ಕೆಳಗೆ ಅದೃಷ್ಟವೋ ಎಂಬಂತೆ ಒಂದು ಪರಿಸ್ಥಿತಿ ಒದಗಿತು. ನನಗೆ ಒಂದು ವಿಚಿತ್ರವಾದ ಕನಸು ಆಯಿತು. 'ಕುಡಿತಬಿಟ್ಟಂತೆ, ಹುಕ್ಕಬಿಡು' ಎಂದು; ಅಂದಿನಿಂದಲೇ ತೀರ್ಮಾನಿಸಿ ಬಿಟ್ಟೆ. ಹೊಗೇಸೊಪ್ಪು ಹುಕ್ಕ ನನ್ನ ಬಾಳಿನಿಂದ ಹೊರಟು ಹೋದವು."

"ಆದುದರಿಂದ ನಿಮಗೆ ಗೀತೆಯಿಂದ ಒಳ್ಳೆಯ ಲಾಭವೇ ಆಯಿತು. ಕುಡಿತವನ್ನೂ ಹೊಗೇಸೊಪ್ಪನ್ನೂ ಬಿಟ್ಟುದರಿಂದ ನಿಮಗೆ ಪಶ್ಚಾತ್ತಾಪ ವಾಗಿಲ್ಲ ತಾನೆ" ಎಂದೆ. ಆತ "ಇಲ್ಲ. ಅದರ ಬದಲು ನಾನು ಹೆಚ್ಚು ಸುಖಿಯಾಗಿದ್ದೇನೆ. ಶಾಂತನಾಗಿದ್ದೇನೆ. ಆ ಪಾಪಗಳನ್ನು ಮುಂದುವರಿಸಿ ದ್ದರೆ ನನ್ನ ಮಕ್ಕಳ ಗತಿಯೇನು? ಅವರೂ ಅದರ ಬಲೆಗೆ ಬೇಗ ಒಳ ಗಾಗುತ್ತಿದ್ದರು. ಸಂಸಾರ ನಾಶವಾಗುತ್ತಿದ್ದಿತು. ನನ್ನ ವ್ಯಾಪಾರದ ವಿಚಾರ ನೀವು ಕೇಳಿದುದು ಸರಿ. ಆ ವ್ಯಾಪಾರದಲ್ಲಿ ನಾನು ದೋಷ ರಹಿತನಾಗಿದ್ದೇನೆ. ನಾನು ದೊಡ್ಡ ದೊಡ್ಡ ವ್ಯಾಪಾರ ಮಾಡುವುದೂ ಉಂಟು. ಆದರಲ್ಲಿ ಅನೇಕವೇಳೆ ಪ್ರವೇಶಿಸಿದ್ದೇನೆ. ಅದು ತಪ್ಪು ಎಂದು ನನಗೆ ಗೊತ್ತು."

"ಈ ದೊಡ್ಡ ವ್ಯಾಪಾರ ಬಿಡಲು (ಸ್ಟಾಕ್ ಮತ್ತು ಶೇರ್ ಮಾರ್ಕೆಟ್) ಮತ್ತೊಂದು ಕನಸು ಆಗಬೇಕೆಂದು ಕಾಯಬೇಡಿ" ಎಂದೆ; ತತ್‌ಕ್ಷಣ ಬಿಟ್ಟುಬಿಡಿ" ಎಂದೆ.

"ಒಳ್ಳೆಯದು. ಮನಸ್ಸಿನಲ್ಲಿಟ್ಟುಕೊಂಡು ಪೂರ್ಣ ಪ್ರಯತ್ನಮಾಡು ತ್ತೇನೆ."

ಈ ವೇಳೆಗೆ ಗಾಂಧಿಯವರು ಸ್ನಾನಮುಗಿಸಿ ಬಂದರು. ಮೇಲೆ ಹೇಳಿದ ಮಿತ್ರರನ್ನು ಅವರ ಮುಂದೆ ನಿಲ್ಲಿಸಿದೆ. ಆತ ತನ್ನ ಕಾಣಿಕೆ ಅವರ ಮುಂದೆ ಇಟ್ಟು ಹೊರಟು ಹೋದ. ಮಾತನಾಡುವುದು ಆತನ ಪದ್ಧತಿಯೇ ಅಲ್ಲ. ಆತನಿಗೆ ಬೇಕಾಗಿರುವುದು ತನ್ನ ಕಾಣಿಕೆ ಕೊಡುವುದು. ತನ್ನ ಪ್ರತಿಜ್ಞೆಯ ದಿನ ಗಾಂಧಿಯವರು ಬೊಂಬಾಯಿನಲ್ಲಿದ್ದುದು ತನ್ನ ಅದೃಷ್ಟವೆಂದು ಆತ ಭಾವಿಸಿದ.

೨೯-೫-೧೯೩೮.

---

## ೧೬. ಡಾಕ್ಟರ್ ಮಾಟ್‌ರವರ ಎರಡನೆಯ ಭೇಟಿ

### ೧. ಧೀರರಾದ ಹಿರಿಯರು.

ತಾಂಬರಂನಲ್ಲಿ (ಮದರಾಸ್) ನಡೆಯುವ ಕ್ರಿಸ್ತ ಮಿಶನರಿಗಳ ಸಮ್ಮೇಳನಕ್ಕಾಗಿ ಬಂದಿರುವ ಮಿಷನರಿಗಳ ಭೇಟಿಗೆ ಗಾಂಧಿಯವರ ಕಾಲಾವಕಾಶವೆಲ್ಲಾ ಆಗುತ್ತಿದ್ದಿತು. ಹೀಗೆ ಬಂದಿರುವವರ ಪೈಕಿ ಸಮ್ಮೆಳನ ಅಧ್ಯಕ್ಷರಾಗುವ ಡಾ|| ಮಾಟ್‌ರವರೂ ಇದ್ದರು.

೧೯೩೬ ನೇ ಡಿಸೆಂಬರ್‌ನಲ್ಲಿ ಡಾ|| ಮಾಟ್‌ರು ಸೇವಾಗ್ರಾಮಕ್ಕೆ ಬಂದುದೂ ಆಗ ನಾನು ಅವರನ್ನು ಕುರಿತು ಎರಡು ಲೇಖನ ಬರೆದುದೂ ಹರಿಜನದ ಕೆಲವು ವಾಚಕರಿಗೆ ಜ್ಞಾಪಕವಿರಬಹುದು. ಗಾಂಧಿಯವರಿಗೂ ಈ ಮಾನ್ಯ ಕ್ರಿಸ್ತಧರ್ಮ ಬೋಧಕರಿಗೂ ನಡೆದ ಮಾತುಕತೆಯ ಹಿನ್ನೆಲೆಯಾಗಿ, ನಾನು ಅವರ ಜೀವನದ ಕೆಲವು ಸಂಗತಿಗಳನ್ನು ಪೀಠಿಕಾ ರೂಪವಾಗಿ ಬರೆದೆ. ಆ ಪೀಠಿಕೆಯಲ್ಲಿ ಇನ್ನು ಕೆಲವು ಸಂಗತಿಗಳನ್ನು ಹೇಳುತ್ತೇನೆ.

ಎರಡು ವರುಷಗಳ ನಂತರ ಸೇವಾಗ್ರಾಮಕ್ಕೆ ಈ ಭೇಟಿಯಿಂದ, ಅವರ ವ್ಯಕ್ತಿತ್ವ ಹೆಚ್ಚು ಸ್ಪಷ್ಟವಾಗಿದೆ. ಅವರ ವಯಸ್ಸು ೭೩ ಆದರೆ ಅವರ ಹಿಂದಲ ಶಕ್ತಿ ಸ್ವಲ್ಪವೂ ಕಡಿಮೆಯಾಗಿಲ್ಲ ಮತ್ತು ಅವರಿಗೆ ನಿಯತವಾದ ಶಿಸ್ತಿನ ಬಾಳಿನ ರಹಸ್ಯ ಗೊತ್ತಿರುವುದರಿಂದ, ಅವರು ನೂರು ವರುಷ ಜನೋಪಕಾರಿಗಳಾಗಿ ಬಾಳುತ್ತಾರೆಂದು ಸುಲಭವಾಗಿ ನಂಬಬಹುದು. ಇವರು ದೊಡ್ಡ ವ್ಯಾಪಾರಿಯ ಮಗ. ಇವರು ವಕೀಲರಾಗಬೇಕೆಂದು ಇವರ ತಂದೆಯವರ ಇಷ್ಟವಾಗಿದ್ದಿತು. ಆದರೆ ಇವರು ಆ ಎರಡು ಉದ್ಯೋಗಗಳನ್ನು ಬಿಟ್ಟರು. ಎಂದೆಂದಿಗೂ ಎಲ್ಲೆಲ್ಲೂ ದೇವರ ಸೇವೆಗಾಗಿ ತಮ್ಮ ಬುದ್ಧಿಯನ್ನು ಶಕ್ತಿಯನ್ನು ವಿನಿಯೋಗಿಸಬೇಕೆಂದು ಯೌವನದಲ್ಲಿಯೇ ತೀರ್ಮಾನಿಸಿಕೊಂಡರು. ತಮ್ಮ ಧ್ಯೇಯಕ್ಕಾಗಿ ಅವಿಚ್ಛಿನ್ನವಾಗಿ ಪ್ರಯತ್ನಮಾಡುತ್ತಾ ಅವರು ತನಗೆ ದೊರೆತ ಸಂಪಾದನೆಯ ದೊಡ್ಡ ಹುದ್ದೆಗಳನ್ನೆಲ್ಲಾ ತಿರಸ್ಕರಿಸಿದರು. ಅಮೆರಿಕದ ಉಡ್ರೊವಿಲ್ ಸರು, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯಿತ್ತಾಗ ಆ ಸ್ಥಳವನ್ನು ಸ್ವೀಕರಿಸಿ ಎಂದು ಡಾಕ್ಟರ್ ಮಾಟ್‌ರವರನ್ನು ಕೇಳಿದರು. ಪ್ರೆಸಿಡೆಂಟ್ ವಿಲ್‌ಸನ್‌ರು ಜೀಣಾದಲ್ಲಿ ರಾಯಭಾರಿಯಾಗಿರಿ ಎಂದು ಇವರಿಗೆ ಹೇಳಿದರು. ಇವರು ಆ ಹುದ್ದೆಯನ್ನೂ ನಿರಾಕರಿಸಿದರು. ಕ್ರಿಸ್ತ ಮತವನ್ನು ಒಂದುಗೂಡಿಸಲು ಇವರು ಜಗತ್ತಿನಲ್ಲೆಲ್ಲಾ ಅಲೆದಾಡಿದ್ದಾರೆ. ಇವರ ಜೀವನ ಚರಿತ್ರೆ ಬರೆದನರು ಒಳ್ಳೆ ಲೆಕ್ಕಾಚಾರವಾಗಿ ಅಂಕಿ ಅಂಶ ಪ್ರಿಯರಾಗಿ ಅವರು ತಿರುಗಿದ ದೇಶಗಳನ್ನೂ ಪ್ರಯಾಣ ಮಾಡಿರುವ ಮೈಲಿಗನ್ನೂ ವಿವರಿಸಿದ್ದಾರೆ. ೧೯೩೪ರಲ್ಲಿ ಬೆಸಿಲ್ ಮ್ಯಾಡ್ರೂಸ್ ಹೀಗೆ ಬರೆದರು. "ಎಷ್ಟೇ ಕಡಿಮೆ ಎಂದರೂ ಡಾಕ್ಟರ್ ಮಾಟರು ೧,೭೦,೦೦,೦೦೦ ಮೈಲಿ ಅಥವಾ ಪ್ರಪಂಚದ ಸುತ್ತಿನ ೬೮ರಷ್ಟು ತಿರುಗಿದ್ದಾರೆ. ಅವರು ನಾಲ್ಕು ಸಲ ಜಗತ್ತನ್ನು ಸುತ್ತಿದ್ದಾರೆ." ಇವರು ಜಗತ್ತಿನ ವಿದ್ಯಾರ್ಥಿ ಕ್ರಿಸ್ತ ಫಡರೇಷನ್ ವ್ಯವಸ್ಥಾಪಕರು, ಅಂತರರಾಷ್ಟ್ರೀಯ ಮಿಷಿನರಿ ಸಮಿತಿಯ ಅಧ್ಯಕ್ಷರು, ವೈ. ಎಂ. ಸಿ. ಎ. ಯ ಜಗತ್ ಸಂಬಂಧ ಸಂಸ್ಥೆಯ ಅಧ್ಯಕ್ಷರು. ಅವರ ಈ ದೀರ್ಘವಾದ ಬಾಳಿನಲ್ಲಿ ಅವರು ವಿದ್ಯಾರ್ಥಿಗಳೇ ಆಗಿದ್ದಾರೆ. ಅವರ ಶಕ್ತಿಯೆಲ್ಲಾ ತಮ್ಮ ಕೆಲಸಗಳಿಗಾಗಿಯೇ ವಿನಿಯೋಗವಾಗುತ್ತಿದೆ. ಈ ಉದ್ದೇಶದಿಂದ ಅವರು ಎಲ್ಲಾ ದೇಶಗಳನ್ನು ಸಂದರ್ಶಿಸಿ

ಟಾಲಸ್ಟಾಯ್, ಮಸರಿಕ್, ಗಾಂಧಿ, ಕೆರೆನ್ಸ್ಕಿ ಮುಂತಾದ ಮಹನೀಯರ ಕೆಲಸಗಳನ್ನೂ ಮನಸ್ಸನ್ನೂ ವ್ಯಾಸಂಗ ಮಾಡಿದ್ದಾರೆ. ಅವರು ಎಲ್ಲಾ ಮತಗಳ ಕೋಟ್ಯಾಂತರ ವಿದ್ಯಾರ್ಥಿಗಳಿಗೆ ಉಪದೇಶ ಮಾಡಿದ್ದಾರೆ. ಎಲ್ಲಾ ಮತಗಳ ಹಿಂದಲ ತತ್ವವೇನು ಎಂಬುದನ್ನು ಅರಿಯಲು ಪ್ರತಿಯೊಂದು ದೇವಸ್ಥಾನ ಚರ್ಚು ಮಸೀತಿಗಳನ್ನು ಸಂದರ್ಶಿಸಿದ್ದಾರೆ. ಇವರ ವ್ಯವಸ್ಥಾ ಶಕ್ತಿ ಅದ್ಭುತ. ಇವರು ಜಗತ್ತಿನಲ್ಲಿರುವ ಅನೇಕ ಸಾಮಾಜಿಕ, ವಿದ್ಯಾ, ಮತ ಧರ್ಮ ಸಂಸ್ಥೆಗಳೊಂದಿಗೆ ಸಂಬಂಧವಿಟ್ಟುಕೊಂಡಿದ್ದಾರೆ. ಅವರ ಚರಿತ್ರೆಕಾರರು ಹೀಗೆ ಹೇಳುತ್ತಾರೆ "೧೦ ವರುಷದ ಕಾಲದೊಳಗೆ ಇವರು ಜಗತ್ತಿನ ಎಲ್ಲಾ ರಾಷ್ಟ್ರಗಳ ಕ್ರಿಸ್ತಮತ ಧರ್ಮಕೆಲಸಗಳಿಗಾಗಿ ೩೦ ಕೋಟಿ ಪೌಂಡು ಚಂದಾ ವಸೂಲು ಮಾಡುವುದರಲ್ಲಿ ಮುಖ್ಯ ಭಾಗವಹಿಸಿದ್ದಾರೆ." ಅವರು ಬಹಳ ಸರಳ. ಅವರ ಅಭ್ಯಾಸಗಳು ಬಾಲ್ಯದಿಂದಲೂ ಶಿಸ್ತು. ಜಗತ್ತಿನ ವಿದ್ಯಾರ್ಥಿವೃಂದ ಪರಿಶುದ್ಧವಾದ ಜೀವನದಿಂದ ಧ್ಯೇಯವನ್ನು ಸಾಧಿಸಬೇಕೆಂದು ಅವರು ಪ್ರಚಾರ ಮಾಡಿದ್ದಾರೆ. ಗಡಿಯಾರದಂತೆ ಅವರು ಕೆಲಸ ಮಾಡುವುದರಿಂದ ಅವರಿಗೆ ತಮ್ಮ ಕಾಗದ ಪತ್ರಗಳಿಗೆ ತಾವೇ ಜವಾಬುಕೊಡಲು, ತಮ್ಮ ದಿನಚರಿ ತಾವೇ ಬರೆಯಲು, ತಾವು ಓದಿದ ಪುಸ್ತಕಗಳ ನೋಡಿದ ಸ್ಥಳಗಳ ಪಟ್ಟಿ ಇಡಲು ಅವಕಾಶವಾಗಿದೆ.

## ಕಾರ್ಯವೇನೂ ಮುಂದುವರೆದಿಲ್ಲ

ಎರಡು ವರುಷಗಳ ಕೆಳಗೆ ಡಾಕ್ಟರ್ ಮಾಟ್, ಸೇವಾಗ್ರಾಮಕ್ಕೆ ಬಂದಿದ್ದಾಗ ಅವರ ಮಾತೆಲ್ಲಾ ಹರಿಜನರ ಪ್ರಶ್ನೆಯೇ ಆಯಿತು. ಮಿಷಿನರಿಗಳು ಹೇಗೆ ಗಾಂಧಿಯವರಿಗೆ ಅಸ್ಪೃಶ್ಯತಾ ನಿವಾರಣೆಯಲ್ಲಿ ಸಹಾಯ ಮಾಡಬಹುದು ಎಂದು ಅವರು ಚರ್ಚಿಸಿದ್ದರು. ಆ ಚರ್ಚೆಗಳಲ್ಲಿ ಗಾಂಧಿಯವರು "ಮಿಷಿನರಿಗಳು ಇಂದು ಮಾಡುತ್ತಿರುವ ಕಾರ್ಯದಿಂದ ಅವರ ಆತ್ಮ ಧರ್ಮ ಪ್ರಕಾಶವಾಗುವುದಿಲ್ಲ" ಎಂದು ಹೇಳಿದ್ದರು. ಹಾಗೆ ಹೇಳಲು ಅವರಲ್ಲಿ ಸರಿಯಾದ ಆಧಾರವಿದ್ದಿತು. ಡಾಕ್ಟರ್ ಮಾಟ್‌ರು "ಪ್ರಾಪಂಚಿಕ ಉದ್ದೇಶಗಳನ್ನು ಹಿಂದಕ್ಕೆ ಒತ್ತಿ ಜನಸೇವೆ ಮಾಡುವುದು ನಿಜವಾದ ಮಿಷಿನರಿಗಳ ಧರ್ಮವಾಗಿರಬೇಕೆಂದೂ ಆದರೆ ಬೇಕಾದಂತೆ

ಬೋಧಿಸಲು ಮಿಶನರಿಗಳಿಗೆ ಅವಕಾಶವಿರಬೇಕೆಂದೂ ಒಪ್ಪಿದ್ದರು. ಗಾಂಧಿಯವರು "ಬೋಧನೆ ಪ್ರಚಾರ ಇವನ್ನೆಲ್ಲಾ ನಮ್ಮ ಬಾಳಿನಿಂದಲೇ ತೋರಿಸಬೇಕು. ಜನರಿಗೆ ಬೋಧಿಸಬಾರದು. ನಮ್ಮ ಜೀವನ ನೋಡಿ ಅವರು ಕಲಿಯಬೇಕು" ಎಂದಿದ್ದರು. ಕೊನೆಯಲ್ಲಿ "ಈ ಬೋಧನೆಗಳನ್ನು, ಅವುಗಳನ್ನು ತಿಳಿದುಕೊಳ್ಳುವ ಶಕ್ತಿಯುಳ್ಳವರಿಗೆ ಬೋಧಿಸಬೇಕೆಂ"ದಿದ್ದರು.

ಈ ಭೇಟಿಯಲ್ಲಿ ಆ ಮುಖ್ಯ ಪ್ರಶ್ನೆಯನ್ನು ಕುರಿತು ಡಾಕ್ಟರ್ ಮಾಟ್ ಮಾತನಾಡಲಿಲ್ಲ. "ಆದರೆ ಹಿಂದೆ ನಾವು ನೋಡಿದ ಈಚೆಗೆ ಜಗತ್ತು (ಮಿಶನರಿಗಳೂ ಸೇರಿ) ಮುಂದುವರೆದಿರುವುದೇ" ಎಂದು ಕೇಳಿದರು. ಈ ತಿಂಗಳು ಮದರಾಸಿನಲ್ಲಿ ನಡೆಯುವ ಅಂತರ ರಾಷ್ಟ್ರೀಯ ಕ್ರಿಸ್ತ ಸಮ್ಮೇಳನದಲ್ಲಿ ಅವರು ಅಧ್ಯಕ್ಷರು. ಆದುದರಿಂದ ಆ ಸಭೆಯಲ್ಲಿ ಚರ್ಚಿಸುವ ವಿಷಯಗಳನ್ನು ಅವುಗಳ ಕ್ರಮವನ್ನು ಗಾಂಧಿಯವರೊಂದಿಗೆ ಮಾತನಾಡಲು ಅವರು ಬಯಸಿದರು. ಮತ್ತು ತಮ್ಮ ಗಂಭೀರವಾದ ಔದಾರ್ಯದಿಂದ ಹೀಗೆ ಹೇಳಿದರು., "ನಿಮ್ಮ ಜ್ಞಾಪಕ ಬಂದಾಗಲೆಲ್ಲಾ ನಾನು ದೇವರನ್ನು ವಂದಿಸಿದ್ದೇನೆ. ಜಗತ್ತಿಗೆ ಈಗ ನೀವು ಇಲ್ಲದಿದ್ದರೆ ಆಗುವುದೇ ಇಲ್ಲ. ನನ್ನ ದೃಷ್ಟಿಯಲ್ಲಿ ನೀವು ಗುರು ; ಯೋಧ. ನಿಮ್ಮನ್ನು ನೋಡದೆ ಇರುವವರಿಗೆ ಸಹ ನಿಮ್ಮ ಹೆಸರು ಕೇಳಿದರೆ ಭಾವಾವೇಶವಾಗುತ್ತದೆ. ಜಗತ್ತಿನ ಇತಿಹಾಸ ಇಂದು ಅತ್ಯಂತ ವಿಷಮ ಪರಿಸ್ಥಿತಿಯಲ್ಲಿದೆ. ದೇವರು ನಿಮಗೆ ಕೊಟ್ಟಿರುವ ಎಲ್ಲಾ ಶಕ್ತಿಯೂ ಇಂದು ನಮ್ಮ ಸಹಾಯಕ್ಕೆ ಬೇಕಾಗಿದೆ. ನಮ್ಮ ಅನೇಕ ತೊಡಕಿನ ಪ್ರಶ್ನೆಗಳನ್ನು ಬಿಡಿಸಲು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತ್ರ ಸಾಧ್ಯವೆಂಬ ನಂಬಿಕೆ ನನಗೆ ದಿನದಿನಕ್ಕೆ ಹೆಚ್ಚುತ್ತಿದೆ. ನಾವು ಹಿಂದೆ ಸೇರಿದ ಈಚೆಗೆ ಜಗತ್ತು ಹೆಚ್ಚು ನಮ್ರವಾಗಿದೆ. ಸುಸ್ತಾಗಿದೆ. ಜಗತ್ತಿನ ಆತ್ಮ ನಡುಗುತ್ತಿದೆ. ಈ ಜಗತ್ತಿನಲ್ಲಿ ಒಬ್ಬರಿಗೊಬ್ಬರು ಹತ್ತಿರ ಹತ್ತಿರಕ್ಕೆ ಬರಬೇಕೆಂಬ ಆಸೆ. ಹೆಚ್ಚುತ್ತಿದೆ. ನಾನು ಭಾರತಕ್ಕೆ ಬಂದಿರುವುದು ಅದಕ್ಕಾಗಿಯೇ ; ಭಾರತ ಜಗತ್ತಿಗೆ (ಚೀನಾಕ್ಕೆ ಸಹ) ಕಲಿಸಬೇಕಾದುದು ಬಹಳ ಇದೆ."

ಡಾಕ್ಟರ್ ಮಾಟ್ ಹೀಗೆ ಮುಂದುವರಿಸಿದರು "ಭಾರತ ಅನೇಕ ದೊಡ್ಡ ಮತಗಳ, ಧರ್ಮಗಳ, ರಾಷ್ಟ್ರ; ಅದ್ಭುತವಾದ ನಂಬಿಕೆ; ಸಂಸ್ಕೃತಿ

ಗಳ ದೇಶ. ಈ ಕ್ರಿಸ್ತ ಸಭೆ ಅಸಾಧಾರಣವಾದುದು. ಇಲ್ಲಿ ಏಷ್ಯಾ ಆಫ್ರಿಕ, ಲಾಟಿನ್ ಅಮೆರಿಕದ ಹದಿನಾಲ್ಕು ಚರ್ಚುಗಳ ಮತ್ತು ಯುರೋಪ್ ಅಮೆರಿಕ ಆಸ್ಟ್ರೇಲ್ ಏಷ್ಯಾ ಇವುಗಳ ಚರ್ಚುಗಳ ಪ್ರತಿನಿಧಿಗಳು ಸುಮಾರು ೪೦೦ ಜನ ಸೇರುತ್ತಾರೆ. ಈ ಸಭೆ ಭಾರತಕ್ಕೆ ಸಹಾಯವಾಗಬೇಕು. ಕಿರುಕುಳವಾಗಬಾರದು ಎಂಬುದು ನಮ್ಮ ಮತ, ಹರಿಜನದಲ್ಲಿ ನೀವು ಬರೆಯುವ ಅಸದೃಶವಾದ ಸ್ಪಷ್ಟವಾದ ದೇವರಿಂದ ಪ್ರೇರಿತವಾದ ನಿಮ್ಮ ಲೇಖನಗಳು ಯಾವಾಗಲೂ ನನಗೆ ಸ್ಫೂರ್ತಿಯನ್ನು ಕೊಡುತ್ತಿವೆ. ನಿಮ್ಮ ಸಲಹೆ ಕೇಳಲು ನಾನು ಬರೆದಿದ್ದೇನೆ. ನೀವು ಒತ್ತಿ ಒತ್ತಿ ಹೇಳಿದ ದೊಡ್ಡ ಸಮಸ್ಯೆಗಳ ವಿಚಾರದಲ್ಲಿ ಜಗತ್ತಿನ ದೃಷ್ಟಿ, ಒಳ್ಳೆಯ ಮಾರ್ಗಕ್ಕೆ ತಿರುಗುತ್ತಿದೆ ಎಂದು ನಾನು ಭಾವಿಸಿದರೆ ಸರಿಯಾಗುವುದೇ ? ನೀವು ಹೇಳಿದ ಮೊದಲನೆಯ ಪ್ರಶ್ನೆ ಕಮ್ಯೂನಲ್ ಅವಾರ್ಡ್ ಮತ್ತು ಅದರಿಂದ ಭಾರತದಲ್ಲಿ ಕ್ರಿಸ್ತ ಧರ್ಮಕ್ಕೆ ಇರುವ ತೊಂದರೆ ; ಎರಡನೆಯದು ಭಾರತದ ಜನರ ಹೀನಸ್ಥಿತಿಯನ್ನು ಕಂಡು ಕ್ರಿಸ್ತ ಪಾದ್ರಿಗಳು ಅವರನ್ನು ತಮ್ಮ ಮತಕ್ಕೆ ಸೇರಿಸಿಕೊಂಡು ತಮ್ಮ ಮತದ ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಭಾರತದಲ್ಲಿ ಕ್ರಿಸ್ತ ಧರ್ಮಕ್ಕೆ ಒದಗುವ ಅಪಾಯ ; ಮೂರನೆಯದು ಪಾದ್ರಿಗಳ ಬಳಿ ಇರುವ ಹಣದ ಸದುಪಯೋಗ. ನಾವು ಏಷ್ಯಾ ಆಫ್ರಿಕಾಗಳ ಚರ್ಚುಗಳ ಹಣಕಾಸಿನ ಆಧಾರವನ್ನು ಶಾಸ್ತ್ರೀಯವಾಗಿ ವಿಮರ್ಶಿಸಿದ್ದೇವೆ. ನೀವು ಹೇಳಿದ ನಾಲ್ಕನೇ ಸಮಸ್ಯೆ ಅಸ್ಪೃಶ್ಯತೆ. ಈ ಅಸ್ಪೃಶ್ಯತೆ ಭಾರತದಲ್ಲಿ ಮಾತ್ರವೇ ಇದೆ ಎಂದು ಅಲ್ಲ. ಕೆಲವು ಚರ್ಚುಗಳಲ್ಲಿ ಸಹ ಇದು ಇದೆ. ಜರ್ಮನಿಯಲ್ಲಿ ಜ್ಯೂಗಳನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ಅಮೆರಿಕದಲ್ಲಿ ಬಣ್ಣದವರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ನಾವು ತಿಳಿಯಬೇಕಾದುದು ಇದು. ಈಗ ಇದು ಬದಲಾವಣೆಯಾಗುತ್ತಿಲ್ಲವೆ ? ಇವು ಕೆಡಕುಗಳು ಎಂದು ಜನ ಸ್ಪಷ್ಟವಾಗಿ ತಿಳಿದಿಲ್ಲವೆ ? ಈ ಸಮಸ್ಯೆಗಳ ವಿಚಾರದಲ್ಲಿ ನಾವು ಸರಿಯಾದ ಮಾರ್ಗದಲ್ಲಿ ಹೋಗುತ್ತಿದ್ದೇವೆಯೆ ?"

ಗಾಂಧಿ—"ನನಗೆ ಕಾಣುವುದು ಹೀಗೆ,. ಜನರ ಅಭಿಪ್ರಾಯವೇನೋ ಸರಿಯಾದ ಮಾರ್ಗದಲ್ಲಿ ಹೋಗುತ್ತಿದೆ. ಆದರೆ ಕಾರ್ಯತಃ ಏನೂ ಆಗಿಲ್ಲ. ಕಾರ್ಯತಃ "ತುಂಬ ಆಗಿಲ್ಲ" ಎಂದು ಹೇಳಬೇಕೆಂದು ಮಾಡಿದ್ದೆ. ಆದರೆ

ಬೇಕು ಅಂತಲೇ "ಏನೂ ಆಗಿಲ್ಲ" ಎಂದೆ. ಇಲ್ಲಿ ಅಲ್ಲಿ ಒಬ್ಬಿಬ್ಬರನ್ನು ಬೆರಳುಮಾಡಿ ತೋರಿಸಬಹುದು. ಆದರೆ ಅಷ್ಟರಿಂದ ಏನೂ ಆಗುವುದಿಲ್ಲ. ಸರಿಯಾದ ನಂಬಿಕೆಯನ್ನು, ಕಾರ್ಯತಃ ಮಾಡಿದರೆ ತಾನೇ ಪ್ರಯೋಜನ ?

ಡಾ|| ಮಾಟ್—ಮೊದಲು ಜಾತೀಯ ಕೊಡಿಗೆ (ಕಮ್ಯೂನಲ್ ಅವಾರ್ಡ್) ತೆಗೆದು ಕೊಳ್ಳೋಣ ಜನರ ಅಭಿಪ್ರಾಯ ಬದಲಾವಣೆಯಾಗಿಲ್ಲವೇ ?

ಗಾಂಧಿ—ಇಲ್ಲ.

ಡಾ|| ಮಾಟ್—ನಾನು ಕೆ. ಟಿ. ಪಾಲ್‌ರ ಜೀವನ ಚರಿತ್ರೆಯ ಹಸ್ತ ಪ್ರತಿ ಓದುತ್ತಿದ್ದೇನೆ. ಅದಕ್ಕೆ ಒಂದು ಮುನ್ನುಡಿ ಬರೆಯಬೇಕೆಂದು ನನ್ನನ್ನು ಕೇಳಿದ್ದಾರೆ. ಆತನ ಕಾಲದಿಂದ ಈಚೆಗೆ ಸ್ವಲ್ಪ ಉತ್ತಮ ಎಂದು ನೀವು ಒಪ್ಪುವುದಿಲ್ಲವೆ? ರೋಮನ್ ಕ್ಯಾತೋಲಿಕ್‌ರ ಮನೋಭಾವವೇನೋ ವಿರೋಧವಾಗಿದೆ. ಆದರೆ ಪ್ರಾಟೆಸ್ಟೆಂಟರೋ ?

ಗಾಂಧಿ—"ಪ್ರಾಟೆಸ್ಟೆಂಟರು ಈ ಪ್ರಶ್ನೆಯಲ್ಲಿ ಒಮ್ಮತವಾದರೆ ಈ ಕೊಡಿಗೆಯನ್ನು ಅವರು ಬದಲಾಯಿಸಬಹುದು. ಆದರೆ ಅವರು ಇದಕ್ಕಾಗಿ ಯಾವ ಕೆಲಸವನ್ನೂ ಮಾಡಿಲ್ಲ."

ಡಾ|| ಮಾಟ್—ತಮ್ಮ ಮಟ್ಟಿಗೆ ಅವರು ಹೀಗೆ ಮಾಡಿಕೊಳ್ಳಬಹುದೆಂದು ನಮಗೆ ತಿಳಿದಿರಲಿಲ್ಲ.

ಗಾಂಧಿ—ಸಾಧ್ಯ.

ಡಾ| ಮಾಟ್—ಮುಂದಲ ಪ್ರಶ್ನೆ ತೆಗೆದುಕೊಳ್ಳೋಣ. ಭಾರತೀಯರ ಹೀನ ಸ್ಥಿತಿಯ ಲಾಭ ಪಡೆಯುವುದನ್ನು, ಕ್ರಿಸ್ತ ಪಾದ್ರಿಗಳು ಬಿಟ್ಟಿಲ್ಲವೆ? ಮಾಕ್ ಗ್ಯಾವರನ್ ಪ್ರಸಂಗ ಕೇಳಿ ನನಗೆ ಬಹಳ ನೋವುಂಟಾಯಿತು. ಈಚೆಗೆ ಆ ತಪ್ಪು ಸರಿಯಾದುದರಿಂದ ನನಗೆ ಬಹಳ ಸಮಾಧಾನವಾಗಿದೆ.

[ಗಾಂಧಿಯವರಿಗೆ ಕ್ರಿಸ್ತ ಮತವನ್ನು ಕಂಡರೆ ಅಸಹನೆ ಎಂದು ಮ್ಯಾಕ್ ಗಾವರನ್ ಎಂಬುವವರು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಮೊದಲು ಪ್ರಕಟಿಸಿ ಅನಂತರ ತಮ್ಮ ಮಾತು ನಿರಾಧಾರವಾದುದು

ಎಂದು ಹೇಳಿ ಕ್ಷಮಾಪಣೆ ಕೇಳಿದರು. ಈ ವಿಚಾರ ಹರಿಜನ್ ಪತ್ರಿಕೆಯಲ್ಲಿ ವಿವರವಾಗಿ ಮಹದೇವದೇಸಾಯಿ ಬರೆದಿದ್ದಾರೆ.]

ಗಾಂಧಿ—ಈ ಪ್ರಶ್ನೆಯಲ್ಲಿಯೂ ಕೆಲವು ಮಿತ್ರರೇನೋ ಶ್ರದ್ಧೆಯುಳ್ಳವರಾಗಿದ್ದಾರೆಂದು ಒಪ್ಪುತ್ತೇನೆ. ಆದರೆ ಕಾರ್ಯದಲ್ಲಿ ಏನೂ ವ್ಯತ್ಯಾಸವಾಗಿಲ್ಲ.

ಡಾ॥ ಮಾಟ್—ತಕ್ಕಷ್ಟು ಕೆಲಸವಾಗಿಲ್ಲವೆಂಬುದು ನಿಮ್ಮ ಅಭಿಪ್ರಾಯ ?

ಗಾಂಧಿ—ಇಲ್ಲ. ಸ್ವಲ್ಪವೂ ಕೆಲಸವಾಗಿಲ್ಲ. ನಾನು ಹೇಳುವುದಕ್ಕೆ ಆಧಾರವಾದ ಸಾಕ್ಷ್ಯಗಳು ಬೇಕಾದಷ್ಟಿವೆ. ನನಗೆ ಬರುವ ಎಲ್ಲಾ ಪತ್ರಗಳನ್ನೂ ನಾನು ಪ್ರಕಟಿಸುವುದಿಲ್ಲ. ಎ. ಎ. ಪಾಲ್‌ರನ್ನು ನೀವು ಬಲ್ಲಿರಿ. ಆತ ಕೆಲವು ದಿನಗಳ ಕೆಳಗೆ ಒಂದು ಸಮ್ಮೇಳನ ನಡೆಸಿದ. ಅಲ್ಲಿ ನಡೆದ ಕಾರ್ಯಕ್ರಮ ಕಣ್ಣು ತೆರೆಯುವುದಾಗಿದ್ದಿತು. ಅವರ ಠರಾವುಗಳು ಅರ್ಧ ಮನಸ್ಸಿನಿಂದ ಮಾಡಿದವು. ನನಕೆ ತಿಳಿದ ಮಟ್ಟಿಗೆ ಯಾವ ಸ್ಪಷ್ಟವಾದ ಕಾರ್ಯಕ್ರಮ ಮಾಡಲೂ ಒಮ್ಮತ ವಿರಲಿಲ್ಲ.

ಡಾ॥ ಮಾಟ್—ನ್ಯಾಶನಲ್ ಕ್ರಿಶ್ಚಿಯನ್ ಸಭೆಯ ಒಂದು ತೀರ್ಮಾನದಿಂದ ನನಗೆ ಬಹಳ ಸಂತೋಷವಾಯಿತು. ಪವಿತ್ರವಾದ ಉದ್ದೇಶ, ಪರಿಶುದ್ಧವಾದ ಕಾರ್ಯ ಇವೇ ಆ ಠರಾವಿನ ಗುರಿ.

ಗಾಂಧಿ—ಠರಾವನ್ನು ನೀವು ಉದಹರಿಸಬಹುದು. ಆದರೆ ಅದಕ್ಕೆ ಅನುಸಾರವಾದ ಕೆಲಸ ತೋರಿಸಲಾರಿರಿ.

ಡಾ॥ ಮಾಟ್—ನನಗೆ ತಿಳಿಯಿತು. ಕಾರ್ಯವಿಲ್ಲದಿದ್ದ ಬರಿಯ ತೀರ್ಮಾನದಿಂದ ಏನೂ ಪ್ರಯೋಜನವಿಲ್ಲ. ನನ್ನ ವಿದ್ಯಾರ್ಥಿ ದೆಸೆಯಲ್ಲಿ ಫಾಸ್ಟರ್ ಎಂಬುವರ "ಯೋಗ್ಯತೆಯ ಸ್ಪಷ್ಟತೀರ್ಮಾನ" ಎಂಬ ಶ್ರೇಷ್ಟವಾದ ಪ್ರಬಂಧ ಓದಿದಾಗಲೇ ಈ ಪಾಠ ನನ್ನ ಮನಸ್ಸಿನಲ್ಲಿ ಮುದ್ರಿತವಾಯಿತು.

ಗಾಂಧಿ—ನಾನು ಹೇಳುವುದು ಸರಿ ಎಂಬುದು ನಿಮಗೆ ಗೊತ್ತಾಗುತ್ತದೆ. ಜನರ ಕಷ್ಟದ ಲಾಭ ಪಡೆಯುವುದು ತಪ್ಪು ಎಂಬುದೂ ಸಹ ಇನ್ನೂ ಚೆನ್ನಾಗಿ ಪಾದ್ರಿಗಳ ಮನಸ್ಸಿಗೆ ಹಿಡಿದಿಲ್ಲ. ಒಟ್ಟೊಟ್ಟಾಗಿ ಮತಾಂತರ ಮಾಡುವುದನ್ನು ಅವರು ಎಂದಿಗೂ ಬಿಡುವುದಿಲ್ಲ.

ಡಾ|| ಮಾಟ್—ಈಗ ಪಾದ್ರಿಗಳು ಪಂಗಡಗಳನ್ನೂ ಸಂಸಾರ ಗಳನ್ನೂ ಮತಾಂತರ ಹೊಂದಿಸುವುದನ್ನು ಕುರಿತು ಮಾತನಾಡುತ್ತಿದ್ದಾರೆ. ಈ ಪಂಗಡವೆಂಬುದಕ್ಕೆ ಕೆಲವು ಸಂದರ್ಭದಲ್ಲಿ ಏನು ಅರ್ಥ ಎಂದು ನನಗೆ ತಿಳಿದಿಲ್ಲ.

ಗಾಂಧಿ—ನನಗೆ ಸ್ಪಷ್ಟವಾಗಿ ತಿಳಿದಿದೆ. ಅದೇ ಒಟ್ಟೊಟ್ಟಾಗಿ ಮಾತಾಂತರ ಮಾಡಿಸುವುದು.

ಡಾ|| ಮಾಟ್—ಇದು ಆಶ್ಚರ್ಯ. ಪಂಗಡಗಳನ್ನೂ ಸಂಸಾರಗಳನ್ನೂ ಗುಂಪುಗುಂಪಾಗಿ ಬದಲಾಯಿಸುವುದು ಹೇಗೆ ಸಾಧ್ಯ. ಉದಾಹರಣೆಗೆ ನಮ್ಮ ಸಂಸಾರದಲ್ಲಿ ಮೊದಲು ನಮ್ಮ ತಂದೆ ಮತ ಬದಲಾಯಿಸಿದರು. ಅನಂತರ ನಮ್ಮ ಹಿರಿಯಕ್ಕ. ಆಮೇಲೆ ತಂಗಿ, ಆಮೇಲೆ ನಾನು. ಈ ಮತ ಬದಲಾವಣೆ ವ್ಯಕ್ತಿಯ ಸ್ವಂತ ವಿಷಯ; ವ್ಯಕ್ತಿಗೂ ಆತನ ದೇವರಿಗೂ ಸಂಬಂಧಪಟ್ಟ ಸಂಗತಿ.

ಗಾಂಧಿ—ಹೌದು. ಅಸ್ಪೃಶ್ಯತೆಯ ನಿವಾರಣೆಯ ವಿಷಯದಲ್ಲಿ ಅನೇಕ ವರುಷಗಳು ನನ್ನ ಹೆಂಡತಿಗೇ ನನ್ನ ಮಾತಿನಲ್ಲಿ ನಂಬಿಕೆ ಬರಲಿಲ್ಲ ಇಷ್ಟಪಟ್ಟೋ ಪಡದೆಯೋ ಅವಳು ನನ್ನನ್ನು ಅನುಸರಿಸಿದಳು. ಅನಂತರ ಅನೇಕ ವರುಷಗಳ ಕಾರ್ಯ ಮತ್ತು ಅನುಭವದಿಂದ ನಂಬಿಕೆಯುಂಟಾ ಯಿತು.

ಡಾ|| ಮಾಟ್—ಅತ್ಯಂತ ಪವಿತ್ರವಾದ ವಿಷಯಗಳಲ್ಲಿಲ್ಲ, ಪವಿತ್ರ ವಾದ ಮಾರ್ಗಗಳನ್ನೇ ಅನುಸರಿಸಬೇಕು. ಆದರೆ ಒಳ್ಳೆಯ ಕಾಲ ಬರುವು ದೆಂದು ನನಗೆ ನಂಬಿಕೆಯಿದೆ. ವಿವೇಕಿಗಳಾದ ಕ್ರಿಸ್ತ ಮುಖಂಡರು ಈ ಪ್ರಶ್ನೆಗಳನ್ನು ಆಳವಾಗಿ ಆಲೋಚನೆಮಾಡುತ್ತಿರುವುದು ಮಾತ್ರವಲ್ಲದೆ, ಶುದ್ಧವಾದ ಆಚರಣೆಗಾಗಿ ಶ್ರದ್ಧೆಯಿಂದ ಪ್ರಯತ್ನ ಸಹ ಮಾಡುತ್ತಿದ್ದಾರೆ.

ಡಾ|| ಮಾಟ್—ಮೂರನೆಯ ಪ್ರಶ್ನೆಯಾದ ಹಣದ ಸದುಪ ಯೋಗದ ವಿಷಯದಲ್ಲಿ ನನಗೇನೋ ಒಳ್ಳೆಯ ಆಸೆ ತೋರುತ್ತಿದೆ.

ಗಾಂಧಿ—ಇದು ಆವಶ್ಯಕತೆಯನ್ನೇ ಸುಗುಣವಾಗಿ ಮಾಡಿಕೊಂಡಿ ರುವುದಾಗಿದೆ. ಭಾರತದ ಕ್ರಿಸ್ತರು ಗಟ್ಟಿಯಾಗಿ ಆಲೋಚಿಸುತ್ತಿದ್ದಾರೆ. ತಾವೇ ಮಾಡಬೇಕಾದುದನ್ನು ಮಾಡಬೇಕೆಂದು ಯೋಚಿಸುತ್ತಿದ್ದಾರೆ.

ತಮ್ಮ ಜವಾಬ್ದಾರಿಯನ್ನು ಕುರಿತು ಅವರು ಮಾತನಾಡಿಕೊಳ್ಳುತ್ತಿದ್ದಾರೆ. "ಸದ್ಯ ದೇವರ ದಯೆ, ಅಮೆರಿಕದಿಂದ ಹಣ ಬರುವುದಿಲ್ಲ" ಎನ್ನುತ್ತಿದ್ದಾರೆ.

[ಅನಂತರ ಹಣದ ಸದುಪಯೋಗ ಮತ್ತು ದುರುಪಯೋಗದ ಮೇಲೆ ಬಹಳ ಮಾತುಗಳಾದುವು.] ಡಾಕ್ಟರ್ ಮಾಟ್‌ರ ಹಿಂದಲ ಭೇಟಿಯಲ್ಲಿ ಸಹ ಹಣದ ಪ್ರಶ್ನೆ ಅವರ ಮನಸ್ಸನ್ನು ಆಕರ್ಷಿಸಿದ್ದಿತು. ಆಗ ಗಾಂಧಿಯವರು ಸ್ಪಷ್ಟವಾಗಿ "ದೇವರನ್ನೂ ದೆವ್ವವನ್ನೂ ಇಬ್ಬರನ್ನೂ ಸೇವಿಸುವುದು ಸಾಧ್ಯವಿಲ್ಲ. ಮಿಶನರಿಗಳ ಸಂಬಂಧದಲ್ಲಿ ದೇವರು ಹಿಂದೆ ಉಳಿದ. ಭಾರತದ ಸೇವೆಗೆ ದೆವ್ವ ಬಂದಿತು. ಇದರ ಫಲವಾಗಿ ದೇವರು ಇಂದಲ್ಲ ನಾಳೆ ಸೇಡು ತೀರಿಸಿಕೊಳ್ಳುತ್ತಾನೆಂದು ನನ್ನ ಭಯ" ಎಂದಿದ್ದರು. ಸಂಪಾದಿಸಿದ ಹಣಕ್ಕೂ ದಾನವಾಗಿ ಬಂದ ಹಣಕ್ಕೂ ಬಹಳ ವ್ಯತ್ಯಾಸವಿದೆ ಎಂದೂ ಆಗ ಗಾಂಧಿಯವರು ಹೇಳಿದ್ದರು.

ಡಾ|| ಮಾಟ್—ಹಣವನ್ನು ಸರಿಯಾದ ಮಾರ್ಗದಲ್ಲಿ ಉಪಯೋಗಿಸಬಹುದೆಂಬುದಕ್ಕೆ ನಿಮ್ಮ ಜೀವನವೇ ಉದಾಹರಣೆ. ಈ ಬೆಳಗ್ಗೆ ನಾನು ನೋಡಿದ ಸಂಸ್ಥೆಗಳೆಲ್ಲಾ ಇದಕ್ಕೆ ಸಾಕ್ಷಿ.

ಗಾಂಧಿ—ನನ್ನ ಮಾತಿಗೂ ನಡತೆಗೂ ವ್ಯತ್ಯಾಸವಿದೆ ಎಂಬುದು ನಿಮಗೆ ಕಾಣುತ್ತದೆ. ಇದರ ಹಿನ್ನೆಲೆ ನಿಮಗೆ ಕಾಣಲೇಬೇಕು.

ನನಗೆ ಹಣವನ್ನು ಸೇರಿಸುವುದರಲ್ಲಿ ಇಷ್ಟು ಅನುಭವ, ಶಕ್ತಿ ಇದ್ದರೂ, ಹಣದ ವಿಷಯ ನನಗೆ ಪೂರ್ಣ ಔದಾಸೀನ್ಯ. ಧರ್ಮಸಂಸ್ಥೆಗೆ ತನಗೆ ಬೇಕಾದುದಕ್ಕಿಂತ ಹೆಚ್ಚು ಹಣ ಸಿಕ್ಕಿದರೆ ಆ ಸಂಸ್ಥೆ, ದೇವರಲ್ಲಿ ಭಕ್ತಿಯನ್ನು ಬಿಟ್ಟು ಹಣದಲ್ಲಿ ಭಕ್ತಿ ಇಡುವುದೆಂದು ಯಾವಾಗಲೂ ನನ್ನ ಭಾವನೆ. ಹಣಕ್ಕೆ ಸದುಪಯೋಗ, ದುರುಪಯೋಗ ಎಂಬುದಿಲ್ಲ. ಹಣದ ಮೇಲೆ ಅವಲಂಬಿಸುವುದನ್ನು ಪೂರ್ಣವಾಗಿ ಬಿಡಬೇಕು. ನೀವು ಅನ್ನದ ಮೇಲೆ ಕೂಡ ಅವಲಂಬಿಸುವುದಿಲ್ಲ. ದೇವರಿಗೆ 'ಅನ್ನ ಕೊಡದಿದ್ದರೆ ಪ್ರಾರ್ಥನೆ ಮಾಡುವುದಿಲ್ಲ' ಎಂದು ಹೇಳುವುದಿಲ್ಲ.

ಡಾ|| ಮಾಟ್—ಈ ವಿಷಯದಲ್ಲಿ ನಾನು ಹೆಚ್ಚು ವಾದಿಸುತ್ತಿದ್ದೇನೆ;

ನಿಮ್ಮ ಅಭಿಪ್ರಾಯ ನನಗೆ ತಿಳಿಯಬೇಕು; ನಿಮ್ಮ ಮಾತುಗಳನ್ನು ನಾನು ತಪ್ಪಾಗಿ ಉದಹರಿಸಬಾರದು ಎಂಬುದಕ್ಕಾಗಿ.

ಗಾಂಧಿ—ಹಾಗಾದರೆ ನನ್ನ ಅಭಿಪ್ರಾಯವನ್ನು ಎರಡು ಸ್ಪಷ್ಟವಾದ ಸಂಗತಿಗಳಿಂದ ಉದಹರಿಸುತ್ತೇನೆ. ನಾನು ದಕ್ಷಿಣ ಆಫ್ರಿಕದಲ್ಲಿ ಮೊದಲನೆಯ ಸತ್ಯಾಗ್ರಹ ಪ್ರಾರಂಭಿಸಿದಾಗ ನನ್ನ ಹತ್ತಿರ ಒಂದು ಕಾಸು ಸಹ ಇರಲಿಲ್ಲ. ಆದರೆ ನಾನು ಹಗುರವಾದ ಹೃದಯದಿಂದಲೇ ಪ್ರಾರಂಭಿಸಿದೆ. ನನ್ನ ಜತೆಯಲ್ಲಿ ನನ್ನ ಮೇಲೆ ಅವಲಂಬಿಸಿದ್ದ ೩೦೦೦ ಸತ್ಯಾಗ್ರಹಿಗಳಿದ್ದರು. "ಭಯವಿಲ್ಲ ಇದು ದೇವರ ಇಚ್ಛೆಯಾದರೆ ಆತ ಇವನ್ನು ನಡೆಸುತ್ತಾನೆ." ಎಂದೆ. ಅನಂತರ ಭಾರತದಿಂದ ಹಣ ಸುರಿಯಲು ಪ್ರಾರಂಭವಾಯಿತು. ನಾನು ಆಗ ಹಣ ಬೇಡ ಎಂದು ನಿಲ್ಲಿಸಬೇಕಾಯಿತು. ಯಾಕೆಂದರೆ ಹಣದ ಜತೆಯಲ್ಲಿಯೇ ನಮ್ಮ ಕಷ್ಟಗಳೂ ಹೆಚ್ಚಾಗತೊಡಗಿದವು. ಮೊದಲು ಸತ್ಯಾಗ್ರಹಿಗಳು ಒಂದು ರೊಟ್ಟಿ ಸ್ವಲ್ಪ ಸಕ್ಕರೆ ಕೊಟ್ಟರೆ ತೃಪ್ತರಾಗುತ್ತಿದ್ದರು. ಆದರೆ ಹಣ ಬರಲು ಪ್ರಾರಂಭವಾದ ಮೇಲೆ, ಏನೇನೋ ಕೇಳತೊಡಗಿದ್ದರು.

ಆ ಮೇಲೆ ಈ ವಾರ್ಧಾ ಶಿಕ್ಷಣಕ್ರಮದ ವಿಷಯ ತೆಗೆದುಕೊಳ್ಳಿ. ಈ ಪ್ರಯೋಗವನ್ನು ದುಡ್ಡಿನ ಸಹಾಯವಿಲ್ಲದೆ ನಡೆಸಬೇಕೆಂದು ನಾನು ಹೇಳಿದೆ. ಯಾಕೆಂದರೆ ಹಾಗಿಲ್ಲದಿದ್ದರೆ ನನ್ನ ಕಾಲದನಂತರ ಈ ಸಂಸ್ಥೆ ನಾಶವಾಗಿಬಿಡುವುದು. ವಿಷಯ ಇಷ್ಟು, ಹಣದ ಬಲ ದೊರತ ಗಳಿಗೆಯಲ್ಲಿಯೇ ಆತ್ಮಶಕ್ತಿಯು ದಿವಾಳಿಯಾಗುವುದು.

ಡಾ|| ಮಾಟ್—ಆದರೆ ನೀವು ಹಣವನ್ನು ವಿವೇಕವಾಗಿ ಉಪಯೋಗಿಸಿದಿರಿ.

ಗಾಂಧಿ—ಹಣವಲ್ಲ ಬೇಕಾದುದು. ಆಹಾರ. ನಾಯಿ ಕೂಡ ಹಸಿದುಕೊಂಡಿರುವುದಿಲ್ಲ. ಇದು ಭಗವಂತನ ಸೃಷ್ಟಿ ನಿಯಮ.

[ಈ ಸಂದರ್ಭದಲ್ಲಿ ಡಾಕ್ಟರ್ ಮಾಟ್‌ರವರ ತಿಳಿವಳಿಕೆಗಾಗಿ ಮುಂದಲ ಈ ವಿವರಣೆ ಕೊಡಬಹುದು. ಗಾಂಧಿಯವರ ಪ್ರತಿಜ್ಞೆ ಅಪರಿಗ್ರಹ; ಅಂದರೆ ಏನನ್ನೂ ಸಂಗ್ರಹಿಸಿಕೊಳ್ಳುವುದಿಲ್ಲ. ಎಂಬುದು. ಅದರ ಅರ್ಥ ಇಷ್ಟು. ಪ್ರಾಪಂಚಿಕ ವಸ್ತುಗಳನ್ನು ಉಪಯೋಗಿಸ

ಬೇಕಾದ ಅಥವ ಇಟ್ಟುಕೊಳ್ಳಬಹುದಾದ ಆವಶ್ಯಕತೆ ನಿಮಗೆ ಉಂಟಾಗ ಬಹುದು. ಆದರೆ ಅವು ಇಲ್ಲದಾಗ ಕೊರಗದೆ ಇರುವುದೇ ಬಾಳಿನ ಗುಟ್ಟು. ನಿಮ್ಮ ಜೀವವನ್ನು ನಿಮ್ಮ ಯಾವ ಧ್ಯೇಯಕ್ಕಾಗಿ ಧಾರೆ ಎರೆಯಲು ಸಿದ್ಧ ರಾಗಿರುವಿರೋ ಅಂತಹ ಉದ್ದೇಶಕ್ಕೆ ಹಣ ಒದಗಿಯೇ ಒದಗುತ್ತದೆ. ಆದರೆ ಹಣವಿಲ್ಲದಾಗ ಇಲ್ಲವೆಂಬ ಕೊರತೆ ನಿಮಗೆ ಉಂಟಾಗುವುದಿಲ್ಲ. ನಿಮ್ಮ ಕೆಲಸ ಹಣವಿಲ್ಲದುದರಿಂದ ಇನ್ನು ಚೆನ್ನಾಗಿಯೇ ನಡೆಯುತ್ತದೆ:]

ಕೊನೆಯಲ್ಲಿ ಅಸ್ಪೃಶ್ಯತೆಯ ಪ್ರಶ್ನೆ ಬಂದಿತು. ಡಾ|| ಮಾಟ್‌ರು ಈ ವಿಷಯದಲ್ಲಿ ಜಗತ್ತು ಹೆಚ್ಚು ಜಾಗ್ರತವಾಗಿಲ್ಲವೇ ಎಂದು ಆಶ್ಚರ್ಯ ಪಟ್ಟರು. ಅಮೆರಿಕದಲ್ಲಿ ನೀಗ್ರೊಗಳನ್ನು ಸೇರಿಸದ ಹೋಟಲುಗಳಿಗೆ, ಅನೇಕ ಬಿಳಿಯುವರು ಹೋಗಲು ತಿರಸ್ಕರಿಸಿದ್ದಾರೆ. ಜರ್ಮನಿಯಲ್ಲಿ ಜ್ಯೂ ಗಳಿಗೆ ಆಗಿರುವ ಅನ್ಯಾಯ ಪ್ರತಿಭಟಿಸಿ ಅನೇಕ ಜರ್ಮನರು ಸೆರೆ ಹೊಕ್ಕಿ ದ್ದಾರೆ. ಹೀಗೆ ನ್ಯಾಯಕ್ಕೆ ಹೋರಾಟ ನಡೆಯುತ್ತಿದೆ. ಕಸದಿಂದ ರಸ ಉಂಟಾಗುತ್ತಿದೆ. ಭಾರತದ ಸಮಾಚಾರ ಹೇಗೆ ?”

ಗಾಂಧಿ—ನಾನು ಮತ್ತೆ ಹೇಳುತ್ತೇನೆ. ಇಲ್ಲಿ ಏನೂ ಮುಂದುವರಿ ದಿಲ್ಲ. ಬ್ರಿಟಿಷರನ್ನೇ ಒರೆಗಲ್ಲಾಗಿ ಇಟ್ಟುಕೊಳ್ಳಬಹುದು. ಬಣ್ಣದ ವ್ಯತ್ಯಾಸ ಕಡಿಮೆಯಾಗುವುದಕ್ಕಿಂತ ಹೆಚ್ಚುತ್ತಿದೆ. ದಕ್ಷಿಣ ಆಫ್ರಿಕದಲ್ಲಿಯೂ ವರ್ಣದ್ವೇಷ ಹೆಚ್ಚುತ್ತಿದೆ. ಹಿಂದಲ ಮಂತ್ರಿಗಳು ಮಾಡಿದ ವಾಗ್ದಾನಗಳ ನ್ನೆಲ್ಲಾ ಇಂದು ಮುರಿಯುತ್ತಿದ್ದಾರೆ. ಪೂರ್ವ ಆಫ್ರಿಕಾದಲ್ಲಿಯೂ ಇದೇ ಕತೆಯಾಗಿದೆ. ಆದರೆ ನಾನು ಆಶಾವಾದಿ. ನ್ಯಾಯಕ್ಕೆ ಜಯವಾಗುತ್ತದೆ ಎಂದು ಹೇಳಲು ನನಗೆ ಆಧಾರ ಈಗ ಯಾವುದೂ ಇಲ್ಲ. ಆದರೆ ಕೊನೆ ಯಲ್ಲಿ ಸತ್ಯ ನ್ಯಾಯ ಗೆಲ್ಲಲೇಬೇಕೆಂಬ ನನ್ನ ದೃಢವಾದ ನಂಬಿಕೆಯಿಂದ ಹೀಗೇ ಹೇಳುತ್ತಿದ್ದೇನೆ.

ಡಾ|| ಮಾಟ್—ಸರಿ. ದಕ್ಷಿಣ ಆಫ್ರಿಕದಲ್ಲಿ ಸಹ ನ್ಯಾಯಕ್ಕಾಗಿ ಹೊಡೆದಾಡುವ ಹಾಫೆಮೆಯರ್ ಮತ್ತು ಎಡ್ಗಾರ್ ಬ್ರೂಕ್ಸ್ ರವರಂತಹ ವರು ಇಲ್ಲವೆ ? ಕೆಲವು ವ್ಯಕ್ತಿಗಳಾದರೂ ಸರಿಯಾದ ಮಾರ್ಗ ದರ್ಶಕ ರಾಗಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.

ಗಾಂಧಿ—ಕೆಲವು ವ್ಯಕ್ತಿಗಳ ಉದಾಹರಣೆಯಿಂದ ಸರ್ವಸಾಮಾನ್ಯ

ವಾದ ತೀರ್ಮಾನ ಮಾಡುವುದು ಕಷ್ಟ. ನ್ಯಾಯಕ್ಕೆ ಕೊನೆಯಲ್ಲಿ ಜಯ ಎಂಬ ನಂಬಿಕೆಯಿಂದ ಮಾತ್ರ ನಮಗೆ ಸ್ಫೂರ್ತಿಯುಂಟಾಗಬೇಕು. ಅಷ್ಟೇ. ಈ ವಿಷಯದಲ್ಲಿ ನಾನು ಮೊದಲೇ ಹೇಳಿದಂತೆ ಜನರ ಅಭಿಪ್ರಾಯ ಬದಲಾಯಿಸಿ ಸರಿಯಾದ ಮಾರ್ಗದಲ್ಲಿ ಹೋಗುತ್ತಿದೆ. ಆದರೆ ಕಾರ್ಯ ಏನೂ ಆಗಿಲ್ಲ.

ಡಾ|| ಮಾಟ್—ಜಗತ್ತಿನಲ್ಲಿ ನಡೆದಿರುವ ಅನೇಕ ಒಳ್ಳೆಯ ಹೆಜ್ಜೆಗಳಿಗೆ ವ್ಯಕ್ತಿಗಳ ಸ್ವಾಭಾವಿಕ ಶಕ್ತಿಯೇ ಕಾರಣ. ಆ ಮಹನೀಯರು ಧೈರ್ಯದಿಂದಲೂ ತ್ಯಾಗದಿಂದಲೂ ಅಪ್ರಸಿದ್ಧವಾದ ವಿಷಯಗಳು ಜಯಶಾಲಿಯಾಗುವಂತೆ ಮಾಡಿದ್ದಾರೆ."

## ಎರಡನೆಯ ದಿವಸ.

## (೨)

## ರಾಷ್ಟ್ರದ ಹೆಸರಿನಲ್ಲಿ ನಡೆಯುವ ದರೋಡೆಗಳನ್ನು ಎದುರಿಸುವುದು ಹೇಗೆ?

ಮರುದಿನ ಡಾ|| ಮಾಟ್‌ರು ಹೀಗೆ ಪೀಠಿಕೆ ಪ್ರಾರಂಭಿಸಿದರು "ನನ್ನ ಪ್ರಶ್ನೆಗಳಿಗೆ ನಿಮ್ಮದೇ ಆದ ಸ್ವಂತ ಮಾರ್ಗದಲ್ಲಿ ಉತ್ತರ ಕೊಟ್ಟಿರಿ. ನನಗೆ ಅವು ಬಹು ಬೆಲೆಯಾದುವಾಗಿವೆ. ಜನರ ಅಭಿಪ್ರಾಯ ಮುಂದುವರಿದಿದೆ. ಕೆಲಸ ಮುಂದುವರಿದಿಲ್ಲ ಎಂದು ನೀವು ಒಪ್ಪಿರುವುದು ನನ್ನ ಮನಸ್ಸನ್ನು ಹಿಡಿಯಿತು. ಅನೇಕ ಮೇಧಾವಿಗಳೂ-ಮುಂದಾಳುಗಳೂ ಈ ಪ್ರಶ್ನೆಗಳನ್ನು ಪ್ರಗತಿಮಾರ್ಗದಲ್ಲಿ ಯೋಚಿಸುತ್ತಿರುವುದು ದೊಡ್ಡ ಸಂಗತಿ. ಕೆಲವು ಕಾರ್ಯಕಾರಿಯಾಗುತ್ತಿರುವುವೆಂದೂ ನಾನೂ ನಿಮಗೆ ತೋರಿಸ ಬಲ್ಲೆ. ಆದರೆ ಈವತ್ತು ನಿಮ್ಮ ದೃಷ್ಟಿ ಬೇರೆಕಡೆ ತಿರುಗಿಸಬೇಕೆಂದು ನನ್ನ ಇಚ್ಛೆ. ಈ ದರೋಡೆ ರಾಷ್ಟ್ರಗಳ ವಿಷಯ ಏನುಮಾಡಬೇಕು. ಅಮೆರಿಕದಲ್ಲಿ ಹಿಂದೆ ವ್ಯಕ್ತಿಗಳು ದರೋಡೆಗಾರರಾಗಿದ್ದರು. ಪ್ರಾಂತ್ಯದ ಮತ್ತು ರಾಷ್ಟ್ರದ ಪೋಲೀಸ್‌ರು ಶಿಸ್ತಿನಿಂದ ವರ್ತಿಸಿ ಅದನ್ನು ನಾಶಮಾಡಿದ್ದಾರೆ. ರಾಷ್ಟ್ರಗಳೇ ದರೋಡೆಕಾರರಾಗಿ ಒಬ್ಬರ ಮೇಲೆ ಒಬ್ಬರು ಬೀಳುತ್ತಾರಲ್ಲಾ ನಾವೇನೂ ಮಾಡಲು ಸಾಧ್ಯವಿಲ್ಲವೆ? ಮಂಚೂರಿಯ ನೋಡಿ. ಅಬಿ

ಸೀನಿಯದಲ್ಲಿ ಅಫೀಮಿನ ಬಲಾತ್ಕಾರ ನೋಡಿ, ಸ್ಪೇನ್ ನೋಡಿ. ಆಸ್ಟ್ರಿಯ ಮುತ್ತಿಗೆ, ಜೆಕೊಸ್ಲೋವೇಕಿಯ ಇವನ್ನೆಲ್ಲಾ ನೋಡಿ. ಈ ಸಂದರ್ಭದಲ್ಲಿ ನೀವು ಜೆಕೊಸ್ಲೋವೇಕಿಯದ ವಿಷಮ ಪರಿಸ್ಥಿತಿ, ಜೂಗಳ ಕರ್ತವ್ಯ ಇವುಗಳ ಮೇಲೆ ಬರೆದ ಲೇಖನಗಳು ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಮಾಡಿದವು." ಅಂತರ ರಾಷ್ಟ್ರೀಯ ಪೋಲೀಸನ್ನು ನಾವು ನಿಯಮಿಸಲು ಸಾಧ್ಯವೆ ?

ಗಾಂಧಿ—ಈ ಪ್ರಶ್ನೆ ನನಗೆ ಹೊಸದಲ್ಲ.

ಡಾ|| ಮಾಟ್—ನಾನು ಹಾಗೆ ಊಹಿಸುತ್ತೇನೆ.

ಗಾಂಧಿ—ಭಾರತದ ಸ್ಥಿತಿಯಲ್ಲಿ ಇಂತಹ ಪ್ರಶ್ನೆಗಳು ನನ್ನ ಮುಂದೆ ಬರುತ್ತಿವೆ. ನಾವು ಜಾತೀಯ ಮತ್ತು ಕೂಲಿಕಾರರ ದಂಗೆಗಳನ್ನು ಅಡಗಿಸಿದುದುದಾಗಿದೆ. ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಪೋಲೀಸರನ್ನೂ ಕೆಲವು ವೇಳೆ ಸೈನ್ಯವನ್ನೂ ಉಪಯೋಗಿಸಿದ್ದಾರೆ. ಮಂತ್ರಿಗಳಿಗೆ ಬೇರೆ ಮಾರ್ಗವಿರಲಿಲ್ಲವೆಂದು ನಾನು ಒಪ್ಪಿದೆ. ಆದರೆ ಕಾಂಗ್ರೆಸ್ ಮಂತ್ರಿಗಳು ತಮ್ಮಲ್ಲಿ ಶಕ್ತಿಯಿದ್ದರೂ [ಅಹಿಂಸಾಶಕ್ತಿ] ದಿವಾಳಿಯಾದರೆಂದೂ ಹೇಳಿದೆ. ಅವರ ನಿಮ್ಮ ಪ್ರಶ್ನೆಗೂ ಅದೇ ಬಗೆಯ ಉತ್ತರ ಹೇಳುತ್ತೇನೆ. ಜಗತ್ತಿನ ಉತ್ತಮ ಪುರುಷರು ಅಹಿಂಸೆಯ ಅನುಯಾಯಿಗಳಾಗಲು ಸಾಧ್ಯವಿಲ್ಲವಾದರೆ ಈ ದರೋಡೆಗಳನ್ನು ಪದ್ಧತಿ ಪ್ರಕಾರದ ಕ್ರಮಗಳಿಂದಲೇ ಅಡಗಿಸಬೇಕಾಗಿದೆ. ಇದರಿಂದ ಒಂದು ಸ್ಪಷ್ಟವಾಗುತ್ತದೆ. ನಾವು ಕಾಡುಪ್ರಾಣಿಗಳ ಸ್ಥಿತಿಗಿಂತ ಮೇಲೆ ಹೋಗಿಲ್ಲ. ದೇವರು ಕೊಟ್ಟ ಸಂಸ್ಕೃತಿ ನಮಗೆ ಅರ್ಥವಾಗಿಲ್ಲ. ೧೯೦೦ ವರುಷಗಳ ಕ್ರಿಸ್ತ ಧರ್ಮ ಪ್ರಚಾರ, ಇನ್ನೂ ಅನೇಕ ಹೆಚ್ಚು ವರುಷಗಳ ಹಿಂದೂ ಮತ್ತು ಬೌದ್ಧಮತ ಪ್ರಚಾರ, ಇಸ್ಲಾಂ (ನಾನು ಅದನ್ನು ಸರಿಯಾಗಿ ತಿಳಿದಿದ್ದರೆ) ಇವುಗಳಿಂದ ನಾವು ಮನುಷ್ಯತ್ವದಲ್ಲಿ ಏನೂ ಮುಂದುವರಿದಿಲ್ಲ. "ಅಹಿಂಸೆಯ ಶಕ್ತಿ ಇಲ್ಲದವರು, ಆ ದರೋಡೆಗಾರರನ್ನು ಅಡಗಿಸಲು ಹಿಂಸಾಮಾರ್ಗ ಅನುಸರಿಸುವುದು ನನಗೆ ಅರ್ಥವಾಗುತ್ತದೆ. ಆದರೆ ಅಹಿಂಸೆಯಲ್ಲಿ ನಂಬಿಕೆಯಿರುವವರು ದರೋಡೆಕಾರರನ್ನು ಅಹಿಂಸೆಯಿಂದ ಎದುರಿಸಬಹುದೆಂಬುದನ್ನು ತೋರಿಸಲು ತಮ್ಮ ಶಕ್ತಿಯನ್ನೆಲ್ಲಾ ವಿನಿಯೋ

ಗಿಸಬೇಕೆಂಬುದು ನನ್ನ ಇಚ್ಛೆ. ಯಾಕೆಂದರೆ ಹಿಂಸೆಯನ್ನು ನಾವು ಎಷ್ಟೇ ನ್ಯಾಯಕ್ಕಾಗಿ ಉಪಯೋಗಿಸಿದರೂ ಕೊನೆಯಲ್ಲಿ ಆ ಹಿಂಸೆ, ಹಿಟ್ಲರ್ ಮುಸಲೋನಿಗಳ ಮಾದರಿಯ ಹಿಂಸೆಗೇ ನಮ್ಮನ್ನು ಎಳೆದೊಯ್ಯುತ್ತದೆ. ಅವುಗಳ ಮಟ್ಟದಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು ಅಷ್ಟೆ. ಅಹಿಂಸೆಯಲ್ಲಿ ನಂಬಿಕೆಯುಳ್ಳ ನೀವೂ ನಾವೂ ಸರಿಯಾದ ಅವಶ್ಯಕವಾದ ಪರಿಸ್ಥಿಯಲ್ಲಿ ಅಹಿಂಸೆಯನ್ನು ಉಪಯೋಗಿಸಬೇಕು. ಈಗಿನ ಗಳಿಗೆಯಲ್ಲಿ ನಾವು ಕಲ್ಲಿಗೆ ತಲೆ ಚಚ್ಚಿಕೊಂಡಂತೆ ತೋರುತ್ತಿದ್ದರೂ, ದರೋಡೆಗಾರರ ಹೃದಯ ವನ್ನು ಸಹ ನಾವು ಮುಟ್ಟಬಹುದೆಂಬುದರಲ್ಲಿ ನಮಗೆ ನಿರುತ್ಸಾಹವಿರ ಬಾರದು."

## ಮಿಶನರಿಗಳು ಹೇಗೆ ಸಹಾಯಮಾಡಬಹುದು ?

ಡಾ|| ಮಾಟ್ ಹೀಗೆ ಮುಂದಲ್ಲ ಪ್ರಶ್ನೆ ಹಾಕಿದರು "ಮಿಶನರಿಗಳೂ ಕ್ರಿಸ್ತ ಜನರೂ ಯಾವರೀತಿ ಗ್ರಾಮೋದ್ಯೋಗ, ವಾರ್ಧಾ ಶಿಕ್ಷಣ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ಸಹಾಯಮಾಡಬಹುದು ?"

ಗಾಂಧಿಯವರು ಕೆಲವು ಸ್ವಂತ ಅನುಭವಗಳನ್ನು ಹೇಳಿದರು. ಅವನ್ನು ಇಲ್ಲಿ ಕೊಡುವುದಿಲ್ಲ. ಅವರು ಹೇಳಿದುದರ ತಿರುಳು ಇಷ್ಟು. "ಅವರು ಈ ಚಳುವಳಿಗಳನ್ನು ಅಧ್ಯಯನಮಾಡಿ ಇದರ ಅಧೀನದಲ್ಲಿ ಅಥವ ಇದರ ಸಹಕ್ಕಾರದಲ್ಲಿ ಕೆಲಸಮಾಡಬೇಕು. ನನಗೆ ಕೆಲವು ಕ್ರಿಸ್ತ ಸಹೋದ್ಯೋಗಿಗಳ ಅಮೂಲ್ಯವಾದ ಸ್ನೇಹವಿದೆಯೆಂದು ಹೇಳಲು ಸಂತೋಷವಾಗುತ್ತದೆ. ಆದರೆ ಅವರ ಸಂಖ್ಯೆ ಕೈ ಬೆರಳುಗಳಷ್ಟು ಅಲ್ಪ. ಕ್ರಿಸ್ತ ಜನಾಂಗಕ್ಕೆ ಈ ಚಳುವಳಿಗಳಲ್ಲಿ ನಂಬಿಕೆ ಇಲ್ಲವೆಂಬುದು ನನ್ನ ಅಭಿಪ್ರಾಯ. ಕೆಲವರು ಗ್ರಾಮ್ಯೋದ್ಯೋಗಗಳನ್ನೂ ವಾರ್ಧಾ ಶಿಕ್ಷಣ ವನ್ನೂ ಈ ಸಂಸ್ಥೆಗಳು ನಡೆಸುತ್ತಿರುವುದರಿಂದ ಅವುಗಳಲ್ಲಿ ತಮಗೆ ನಂಬಿಕೆ ಇಲ್ಲವೆಂದು ಹೇಳಿದ್ದಾರೆ. ಅವರಿಗೆ ಕೈಗಾರಿಕಾ ಕ್ರಾಂತಿ, ಪಾಶ್ಚಾತ್ಯ ಪದ್ಧತಿಯ ಶಿಕ್ಷಣ ಇವುಗಳಲ್ಲಿಯೇ ನಂಬಿಕೆ. ಮಿಶನರಿ ಕ್ರಿಸ್ತರು ನಡೆಸದ, ಕ್ರಿಸ್ತರೇ ಪ್ರಬಲರಾಗಿಲ್ಲದ ಚಳುವಳಿಗಳಲ್ಲಿ ಭಾಗವಹಿಸಲು ಹಿಂದೆಗೆಯುತ್ತಾರೆ

ನನ್ನ ಚಳುವಳಿಗೆ ೫,೦೦೦ ಪ್ರಾಟೆಸ್ಟೆಂಟ್ ಕ್ರಿಸ್ತರ ಮನಃಪೂರ್ವಕ

ವಾದ ಸಹಾಯದೊರೆತು, ಅಹಿಂಸೆಯ ಸಜೀವಶಕ್ತಿಯಲ್ಲಿ ಅವರಿಗೆ ಪೂರ್ಣ ನಂಬಿಕೆಯುಂಟಾದರೆ, ಅವರಿಂದ ಭಾರತಕ್ಕೆ ಮಾತ್ರವೇ ಅಲ್ಲ, ಪಾಶ್ಚಾತ್ಯ ದೇಶಕ್ಕೂ ದೊಡ್ಡ ಸೇವೆಯಾಗುವುದು.

ಡಾ|| ಮಾಟ್—ನಿಮ್ಮೊಂದಿಗೆ ಒಮ್ಮತವಾಗಿರುವವರು ಅವರಲ್ಲಿ ಅನೇಕರಿರುವುದು ಸುದೈವ.

ಗಾಂಧಿ—ನನಗೆ ಗೊತ್ತು.

ಡಾ|| ಮಾಟ್—ಕಾಂಗ್ರೆಸ್ ಚಳುವಳಿಯಲ್ಲಿ ಒಳ್ಳೆ ತೇಜಸ್ಸು ಇದೆ. ಪ್ರತಿಯೊಬ್ಬ ಮಿಶನರಿಯೂ ತಾನು ಹೇಗೆ ಅದಕ್ಕೆ ಹೆಚ್ಚು ಸಹಾಯ ಮಾಡಬಹುದೆಂಬುದನ್ನು ಯೋಚಿಸಬೇಕು.

ಡಾ|| ಮಾಟ್‌ರು ಗಾಂಧಿಯವರಿಗೆ ಸಂಬಂಧಪಟ್ಟ ಕೆಲವು ಸ್ವಂತ ಪ್ರಶ್ನೆಗಳನ್ನು ಕೇಳಿದರು. "ನಿಮ್ಮ ಬಾಳಿನಲ್ಲಿ ಅತ್ಯಂತ ಸ್ಫೂರ್ತಿ ದಾಯಕಗಳಾದ ಅನುಭವಗಳು ಯಾವುವು? ನಿಮ್ಮ ಕಳೆದ ಬಾಳನ್ನು ನೋಡುವಾಗ, ಎಲ್ಲವೂ ಶೂನ್ಯವಾಗಿ ತೋರಿದ ಕಾಲದಲ್ಲಿಯೂ, ಅಸಂಭವ ವೆನ್ನುವ ಕಾಲದಲ್ಲಿಯೂ, ದೇವರಲ್ಲಿ ನಿಮಗೆ ಭಕ್ತಿಯುಂಟಾದುದು ಯಾತರಿಂದ?"

ಗಾಂಧಿಜಿ—ಇಂತಹ ಅನುಭವಗಳು ಅಸಂಖ್ಯಾತವಾಗಿವೆ. ನೀವು ನನಗೆ ಈ ಪ್ರಶ್ನೆ ಹಾಕಿದುದರಿಂದ, ನನ್ನ ಬಾಳಿನ ಮಾರ್ಗವನ್ನು ಪೂರ್ಣ ವಾಗಿ ಬದಲಾಯಿಸಿದ ಒಂದು ಸಂಗತಿ ನೆನಪಿಗೆ ತಂದುಕೊಳ್ಳುತ್ತೇನೆ. ನಾನು ದಕ್ಷಿಣ ಆಫ್ರಿಕದಲ್ಲಿ ಇಳಿದ ಏಳುದಿನಕ್ಕೆ ನನಗೆ ಅದು ಸಂಭವಿ ಸಿತು. ನಾನು ಅಲ್ಲಿಗೆ ಹೋದುದು ಪೂರ್ಣವಾಗಿ ಪ್ರಾಪಂಚಿಕ ಮತ್ತು ಸ್ವಾರ್ಥದ ಉದ್ದೇಶದಿಂದ. ನಾನು ಆಗತಾನೇ ಇಂಗ್ಲೆಂಡಿನಿಂದ ಹಿಂದಿ ರುಗಿದ ಹುಡುಗನಾಗಿದ್ದೆ. ದುಡ್ಡು ದುಡಿಯಬೇಕೆಂಬುದು ನನ್ನ ಆಶೆ ಯಾಗಿದ್ದಿತು. ಇದ್ದಕ್ಕಿದ್ದಂತೆ ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿದ್ದ ದಳ್ಳಾಳಿ, ನಾನು ದರ್‌ಬಾನ್‌ನಿಂದ ಪ್ರಿಟೋರಿಯಾಕ್ಕೆ ಹೋಗ ಬೇಕೆಂದು ಬಯಸಿದ. ಆ ಪ್ರಯಾಣ ಸುಲಭವಾಗಿರಲಿಲ್ಲ. ಚಾರಲ್ಸ್ ಟೌನ್‌ವರೆಗೆ ರೈಲಿನಲ್ಲಿ ಹೋಗಿ ಅನಂತರ ಕುದುರೆಗಾಡಿಯಲ್ಲಿ ಜೋಹಾನ್ಸ ಬರ್ಗ್‌ಗೆ ಹೋಗಬೇಕಾಗಿದ್ದಿತು. ನನ್ನ ಹತ್ತಿರ ಮೊದಲನೆಯ ತರಗತಿಯ

ರೈಲು ಟಿಕೆಟ್ ಇದ್ದಿತು. ಆದರೆ ನಿದ್ರೆಮಾಡುವ ಗಾಡಿಯ ಟಿಕೆಟ್ ಇರ ಲಿಲ್ಲ. ಹಾಸಿಗೆಗಳನ್ನು ಕೊಡುತ್ತಿದ್ದ ಮಾರಿಟ್ಸ್ ಬರ್ಗ್‌ನಲ್ಲಿ ಗಾರ್ಡು ಬಂದು, ನನ್ನನ್ನು ಕೆಳಕ್ಕೆ ಇಳಿಸಿ ವ್ಯಾನ್ ಗಾಡಿಗೆ ಹೋಗುವಂತೆ ಹೇಳಿದ. ನಾನು ಹೋಗಲಿಲ್ಲ. ರೈಲು ಹೊರಟು ಹೋಯಿತು. ನಾನು ಛಳಿಯಿಂದ ನಡುಗುತ್ತ, ಸ್ಟೇಷನ್‌ನಲ್ಲಿ ಉಳಿದೆ. ಇಲ್ಲಿ ಬಾಳನದಾರಿ ತೀರ್ಮಾನಿಸುವ ಅನುಭವ ಉಂಟಾಯಿತು. ನನಗೆ ಪ್ರಾಣಭಯವುಂಟಾಯಿತು. ನಾನು ಕತ್ತಲೆಯ "ವೇಟಿಂಗ್ ರೂಮ್"ಗೆ ಹೋದೆ. ಅಲ್ಲಿ ಒಬ್ಬ ಬಿಳಿಯನ ಇದ್ದ. ಅವನನ್ನು ನೋಡಿ ನನಗೆ ಭಯವಾಯಿತು. ನನ್ನ ಕರ್ತವ್ಯ ವೇನು ಎಂದು ನನ್ನನ್ನು ನಾನೇ ಕೇಳಿಕೊಂಡೆ. ಭಾರತಕ್ಕೆ ಹಿಂದಿರು ಗಲೇ ಅಥವ ದೇವರನ್ನು ಸಹಾಯಕನನ್ನಾಗಿಟ್ಟುಕೊಂಡು ಬಂದುದನ್ನು ಎದುರಿಸಲು ಮುಂದುವರಿಯಲೇ ? ಅಲ್ಲಿಯೇ ನಿಂತು ಕಷ್ಟವನ್ನು ಎದುರಿಸ ಬೇಕೆಂದು ತೀರ್ಮಾನಿಸಿದೆ. ನನ್ನ ಸಚೇತನ ಅಹಿಂಸೆ ಆ ದಿನದಿಂದಲೆ ಪ್ರಾರಂಭವಾಯಿತು. ಆ ಪ್ರಯಾಣದಲ್ಲಿಯೇ ದೇವರು ನನ್ನನ್ನು ಪರೀಕ್ಷಿಸಿದ. ಗಾಡಿಯವನು ನನ್ನನ್ನು ಕೂರಿಸಿದ ಸ್ಥಳವನ್ನು ನಾನು ಬದಲಾಯಿಸಿದುದಕ್ಕಾಗಿ, ಅವನು ನನ್ನನ್ನು ಹಿಂಸಿಸಿದ. ಹೊಡೆದ ಬೈದ.

ಡಾ|| ಮಾಟ್—ಆ ದುಃಖ ಏಟಿನಮೇಲೆ ಏಟು ನಿಮ್ಮ ಹೃದಯ ವನ್ನು ಸುಟ್ಟಿತು.

ಗಾಂಧಿಜಿ—ಹೌದು. ಅದು ನನ್ನ ಬಾಳಿನ ಅತ್ಯಂತ ಸಂಪದ್ಯುಕ್ತವಾದ ಒಂದು ಅನುಭವ.

ಡಾ|| ಮಾಟ್—ನನ್ನನ್ನು ಅದಕ್ಕೆ ಭಾಗಿಯನ್ನಾಗಿ ಮಾಡಿದುದಕೆ ಕೃತಜ್ಞನಾಗಿದ್ದೇನೆ.

### ಕಾರ್ಯದಲ್ಲಿ ದೇವರು ಕಾಣುತ್ತಾನೆ

ಡಾ|| ಮಾಟ್—ಕಷ್ಟದಲ್ಲಿಯೂ, ಸಂಶಯದಲ್ಲಿಯೂ, ಪ್ರಶ್ನಿಸುವ ಮನೋಭಾವವಿದ್ದಾಗಲೂ, ನಿಮ್ಮ ಆತ್ಮಕ್ಕೆ ಹೆಚ್ಚಾದ ಶಾಂತಿ ಸಮಾಧಾನ ಉಂಟುಮಾಡಿರುವುದು ಯಾವುದು ?

ಗಾಂಧಿಜಿ—ದೇವರಲ್ಲಿ ನನ್ನ ನಂಬಿಕೆ.

ಡಾ|| ಮಾಟ್—ನಿಮ್ಮ ಬಾಳಿನಲ್ಲಿಯೂ ಅನುಭವದಲ್ಲಿಯೂ ನಿಸ್ಸಂದೇಹವಾಗಿ ದೇವರ ದರ್ಶನ ಯಾವಾಗ ಆಗಿದೆ ?

ಗಾಂಧಿಜಿ—ದೇವರು ವ್ಯಕ್ತಿಯಾಗಿ ಕಣ್ಣಿಗೆ ಕಾಣುವುದಿಲ್ಲವೆಂದು ನನ್ನ ಅನುಭವ ಮತ್ತು ನಂಬಿಕೆ. ಆದರೆ ಅತ್ಯಂತ ಕಷ್ಟಕಾಲದಲ್ಲಿಯೂ ನಿಮ್ಮನ್ನು ರಕ್ಷಿಸುವ ಕಾರ್ಯದಲ್ಲಿ ಕಾಣುತ್ತಾನೆ.

ಡಾ|| ಮಾಟ್—ದೇವರ ಸಂಬಂಧವಿಲ್ಲದೆ ನಡೆಯಲಾರದ ಕೆಲಸಗಳು ಮಾತ್ರ ನಡೆಯುತ್ತವೆಂದು ಹೇಳುತ್ತೀರಾ ?

ಗಾಂಧಿ—ಹೌದು, ಅವು ಇದ್ದಕ್ಕಿದ್ದಂತೆ ಆಕಸ್ಮಿಕವಾಗಿ ನಡೆದು ಹೋಗುತ್ತವೆ. ಒಂದು ಅನುಭವ ನನಗೆ ಸ್ಪಷ್ಟವಾಗಿ ಜ್ಞಾಪಕ ವಿದೆ. ಅಸ್ಪೃಶ್ಯತಾ ನಿವಾರಣೆಗಾಗಿ ನನ್ನ ೨೧ ದಿನದ ಉಪವಾಸಕ್ಕೆ ಇದು ಸಂಬಂಧಿಸಿದುದು. ಮಾರನೆಯ ಬೆಳಗ್ಗೆ ಉಪವಾಸ ಮಾಡಬೇಕೆಂಬ ಯೋಚನೆ ಸ್ವಲ್ಪವೂ ಇಲ್ಲದೆ ನಾನು ಆರಾತ್ರಿ ನಿದ್ದೆ ಹೋದೆ. ಸುಮಾರು ೧೨ ಗಂಟೆ ಸಮಯದಲ್ಲಿ ಯಾವುದೋ ನನ್ನನ್ನು ಎಬ್ಬಿಸುತ್ತದೆ. ಯಾವುದೊ ಧ್ವನಿ—ನನ್ನ ಒಳಗಿನ ಧ್ವನಿಯೋ ಹೊರಗಿನ ಧ್ವನಿಯೋ ಗೊತ್ತಿಲ್ಲ—ನೀನು ಉಪವಾಸಮಾಡಬೇಕು ಎನ್ನುತ್ತದೆ. "ಎಷ್ಟು ದಿವಸ" ಎಂದು ನಾನು ಕೇಳುತ್ತೇನೆ. "ಇಪ್ಪತ್ತೊಂದು ದಿನ" ಎನ್ನುತ್ತದೆ ಧ್ವನಿ. "ಯಾವಾಗ ಪ್ರಾರಂಭ" ಎಂದು ಕೇಳುತ್ತೇನೆ. "ನಾಳೆಯೇ" ಎನ್ನುತ್ತದೆ ಧ್ವನಿ. ನಾನು ತೀರ್ಮಾನಮಾಡಿ ಸುಖವಾಗಿ ಮಲಗಿಬಿಟ್ಟೆ. ಬೆಳಗಿನ ಪ್ರಾರ್ಥನೆಯವರೆಗೆ ಯಾರಿಗೂ ಆ ಮಾತನ್ನು ನಾನು ಹೇಳಲಿಲ್ಲ. ಪ್ರಾರ್ಥನೆ ಯಾದಮೇಲೆ ಅವರ ಕೈಯಲ್ಲಿ ಒಂದು ಚೀಟಿ ಇಟ್ಟೆ. ಈ ತೀರ್ಮಾನ ಅನಿವಾರ್ಯ ಇದನ್ನು ಬದಲಾಯಿಸಲು ಪ್ರಯತ್ನ ಬೇಡಿ ಎಂದು ಹೇಳಿದೆ.

ನೋಡಿ ಉಪವಾಸದಿಂದ ನಾನು ಬದುಕಿ ಉಳಿಯುವುದು ಕಷ್ಟ ಎಂದು ವೈದ್ಯರು ಹೇಳಿದರು. ಆದರೆ ನನ್ನ ಒಳಗಿನ ಧ್ವನಿ ಬದುಕುವೆ, ಮುಂದುವರಿ ಎಂದು ಹೇಳಿತು. ನನ್ನ ಬಾಳಿನಲ್ಲಿ ಅಂತಹ ಅನುಭವ ಅದರಿಂದ ಈಚೆಗೂ ಅದಕ್ಕಿಂತ ಮುಂಚೆಯೂ ಆಗಿಲ್ಲ.

ಡಾ|| ಮಾಟ್—ಇದು ಯಾವ ಪಿಶಾಚಿಯ ಪ್ರೇರಣೆಯೂ ಅಲ್ಲ. ಅಲ್ಲವೇ ?

ಗಾಂಧಿಜಿ—ಎಂದಿಗೂ ಇಲ್ಲ. ಅದು ತಪ್ಪು ಎಂದು ನನಗೆ ತೋರಿಲ್ಲ. ನನ್ನ ಬಾಳಿನಲ್ಲಿ ನಡೆದ ಅಧ್ಯಾತ್ಮ ಉಪವಾಸವೆಂದರೆ ಅದು. ದೇವರನ್ನು ಎದುರಿಗೆ ನೋಡಲು ಸಾಧ್ಯವಿಲ್ಲ. ದೇಹವು ದೇವರ ದೇವಾಲಯ ಎಂದು ಅದನ್ನು ಆದರಿಸುವುದು ಬೇರೆ. ಚರ್ಮ ಮಾಂಸಗಳ ದೇಹವೆಂದು ದಂಡಿಸುವುದು ಬೇರೆ. ಒಂದಕ್ಕೊಂದಕ್ಕೆ ಸಂಬಂಧವಿಲ್ಲ.

## ಮೌನ

ಡಾ|| ಮಾಟ್‌ರು ೧೯೩೬ನೆಯ ಇಸವಿಯ ಬೇಟಿಯಲ್ಲಿ ಮೌನದಮೇಲೆ ಪ್ರಶ್ನೆ ಹಾಕಿ ಆ ಭೇಟಿ ಮುಕ್ತಾಯಗೊಳಿಸಿದ್ದರು. ೧೯೨೮ರಲ್ಲಿ ಅಹಮುದಾಬಾದಿಗೆ ಒಂದುಗಳಿಗೆ ಮಟ್ಟಿಗೆ ಬಂದಿದ್ದಾಗಲೂ ಇದೇ ಪ್ರಶ್ನೆ ಹಾಕಿದ್ದರು. ಈಗಲೂ ಅವರು ನಿಮ್ಮ ಆತ್ಮಸಾಧನೆಗೆ ಮೌನ ಅವಶ್ಯಕವೆಂದು ನಿಮಗೆ ತೋರುವುದೇ ಎಂದರು.

ಗಾಂಧಿಜಿ—ನಾನು ಈಗ ಯಾವಾಗಲೂ ಮೌನಿ. ಈಗ ಸ್ವಲ್ಪ ದಿನಗಳ ಕೆಳಗೆ ನಾನು ಎರಡು ತಿಂಗಳು ಪೂರ್ಣವಾಗಿ ಮೌನಿಯಾಗಿದ್ದೆ. ಅದರ ಮಾಟ ನನ್ನನ್ನು ಇನ್ನೂ ಬಿಟ್ಟಿಲ್ಲ. ನೀವು ಬಂದಾಗ ನಾನು ಮೌನ ದಿಂದ ವಿಮುಖನಾದೆ. ಈಚೆಗೆ ನಾನು ಪ್ರತಿ ಸಂಧ್ಯಾ ಕಾಲವೂ ಪ್ರಾರ್ಥನೆಯ ವೇಳೆಯಲ್ಲಿ ಮೌನವನ್ನು ಅವಲಂಬಿಸುತ್ತೇನೆ. ಮರುದಿನ ಎರಡು ಘಂಟೆಗೆ, ಸಂದರ್ಶನಾರ್ಥವಾಗಿ ಬಂದವರಿಗಾಗಿ ಮೌನದಿಂದ ವಿಮುಖನಾಗುತ್ತೇನೆ. ಈನತ್ತು ನೀವು ಬಂದಾಗ ಮೌನ ಬಿಟ್ಟೆ. ಈಗ ಅದು ನನಗೆ ದೇಹ ಮತ್ತು ಆತ್ಮಕ್ಕೆ ಅವಶ್ಯಕವಾಗಿ ಬಿಟ್ಟಿದೆ. ಮೌನ ವನ್ನು ಪ್ರಾರಂಭಿಸಿದಾಗ ಕೆಲಸದ ಒತ್ತಡಕ್ಕಾಗಿ ಹಾಗೆ ಮಾಡಿದೆ. ಆಗ ಬರೆಯುವ ಕೆಲಸಕ್ಕೆ ಕಾಲಾವಕಾಶ ಬೇಕಾಗಿದ್ದಿತು. ಹೀಗೆ ಮೌನವನ್ನು ಕೆಲವುಕಾಲ ಪ್ರಾರಂಭಿಸಿದ ಮೇಲೆ ನನಗೆ ಅದರ ಆಧ್ಯಾತ್ಮ ಬೆಲೆ ಗೊತ್ತಾಯಿತು. ದೇವರೊಂದಿಗೆ ಸಂಬಂಧ ಬೆಳಸಲು ಅದು ಉತ್ತಮವಾದ ಕಾಲವೆಂಬುದು ನನ್ನ ಮನಸ್ಸಿಗೆ ಇದ್ದಕ್ಕಿದ್ದಂತೆ ಹೊಳೆಯಿತು. ಈಗ ನನ್ನ

ಸ್ವಭಾವವೇ ಮೌನವೆಂದು ನನಗೆ ತೋರುತ್ತಿದೆ. ನಾನು ಬಾಲ್ಯದಿಂದಲೂ ಮೌನಿಯಾಗಿದ್ದೆ. ಪಾಠಶಾಲೆಯಲ್ಲಿ ನನ್ನನ್ನು ಮಿತ್ರರು ಮೂಕನೆನ್ನುತ್ತಿದ್ದರು. ಲಂಡನ್‌ನಲ್ಲಿಯೂ ಹಾಗೆಯೇ.

ಡಾ|| ಮಾಟ್—ನಿಮ್ಮ ಮಾತಿನಿಂದ ನನಗೆ ಬೈಬಲ್‌ನ ಎರಡು ವಾಕ್ಯಗಳು ಜ್ಞಾಪಕ ಬರುತ್ತವೆ.

"ನನ್ನ ಆತ್ಮವೇ, ದೇವರಿಗಾಗಿ ಮೌನವಾಗಿರು"

"ಭಗವಂತ ಮಾತನಾಡು. ನಿನ್ನ ಸೇವಕ ಕೇಳುತ್ತಿದ್ದಾನೆ,"

ಡಾ|| ಮಾಟ್—ನನ್ನ ಅತ್ಯಂತ ಗದ್ದಲದ ಕಾಲದಲ್ಲಿ ಸಹ ನಾನು ಶಾಂತಿಗಾಗಿ ಮೌನವನ್ನು ಹುಡುಕಿದ್ದೇನೆ. ಮೌನಕ್ಕಾಗಿ ಸಮುದ್ರಯಾನ ಸಹ ಮಾಡಿದ್ದೇನೆ ಈಗ ರೇಡಿಯೋ ಬಂದು, ಸಮುದ್ರ ಪ್ರಯಾಣದಲ್ಲಿ ದೊರೆಯುತ್ತಿದ್ದ ಮೌನದ ಸುಖವನ್ನು ಸಹ ಕದ್ದಿದೆ. ಆದರೆ ಮೌನವಾದ ಪ್ರಾರ್ಥನೆ ಒಬ್ಬನ ಸ್ವಗತ ಭಾಷಣವಲ್ಲ. ಅದು ಇಬ್ಬರ ಸಂಭಾಷಣೆ. ಯಾಕೆಂದರೆ ನಾವು ಭಗವಂತನ ಮಾತನ್ನು ಕೇಳಲು ಮೌನವಾಗಿರುವಾಗಮಾತ್ರ ದೇವರು ನಮ್ಮೊಂದಿಗೆ ಮಾತನಾಡುತ್ತಾನೆ."

ಆದರೆ ಕಾಲ ಮುಗಿಯುತ್ತಾ ಬಂದಿದ್ದಿತು. ಆಗಲೇ ಇತರ ಸಂದರ್ಶನಾರ್ಥಿಗಳು ಬರತೊಡಗಿದ್ದರು. ಡಾ|| ಮಾಟರು ಹೀಗೆ ಹೇಳಿಕೊಂಡು ಎದ್ದರು. ಗೊತ್ತಾಗಿದ್ದುದಕ್ಕಿಂತ ಹೆಚ್ಚು ಕಾಲ ಇದ್ದು ಬಿಟ್ಟೆ ಅದಕ್ಕಾಗಿ ವಿಷಾದ. ನಿಮ್ಮೊಂದಿಗೆ ಇರುವಾಗ ನನಗೆ ಕಾಲ ಮರತೆಹೋಗುತ್ತದೆ. ನನ್ನ ಕೃತಜ್ಞತೆ ಬಾಯಲ್ಲಿ ಹೇಳಲಾರದಷ್ಟು ಹೆಚ್ಚಾಗಿದೆ."

೧೦-೧೨-೧೯೩೮.

---

## ೧೭. ಸೇವಾಗ್ರಾಮದ ಸುದ್ದಿಗಳು.

ಸೇವಾಗ್ರಾಮದ ಸರಳವಾದ ಒಂದೇ ಸಮನಾದ ಗದ್ದಲವಿಲ್ಲದ ಬಾಳಿನಲ್ಲಿ, ಅದರಲ್ಲಿಯೂ ಇಲ್ಲಿ ಕಾಲರಾ ಇರುವಾಗ, ಅತಿ ವೃಷ್ಟಿ ಬೆಳೆಗಳನ್ನು ನಾಶಮಾಡುತ್ತಿರುವಾಗ, ಪತ್ರಿಕೆಗಳ ಸುದ್ದಿಗಳಿಗೆ ಆಳಾಗಲು ನಮಗೆ ಎಲ್ಲಿ

ಅವಕಾಶ ? ಆದರೆ ಈ ಪತ್ರಿಕೆಗಳ ಪ್ರಸಿದ್ಧಿ ನಮ್ಮ ಮೇಲೆ ಬಲಾತ್ಕಾರವಾಗಿ ಆಗುತ್ತಿದೆ. ನಾಗಪುರದ ಪ್ರಜೆಗಳ ಪ್ರತಿನಿಧಿಗಳೆಂದುಕೊಂಡು ಕೆಲವು ಯುವಕರು ಬಂದು ನಮ್ಮ ಮೇಲೆ ಪ್ರಶ್ನೆಗಳ ಸುರಿಮಳೆ ಕರೆದರು. ಈಗ ಕೆಲವು ಹರಿಜನ ಮಿತ್ರರು ಸತ್ಯಾಗ್ರಹಿಗಳೆಂದುಕೊಂಡು ಶನಿವಾರ ಇಲ್ಲಿ ಬಂದು ಗಾಂಧಿಯವರಿಂದ ತಮಗೆ ನ್ಯಾಯ ದೊರಕಬೇಕೆಂದು ಕುಳಿತಿದ್ದಾರೆ. ಮಧ್ಯಪ್ರಾಂತ್ಯದ ಮಂತ್ರಿ ಮಂಡಲದಲ್ಲಿ ಒಬ್ಬ ಹರಿಜನರಮಂತ್ರಿ ಇರಬೇಕೆಂಬುದು ಅವರ ಗುರಿ. ಗಾಂಧಿಯವರು ಮೌನದಲ್ಲಿದ್ದಾರೆ. ಆದರೆ ಅವರು ಬಂದವರನ್ನು ಸ್ವೀಕರಿಸಿ "ಬರವಣಿಗೆಯ ಉತ್ತರಗಳಿಂದ ನಿಮಗೆ ಸಮಾಧಾನವಾಗುವುದೆ?" ಎಂದು ಕೇಳಿದರು. ಬಂದವರು ಸಮಾಧಾನವಾಗುವುದೆಂದರು. "ನಿಮ್ಮ ಭೇಟಿಯ ಉದ್ದೇಶವೇನು" ಎಂದು ಗಾಂಧಿ ಕೇಳಿದರು. ಬಂದವರ ಮುಖಂಡ ಹೀಗೆ ಹೇಳಿದ "ನಿಮಗೆ ಎಚ್ಚರಿಕೆ ಕೊಟ್ಟೆವು. ಒಬ್ಬ ಹರಿಜನರನ್ನು ಮಂತ್ರಿಯಾಗಿ ನೀವು ನಿಯಮಿಸದಿದ್ದಲ್ಲಿ ನಿಮ್ಮ ಸೇವಾಗ್ರಾಮಕ್ಕೆ ಬಂದು ಸತ್ಯಾಗ್ರಹ ಹೂಡುವೆವೆಂದು. ನೀವು 'ಬೇಡ' ಎಂದು ನಮಗೆ ಬರೆದಿರಿ. ನಾವು ತಡೆದೆವು. ಮತ್ತೆ ನಿಮಗೆ ಬರೆದೆವು ನಿಮ್ಮಿಂದ ಪ್ರತ್ಯುತ್ತರ ಬರಲಿಲ್ಲ. ನಮ್ಮ ವಾಗ್ದಾನದಂತೆ ನಡೆಸಲು ಬಂದಿದ್ದೇವೆ."

ಗಾಂಧಿ ಹೀಗೆ ಬರೆದರು—ನಿಮಗೆ ಬೇಕಾದ್ದುದೇನು ? ಸತ್ಯಾಗ್ರಹವೆಂದರೆ ನಿಮ್ಮ ಅರ್ಥವೇನು ?

"ಮಂತ್ರಿಮಂಡಲದಲ್ಲಿ ಒಬ್ಬ ಹರಿಜನ ಇರಬೇಕು. ಮುಸಲ್ಮಾನರೊಬ್ಬರು ಇರುವಂತೆ ಹರಿಜನರಿಗೆ ಜಾಗ ಕಾಯ್ದು ಇರಬೇಕು."

"ಆದರೆ ಅದು ನನ್ನ ಕೈಯಲ್ಲಿಲ್ಲವಲ್ಲ".

"ಇದೆ, ಯರವಾಡದಲ್ಲಿ ಹರಿಜನರಿಗಾಗಿ ಪ್ರಾಣ ಕೊಡಲು ನೀವು ಸಿದ್ಧರಾಗಿದ್ದಿರಿ. ಆದರಿಂದ ಯರವಾಡ ಒಪ್ಪಂದವಾಯ್ತು. ಹರಿಜನರಿಗೆ ನೀವು ಎಲ್ಲವನ್ನೂ ಮಾಡಬಲ್ಲಿರಿ."

"ನನ್ನ ಕೈಲಿ ಆದದ್ದನ್ನೆಲ್ಲಾ ನಾನು ಮಾಡುತ್ತಿದ್ದೇನೆ. ಅದಿರಲಿ ಆದರೆ ನೀವು ಸತ್ಯಾಗ್ರಹವೆನ್ನುತ್ತೀರಲ್ಲ. ಅದರೆ ಅರ್ಥವೇನು?"

" ನಾಗಪುರದಿಂದ ಮತ್ತೊಂದು ಪಂಗಡ ಬಂದು ನಮ್ಮನ್ನು ಬಿಡುಗಡೆ ಮಾಡುವವರೆಗೆ ನಾವು ಇಲ್ಲಿ ಊಟವಿಲ್ಲದೆ ಇರುತ್ತೇವೆ. "

"ನೀವು ಹಾಗೆ ಮಾಡಲು ನಿಮಗೆ ಸ್ವಾಗತ. ನಾನು ನಿಮಗೆ ಸ್ಥಳ ಕೊಡಬೇಕು. ಇಲ್ಲಿ ಇರುವ ಜಾಗ ನಮಗೇ ಸಾಲದು. ಆದರೆ ನೀವು ಎಲ್ಲಿ ಕುಳಿತುಕೊಳ್ಳುತ್ತೀರಿ ಹೇಳಿ. ಆ ಸ್ಥಳ ಬಿಡುವುಮಾಡಿ ಕೊಡುತ್ತೇವೆ. " ಎಂದು ಗಾಂಧಿ ಬರೆದರು.

ಅವರು—" ನಾವು ಉಪವಾಸಮಾಡುತ್ತೇವೆ. ಆ ಕಾಲದಲ್ಲಿ ನಮ್ಮ ಉಪಚಾರಕ್ಕೆ ೫-೬ ಜನ ನಮ್ಮ ಜತೆ ಇರಬೇಕು."

" ಅದು ನನಗೆ ಸಂಬಂಧಪಟ್ಟಿದ್ದಲ್ಲ. ನೀವು ಸ್ಥಳ ಆರಿಸಿಕೊಳ್ಳಿ ನಾವು ಅಲ್ಲಿ ಬಿಡುವು ಮಾಡಿಕೊಡುತ್ತೇವೆ."

ಬಂದಿದ್ದವರಿಗೆ ಆಶ್ರಮ ತೋರಿಸಲು ಒಬ್ಬ ಆಶ್ರಮವಾಸಿ ಅವರ ಜತೆ ಹೋದ. ಸ್ತ್ರೀಯರಿಗಾಗಿ ಕಾಯ್ದು ಇಟ್ಟಿದ್ದ ಗುಡಿಸಿಲಿನ ಮುಂದಲ ಕೊಠಡಿ, ಅದಕ್ಕೆ ಸಂಬಂಧಪಟ್ಟ ಅಂಗಳ ಇವುಗಳನ್ನು ಅವರು ಆರಿಸಿರುವ ರೆಂದು ಆತ ಬಂದು ಹೇಳಿದ.

ಗಾಂಧಿ ಹೀಗೆ ಬರೆದರು " ಆ ಕೊಠಡಿ ಸ್ತ್ರೀಯರಿಗಾಗಿ ಪ್ರತ್ಯೇಕ. ಬೇರೆ ಸ್ಥಳ ಆರಿಸಿಕೊಳ್ಳುವಂತೆ ಅವರಿಗೆ ಹೇಳು " ಆತ ಹಾಗೆ ಮಾಡಿದ. ಮುಂದಲ ಗಳಿಗೆಯಲ್ಲಿ ಬಂದು " ಬೇರೆ ಯಾವ ಸ್ಥಳವೂ ಅವರಿಗೆ ಬೇಡವಂತೆ " ಎಂದ. ಗಾಂಧಿ " ಹಾಗಾದರೆ ಅದನ್ನು ಖಾಲಿಮಾಡಿ. ಕಸ್ತೂರಿಬಾಗೆ ತೊಂದರೆ ಕೊಡುವುದು ಬೇಡ. ಆಕೆ ಬಂದು ನನ್ನ ಕೊಠಡಿಯಲ್ಲಿರಲಿ. ನಾನು ಅಲ್ಲಿಗೆ ಹೋಗುತ್ತೇನೆ ಅಥವ ಹೊರಗೆ ಆರ್ಯ ನಾಯಕರಿಗಾಗಿ ಕಟ್ಟಿರುವ ಮನೆಗೆ ಹೋಗುತ್ತೇನೆ. "

ಅನೇಕ ಕೊಠಡಿಗಳೂ ದೊಡ್ಡ ಅಂಗಳವೂ ಇರುವ ಈ ಆರ್ಯ ನಾಯಕರ ಮನೆಯನ್ನು ಹರಿಜನ ಸ್ನೇಹಿತರಿಗೆ ಕೊಡಲು ಒಪ್ಪಿದೆವು. ಆದರೆ ಅವರು ಕೇಳಲಿಲ್ಲ.

ಕಸ್ತೂರಿಬಾ ಒಳಗೆ ಬಂದು " ಸ್ತ್ರೀಯರಿಗಾಗಿಯೂ ನನಗಾಗಿಯೂ

ನೀವು ಕೊಂದರೆ ತೆಗೆದುಕೊಳ್ಳಬೇಡಿ. ನಾವು ಸ್ನಾನಕ್ಕೆ ಉಪಯೋಗಿಸುತ್ತಿರುವ ಕೊರಡಿ ಇವರು ಕೇಳಿರುವುದು. ಅದನ್ನೂ ಅದರ ಅಂಗಳವನ್ನೂ ಬಿಟ್ಟುಕೊಡುತ್ತೇವೆ. ನಾವು ಹೇಗೊ ಒಂದೇ ಕೊಠಡಿಯಲ್ಲಿ ಕಾಲ ಹಾಕುತ್ತೇವೆ.' ಅಂಗಳದ ಮಧ್ಯದಲ್ಲಿ ಒಂದು ಬಿದರಿನ ತಡಿಕೆ ಕಟ್ಟುತ್ತೇವೆ." ಎಂದು ನಗುತ್ತಾ ಹೇಳಿದರು. ಗಾಂಧಿಯವರಿಗೆ ಬಹಳ ಆನಂದವಾಯಿತು. ಅವರು ಹೀಗೆ ಬರೆದರು. "ಅವರನ್ನು ನಗುನಗುತ್ತಾ ಸ್ವಾಗತಿಸು. ಅವರಿಗೆ ಹೀಗೆ ಹೇಳು 'ನೀವು ನನ್ನ ಮಕ್ಕಳಂತೆ. ನಿಮಗೆ ಸ್ವಾಗತ'." ಆಕೆ "ಅವರು ನಿಮ್ಮ ಮಕ್ಕಳೆಂದು ಹೇಳಿ ನನ್ನಿಂದ ಸಾಧ್ಯವಿಲ್ಲ ನಾನೇನೋ ಅವರನ್ನು ನಗುತ್ತಾ ಸ್ವಾಗತಿಸುತ್ತೇನೆ" ಎಂದರು.

ಗಾಂಧಿ ನಗುತ್ತಾ "ಒಳ್ಳೆಯದು ಆಗಲಿ" ಎಂದು ಬರೆದರು.

ಹೀಗೆ ಅವರು ಇಲ್ಲಿದ್ದಾರೆ. ಅರ್ಧ ಡಜನ್ ಸತ್ಯಾಗ್ರಹಿಗಳೂ ಅವರ ಉಪಚಾರ ಮಾಡುವರೂ—ಅವರು ಗದ್ದಲ ಮಾಡದೆ ಶಾಂತರಾಗಿಯೇ ಇದ್ದಾರೆಂದು ಹೇಳಬೇಕು.

ಸಂಘ ಸಂಸ್ಕಾರಕನ ಮತ್ತು ಪ್ರಜಾಸೇವಕನ ಮಾರ್ಗ ಹೂವಿನ ಹಾಸಿಗೆಯಲ್ಲ. ಗಾಂಧಿಯವರ ಮಾರ್ಗವಂತೂ ಅಲ್ಲವೇ ಅಲ್ಲ ದಕ್ಷಿಣ ಆಫ್ರಿಕಾದಲ್ಲಿ ಅವರ ಮಿತ್ರರೇ ದ್ರೋಹಿ ಎಂದು ಅವರ ಮೇಲೆ ಒಂದು ಸಲ ಬಿದ್ದರು. ಇಲ್ಲಿ ಅವರನ್ನು ಹಿಂದು ಮತ ಶತ್ರು ಎನ್ನುತ್ತಾರೆ. ಇನ್ನೂ ಕೆಟ್ಟ ಹೆಸರಿನಿಂದ ಕರೆಯುತ್ತಾರೆ. ಈಚೆಗೆ, ಅವರು ತಮ್ಮ ಮೂರು ಸಹೋದ್ಯೋಗಿಗಳ ಮರಣಕ್ಕೆ ಕಾರಣರೆಂದು ಸಹ ಕೆಲವರು ಹೇಳುತ್ತಾರೆ. ಹೀಗೆ ಹೇಳುವವರು ಮಿತ್ರರೋ, ಶತ್ರುಗಳೋ, ಗಾಂಧಿಯವರು ವಿಚಲಿತರಾಗುವುದಿಲ್ಲ.

ಅವುಗಳಿಂದ ವಿಚಲಿತರಾಗದವರು ಈ ಹರಿಜನ "ಸತ್ಯಾಗ್ರಹ"ದಿಂದ ಯಾಕೆ ಬದಲಾಯಿಸುತ್ತಾರೆ. ಹರಿಜನರು ಅವರ ಬಂಧು, ಮಿತ್ರ ಬಳಗ. ಪಾಪ ಅವರ ತಪ್ಪು ಅಜ್ಞಾನ. ಜನರು ಇಷ್ಟು ನಿಶಾಚರಾಗಬಹುದೇ ಎಂದು ಎಂತಹ ಅಹಿಂಸಾವಾದಿಗೂ ಬೇಸರಿಕೆ ಹುಟ್ಟಿಸುವ ಆ ಅಪಪ್ರಚಾರಕರಗಿಂತ, ಇವರು ಎಷ್ಟೋ ಮೇಲು.

೩-೯-೧೯೩೮.

## ೧೮. ನಮ್ಮ ಕಾಲಕ್ಕೆ ನಾವು ದೇವರಿಗೆ ಹೊಣೆಗಾರರು

ನಮ್ಮ ಕಾಲಕ್ಕೆ ನಾವು ದೇವರಿಗೆ ಹೊಣೆಗಾರರು ಎಂದು ಗಾಂಧಿಯವರು ಅನೇಕರಿಗೆ ಅನೇಕವೇಳೆ ಹೇಳಿದುದನ್ನು ನಾನು ಈ ಪತ್ರಿಕೆಯಲ್ಲಿ ಬೇಕಾದಂತೆ ವರದಿಮಾಡಿದ್ದೇನೆ. ಆದರೆ ಆವತ್ತು ನಾನೇ ತಪ್ಪಿತಸ್ಥನಾದಾಗ ಈ ಪಾಠ ನನ್ನ 'ಹೃದಯಕ್ಕೆ ಚೆನ್ನಾಗಿ ಮುಂದಟ್ಟಾಯಿತು. ಇತರರನ್ನು ನೋಡಿ ನಾನು ಅನೇಕ ವೇಳೆ ನಕ್ಕಿದ್ದೇನೆ. ಈಗ ಅವರು ನನ್ನನ್ನು ನೋಡಿ ನಗಲಿ.

ಹೊರಕ್ಕೆ ನೋಡಿದರೆ, ಇದು ನಾನು ಫ್ರೆಂಚ್ ಭಾಷೆ ಕಲಿಯಲು ಹೇಗೆ ಪ್ರಾರಂಭಿಸಿ ಮುಕ್ತಾಯ ಮಾಡಿದೆ ಎಂಬುದರ ಕಥೆ. ಆದರೆ ನಿಜವಾಗಿ ಅದು ನನ್ನ ಅವಮಾನ ಮತ್ತು ನಾಚಿಕೆಯ ಕತೆ "ನಿನಗೆ ಎಷ್ಟು ಹೆಚ್ಚಾಗಿ ತಿಳಿದಿದೆಯೋ ನಿನ್ನ ತಪ್ಪಿಗೆ ಅಷ್ಟು ಹೆಚ್ಚು ಶಿಕ್ಷೆ" ಎಂಬ ನೀತಿಗೆ ಅನುಸಾರವಾಗಿ, ನನ್ನ ಅವಮಾನ ನಾಚಿಕೆ ಇನ್ನೂ ಹೆಚ್ಚು. ನಾನು ಸೆರೆಮನೆಗೆ ಹೋದಂದಿನಿಂದ ಫ್ರೆಂಚ್ ಭಾಷೆ ಕಲಿಯಬೇಕು ಎಂಬ ಆಸೆ ನನಗೆ ಇದ್ದಿತು. ಆದರೆ ಉರ್ದುವನ್ನು ನ್ಯಾಯವಾಗಿ ಕಲಿಯುವುದು ನನ್ನ ಕರ್ತವ್ಯ. ಇದಕ್ಕೆ ಅನುಕೂಲವೂ ಇದ್ದುದರಿಂದ ಕಲಿತೆ. ನಮ್ಮ ರಾಷ್ಟ್ರಭಾಷೆಯಾದ ಉರ್ದು ಅಥವ ಹಿಂದುಸ್ತಾನಿ ಕಲಿಯುವುದು ಕರ್ತವ್ಯ ಎಂಬುದು ನನಗೆ ಗೊತ್ತಿದ್ದಿತು. ಆದರೆ ಫ್ರೆಂಚನ್ನು ಕಲಿಯುವ ಆಸೆ ಬಿಟ್ಟಿರಲಿಲ್ಲ. ಸಮಯ ಸಿಕ್ಕಿದಾಗ ಅದು ತಲೆ ಎತ್ತುತ್ತಿದ್ದಿತು. ನಮ್ಮ ಆಶ್ರಮಕ್ಕೆ ಮಿಸ್ ಸ್ಲೇಡ್ ಬಂದಕೂಡಲೇ ನನಗೆ ಅಂತಹ ಸಮಯ ಸಿಕ್ಕಿತು. ನಾನು ತತ್‌ಕ್ಷಣ ಅದರ ಉಪಯೋಗ ಪಡೆದೆ. ಆಕೆ ಸೇವೆಮಾಡುವುದಕ್ಕೆ ತ್ಯಾಗಕ್ಕೆ ಬಂದಿದ್ದಾಳೆಯೋ ಹೊರತು ತೆಗೆದುಕೊಳ್ಳಲು ಬಂದಿಲ್ಲ. ನನ್ನಿಂದ ನಿಮಗೆ ಆಗಬಹುದಾದ ಸೇವೆ ಮಾಡಲು ನನಗೆ ಸಂತೋಷ ಎಂದು ಆಕೆ ಹೇಳಿದಕೂಡಲೇ, ನಾನು ಫ್ರೆಂಚ್ ಕಲಿಯಬೇಕೆಂಬ ಆಸೆ ಇದೆಯೆಂದು ಹೇಳಿದೆ. ಆಕೆ, ಅದಕ್ಕೇನು ಆಗಲಿ ಎಂದಳು. ನಾನು ಸ್ವಲ್ಪವು ಯೋಚಿಸದೆ ಫ್ರೆಂಚ್ ವ್ಯಾಸಂಗ

ಪ್ರಾರಂಭಿಸಿದೆ. ಸುಲಭವಾದ ಕ್ರಿಯೆಗಳು, ಅವ್ಯಯ ಇವುಗಳ ಮೊದಲನೆಯ ಪಾಠ ಆಯಿತು. ನಾನು ಬಹಳ ಉತ್ಸಾಹದಿಂದಲೇ ಎರಡನೆಯದಿನದ ಪಾಠಕ್ಕೆ ಹೋದೆ. ಒಂದು ದಿವಸ ಓದಿದುದರಿಂದಲೇ ಸಣ್ಣ ಸಣ್ಣ ವಾಕ್ಯಗಳ ಅರ್ಥವಾದುದರಿಂದ ನನಗೆ ಹೆಮ್ಮೆಯುಂಟಾಯಿತು. ನಾನು ಪಾಠ ಕಲಿಯುತ್ತಿರುವುದು ಗಾಂಧಿಯವರಿಗೆ ಗೊತ್ತೇ ಎಂದು ನನ್ನ ಶಿಕ್ಷಕಳನ್ನು ಕೇಳಿದೆ. ಆಕೆ 'ಗೊತ್ತು' ಅವರಿಗೆ ವಿನೋದವೂ ಆಶ್ಚರ್ಯವೂ ಆಯಿತೆಂದು ಹೇಳಿದರು ಎಂದಳು. ಆಶ್ಚರ್ಯ ಎಂಬುದನ್ನು ಕೇಳಿದಕೂಡಲೆ ನನಗೆ ಒಂದು ವಿಧವಾದ ಗಾಬರಿಯುಂಟಾಯಿತು. ಮುಂದೆ ಏನಾಗ ಬಹುದೆಂದು ನಾನು ಊಹಿಸಲು ಪ್ರಾರಂಭಿಸಿದೆ. ಎರಡನೆಯ ಪಾಠ ಇನ್ನೂ ಮುಗಿಯುತ್ತಿರುವಾಗಲೇ ಗಾಂಧಿಯವರಿಂದ ಕರೆ ಬಂದಿತು.

ನಾನು ಭಯದಿಂದ ನಡುಗುತ್ತಾ ಹೋದೆ. ಆದರೆ ಅಲ್ಲಿ ಮುಂದೆ ನಡೆದುದಕ್ಕೆಲ್ಲ ಸಿದ್ಧನಾಗಿರಲಿಲ್ಲ. ಸಾಮಾನ್ಯವಾದ ಒಂದೆರಡು ಮಾತು ಗಳು ಆದವು. ನನ್ನ ತಪ್ಪಿನಿಂದಲೇ ನನ್ನ ಮನಸ್ಸು ಹೇಡಿಯಾಗಿದೆ ಎಂದು ತಿಳಿದೆ. ಭಯಕ್ಕೆ ಕಾರಣವಿಲ್ಲ ಎಂದು ನಾನು ಸಮಾಧಾನಪಟ್ಟು ಕೊಳ್ಳುವುದರೊಳಗಾಗಿಯೇ ಬಿರುಗಾಳಿ ಎದ್ದಿತು. ಗಾಂಧಿ ತಮ್ಮ ಕೋಪವನ್ನೆಲ್ಲಾ ನುಂಗಿಕೊಂಡು ನಗುತ್ತಲೇ, ಫ್ರೆಂಚ್ ಕಲಿಯಲು ಪ್ರಾರಂಭಿಸಿಬಿಟ್ಟೆ ಎಂದರು. ನಾನು ಹೌದು ಎನ್ನುವಂತೆ ನಕ್ಕೆ. "ನೆನ್ನೆ ನೀನು ಅವಳೊಂದಿಗೆ ಈ ಕಾಲ ಗೊತ್ತು ಮಾಡಿಕೊಂಡುದ್ದನ್ನು ನೋಡಿ ನೀನು ಆಕೆಗೆ ಹಿಂದಿ ಹೇಳಿಕೊಡುತ್ತಿ ಎಂದು ನಾನು ತಿಳಿದಿದ್ದೆ. ಆದರೆ ಈ ಬೆಳಿಗ್ಗೆ ನಿನ್ನ ಕಾಲ ಹೇಗೆ ಕಳೆದೆ ಎಂದು ಕೇಳಿದಾಗ ಆಕೆ ನಿನಗೆ ಒಂದುಗಂಟೆ ಫ್ರೆಂಚ್ ಹೇಳಿಕೊಟ್ಟೆ ಎಂದಳು. ಅವಳಿಗೆ ಏನು ಹೇಳಿದೆ ಗೊತ್ತೆ" ಎಂದರು ನಗುತ್ತಲೇ. ನಾನು ಹೌದು ನಿಮಗೆ "ವಿನೋದವೂ ಆಶ್ಚರ್ಯವೂ. ಆಯಿತೆಂದು ಆಕೆ ಹೇಳಿದಳು" ಎಂದೆ. ಗಾಂಧಿ ಹೀಗೆ ಹೇಳಿದರು. ನಾನು ಅವಳಿಗೆ ಹೇಳಿದುದನ್ನು ನಿನಗೆ ಹೇಳುತ್ತೇನೆ. "ಜೂಲಿಯಸ್ ಸೀಜರ್ ಕಿರೀಟಕ್ಕೆ ಗುರಿಯಿಟ್ಟ. ಆದರೆ ಜಯಶಾಲಿಯಾಗ ಲಿಲ್ಲ." ಸರಿ, ಅನಂತರ ಪ್ರಶ್ನೆಗಳ ಸುರಿಮಳೆಯೇ ಪ್ರಾರಂಭವಾಯಿತು. ನೀನು ಫ್ರೆಂಚ್ ಯಾಕೆ ಕಲಿಯಲು ಪ್ರಾರಂಭಿಸಿದೆ ? ಫ್ರೆಂಚ್ ವಿದುಷಿ ಯಾದಮಿಸ್ ಸ್ಲೇಡ್ ಇಲ್ಲಿರುವುದರಿಂದಲೇ ? ಅಥವ ಫ್ರೆಂಚ್ ಭಾಷೆಯ

ಮೂಲದಲ್ಲಿ ರೋಮೇನ್ ರೋಲೆಂಡರ ಗ್ರಂಥಗಳನ್ನು ಒದುವುದಕ್ಕೋ ? ಅಥವಾ ನಮ್ಮ ಫ್ರೆಂಚ್ ಪತ್ರವ್ಯವಹಾರ ಓದುವುದಕ್ಕಾಗಿಯೋ."

"ಇಲ್ಲ. ಫ್ರೆಂಚ್ ಕಲಿಯಬೇಕೆಂದು ನನಗೆ ಬಹುದಿನದಿಂದ ಆಸೆ ಇದ್ದಿತು. ಫ್ರೆಂಚ್ ಕಲಿತಿರುವ ಸ್ನೇಹಿತರು ಅದು ಸುಲಭವಾದ ಭಾಷೆ. ಆದರಿಂದ ಪ್ರಯೋಜನವೂ ಇದೆ. ಎಂದು ಹೇಳಿದರು. "

ಗಾಂಧಿ ಈಗ ಕೋಪದಿಂದಲೇ· ಹೇಳಿದರು "ಎಲ್ಲಾ ಇಂಗ್ಲಿಷ ರಿಗೂ ಫ್ರೆಂಚ್ ಬರುವುದಿಲ್ಲ. ನಿನಗೆ ಗೊತ್ತೇ ? ಅತ್ಯುತ್ತಮರಾದ ಇಂಗ್ಲಿಷಿನವರೂ ಫ್ರೆಂಚ್ ಗ್ರಂಥಗಳನ್ನು ಇಂಗ್ಲಿಷ್ ಅನುವಾದದಲ್ಲಿ ಓದಿ ತೃಪ್ತಿಪಡುತ್ತಾರೆ. ಅನೇಕ ಫ್ರೆಂಚ್ ಗ್ರಂಥಗಳು ಫ್ರೆಂಚ್ ಭಾಷೆ ಯಲ್ಲಿ ಅಚ್ಚಾದ ಕೂಡಲೇ ಇಂಗ್ಲಿಷಿನಲ್ಲಿಯೂ ಅಚ್ಚಾಗಿ ಬಿಡುತ್ತವೆ."

ಒಂದೆರಡು ನಿಮಿಷ ನಿಶ್ಯಬ್ದ.

ಅದನ್ನು ಕಲಿಯಲು ನಿನಗೆ ಎಷ್ಟು ದಿನ ಬೇಕಾಗಬಹುದು ?

ಸುಮಾರು ಆರು ತಿಂಗಳು ಎಂದು ಹೇಳುತ್ತಾರೆ.

ನಿತ್ಯ ಎಷ್ಟು ಗಂಟೆ ?

ಒಂದು ಗಂಟೆ.

ಪ್ರತಿದಿನವೂ ?

ಹೌದು.

ನಾವು. ಪ್ರವಾಸದಲ್ಲಿರುವಾಗ ನಿತ್ಯ ಒಂದು ಗಂಟೆ ದೊರಕುತ್ತದೆ ಎಂದು ಭಾವಿಸುವೆಯಾ ?

ಇಲ್ಲ. ಆದರೆ ರೈಲಿನಲ್ಲಿ ಮೋಟಾರಿನಲ್ಲಿ, ಪ್ರಯಾಣಮಾಡುತ್ತಿರು ವಾಗಲೇ ಸ್ವಲ್ಪ ಕಾಲ ಗಿಟ್ಟಿಸಿಕೊಳ್ಳುತ್ತೇನೆ.

ನಿಜವಾಗಿಯೂ ?

ನಾನು ಪ್ರತ್ಯುತ್ತರ ಕೊಡಲು ಅನುಮಾನಿಸಿದೆ.

" ಈಗ ನೀನು ಫ್ರೆಂಚ್ ಕಲಿಯಲು ಪ್ರಾರಂಭಿಸಿರುವುದರಿಂದ ನಾನು ನಿತ್ಯ ಒಂದು ಗಂಟೆ ನಿನಗೆ ಬಿಡುವು ಮಾಡಿಕೊಡಬೇಕು "

ನನಗೆ ಸಹಿಸಲಸಾಧ್ಯವಾಯಿತು. ನಾನು ಶ್ರದ್ಧೆಯಿಂದ " ನನಗೆ

ಹೇಗೋ ಕಾಲ ಸಿಕ್ಕುತ್ತೆ, ನೀವು ಬಿಡುವು ಮಾಡಿಕೊಡಬೇಕಾದುದಿಲ್ಲ" ಎಂದೆ.

ಗಾಂಧಿ ಸಂಗತಿ ಮನಸ್ಸಿಗೆ ನಾಟುವಂತೆ "ನಿನಗೆ ಕಾಲ ಸಿಕ್ಕುವುದಿಲ್ಲ, ನೀನು ಕಾಲವನ್ನು ಕದಿಯುವೆ" ಎಂದರು

ನಾನು ಮಾತನಾಡಲಿಲ್ಲ.

ನಿನಗೆ ಹಾಗೆ ತೋರುವುದಿಲ್ಲವೆ ? ಎಂದರು ಗಾಂಧಿ ನನ್ನ ಪಶ್ಚಾತ್ತಾಪವನ್ನು ನಿರೀಕ್ಷಿಸಿ. ನಾನು "ಹೌದು. ನಾನು ಫ್ರೆಂಚ್ ಭಾಷೆಗೆ ವಿನಿಯೋಗಿಸುವ ಕಾಲವನ್ನೂ ನೂಲುವುದಕ್ಕೆ ಕೊಡಬಹುದು" ಎಂದೆ. ಗಾಂಧಿ "ಹೌದು ಇನ್ನೂ ಬೇಕಾದ ಕೆಲಸಗಳಿವೆ. ನಾವು ಜೀವನ ಮರಣದ ಹೋರಾಟದಲ್ಲಿ ಕಾದುತ್ತಿರುವಾಗ, ಫ್ರೆಂಚ್ ಕಲಿಯುವುದೆಂದರೇನು ? ಸ್ವರಾಜ್ಯ ಬಂದ ಮೇಲೆ ಎಷ್ಟು ಬೇಕಾದರೂ ಫ್ರೆಂಚ್ ಓದು ಆದರೆ ಅಲ್ಲಿಯವರೆಗೆ—"

ನಾನು ಪಶ್ಚಾತ್ತಾಪದಿಂದ "ಇಂದಿನಿಂದ ಬಿಟ್ಟೆ" ಎಂದೆ. ತಪ್ಪು ಮನ್ನಿಸಿದರು. ಹೋಗೋಣ ಎಂದು ನಿರೀಕ್ಷಿಸಿದೆ. ಗಾಂಧಿ "ಆವಾದನೆಗಳ ಪಟ್ಟಿ ಇನ್ನೂ ಮುಗಿದಿಲ್ಲ. ಮಿಸ್ ಸ್ಲೇಡ್ ಎಲ್ಲಾ ಬಂಧನಗಳನ್ನೂ ತೊರೆದು ಇಲ್ಲಿಗೆ ಬಂದಿದ್ದಾಳೆಂಬುದು ನನಗೆ ಗೊತ್ತೆ ? ನಮ್ಮ ಹೋರಾಟಕ್ಕೆ ಆಕೆಯ ತ್ಯಾಗ ನಮ್ಮೆಲ್ಲರ ತ್ಯಾಗಕ್ಕಿಂತ ಹೆಚ್ಚು ಎಂಬುದು ನಿನಗೆ ಗೊತ್ತೆ ? ಆಕೆ ಇಲ್ಲಿ ವಿಷಯಗಳನ್ನು ಅರಿತು, ತನ್ನ ಕಾಲ ಶಕ್ತಿಯನ್ನೆಲ್ಲಾ, ನಮ್ಮವರ ಸೇವೆಗೂ ಆ ಮೂಲಕ ತನ್ನ ದೇಶದವರ ಸೇವೆಗೂ ವಿನಿಯೋಗಿಸಲು ಬಂದಿದ್ದಾಳೆ. ಆಕೆಯ ದೇಶದಲ್ಲಿ ಏನೇ ಆದರೂ ತನ್ನ ಗುರಿಯನ್ನು ಆಕೆ ಬಿಡುವುದಿಲ್ಲ. ಎಂಬುದು ನಿನಗೆ ಗೊತ್ತೆ ? ಆಕೆಯ ಪ್ರತಿ ಒಂದು ನಿಮಿಷವೂ ಅಮೌಲ್ಯವಾದುದು. ಆಕೆಗಾಗಿ ನಮ್ಮಿಂದ ಸಾಧ್ಯವಾದನ್ನೆಲ್ಲಾ ನಾವು ಮಾಡಬೇಕು. ನಮ್ಮ ವಿಷಯವೆಲ್ಲಾ ಅವಳಿಗೆ ತಿಳಿಯಬೇಕು. ಆಕೆ ಹಿಂದುಸ್ಥಾನಿ ಕಲಿಯಬೇಕು ತನ್ನ ಕಾಲದ ಪೂರ್ಣವಾದ ಉಪಯೋಗ ಆಕೆ ಮಾಡಿಕೊಳ್ಳಲು ನಾವು ಅವಕಾಶಕೊಡದೆ ಇದ್ದರೆ ಇದು ಹೇಗೆ ಸಾಧ್ಯ ? ಆಕೆಯೇನೋ ನಮಗೆ ಸಹಾಯಮಾಡಲು ಸಿದ್ಧಳಾಗಿರಬಹುದು. ಆದರೆ ನಮ್ಮಿಂದ ಸಾಧ್ಯವಾದಷ್ಟನ್ನು ಆಕೆಗೆ ಮಾಡು

ವುದು ನಮ್ಮ ಕರ್ತವ್ಯ. ನಮ್ಮ ಕಾಲವೇನೋ ಪವಿತ್ರವಾದುದು. ಆದರೆ ಇಲ್ಲಿ ಅದು ಇನ್ನೂ ಹೆಚ್ಚು ಪವಿತ್ರವಾದ ಹೊಣೆಗಾರಿಕೆ. ಫ್ರೆಂಚ್ ಕಲಿಯುವ ಭೋಗ ಅನುಭವಿಸುವ ಬದಲು ನೀನು ಆಕೆಗೆ ಹಿಂದಿ, ಸಂಸ್ಕೃತ ಮುಂತಾದ ಯಾವುದಾದರೂ ವಿಷಯ ಒಂದುಗಂಟೆ ಹೇಳ ಬೇಕೆಂದು ನಿರೀಕ್ಷಿಸುತ್ತೇನೆ."

ನಾನು ಪ್ರತ್ಯುತ್ತರ ಹೇಳುವುದು ಏನೂ ಇರಲಿಲ್ಲ. ನಾಚಿಕೆಯಿಂದ ತಲೆ ತಗ್ಗಿಸಿದೆ. ನಾನು ಮಾತನಾಡದೇ ಇದ್ದುದೇ ನನ್ನ ತಪ್ಪಿನ ಒಪ್ಪಿಗೆ. ನಾನು ಮಾಡಿಕೊಳ್ಳಬಹುದಾದ ಪ್ರಾಯಶ್ಚಿತ್ತ ಯಾವುದು ? ಗಾಂಧಿಯವ ರನ್ನು ಕೇಳುವುದು ವಿವೇಕವಲ್ಲ. ನನಗೇ ಅದು ಹೊಳೆಯಬೇಕು ಎಂದು ಕೊಂಡೆ. ಆದರೆ ಅವರು ಶಾಶ್ವತವಾದ ಕರುಣೆಯಿಂದ ನನ್ನನ್ನು ಆಗಲೇ ಕ್ಷಮಿಸಿ ಆಗಿದ್ದಿತು. ಪ್ರಾಯಶ್ಚಿತ್ತವನ್ನು ಅವರೇ ಸೂಚಿಸಿದರು. ಸರಿ, ನಾಳೆ ಇದೇ ವೇಳೆಗೆ ಹೋಗಿ ನಿನ್ನ ತಪ್ಪನ್ನು ಆಕೆಗೆ ಹೇಳು. ಫ್ರೆಂಚ್ ಬದಲು ಹಿಂದೀ ಗೀತೆಗಳನ್ನು ಅವಳೊಂದಿಗೆ ಪ್ರಾರಂಭಿಸು."

೨೬-೧೧-೧೯೨೫.

---

## ೧೯ ವೇಗವು ಗ್ರಾಮ ಸಂಸ್ಕೃತಿಗೆ ವಿರೋಧವಾದುದು.

ಕೆಲವು ವರುಷಗಳ ಹಿಂದೆ ಲಂಡನ್ ಟೈಮ್ಸ್ ಪ್ರತಿಕೆಯು ಕೆಲವು ಲೇಖನಗಳನ್ನು ಪ್ರಕಟಿಸಿತು. ಲೇಖಕರ ಅನುಭವದ ಅರ್ಧಶತಮಾನದಲ್ಲಿ ಇಂಗ್ಲೆಂಡಿನ ಜೀವನದಲ್ಲಿ ನಡೆದ ಬದಲಾವಣೆಗಳು ಆ ಲೇಖನಗಳಲ್ಲಿ ಪ್ರಕಟವಾದುವು. ಲಾರ್ಡ್ ಎರ್ನಲ್ ಎಂಬುವರು ಹಳ್ಳಿಗಳನ್ನು ಕುರಿತು ಒಂದು ಲೇಖನ ಬರೆದರು. ವೇಗದಿಂದ ಉಂಟಾಗಿರುವ ಅನಾಹುತ ಗಳನ್ನು ಕುರಿತು ಆತ ಹೇಳಿರುವ ಮಾತುಗಳು ಗಮನಾರ್ಹವಾಗಿವೆ. ಗ್ರಾಮಪುನರುಜ್ಜೀವನದಲ್ಲಿ ವೇಗದ ಪ್ರವೇಶಮಾಡಿಸುವವರು ಆ ಮಾತು ಗಳನ್ನು ಜ್ಞಾಪಕದಲ್ಲಿಡುವುದು ಒಳ್ಳೆಯದು. ಭೂಮಿಯಿಂದ ೧೭,೦೦೦೦೦೦ ಜನರಿಗೆ ಧಾನ್ಯವೂ, ಇಂಗ್ಲೆಂಡಿನ ಎಲ್ಲಾ ಪ್ರಜೆಗಳಿಗೂ ಮಾಂಸವೂ

ದೊರೆಯುತ್ತ ೧೧,೦೦೦೦೦ ಹಳ್ಳಿಯವರಿಗೆ ಕೆಲಸ ದೊರೆತಿದ್ದ ಆ ಕಾಲ ವ್ಯವಸಾಯಗಾರರ ಸ್ವರ್ಣ ಯುಗ ಎಂದು ಆತ ಹೇಳುತ್ತಾನೆ. "ಜನರು ಉಳುವುದು, ಬೀಜಬಿತ್ತುವುದು, ಪೈರು ರೇಖೆಮಾಡುವುದು ಇವುಗಳನ್ನೆಲ್ಲಾ ಪುರಾಣಕಾಲದಲ್ಲಿ ಮಾಡುತ್ತಿದ್ದಂತೆ ೧೮೫೫ ರಲ್ಲಿಯೂ ಮಾಡುತ್ತಿದ್ದರು. ಆ ದಿನಗಳು ಕಳೆದುಹೋದವು. ಭೂಮಿಯಿಂದ ಆ ಕೋಟಿ ಸಂಖ್ಯೆಯ ಜನರಿಗೆ ಆಹಾರ ದೊರೆಯುತ್ತಿಲ್ಲ. ಅವರಲ್ಲಿ ಒಂದು ಅಲ್ಪ ಭಾಗಕ್ಕೆ ಸಹ ಮಾಂಸ ದೊರೆಯುತ್ತಿಲ್ಲ. ಇದಕ್ಕೆ ವೇಗವೆಂಬ ಪಿಶಾಚಿಯೇ ಕಾರಣ. ಲಾರ್ಡ್ ಎರ್ನಲ್ ಹೀಗೆ ಹೇಳುತ್ತಾರೆ.

"ಈ ವಿಧವಾದ ವ್ಯತ್ಯಾಸಗಳನ್ನು ಒಂದುಮಾತಿನಲ್ಲಿ ಹೇಳಬೇಕಾದರೆ ಅದು " ವೇಗ ". ವೇಗ ಈ ಯುಗದ ದೇವರು. ವೇಗ ಹಳ್ಳಿಯ ಬಾಳಿಗೆ ಹೊಸ ಚೈತನ್ಯವನ್ನೂ ಹುರುಪನ್ನೂ ತುಂಬುತ್ತಿದೆ. ಬಾಳಿನ ಚಲನೆ ಮೊದಲಿಗಿಂತ ವೇಗವಾಗಿದೆ. ಈ ವೇಗವನ್ನು ನಿರ್ಣಯಿಸುವವನು ನೇಗಿಲ ಸಾಲನ್ನು ಲೆಕ್ಕಮಾಡುತ್ತಿರುವ ರೈತನಲ್ಲ. ಈ ವ್ಯತ್ಯಾಸದಿಂದ ಬಹಳ ಲಾಭವಾಗಿದೆ ಎಂಬುದು ನಿಜವಾದರೂ ರೈತ, ಜಮೀನುದಾರ, ಪಾದ್ರಿ ಅವರಮೇಲೆ ಅವಲಂಬಿಸಿರುವ ವ್ಯಾಪಾರಿ, ಮುಂತಾದ ಜಮೀನು ಅವಲಂಬಿಗಳಿಗೆ ಈ ವೇಗ ಬರಿಯ ಶುಭವೇ ಅಲ್ಲ. ಒಂದು ಕೈಯಿಂದ ವೇಗ ರೈತನಿಗೆ ಒಳ್ಳೆಯದನ್ನು ಉಂಟುಮಾಡುತ್ತಿದೆ. ವೇಗದಿಂದ ಅವನ ಕೆಲಸ ಬೇಗ ಆಗುತ್ತದೆ, ಖರ್ಚು ಕಡಿಮೆಯಾಗುತ್ತದೆ. ಹವದಿಂದ ಉಂಟಾಗುವ ಕಿರುಕುಳಗಳನ್ನು ತಪ್ಪಿಸುತ್ತದೆ. ಆದರೆ ನಾಶವಾಗುವ ಪದಾರ್ಥಗಳನ್ನು ಜಗತ್ತಿನ ಒಂದುಕಡೆಯಿಂದ ಮತ್ತೊಂದುಕಡೆಗೆ ಒಂದು ನಿಮಿಷದಲ್ಲಿ ತಂದು ರೈತನ ಗಿರಾಕಿಯನ್ನು ನಾಶಮಾಡುವುದೂ ಈ ವೇಗವೇ. ವೇಗ ಅನೇಕ ಮಾರ್ಗದಿಂದ ಹಳ್ಳಿಗಳ ಜೀವನವನ್ನು ಹೆಚ್ಚು ಸುಖಮಯವಾಗಿ ಮಾಡಿದೆ. ಆದರೆ ವ್ಯವಸಾಯದಮೇಲೆ ಅವಲಂಬಿಸಿರುವವರ ಬಾಳು ಹೆಚ್ಚು ಕಷ್ಟವಾಗಿದೆ. ಆದರೆ ಹಳ್ಳಿಗಾಡಿನ ಸ್ವಾಭಾವಿಕಶಕ್ತಿಗೂ, ಈ ವೇಗಕ್ಕೂ ವಿರೋಧ. ಯಂತ್ರಗಳೂ ಯಂತ್ರಜೀವಿಗಳೂ ತನ್ನ ನಡೆಯನ್ನು ತೀವ್ರಗೊಳಿಸಲು ಪ್ರಕೃತಿ ಒಪ್ಪುವುದಿಲ್ಲ. ಪ್ರಕೃತಿ ತಯಾರಿಸುವ ಪದಾರ್ಥಗಳನ್ನು ಮನುಷ್ಯ ಎಷ್ಟು ವೇಗವಾಗಿ ಬೇಕಾದರೂ ಸಾಗಿಸಿಕೊಂಡು ಹೋಗಬಹುದು. ಆದರೆ ಸೃಷ್ಟಿಯಲ್ಲಿ ಪ್ರಕೃತಿ ಆತುರವನ್ನು

ಸಹಿಸುವುದಿಲ್ಲ. ಅದು ನಿಧಾನವಾಗಿಯೇ ಹೋಗುತ್ತದೆ. ಪ್ರಕೃತಿಯು ಈ ನಿಧಾನದಿಂದಲೇ, ಬೇಕಾದರೆ ಆಲಸಿಕೆಯಿಂದ ಎಂದೇ ಹೇಳಿಕೊಳ್ಳಿ, ಗ್ರಾಮಜೀವನಕ್ಕೆ ಒಂದು ಶಾಂತಿ, ಒಂದು ಗಾಂಭೀರ್ಯ, ಒಂದು ಸ್ವಾತಂತ್ರ್ಯ ಉಂಟಾಗಿದೆ. ಹಳ್ಳಿಯು ಈ ಪೃಥಕ್ಕಾದ ಆವಶ್ಯಕತೆಗಳನ್ನು ಪಟ್ಟಣದ ಪ್ರಯೋಜನಕ್ಕಾಗಿ ಬಲಿಕೊಟ್ಟರೆ, ಹಳ್ಳಿ ಪಟ್ಟಣದ ಬಡಬಂಧು ವಾಗುವುದು. ರೋಲ್ಸ್‌ರಾಯ್ಸ್ ಮೋಟಾರಿನ ಸಹಾಯವಿಲ್ಲದೆ ದನಕರು ಗಳು ಒಂದು ಕಡೆಯಿಂದ ಒಂದು ಕಡೆಗೆ ಹೋಗುತ್ತವೆಂಬುದನ್ನೂ ಕುದುರೆಗಳು "ಸ್ಕೇಟಿಂಗ್" ಆಟವಾಡುವ ಪಾದರಕ್ಷೆಗಳ ಮೇಲೆ ಹೆಜ್ಜೆ ಯಿಡಲಾರವೆಂಬುದನ್ನೂ ಜ್ಞಾಪಕದಲ್ಲಿಟ್ಟು ಕೊಂಡರೆ ರಸ್ತೆಯ ಅಧಿಕಾರಿ ಗಳು ಬಹಳ ಖರ್ಚನ್ನು ಉಳಿಸಬಹುದು....

"ಹಳ್ಳಿಗಾಡಿನವರಿಗೆ ಉಂಟಾಗಿರುವ ಏಳಿಗೆಯೂ ಅವರಿಗೆ ದೊರೆತಿರುವ ಅನುಕೂಲಗಳೂ ಸಾಮಾಜಿಕವಾದ ಲಾಭ ಎಂಬುದು ನಿಜ. ಆದರೆ ಇವರಿಗೂ ರೈತರಿಗೂ ಜೀವನ ಸುಲಭವಾದಂತೆ ಕಷ್ಟವೂ ಆಗಿದೆ. ವ್ಯವಸಾಯ ಕ್ರಮ ಬದಲಾವಣೆಯಾದುದರಿಂದ ಆಹಾರ ಬೆಳೆಯುವ ಅನೇಕ ಭೂಮಿಗಳು ಹುಲ್ಲುಗಾವಲುಗಳಾಗಿವೆ. ರೈತನ ಕೆಲಸವನ್ನು ಯಂತ್ರಗಳು ಕಡಿಮೆಮಾಡಿವೆ. ಕೂಲಿಗಳ ಸಂಖ್ಯೆಯೂ ಕಡಿಮೆ ಯಾಗಿದೆ. ವ್ಯವಸಾಯಕ್ಕೆ ಕೂಲಿ ಬೇಕಿಲ್ಲ. ಆದರೆ ರಸ್ತೆಗಳಿಗೆ ಕೂಲಿ ಬೇಕಾಗಿರುವುದರಿಂದ ಈ ಕೊರತೆ ಮುಚ್ಚಿದೆ. ಆದರೆ ನಿರುದ್ಯೋಗ ಹೆಚ್ಚುತ್ತಿರುವ ಚಿಹ್ನೆಗಳಿವೆ."

ಹೀಗೆ, ಪ್ರಕೃತಿ ಆತುರವನ್ನು ಹೇಗೆ ಒಪ್ಪುವುದಿಲ್ಲವೊ ಹಾಗೆಯೇ ಹಳ್ಳಿಗಾಡು, ಇನ್ನೂ ಎಲ್ಲಿ ಹಳ್ಳಿಗಾಡಾಗಿಯೇ ಉಳಿದಿದೆಯೋ ಅಲ್ಲಿಯೂ ಆತುರಕ್ಕೆ ಎಡೆಯಿಲ್ಲ. ಆದುದರಿಂದ ಆಧುನಿಕ ಯಂತ್ರ ಕೈಗಾರಿಕಾ ಉಪಾಯಗಳಿಂದ ಹಳ್ಳಿಗಳನ್ನು ಆತುರಗೊಳಿಸಬೇಡಿ. ಹಾಗೆ ಅದನ್ನು ಆತುರಗೊಳಿಸಿದರೆ ಅದನ್ನು ಕೊಂದಂತೆ.

## ಶಾಂತಿ ಮತ್ತೆ ದೊರೆಯಬೇಕಾದರೆ

ಇದೇರೀತಿ, ಆದರೆ ಇನ್ನೂ ಹೆಚ್ಚು ಅಧಿಕಾರಯುಕ್ತವಾದ ವಾಣಿ ವೈದ್ಯಶಾಸ್ತ್ರದಲ್ಲಿಯೂ ಪ್ರತಿಧ್ವನಿ ಎಬ್ಬಿಸಿತು. ಆ ಲೇಖಕರು ಲಾರ್ಡ್

ಹೋರ್ಡ್ರ್ ಎಂಬುವರು. ಲಾರ್ಡ್ ಎರ್ನ್ಲ್ರವರು ಕೈಯಿಂದ ಉಳು ವುದು, ಬಿತ್ತುವುದು, ಒಕ್ಕುವುದು, ಇವು ಮರೆಯಾದುದಕ್ಕಾಗಿ ಪಶ್ಚಾತ್ತಾಪ ಪಡುವಂತೆ ಲಾರ್ಡ್ ಹೋರ್ಡ್ರ್ ಅವರು ಆರೋಗ್ಯದೃಷ್ಟಿಯಿಂದ ಕೈಯ್ಯಲ್ಲಿ ನೂಲುವುದು, ಗುದ್ದಲಿಯಿಂದ ಅಗೆಯುವುದು, ಮರೆಯಾಯಿತಲ್ಲಾ ಎಂದು ಕೊರಗುತ್ತಾರೆ. ಈ ಕಾಲದಲ್ಲಿ ನಮಗೆ ನಿಪುಣರಾದ ವೈದ್ಯರ ಮಾತು ವೇದವಾಕ್ಯ. ಅವರು ಬೋಧಿಸುವ ಪೇಟೆಂಟ್ ಔಷಧಿ ಇಂಜಕ್ಷನ್ ಮುಂತಾದುವನ್ನೆಲ್ಲಾ ನಾವು ಅನುಕರಿಸುತ್ತೇವೆ. ಹಾಗಾದ ಮೇಲೆ ಇಂಗ್ಲಿಷ್ ವೈದ್ಯದಲ್ಲಿ ಅತ್ಯಂತ ಪ್ರಸಿದ್ಧರಾದ ಲಾರ್ಡ್ ಹೋರ್ಡ್ರ್ ಅವರ ಉಪದೇಶವನ್ನು ಕೇಳಬೇಕಲ್ಲವೆ? ಅವರು "ಈವ್ ಕನ್ಯೆ ನೂಲನ್ನು ತೆಗೆದಕಾಲದಲ್ಲಿ" ಎಂಬ ಹೆಸರಿನಲ್ಲಿ ಕೊಟ್ಟ ಮನೋರಂಜಕವಾದ ಉಪನ್ಯಾಸದಲ್ಲಿ ಹೀಗೆ ಹೇಳಿದರು.

"ಆ ಆದರ್ಶವಾದ ಕಾಲದಿಂದ ನಾವು ಬಹಳ ಈಚೆಗೆ ಬಂದೆವು. ಆ ದಾರಿ ಬಿಟ್ಟು ಎಲ್ಲೆಲ್ಲೋ ತಿರುಗಿದೆವು. ಆ ಕಾಲ ಮತ್ತೆ ಹಿಂದಿರುಗಬೇಕೆಂದು ನಾನು ಹೇಳುವುದಿಲ್ಲ. ನಗ್ನ ವಾದಿಗಳು ಆ ಕಾಲಕ್ಕಿಂತ ಸ್ವಲ್ಪ ಹಿಂದಕ್ಕೇ ಹೋಗಿದ್ದಾರೆ. ನಾನು ಹೇಳಬೇಕಾಗಿರುವುದು ಇದು. ಗುದ್ದಲಿ ಕೈರಾಟೆ ಮರೆಯಾದಂತೆ ಅವುಗಳ ಜತೆಯಲ್ಲಿ ನಮ್ಮ ಶಾಂತಿ ಸಮಾಧಾನಗಳು ಮರೆಯಾದವು. ನಾನು ಇಲ್ಲಿ ಏಳಿಸುವುದು ಎರಡು ಪ್ರಶ್ನೆಗಳು. ಇದು ಆವಶ್ಯಕವೇ? ನಮ್ಮ ದೇಹ ಮತ್ತು ಮನಶ್ಶಾಂತಿ ನಾಶವಾಗಿರುವುದರ ಕಾರಣ, ನಮ್ಮ ಇಂದಿನ ಜೀವನದಲ್ಲಿರುವ ದೋಷವಲ್ಲವೆ? ನಿಮ್ಮಲ್ಲಿ ಕೆಲವರಿಗೆ ಈ ಶಾಂತಿ ಎಂಬ ಮನೋಹರವಾದ ಪದದ ಧ್ವನಿಯೇ ಅಪರೂಪವಾಗಿ ತೋರಬಹುದು. ಆದರೆ ಅದರ ಅರ್ಥ ನಿಮಗೆ ಹೊಳೆಯುದೇ ಇರುವುದಿಲ್ಲ. ಆ ಮಾತಿನಲ್ಲಿಯೇ ಅದರ ಅರ್ಥವೂ ಅಡಗಿದೆ. ನಮ್ಮ ದೇಶದ ಪ್ರತಿವ್ಯಕ್ತಿಗೂ ಶಾಂತಿ ಹೋಯಿತು ಆ ಕಾರಣದಿಂದಲೇ ರಾಷ್ಟ್ರಗಳಿಗೂ ಶಾಂತಿ ಹೋಯಿತು. ಇಂದಿನ ನನ್ನ ಉಪನ್ಯಾಸ ಇದು. ಈ ಕಳೆದು ಹೋದ ಶಾಂತಿಯನ್ನು ನಾವು ಮತ್ತೆ ಸಂಪಾದಿಸುವವರೆಗೆ ನಮ್ಮ ಬಾಳಿಗೆ ಏನೂ ಗುರಿಯೇ ಇಲ್ಲ. ನಾನು ಮೊದಲೇ ಹೇಳಿದಂತೆ ಅಗೆಯುವವರ ಸಂಖ್ಯೆ ತೀರಕಡಿಮೆ; ನೂಲುವ ಸ್ತ್ರೀಯರ ಸಂಖ್ಯೆ ಆದಕ್ಕೂ ಕಡಿಮೆ.

ಯಂತ್ರಗಳು ಎರಡನ್ನೂ ಮಾಡುತ್ತಿವೆ. ನಾವು ಒಂದು ಗುಂಡಿ ಅಮುಕುತ್ತೇವೆ. ಒಂದು ಕೀಲು ತಿರುಗಿಸುತ್ತೇವೆ. ಸರಿ ನಮ್ಮಗೆ ಅನ್ನ ಬಟ್ಟೆ ದೊರೆಯುತ್ತದೆ. ನಮ್ಮ ಆಹಾರ ವಸ್ತುಗಳಿಗಾಗಿ ನಾವು ಪುರಾಣಗಳ ಕಾಲವನ್ನು ಅನುಸರಿಸಬೇಕಾಗಿಲ್ಲವೆಂದು ನಾನು ಹೇಳಿದೆ. ಆದರೆ ಆಧುನಿಕ ಸ್ತ್ರೀ ಪುರುಷರಿಗೆ ಅಪರೂಪವಾದ ಹೊಸದಾದ ಭಾವಗಳ ಮತ್ತು ಯೋಚನೆ ಗಳ ಅನುಭವ ಬೇಕಾದರೆ, ಅವರು ಒಂದು ಗಂಟೆ ರಾಟೆಯನ್ನೋ ಗುದ್ದಲಿ ಯನ್ನೋ ಹಿಡಿದುಕೊಂಡು ಕೆಲಸಮಾಡಬೇಕೆಂದು ಹೇಳುತ್ತೇನೆ. ಹೊಸ ಹೊಸ ಅನುಭವ ಈಗ ಜನರಿಗೆ ಬೇಕಾಗಿರುವುದರಿಂದ ಈ ಹೊಸದನ್ನು ಕಂಡು ಹಿಡಿದುದಕ್ಕೆ ನನ್ನನ್ನು ನೀವು ವಂದಿಸುವಿರೆಂದು ನಿರೀಕ್ಷಿಸುತ್ತೇನೆ ಆದರೆ ಇದರ ಮುಖ್ಯ ಕಷ್ಟ ಇದು. ಈ ಹೊಸ ಅನುಭವ ಬೇಕಾದವರಿಗೆ ಈ ಕಾರ್ಯದಲ್ಲಿ ಮೊದಲನೆಯ ಐದು ನಿಮಿಷಗಳ ನಂತರವೇ ದಣಿವು ಪ್ರಾರಂಭ ವಾಗುವುದು. ತಮ್ಮ ಕಾಲವನ್ನು, "ಬೆಲೆಯಾದ ಕಾಲವನ್ನು" ವ್ಯರ್ಥ ಮಾಡಿದ ಭಾವ ಅವರಿಗೆ ಬರುವುದು. ಆದುದರಿಂದ ಅವರು ಆ ಐದು ನಿಮಿಷಗಳ ನಂತರವೇ ಅದನ್ನು ನಿಲ್ಲಿಸಿ ಬಿಡುವರು.

"ನಾನು ಹೇಳಿದಂತೆ ನಮ್ಮ ಬಾಳಿನ ಆವಶ್ಯಕತೆಗಳು ಯಂತ್ರ ಗಳಿಂದ ಪೂರೈಕೆಯಾಗುತ್ತಿವೆ. ದೇಹಶ್ರಮವನ್ನು ಉಳಿಸುವ ನಮ್ಮ ಉಪಾಯಗಳು ಪೂರ್ಣ ಫಲಕಾರಿಯಾಗಿರುವುದರಿಂದ ನಮಗೆ ಒಂದು ಮಾರ್ಗವಲ್ಲ ಮತ್ತೊಂದು ಮಾರ್ಗದಿಂದ ಬೇಕಾದಷ್ಟು ಕಾಲಾವಕಾಶ ದೊರೆಯುತ್ತಿದೆ. ಹೀಗೆ ಉಳಿಸಿಕೊಂಡ ಕಾಲವನ್ನು ನಾವು ಏನುಮಾಡು ತ್ತಿದ್ದೇವೆ? ಬುದ್ಧಿಗೆ ಯಾವಾಗಲೂ ಕೆಲಸ ಕೊಡುತ್ತಿರುವ ನಮ್ಮಲ್ಲಿ ಕೆಲವರು, ಇನ್ನೂ ಹೆಚ್ಚು ಕಾಲ ಉಳಿಸುವ ಹೊಸ ಹೊಸ ಯಂತ್ರಗಳನ್ನು ತಯಾರಿಸಿರುವುದರಲ್ಲಿ ತೊಡಗಿದ್ದೇವೆ. ಆದರೆ ಜನತೆಯ ಬಹುಭಾಗ ಸೋಮಾರಿಗಳಾಗಿದೆ, ಬೇಜಾರನ್ನು ಕಳೆದುಕೊಳ್ಳುವ ಉಪಾಯ ಹುಡುಕುತ್ತದೆ. ಉಳಿದವರು ಕಾತರರಾಗಿದ್ದಾರೆ. ನಮಗೆ ದಿನದಿನವೂ ಹೊಸ ಹೊಸ ಪದಾರ್ಥ ಪರಿಚಯ ಅನುಭವ ಬೇಕೆಂದು ಹುಡುಕುತ್ತಿದ್ದೇವೆ. ಅವು ಮಾದಕ ದ್ರವ್ಯದಂತೆ ಗಳಿಗೆ ಗಳಿಗೆಯೂ ಹೆಚ್ಚು ಹೆಚ್ಚು ತೀವ್ರವಾಗ ಬೇಕಾಗಿದೆ. ನಾವು ಕಾತರರಾಗಿ ಪರಿಸ್ಥಿತಿಯನ್ನು ಅಪ್ಪುತ್ತಿದ್ದೇವೆ. ತತ್ವ

ಗಳಲ್ಲಿರುವ ನಮ್ಮ ನಂಬಿಕೆ ಮಾಯವಾಗಿ ಪರಿಸ್ಥಿತಿಗಳ ಮೇಲೆ ಅವಲಂಬಿಸಿದೆ. "

## ವಿಜ್ಞಾನವನ್ನು ಬಡವರಿಗಾಗಿ ಉಪಯೋಗಿಸಿ.

ಇವೆಲ್ಲಾ, ಬೆಳ್ಳಂ ಬೆಳಕಾಗಿರುವುದನ್ನೆ ಮತ್ತೆ ಸ್ಪಷ್ಟಪಡಿಸಿದಂತೆ ತೋರುತ್ತಿದೆ. ಆದರೆ ನಮ್ಮ ಬೇರು ಪೂರ್ಣವಾಗಿ ಸಡಿಲವಾಗುವುದಕ್ಕೆ ನಾವು ಅವಕಾಶ ಕೊಟ್ಟಿರುವುದರಿಂದ ಕಣ್ಣಿಗೆ ಕಾಣುವುದನ್ನು ವಿಜ್ಞಾನದ ಆಧಾರದ ಮೇಲೆಯೇ ಮತ್ತೆ ಸ್ಥಾಪಿಸಬೇಕಾಗಿದೆ. "ಆಹಾರಧಾನ್ಯ ಗಳನ್ನು ಅತಿಯಾಗಿ ಸಂಸ್ಕರಿಸಕೂಡದು. ವಿಜ್ಞಾನವನ್ನು ಬಡವರ ಸೇವೆ ಗಾಗಿ ಉಪಯೋಗಿಸಬೇಕು" ಎಂದು ಲಾರ್ಡ್ ಹಾರ್ಡರ್ ರವರು ಹೇಳಿರುವ ಮಾತುಗಳನ್ನು ಕೇಳಿ.

"ನಮ್ಮ ಹೊಸ ವಿಜ್ಞಾನ ಜ್ಞಾನದಿಂದ ನಮಗೆ ಈ ಸಹಾಯ ವಾಗುತ್ತದೆ. ಜನತೆಯಲ್ಲಿ ಯಾವ ಭಾಗಕ್ಕೆ ಪುಷ್ಟಿಯಾದ ಆಹಾರ ದೊರೆ ತ್ತಿಲ್ಲ. ಮತ್ತು ಯಾಕೆ ? ಎಂಬುದನ್ನು ಕಂಡು ಹಿಡಿಯಬಹುದು. ಈ ಕುಂದಕವನ್ನು ಸರಿಪಡಿಸುವುದು ಹೇಗೆ ಎಂಬುದನ್ನು ಕಂಡು ಹಿಡಿಯ ಬಹುದು. ಅದರಿಂದ ಕೆಲವು ಮುಖ್ಯ ತತ್ವಗಳು ಹೊರ ಹೊರಡುತ್ತವೆ. ಸಾದಾ ಆಹಾರ ಮತ್ತು ಕಡಿಮೆ ಆಹಾರ ಇರುವೆಡೆ ನಾವು ಅದನ್ನು ಕೆಣಕಲೇಬಾರದು. ಅದನ್ನು ಬೇಯಿಸುವುದರಲ್ಲಿಯಾಗಲಿ ಸಿದ್ಧಪಡಿಸುವದ ರಲ್ಲಿಯಾಗಲಿ ಅದರಲ್ಲಿ ಹೆಚ್ಚು ವ್ಯತ್ಯಾಸವುಂಟುಮಾಡಬಾರದು. ಪೂರ್ತಿ ಗೋಧಿಯಿಂದಲೇ ರೊಟ್ಟಿ ಮಾಡಬೇಕು. ಆಲೂಗೆಡ್ಡೆಯನ್ನು ಪೂರ್ಣವಾಗಿ ಬೇಯಿಸಬೇಕು. ಅಕ್ಕಿ ತೊಳಸದೆ ಪೂರ್ಣವಾಗಿರಬೇಕು. ಆದರೆ ಆಹಾರ ಪದಾರ್ಥಗಳು ಬಗೆ ಬಗೆಯವಾಗಿದ್ದರೆ ಒಂದರಲ್ಲಿರುವ ಕೊರತೆಯನ್ನು ಮತ್ತೊಂದರಿಂದ ಸರಿಪಡಿಸಕೊಳ್ಳಬಹುದು. ಹೀಗೆ ಎರಡು ಕ್ರಮದಲ್ಲಿಯೂ (ಬಡವರ ಆಹಾರ, ಧನಿಕರ ಆಹಾರ) ಪುಷ್ಟಿಯಾದ ಆಹಾರ ದೊರೆಯ ಬಹುದು. ವಿಜ್ಞಾನ ಬಡವರ ಆಹಾರ ಅವಶ್ಯಕತೆಗಳನ್ನು ಕಂಡುಹಿಡಿಯ ಬೇಕೆ ಹೊರತು ಧನಿಕನದನ್ನಲ್ಲ.

## ಭೂಮಿ ತಾಯಿಯೊಂದಿಗೆ ಹೆಚ್ಚು ಸಂಪರ್ಕ

ವೇಗ ಎಂಬ ಹುಚ್ಚು ನಮ್ಮ ಆರೋಗ್ಯವನ್ನು ನಾಶಮಾಡಿ ಭೂಮಿ

ಯೊಂದಿಗೆ ನಮ್ಮ ನಿತ್ಯ ಸಂಬಂಧ ಸಂಪರ್ಕವನ್ನು ಹೇಗೆ ಕಡಿಮೆ ಮಾಡಿದೆ ಎಂಬುದನ್ನು ನೋಡೋಣ. ಮುಂದಲ ಮಾತುಗಳನ್ನು ಹೇಳುವವರು, ಯಾರೋ ಹಳೆಯ ಕಾಲದ ಜೌಸ್ಟ್ ತರಹೆಯ ಅಂಧಃಶ್ರದ್ಧೆಯವರಲ್ಲ. ಆಧುನಿಕ ವೈದ್ಯ ನಿಪುಣರಾದ ಲಾರ್ಡ್ ಹೋರ್‌ಡರ್ ಅವರು !

" ನಮ್ಮಲ್ಲಿ ಅನೇಕರು ಪಟ್ಟಣಗಳಿಗೆ ಬಂದು ಬಿಟ್ಟಿದ್ದೇವೆ. ಪಟ್ಟಣಿಗ ರಾಗಿದ್ದೇವೆ. ವಿದ್ಯೆ ಕಲಿಯುವ ಮಕ್ಕಳಂತೆ ನಾವು ಅನೇಕ ಗಂಟೆಗಳ ಕಾಲ ಕುರ್ಚಿಯ ಮೇಲೆ ಮೇಜಿನ ಮುಂದೆ ಕೂರುತ್ತೇವೆ. ಕಾರ್ಖಾನೆ ಗಳಲ್ಲಿ, ಗಣಿಗಳಲ್ಲಿ, ಬ್ಯಾಂಕುಗಳಲ್ಲಿ ಕಛೇರಿಗಳಲ್ಲಿ ನಮ್ಮದು ಕೆಲಸ. ಈ ಅಸ್ವಾಭಾವಿಕವಾದ ಜೀವನ ಕ್ರಮದಿಂದ ನಮ್ಮ ಆಕಾರ ನಿಲುವು ಕೆಡು ತ್ತದೆ. ನಾವು ಆರೋಗ್ಯವಾಗಿರಬೇಕಾದರೆ ಅವುಗಳನ್ನೆಲ್ಲಾ ಸರಿಮಾಡಿ ಕೊಳ್ಳಬೇಕು. ನಮ್ಮ ಆಕಾರ ಮಾಂಸಖಂಡ ಅವುಗಳಿಂಗಿತಲೂ ಇನ್ನೂ ಮುಖ್ಯವಾದ ವಿಚಾರಗಳಿವೆ. ನಮ್ಮ ಶ್ವಾಶೋಚ್ಛ್ವಾಸ, ರಕ್ತಚಲನೆ, ಮಲವಿಸರ್ಜನೆ ; ನಾವು ಗಾಳಿ ಬೆಳಕು ಇಲ್ಲದ ಸಂಕುಚಿತವಾದ ಕೊಠಡಿ ಗಳಲ್ಲಿ, ಕೆಲಸಮಾಡುವಾಗ ಈ ಸ್ವಾಭಾವಿಕ ಕ್ರಿಯೆಗಳೆಲ್ಲಾ ಮಾರ್ಗ ತಪ್ಪಿ ನಡೆಯುತ್ತವೆ. ವಾರಕ್ಕೆ ಒಂದು ಸಲ ಯಾವಾಗಲಾದರೂ ನಾವು ಅವನ್ನೆಲ್ಲಾ ಸರಿಮಾಡಿ ಕೊಳ್ಳಬೇಕು. ನಮ್ಮ ಆರೋಗ್ಯವಾದ ದೇಹದಲ್ಲಿ ಮಾತ್ರ ಆರೋಗ್ಯವಾದ ಮನಸ್ಸನ್ನು ಇಟ್ಟುಕೊಳ್ಳಲು ಸಾಧ್ಯವಾದುದ ರಿಂದು ಈ " ಸರಿಪಡಿಸಿಕೊಳ್ಳುವುದು " ಅವಶ್ಯಕ. ನಮ್ಮ ಮುಖ್ಯವಾದ ಮನರಂಜನೆ ಸಿನಿಮಾ. ಸಿನಿಮಾ ಈ ನಮ್ಮ ದೇಹಕ್ಕೆ ಉಂಟಾಗಿರುವ ಕೊರೆಯನ್ನು ಹೋಗಲಾಡಿಸಲು ಏನೂ ಮಾಡುವುದಿಲ್ಲ. ಉಪ್ಪು, ಖಾರ ಹೆಚ್ಚಾಗಿ ಹಾಕಿ ರುಚಿ ರುಚಿಯಾಗಿ ಮಾಡಿರುವ ಆಹಾರಕ್ಕಿಂತ ಸ್ವಾಭಾವಿಕ ವಾದ ಆಹಾರದಿಂದ ನಮ್ಮ ದೇಹಕ್ಕೆ ಒಳ್ಳೆಯದಾಗುವಂತೆ, ಗರಡಿ, ಡ್ರಿಲ್, ಲಾಗ ಈ ವ್ಯಾಯಾಮಗಳಿಗಿಂತ, ಸ್ವಾಭಾವಿಕವಾಗಿ ಪ್ರಕೃತಿಯಲ್ಲಿ ಆನಂದ ವಾಗಿ ಮಾಡುವ ವ್ಯಾಯಾಮ ಹೆಚ್ಚು ಹಿತವಾದುದು."

" ಸಂಚಾರ (ಕಾಲು ನಡಿಗೆ) ಓಡಾಡುವುದು, ಬಯಲಿನಲ್ಲಿ ಆಡುವ ಎಲ್ಲಾ ಬಗೆಯ ಆಟಗಳು—ನಾವೇ ಅವುಗಳನ್ನು ಆಡಬೇಕು. ಸುಮ್ಮನೆ ಇತರರು ಆಡುವುದನ್ನು ನೋಡುತ್ತಾ ಕೂರುವುದಲ್ಲ ;—ಬೈಸಿಕಲ್ ಸವಾರಿ, ಈಜುವುದು, ತೋಟದ ವ್ಯವಸಾಯ, ಅಗೆಯುವುದು, ಬಿಸಿಲು, ಗಾಳಿ,

ಮಳೆ ಸಹ, ಇವೆಲ್ಲಾ ನನುಗೂ ಭೂಮಿಗೂ ಹೆಚ್ಚು ಸಂಪರ್ಕವುಂಟು ಮಾಡುತ್ತವೆ. ಡ್ರಿಲ್ ಉಪಾಧ್ಯಾಯರ ಅಪ್ಪಣೆ ಮೇಲೆ ನಾವು ಮಾಡುವ ವ್ಯಾಯಾಮಕ್ಕಿಂತ ನಮಗೆ ಹೆಚ್ಚು ಆರೋಗ್ಯವನ್ನು ಸುಖವಾಗಿ ಬೇಗ ಉಂಟುಮಾಡುತ್ತವೆ. ಈ ಸಂದರ್ಭದಲ್ಲಿ 'ವ್ಯಾಯಾಮ' ಎಂಬ ಕೂಗನ್ನು ಹೊರಡಿಸುವುದು ತಪ್ಪಾಗಲಾರದು."

## ೨೦. ಬ್ರಿಟಿಷ್ ಮತ್ತು ಅಮೆರಿಕನ್‌ರ ನಾಜಿಇಸಂ

ಡಾ|| ಜಾರ್ಜ್ ವಾಷಿಂಗ್ಟನ್ ಕಾರ್ವರ್ ಬಿಳಿಯವನಾಗಿ ಹುಟ್ಟಿದ್ದರೆ ಬೂರ್ ಬ್ಯಾಂಕ್, ಎಡಿಸನ್, ಕ್ಯೂರಿದಂಪತಿಗಳಷ್ಟೇ ಆತನ ಹೆಸರು ವಿಶ್ವವಿಖ್ಯಾತ ವಿಜ್ಞಾನಿಗಳೊಡನೆ ಸೇರುತ್ತಿದ್ದಿತು. ಆತ ಹುಟ್ಟಿದ್ದು ನಿಗ್ರೋ ಜಾತಿಯಲ್ಲಿ. ಅಂತೇ ವಿಜ್ಞಾನ ಪ್ರಪಂಚದಲ್ಲಿ ಆತ ಮಹಾ ಶೋಧನೆಗಳನು, ಮಾಡಿದ್ದರೂ, ಪೀ ನಟ್ (ಕಡಲೆಕಾಯಿ) ಆಲೂಗಡ್ಡೆಗಳ ಫಲ ಸಂಯೋಜನೆ ಮಾಡಿ ತೋರಿಸಿದ್ದರೂ, ಕಸದಿಂದ ನೆಲಕ್ಕೆ ಹಾಕುವ ಹೆಂಚು, ಹಲಿಗೆ ಮಾಡಿದ್ದರೂ, ಭೂಮಿಯ ಗುಣ ತೋರಿಸಿದ್ದರೂ ಇನ್ನೂ ಆತನಿಗೆ ನೀಗ್ರೋಗಳಿಗಾಗುವ ನಿತ್ಯಾಪಮಾನ ತಪ್ಪಿಲ್ಲ. ಈಗ ೮೦ ವರ್ಷಗಳ ಕೆಳಗೆ ಎಷ್ಟು ಅವಮಾನವೋ ಅಷ್ಟೇ ಈಗಲೂ. ಕಾರ್ವರ್ ಹುಟ್ಟಿದ್ದು ೧೮೬೪ ರಲ್ಲಿ. ಬ್ರಿಟನ್ನಿನ ಶೋಧಕಸಂಚಾರಿ ಸರ್ ಹ್ಯಾರಿ ಜಾನ್‌ಸ್ಟನ್ ಈತನ ಬಗ್ಗೆ ಹೀಗೆಂದಿದ್ದಾನೆ: "ಟಸ್ಕ್‌ಗೀಯಲ್ಲಿ, ಶಾಸ್ತ್ರೀಯ ವ್ಯವಸಾಯ, ಸಸ್ಯ ಶಾಸ್ತ್ರ, ವ್ಯಾವಸಾಯಿಕ ರಸಾಯನ ಶಾಸ್ತ್ರ ಬೋಧಿಸುತ್ತಿರುವ ಪ್ರೊ|| ಕಾರ್ವರ್ ಪಕ್ಕಾ ನೀಗ್ರೋ; ಆದರೆ ವಿಜ್ಞಾನದಲ್ಲಿ ಈತನಿಗಿರುವ ಪಾಂಡಿತ್ಯಕ್ಕೆ ಈತ ಟಸ್ಕ್‌ಗೀಯಲ್ಲಲ್ಲ, ಆಕ್ಸ್‌ಫರ್ಡ್ ಕೇಂಬ್ರಿಡ್ಜಿನಲ್ಲಿ ಪ್ರೊಫೆಸರನಾಗಿರಬೇಕಾಗಿತ್ತು. ಯಾವ ಮಹಾ ಐರೋಪ್ಯ ಸಸ್ಯಶಾಸ್ತ್ರಜ್ಞನೇ ಆದರೂ ಈತನೊಂದಿಗೆ ಹತ್ತುನಿಮಿಷ ಮಾತನಾಡಿದರೂ ಸಾಕು, ಸಮಾನಸ್ಕಂದನಂತೆ ನಡೆದುಕೊಳ್ಳುತ್ತಾನು." ಡಾ. ಕಾರ್ವರ್ ಆಗಾಗ ಗಾಂಧೀಜಿಗೆ ತನ್ನ ಲೇಖನಗಳನ್ನು, ಸಂದೇಶಗಳನ್ನು ಕಳಿಸುತ್ತಾರೆ. ಈಚೆಗೆ ಅಮೆರಿಕಾಕ್ಕೆ—ಹಾಗೇ ಟಸ್ಕ್‌ಗೀಗೂ ಹೋಗಿ ಬಂದ ಡಾ|| ಜಾನ್ ಡಾ|| ಕಾರ್ವರ್‌ರವರ ಕಾಗದ ತಂದರು. "ಈ ಸಂದೇಶ ಸ್ವೀಕರಿಸಲಾರೆ.

ಡಾ|| ಕಾರ್ವರ್‌ರೇ ಬಂದು ಕೊಟ್ಟರೆ ತೆಗೆದುಕೊಳ್ಳುತ್ತೇನೆ " ಎಂದರು ಗಾಂಧೀಜೀ ನಗುತ್ತ. ಡಾ|| ಜಾನ್‌ರು " ಭಾರತಕ್ಕೆ ಬರುವ ವಯಸ್ಸು ಕಳೆದುಹೋಗಿದೆ. ಡಾ|| ಕಾರ್ವರ್‌ಗೆ ಆದರೂ ಆತ ಬೆಳಿಗ್ಗೆ ೪ ಗಂಟೆಗೇ ಎದ್ದು ತೋಟದ ಕೆಲಸ ಮಾಡುತ್ತಾರೆ. ಭಾರತದಿಂದ ಯಾರಾದರೂ ಬಂದಾಗೆಲ್ಲಾ ಗಾಂಧೀಜೀಯವರನ್ನು ನೆನೆಸಿಕೊಳ್ಳುತ್ತಾರೆ. ಆತನದು ತುಂಬಾ ಸರಳ ಜೀವನ. ವಿನಯಪರ" ಎಂದರು. ಡಾ|| ಜಾನ್ ಕೆಲವು ದಿನಗಳವರೆಗೆ ಅವರನ್ನು ತೋಟದ ಮಾಲಿಯೆಂದೇ ತಿಳಿದಿದ್ದರು. ಡಾ|| ಕಾರ್ವರ್‌ರ ನೂತನ ಆಲೂಗಡ್ಡೆ ಪುಡಿ, ಇಪ್ಪತ್ತು ವರ್ಷ ಕೆಡದೆ ಇರಬಲ್ಲದು. ಡಾ|| ಕಾರ್ವರ್‌ರನ್ನು ಕುರಿತು ಗಾಂಧೀಜೀ ಕೇಳಿದ ಮೊದಲ ಪ್ರಶ್ನೆ " ಈ ಪ್ರತಿಭಾಶಾಲಿಗೂ ತಪ್ಪಿಲ್ಲ ತಾನೇ ವರ್ಣಬಹಿಷ್ಕಾರ !"

ಡಾ|| ಜಾನ್. "ತಪ್ಪಿಲ್ಲ, ಎಲ್ಲರ ಹಾಗೇ ಇವರೂ ಒಬ್ಬ ನೀಗ್ರೋನೇ" ಎಂದರು.

"ಇಷ್ಟಿದ್ದೂ ಈ ಜನ ಪ್ರಜಾಪ್ರಭುತ್ವ, ಸರ್ವ ಸಮತ್ವ ಎಂದು ಮಾತನಾಡುತ್ತಾರಲ್ಲ ! ಶುದ್ಧಮೋಸ" ಎಂದರು ಗಾಂಧೀಜೀ ಸಿಟ್ಟಾಗಿ. "ನಿಜ. ಆದರೆ ಡಾ|| ಕಾರ್ವರ್ ಈ ವಿಚಾರವಾಗಿ ಎಂದೂ ಅಸಮಾಧಾನ ಪಟ್ಟುಕೊಂಡಿಲ್ಲ."

"ನನಗೂ ಗೊತ್ತಿದೆ. ಅಹಿಂಸಾ ಭಕ್ತರಾದ ನಾವು ಅವರಿಂದ ಕಲಿಯಬೇಕಾದ ಪಾಠವೇ ಅದು. ಆದರೆ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿದೇವೆಂದು ಹೇಳಿಕೊಳ್ಳುವ ಈ ಜನರ ಮಾತಿಗೆ ಬೆಲೆ ಏನು ? "

" ಡಾ|| ಕಾರ್ವರ್ ಪಕ್ಕಾ ನೀಗ್ರೋ. ಸಮತ್ವ ಪ್ರಜಾ ತಂತ್ರ ಎಂಬ ಮಾತು ಬಿಳಿಯವರ ಬಾಯಿಂದ ಬಂದಾಗ ಅದು ಬಿಳಿಯವರಿಗೇ ಎಂದು ಅರ್ಥ ಮಾಡಿಕೊಳ್ಳಬೇಕು. ಅದೆಯೋ ಅಮೆರಿಕನ್ ನಾಜಿ ಇಸಂ ಎಂಬುದು. - ನವಂಬರ್ ೨೨ರ ಸ್ಟೇಟ್ಸ್‌ಮನ್ ಪತ್ರಿಕೆ ಈಗತಾನೆ ಬಂದಿದೆ. ಬ್ರಿಟಿಷ್ ನಾಜಿ ಇಸಂ ಏನು ಎಂಬುದು ಅದರಲ್ಲಿ ವರ್ಣಿತವಾಗಿದೆ. ದಕ್ಷಿಣ ರೊಡೇಸಿಯದ ಜಮೀನು ಹಿಡುವಳಿ ಕಾನೂನು ೧೯೪೧ ನೆ ಆಗಸ್ಟ್‌ನಲ್ಲಿ ಜಾರಿಗೆ ಬಂದಿತು. ಇದರಲ್ಲಿ ನಾಲ್ಕು ಕೋಟಿ ೯೦ ಲಕ್ಷ ಎಕರೆ ಭೂಮಿ ಬಿಳಿಯವರಿಗೆ ಮೀಸಲು, ಎರಡುಕೋಟಿ ೯೦ ಲಕ್ಷ ಎಕರೆ ದೇಶೀಯರಿಗೆ, ಉಳಿ

ದದ್ದು ಕಾಡು. ಇಂತವರೆಂದು ಗೊತ್ತಿಲ್ಲ. ಬಿಳಿಯವರಿಗೆ ಬಿಟ್ಟಿರುವ ಜಾಗದಲ್ಲಿ ದೇಶಿಯುವರು ಈಗ ಇದ್ದರೂ ೧೯೪೨ನೆಯ ವರುಷದೊಳಗೆ ಬಿಡಬೇಕು. ಇಲ್ಲದಿದ್ದರೆ ಯುರೋಪಿಯನ್‌ರಿಗೆ ಕೂಲಿಗಳಾಗಿರಬೇಕು. ಈ ೪೯ ಮಿಲಿಯನ್ ಎಕರೆ ಭೂಮಿ ೫೫ ಸಾವಿರ ಬಿಳಿಯವರಿಗೆ ; ಆದರೆ ಹನ್ನೊಂದು ಲಕ್ಷ ಆಫ್ರಿಕದವರಿಗೆ ೨೯ ಮಿಲಿಯನ್ ಎಕರೆ ಮಾತ್ರ. ಹೀಗೆ ಬ್ರಿಟಿಷ್ ಸರ್ಕಾರ, ಹತ್ತು ಲಕ್ಷ ಪ್ರಜೆಗಳಿಂದ ಅವರ ಜಮೀನನ್ನು ಕಿತ್ತುಕೊಂಡು ಅದನ್ನು ೫೫ ಸಾವಿರ ಬ್ರಿಟಿಷ್‌ರ ಉಪಯೋಗಕ್ಕೆ ಮೀಸಲು ಮಾಡಿದ್ದಾರೆ. ಆ ಹತ್ತುಲಕ್ಷ ಪ್ರಜೆಗಳೂ ಬ್ರಿಟಿಷರ ಪ್ರಜೆಗಳೇ. ಆದರೆ ಅವರ ಯೋಗಕ್ಷೇಮ ಇವರು ನೋಡುವುದು ಇಷ್ಟು ಚೆನ್ನ. ಪಾರ್ಲಿಮೆಂಟಿಗೆ ಈ ನಾಜೀ ನೀತಿ ತಡೆಯಲು ಅಧಿಕಾರವೇ ಇಲ್ಲ. ಇದು ಸಾಮ್ರಾಜ್ಯ ಅಂತರ್ಗತವಾದ ಎಲ್ಲಾ ಪ್ರಜೆಗಳೂ ಒಂದು ಎಂಬ ಬ್ರಿಟಿಷ್ ರಾಜನೀತಿಜ್ಞರು ತಪ್ಪದೆ ಕೂಗುತ್ತಿರುವ ಬೊಗಳಿಕೆಗೂ ವಿರೋಧ.

ಬಣ್ಣದ ಜನರ ಸಮಿತಿಯವರು ಬ್ರಿಟಿಷ್ ವಸಾಹತು ಕಾರ್ಯದರ್ಶಿಗೆ ಒಂದು ಅರ್ಜಿ ಕೊಟ್ಟರು. ಅದರಲ್ಲಿ , ಬ್ರಿಟಿಷರಿಗೆ ಮೀಸಲಾಗಿಟ್ಟಿರುವ ಜಮೀನು ಅತ್ಯುತ್ತಮ ಜಮೀನು ದೇಶೀಯರಿಗೆ ಬಿಟ್ಟಿರುವ ನೆಲದಲ್ಲಿ ನೊಣಜಾಸ್ತಿ ; ನೆಲ ಸಾಲದು, ನೀರಿನ ಸೌಕರ್ಯ ಕಡಿಮೆ. ಇದು ಬರಿಯ ವರ್ಣ ದ್ವೇಷಿ ಮಾತ್ರವಲ್ಲ. ದೇಶೀಯರನ್ನು ಬಿಳಿಯವರಿಗೆ ಗುಲಾಮರಾಗಿ ಮಾಡುವ ಪ್ರಯತ್ನ ಇದು. ಇದು ದೇಶಿಯರಿಗೆ ಹಿತವಾಗಿದೆ ಎಂದು ಹೇಳುವುದು ತಪ್ಪು. ಹಿಟ್ಲರ್ ಯುರೋಪಿನಲ್ಲಿ ತಾನು ಗೆದ್ದ ಶತ್ರುರಾಷ್ಟ್ರಗಳಲ್ಲಿ ಅನುಸರಿಸುತ್ತಿರುವ ನೀತಿಯೇ ಇದು. ಸರ್ಕಾರ ಬೇಕಾದಷ್ಟು ಸಹಾಯ ಮಾಡಿದರೂ ಬಿಳಿಯವರ ವ್ಯವಸಾಯ ಪ್ರಯತ್ನ ರೊಡೋಸಿಯದಲ್ಲಿ ಜಯಶಾಲಿಯಾಗಿಲ್ಲ. ಆದುದರಿಂದ ವಸಾಹತು ಕಾರ್ಯದರ್ಶಿ ಲಾಡ್ ಕ್ರಾನ್‌ಬೋರ್ನ್‌ರು ದೇಶವನ್ನೇ ಲೂಟಿಮಾಡಬೇಕೆಂದು ಹೊರಟ ಈ ಬಿಳಿಯುವರ ಗ್ಯಾಂಗನ್ನು (Gang) ಎದುರಿಸುವ ಎದೆಗಾರಿಕೆ ತೋರಿಸಬೇಕೆಂದೂ ಅರ್ಜಿಯಲ್ಲಿ ಬರೆದರು. ಆದರೆ ಕ್ರಾನ್‌ಬೋರನ್‌ರಿಗೆ ಆ ಎದೆಗಾರಿಕೆ ಇರಲಿಲ್ಲ. ಪ್ರಜಾತಂತ್ರ ಸಮಾನತೆಗಾಗಿ ಯುದ್ಧ ಮಾಡುತ್ತಿದ್ದೇವೆಂದು ಹೇಳುವ ಬೂಟಾಟಿಕೆಯ ಸರ್ಕಾರದ ಪ್ರತಿ

ನಿಧಿ ಈ ತತ್ತ್ವಗಳ ಚರ್ಚೆಯಿಂದ ಯಾವ ಪ್ರಯೋಜನವೂ ಇಲ್ಲ ಎಂದು ಉತ್ತರಕೊಟ್ಟರು.

೧೫-೨-೪೨.

---

## ೨೧ ಸಿಮ್ಲಾದಲ್ಲಿಯ ಬಡವರು

ಈ ಇಬ್ಬರು ಹರಕಲು ಬಟ್ಟೆಯ ದರಿದ್ರರೂ ಗೆಳೆಯರೇ; ಅವರು ಇಬ್ಬರೂ ದುಡಿಯುವವರೇ; ಅವರಿಬ್ಬರಿಗೂ ತಮ್ಮ ಸಿಮ್ಲಾ ಚೆನ್ನಾಗಿ ಗೊತ್ತು. ಅದರ ಸುಖದುಃಖಗಳಲ್ಲಿ ಪಳಗಿದವರು. ಬೆಟ್ಟದ ಮೇಲಿನ ಮರಗಳು ಗಾಳಿ ಮಳೆ ಮಂಜುಗಳನ್ನು ಜಯಿಸಿ ಜೀವಿಸುವಂತೆ ಅವರೂ ಜೀವನದ ಕಹಿಗಳನ್ನು ಜಯಿಸಿದ್ದರು. ಆದರೆ ಅವರಿಬ್ಬರೂ ಒಂದೊಂದು ದುಃಖದ ಕಥೆ. ಸಿಮ್ಲಾದ ಈ ಜನರ ಕತೆ ತಿಳಿಯುವುದು ಸುಲಭ. ಮೊದಲು ಸಿಮ್ಲಾಕ್ಕೆ ಬಂದು ಅದನ್ನು ವಾಸಕ್ಕೆ ಅರ್ಹವಾಗುವದಾಗಿ ಮಾಡಿದವರು ಇವರೇಯೆ. ಮುಂದೆ ಮುಂದೆ ಎಂದೆಂದಿಗೂ ಇಲ್ಲಿ ಉಳಿಯುವವರೂ ಇವರೇಯೆ. ನಾವು ಮಾತನಾಡುತ್ತಾ ಇರುವಾಗ ಅನೇಕ ಕೂಲಿಗಳು ಸಾವಿರಾರು ಅಡಿ ಕೆಳಗಿನಿಂದ ತೆಗೆಮಕೊಂಡು ಬಂದಿದ್ದ ಇಪ್ಪತ್ತೈದು ಇಟ್ಟಿಗೆಗಳನ್ನು ಹೊತ್ತುಕೊಂಡು ಹೋಗು ತ್ತಿದ್ದುದು ಕಂಡಿತು. ನನಗೆ ಕತೆ ಹೇಳಿದ ಇಬ್ಬರ ಪೈಕಿ ಒಬ್ಬನನ್ನು ನಾನು "ಅದು ಬಹು ಭಾರವೇ?" ಎಂದು ಕೇಳಿದೆ. ಆತ "ಬಹಳ ಭಾರವಲ್ಲ. ಆದರೆ ಆ ಮನುಷ್ಯನ ಭಾರವನ್ನು ನೋಡಿ. ಅವನು ಹೇಗೆ ತಾನೇ ಈ ಹೊರೆ-ಹೊರುತ್ತಾನೆ?" ಎಂದ. ಆ ಮತ್ತೊಬ್ಬನನ್ನು ನೋಡಿ ದರೇ ನನಗೆ ತಲೆ ತಿರುಗುತ್ತಿದ್ದಿತು. ಅವನ ತಲೆಯಮೇಲೆ ಮೂರು ನಾಲ್ಕು ಮಣ ಭಾರವಿದ್ದಿತು (ಒಂದು ಮಣಕ್ಕೆ ೮೦ ಪೌಂಡು) ಅವನು ಏದುತ್ತಿದ್ದನು. ಮೈ ಪೂರಾ ಬೆವತಿದ್ದಿತು. ಅವನಿಗೆ ಪಾದರಕ್ಷೆ ಇರ ಲಿಲ್ಲ. ಆತ ಇನ್ನೂ ಚಿಕ್ಕ ವಯಸ್ಸಿನವನೇ ಆಗಿದ್ದರೂ ನನ್ನೊಂದಿಗೆ ಮಾತನಾಡುತ್ತಿದ್ದ ಸ್ನೇಹಿತ ಅವನು ಇನ್ನು ಬಹುಕಾಲ ಬದುಕಲಾರ ನೆಂದು ಹೇಳಿದ. ಆ ಸ್ನೇಹಿತ ಹೀಗೂ ಹೇಳಿದ "ನಾವು ಹುಟ್ಟಿರುವುದೇ

ಈ ಹೊರೆ ಹೊರುವುದಕ್ಕೆ. ನಮ್ಮ ಎದೆ ಯಾವ ಭಾರವನ್ನಾದರೂ ಸಹಿಸುತ್ತದೆ. 'ನಮಗೆ ಪಾದರಕ್ಷೆ ಬೆಚ್ಚಗಿರುವ ಹೊದ್ದಿಕೆ ಬೇಕಿಲ್ಲ' ಎಂದು ನೀವು ಯೋಚಿಸಬಹುದು. ಕೇಳಿ, ಅವೆಲ್ಲಾ ನಮಗೆ ಬೇಕು. ಈ ಹೊರೆಗಳಿಂದ ನಮ್ಮ ಮೂಳೆ ಮುರಿಯುತ್ತದೆ. ನಮ್ಮ ಆಯುಸ್ಸು ಕಡಿಮೆಯಾಗುತ್ತದೆ." ನಾನು ಹೀಗೆ ಕೇಳಿದೆ "ನೀವು ಯಾಕೆ ಅಷ್ಟೊಂದು ಭಾರ ಹೊರುತ್ತೀರಿ ?" ಆತ ಹೇಳಿದ "ಕೇಳಿ, ನಮಗೆ ಮಣಕ್ಕೆ ೨ ಆಣೆ ಕೂಲಿ ಕೊಡುತ್ತಾರೆ. ಎಷ್ಟು ಹೆಚ್ಚಾಗಿ ಹೊತ್ತರೆ ಅಷ್ಟು ಕೂಲಿ ಹೆಚ್ಚು. ನಾವು ಹೊರಬೇಕಾದ ಹೊರೆ ಇಷ್ಟು ಎಂದು ಗೊತ್ತುಮಾಡಿ ಕೂಲಿ ಸ್ವಲ್ಪ ಹೆಚ್ಚಿಸಿದರೆ ನಮಗೆ ಒಳ್ಳೆಯದಾಗುವುದು. ಆದರೆ ಯಾರಿಗೆ ಬೇಕಾಗಿದೆ ? ಅವರು ಬರುತ್ತಿರುವ ಆ ಕಡಿದಾದ ಮಾರ್ಗ ನೋಡಿ. ಒಂದು ಹೆಜ್ಜೆ ಸ್ವಲ್ಪ ಹೆಚ್ಚ ಕಡಿಮೆಯಾದರೆ ತೀರಿತು. ಪಾತಾಳವೇ ...."

"ಆದರೆ ಆ ಮಾರ್ಗದಲ್ಲಿ ಯಾಕೆ ಹೋಗುತ್ತೀರಿ. ಅಗಲವಾದ ದಾರಿ ಇದೆಯಲ್ಲ ?"

"ನಾವು ಮೂರ್ಖರು. ಈ ಕಾಲುದಾರಿ ಹಿಡಿದರೆ ಬೇಗ ಕೆಲಸ ವಾಗುತ್ತೆ ಎಂದು ತಿಳಿಯುತ್ತೇವೆ. ಆದರೆ ನಮ್ಮ ಆರೋಗ್ಯಕ್ಕೆ ಅದು ಕೆಟ್ಟದ್ದು. ಆದರೆ ನಾವು ನಡೆಯುವ ಕಾಲುದಾರಿಯಲ್ಲಿ ಮೆಟ್ಟಲು ಮಾಡುವುದು ಸರ್ಕಾರಕ್ಕೆ ಕಷ್ಟವೆ ? ಆದರೆ ನನ್ನ ಕಥೆ ಇಷ್ಟಕ್ಕೇ ಮುಗಿಯಲಿಲ್ಲ. ನಮ್ಮ ಮೂರಾಣೆ ನಮಗೆ ಸರಿಯಾಗಿ ಬರುತ್ತೆ ಎಂದು ಭಾವಿಸಬೇಡಿ. ಸಾಹೇಬರ ಆಳುಗಳು ಕೂಲಿಯಲ್ಲಿ ಸ್ವಲ್ಪ ಭಾಗ ಹೊಡೆದು ಬಿಡುತ್ತಾರೆ. ತೂಕದಲ್ಲಿ ನಮಗೆ ಅನ್ಯಾಯವಾಗುತ್ತದೆ. ಅಂತೂ ಮಣಕ್ಕೆ ಎರಡಾಣೆ ಬಂದರೆ ಅದೇ ನಮ್ಮ ಅದೃಷ್ಟ. ಆದರೆ ಬಡವರ ಗೋಳು ಯಾರಿಗೆ ಬೇಕು ? ನೀವು ಇಲ್ಲಿಗೆ ಆರೋಗ್ಯಕ್ಕಾಗಿ ಬರುತ್ತೀರಿ. ನಮ್ಮ ಅನಾರೋಗ್ಯದಿಂದ ನಿಮಗೆ ಆರೋಗ್ಯ ದೊರೆಯುತ್ತದೆ. ನಾನು ಹೇಳುವುದು ಕಟುವಾಗಿದೆ ಗೊತ್ತು. ಆದರೆ ನಮ್ಮ ಬೇಜಾರು ನ್ಯಾಯ ಎನ್ನುವುದಕ್ಕೆ ಈ ನನ್ನ ಮಿತ್ರನ ಕತೆ ಕೇಳಿ."

"ಆ ಮತ್ತೊಬ್ಬ ಮಿತ್ರ ಹಿಂದೆ ಬೀದಿಗಳಲ್ಲಿ ಮಿಠಾಯಿ ಮಾರುತ್ತಿದ್ದನು. ಆದರೆ ಈಚೆಗೆ ಇಲ್ಲ. ಅವನ ಸಮಸ್ತವೂ ನಾಶವಾದುದು ಈ

ರೀತಿ. ಪದವೀದರರಾದ ಒಬ್ಬ ಗೃಹಸ್ಥರ ಹೆಂಡತಿಗೆ ಬೇಕಾದ ಮಿಠಾಯಿ ಕೊಡಲು ಆತ ನಿತ್ಯ ಬಹುದೂರ ಹೋಗುತ್ತಿದ್ದ. ಮನೆಯ ಯಜಮಾನ ದೊಡ್ಡ ಮನುಷ್ಯನಾದುದರಿಂದ, ಆತನ ಹೆಂಡತಿ ಆಳಿನ ಮೂಲಕ ಕೇಳಿದ ಸಾಮಾನುಗಳನ್ನೆಲ್ಲಾ ಈ ವ್ಯಾಪಾರಿ ಕೊಡುತ್ತಲೇ ಬಂದ. "ನಾನು ಬಡವ. ನನ್ನಲ್ಲಿ ಕೊಟ್ಟುದಕ್ಕೆ ರಸೀತಿ ಇರಲಿಲ್ಲ. ಕ್ಯಾಷ್ ಬುಕ್ ಬಿಲ್ ಬುಕ್ ಯಾವುದೂ ಇರಲಿಲ್ಲ. ದೊಡ್ಡ ಮನುಷ್ಯ ಕೊಡಬೇಕಾದ ಹಣಕ್ಕಾಗಿ ನಾನು ಸೇವಕನಿಗೆ ಅನೇಕ ವೇಳೆ ತಗಾದೆ ಮಾಡಿದೆ. ಆತ 'ನೀನು ಮೂರ್ಖ. ಯೋಚಿಸಬೇಡ. ಹೆದರಬೇಡ. ಈ ಅರಮನೆ ನೋಡು. ಸೇವಕರು ಎಷ್ಟೊಂದು ಜನರಿದ್ದಾರೆ ನೋಡು' ಎಂದಲ್ಲಾ ಆಸೆ ತೋರಿಸಿದ. ನಾನು ಬಲೆಗೆ ಬಿದ್ದೆ. ನನ್ನ ಶಕ್ತಿ ಇರುವವರೆಗೆ ಸಾಲ ಕೊಡುತ್ತಾ ಹೋದೆ. ಅನಂತರ ಮತ್ತೇನೂ ತೋರದುದರಿಂದ ಕೋರ್ಟಿನಲ್ಲಿ ದಾವಾ ಹಾಕಿದೆ."

ನಾನು ಕತೆಯನ್ನು ನಂಬಲಿಲ್ಲ. ಅಪನಂಬಿಕೆಯಿಂದ ನಕ್ಕೆ. ವ್ಯಾಪಾರಿ ಜೋಬಿನಿಂದ ಮಡಚಿ ಕೊಳೆಯಾಗಿದ್ದ ಒಂದು ಕಾಗದ ಹೊರಕ್ಕೆ ತೆಗೆದ. ಅದೇ ಜಡ್ಜ್‌ಮೆಂಟ್.

"ಈ ಅಸಮರ್ಪಕವಾದ ವ್ಯವಹಾರದಲ್ಲಿ ಒಬ್ಬ ಮಿಠಾಯಿ ವ್ಯಾಪಾರಿ —ರ ಮೇಲೂ, ಅವರ ಹೆಂಡತಿಯ ಮೇಲೂ ರೂ. ೨೧೩-೧-೩ ಕ್ಕೆ ದಾವಾ ಹೂಡಿದ್ದಾನೆ. ರಶೀತಿಗಳೂ ಇತರ ದಾಖಲೆಗಳೂ ಇಲ್ಲ. ಪ್ರತಿವಾದಿಗಳು ಕೊಡಬೇಕಾದುದಿಲ್ಲ ಎನ್ನುತ್ತಾರೆ. ವ್ಯಾಪಾರವನ್ನೆಲ್ಲಾ ಸೇವಕನೇ ಮಾಡುತ್ತಿದ್ದನೆಂದೂ ಆದರೆ ಸೇವಕನು ತನ್ನ ಪ್ರತಿನಿಧಿಯಲ್ಲವೆಂದೂ ಪ್ರತಿವಾದಿಯ ಹೇಳಿಕೆ. ಸತ್ಯ ಹೊರಕ್ಕೆ ಬಂದಿಲ್ಲವೆಂದು ನನ್ನ ನಂಬಿಕೆ. ಆದರೆ ವಾದಿ, ಇನ್ನೂರ ರೂಪಾಯಿಗಳ ಮೇಲ್ಪಟ್ಟು ಸಾಲ ಕೊಡಲು ಪ್ರಾರಂಭಿಸಿದ ಮೇಲೆ, ಅದರ ಕಷ್ಟನಷ್ಟಕ್ಕೆ ಅವನು ಸಿದ್ಧನಾಗಿಯೇ ಇರಬೇಕು. ದಾವಾ ವಜಾ. ಅವರವರ ಖರ್ಚು ಅವರವರಿಗೆ. ವಾದಿಗೆ ಸ್ವಲ್ಪ ದುಡ್ಡು ಬರಬೇಕೆಂಬುದು ನನಗೆ ಗೊತ್ತು. ಆದರೆ ಎಷ್ಟು ಎಂಬುದನ್ನು ನಾನು ತೀರ್ಮಾನಿಸಲಾರೆ."

ಮಿಠಾಯಿ ವ್ಯಾಪಾರಿ ಕತೆ ಮುಂದುವರಿಸಿದ "ಇದೇಯೆ ಇಂಗ್ಲಿಷ್

ನ್ಯಾಯ ? "ನ ದಲೀಲ್ ನ ಅಪೀಲ್" ನಮ್ಮಂತ ಬಡವರು ಮಾಡುವು ದೇನು ? ಈ ದೊಡ್ಡ ಮನುಷ್ಯ ತನ್ನ ಸೇವಕರಿಗೆ ಸರಿಯಾಗಿ ಸಂಬಳ ಕೊಡುವುದಿಲ್ಲ. ಎಲ್ಲರ ಸಂಬಳಗಳೂ ಬಾಕಿ.

"ನಿನಗೆ ಹೇಗೆ ಗೊತ್ತು. ನಿನಗೂ ಅವನಿಗೂ ಸಂಬಂಧ ತಪ್ಪಿ ಬಹು ವರುಷಗಳಾದವಲ್ಲಾ ?"

"ಅವನನ್ನು ಬಿಟ್ಟು ಬಂದ ಅನೇಕ ಸೇವಕರು ನನಗೆ ಗೊತ್ತು. ಅಲ್ಲಿ ಇನ್ನೂ ಇರುವವರು ಹೇಗೆ ಹೇಗೋ ಹೊಟ್ಟೆ ತುಂಬಿಕೊಳ್ಳುತ್ತಾರೆ. ಆದರೆ ನನಗೆ ಏನು ನಷ್ಟ ? ಏನೂ ಇಲ್ಲ. ದೇವರು ಕೈಕಾಲು ಕೊಟ್ಟಿದ್ದಾನೆ. ನನ್ನ ಅನ್ನ ದುಡಿಯುತ್ತೇನೆ. ಆದರೆ ನನ್ನ ಕಣ್ಣೆದುರಿಗೇ ದೊಡ್ಡ ಮನುಷ್ಯ ನಾಶವಾಗುತ್ತಾನೆ. ನನಗೆ ಗೊತ್ತು. ಅನ್ಯಾಯ ಬಹು ದಿನ ಜಯಿಸುವುದಿಲ್ಲ.

ನೀನು ಅವನ ಮೇಲೆ ಸೇಡು ತೀರಿಸಿಕೊಳ್ಳುವುದಿಲ್ಲವಷ್ಟೆ.

ಇಲ್ಲ. ದೇವರು ಮಾಡುತ್ತಾನೆ.

ಈ ಬೆಟ್ಟದಲ್ಲಿ ಆಗಾಗ ಡಾ|| ಸಾಮುಯಲ್ ಜಾನ್‌ಸನ್‌ರ ನುಡಿ ನನ್ನ ಜ್ಞಾಪಕಕ್ಕೆ ಬಂದಿವೆ. "ಜೀವನ ಕಹಿ. ಆ ಗುಳಿಗೆಗೆ ಸಕ್ಕರೆ ಸವರದೆ ನುಂಗುವುದು ಯಾರಿಗೂ ಸಾಧ್ಯವಿಲ್ಲ. ಆದರೆ ಬಡವರ ವಿಚಾರ ದಲ್ಲಿ ಆ ಸಕ್ಕರೆ ಪೂರ್ತ ತೆಗೆಯುವುದರಲ್ಲಿಯೇ ನಮಗೆ ಆನಂದ. ಅವರಿಗೆ ಕಹಿ ಸ್ವಲ್ಪ ಕಡಿಮೆಯಾದರೂ, ನಾವು ನಮ್ಮ ಅಸಮಾಧಾನ ತೋರಿಸು ತ್ತೇವೆ. ನಮಗೆ ನಾಚಿಕೆಯೇ ಇಲ್ಲ."

೧೯-೧೧-೧೯೩೮.

---

## ೨೭. ಕವಿಯ ಭೇಟಿ

ವಿಶ್ವಭಾರತಿ, ಶಾಂತಿಕೇತನಕ್ಕಾಗಿ ಭಿಕ್ಷೆಬೇಡುತ್ತ ಕವಿರವೀಂದ್ರರು ಈ ದೇಶದಲ್ಲಿ ಸಂಚಾರ ಮಾಡುತ್ತಿದ್ದಾಗ ೧೮ನೆಯ ತಾರೀಖಿನ ದಿನ ನಮ್ಮ ಆಶ್ರಮಕ್ಕೆ ಭೇಟಿಕೊಟ್ಟು ಗೌರವಿಸಿದರು. ಅವರಿಗೆ ನೆಗಡಿ ಹಿಡಿದಿತ್ತು.

ಸಾಕಾಗಿಹೋದಂತೆ ಕಾಣಬಂದರು. ವೃದ್ಧಾಪ್ಯವೂ ಆ ಗಂಭೀರವಾದ ಮುಖದಲ್ಲಿ ಎದ್ದು ಕಾಣುತ್ತಿತ್ತು ನಾವು ನಿರೀಕ್ಷಿಸಿದ್ದಕ್ಕಿಂತ ದೀರ್ಘ ಕಾಲ ಅವರು ನಿಂತರು. ಅದರ ಫಲವಾಗಿ ಬಹುಕಾಲದಿಂದ ಇಲ್ಲದ ಸಂಭಾಷಣೆಯ ಮನೋಹರವಾದ ಸಂಜೆಯ ಲಾಭವುಂಟಾಯಿತು. "ನನಗೆ ಈಗ ಎಪ್ಪತ್ತು, ವರ್ಷ ಮಹಾತ್ಮಾಜಿ. ನಿಮಗಿಂತ ಬಹು ದೊಡ್ಡವ" ಅಂದರು ಕವಿಗಳು. ಗಾಂಧಿಜಿಯವರು ಪೂರ್ತಿಯಾದ ಮಂದಹಾಸದಿಂದ "ಅರವತ್ತು ವರ್ಷದ ಮುದುಕ ಕುಣಿಯಲಾರ ನಾದರೂ ಎಪ್ಪತ್ತು ವರ್ಷದ ತರುಣ ಕವಿ ಕುಣಿಯಬಲ್ಲ" ಅಂದರು. ಕವಿಗಳು 'ನಿಜ' ಎಂದರು. ಅಭಿನಂದನ ವಚನವನ್ನು ಮೆಚ್ಚಿದರು. ವೃದ್ಧಾಪ್ಯ ಜೀವನಕ್ಕಾಗಿ ಗಾಂಧಿಜಿಯವರು ಸಿದ್ಧಪಡಿಸಿಕೊಂಡಿರುವ ಸಿದ್ಧಕಾರ್ಯ ವಿಧಾನ ಕಂಡು ಕವಿಗಳು "ಬಂಧನ ಶಾಂತಿ ಚಿಕಿತ್ಸೆಗಾಗಿ ತಾವು ಇನ್ನೊಮ್ಮೆ ಸಿದ್ಧವಾಗುತ್ತಿರುವಹಾಗಿದೆ". (ಇಂಗ್ಲಿಷಿನಲ್ಲಿ 'ಅರೆಸ್ಟ್ ಕ್ಯೂರ್'—ಶಾಂತಿ ಚಿಕಿತ್ಸೆ—ಬಂಧನ ಚಿಕಿತ್ಸೆ) ನನಗೂ ಒಂದು ಗಳಿಗೆ ಕೊಡಬಾರದೆ ? ಅಂದರು. ಗಾಂಧಿಜಿಯವರು "ಏನು ಮಾಡುವುದು ನೀವು ಅದಕ್ಕೆ ಸರಿಯಾಗಿ ವರ್ತಿಸುವುದಿಲ್ಲ" ಅಂದರು ಕವಿಗಳೂ, ಚರಖಾ ಬಳಿ ಗಾಂಧಿಯೂ ಕೂತಿದ್ದ ಚಿಕ್ಕಕೋಣೆಯಲ್ಲಿ ನಗೆಯತರಂಗ ಹಬ್ಬಿತು.

ಕವಿಗಳು ಸರಸವಾಗಿ ಬಗೆಬಗೆಯ ವಿಷಯಗಳಮೇಲೆ ಮಾತನಾಡಿದರು. ನಾವೆಲ್ಲ ಪರವಶವಾಗಿ ಲಕ್ಷ್ಯಕೊಟ್ಟು ಕೇಳಿದೆವು. ಕವಿಗಳನ್ನು ಕೊರಿಯಾ ದೇಶದವನೊಬ್ಬ ನೋಡಿದ್ದನಂತೆ. ಆತನ ಚಿತ್ರದ ಸುಂದರ ನೆನಪು ಇವರಿಗೆ ಚೆನ್ನಾಗಿತ್ತು. ಕೋರಿಯಾದವ ಸ್ವತಂತ್ರ ಕೋರಿಯಾದ ಸವಿಕನಸುಗಳನ್ನು ಕಾಣುತ್ತಿದ್ದ. "ಸೂರೆ ಮಾಡುತ್ತಿರುವ ಜಪಾನಿನೊಂದಿಗೆ ನೀವು ಹೋಗಿ ಹೊಡೆದಾಡುತ್ತೀರಾ ?" ಎಂದು ಕವಿಗಳು ಕೇಳಿದ್ದಕ್ಕೆ ಆತ ಹೀಗೆ ಹೇಳಿದ "ಪ್ರಪಂಚದ ಜನರನ್ನು ಲೂಟಿಗಾರರು, ಸೂರೆಗೊಳಗಾದವರು ಎಂದು ಎರಡುಭಾಗ ಮಾಡಬಹುದು. ಸೂರೆಗೊಳಗಾದವರೆಲ್ಲ ಒಂದಾದರೆ ಜಪಾನಿನೊಂದಿಗೆ ನಾವು ಯುದ್ಧ ಮಾಡಬಹುದು. ಆ ರೀತಿ ಒಂದಾಗುವ ದಿನಗಳು ಹತ್ತಿರ ಬರುತ್ತಿವೆ. ಎಂದೋ ಒಂದು ದಿನ ಲೂಟಿಗೊಳಗಾದ ಜನರೆಲ್ಲ ಒಂದಾಗುತ್ತಾರೆ. ಜಪಾನಿನಲ್ಲೂ ಸೂರೆ

ಗೊಳಗಾದವರಿದ್ದಾರೆ. ಅವರೂ ಸಹ ನಮ್ಮೊಂದಿಗೆ ಕಲೆತು ಹೋರಾಡು ತ್ತಾರೆ. ಲೂಟಿಗೊಳಗಾದವರೆಲ್ಲ ಒಂದಾದಂದು ನಾವು ಜಪಾನಿ ನೊಂದಿಗೆ ಹೋರಾಡಲು ಸಮರ್ಥರಾಗುವೆವು. ಆ ದಿನಗಳ ಹತ್ತಿರ ಸರಿಯುತ್ತಿದ್ದೇವೆ ಅಲ್ಲವೆ ಮಹಾತ್ಮಾಜಿ ? ಶ್ರೀಮಂತರೆಂದಿಗೂ ಒಂದಾಗು ವುದಿಲ್ಲ. ದಬ್ಬಾಳಿಕೆಗೆ ಗುರಿಯಾದವರು, ಅದುಮಲ್ಪಟ್ಟವರೇ ಒಂದಾಗು ವುದು" ಎಂದ.

ಚೀನಾ ಮತ್ತು ಉಳಿದ ದೇಶಗಳ ವಿಚಾರವಾಗಿ ಕವಿಗಳದು ಗಾಢ ಪರಿಚಯ, "ನಿಜವಾಗಿಯೂ ಜನರ ಪ್ರತಿನಿಧಿಯಾಗದ ಸರ್ಕಾರ ಉಳಿಯ ಲಾರದು. ಜನರಿಗೆ ವಿದ್ಯಾಭ್ಯಾಸ ಮಾಡಿಸಿ ತಮ್ಮ ಬೇಡಿಕೆಗಳನ್ನು ಹೇಗೆ ಹೇಳಿಕೊಳ್ಳಬೇಕೆಂಬುದನ್ನು ಕಲಿಸಬೇಕು. ಸರ್ಕಾರ ಅವರ ಬೇಡಿಕೆಗೆ ಕಿವಿಕೊಡಬೇಕು." ಎಂದರು.

ಹೆಚ್ಚು ಕಾಲ ಕುಳಿತುದುದಕ್ಕಾಗಿ ಕವಿಗಳು ಕ್ಷಮೆ ಬೇಡಿದಾಗ ಗಾಂಧಿಜಿಯವರಿಗೆ ತಮ್ಮದೇ ಆದ ವಿಷಯ ಎತ್ತುವುದಕ್ಕೆ ಅನುಮತಿ ದೊರೆಯಿತು. "ಇಲ್ಲ. ನಿಮ್ಮಿಂದ ನನ್ನ ಹೊತ್ತೇನೂ ವ್ಯರ್ಥವಾಗಲಿಲ್ಲ. ಮಾತು ಮರಿಯದಂತೆ ನನ್ನ ಪಾಡಿಗೆ ನಾನೂ ನೂಲುತ್ತಲೇ ಇದೇನೆ. ನಾನು ನೂತ ಒಂದೊಂದು ನಿಮಿಷವೂ ದೇಶದ ಸಂಪತ್ತು ಹೆಚ್ಚಿತೆಂದು ನನ್ನ ಆತ್ಮಕ್ಕೆ ಸಮಾಧಾನ. ಒಂದು ಕೋಟಿ ಜನ ಪ್ರತಿದಿನ ಒಂದು ಗಂಟೆ ನೂತರೆ—ಅದರಿಂದ, ವ್ಯರ್ಥವಾಗುವ ಒಂದು ಗಂಟೆಯು ಕೆಲಸ ವಾಗುತ್ತದೆ. ದಿನಕ್ಕೆ ೫೦೦೦೦ ರೂಪಾಯಿ ದೇಶದ ಸಂಪತ್ತಿಗೆ ಸೇರಿಸ ಬಹುದು ಎಂದು ನನ್ನ ಲೆಕ್ಕಾಚಾರ. ನಮಗೆ ದಿನಕ್ಕೆ ೭ ಪೈಸ ಆದಾಯ ಬರುವುದು ; ಅದಕ್ಕೆ ಒಂದು ಕಾಸು ಹೆಚ್ಚಾಗಿ ಸೇರಿದರೂ ಎಷ್ಟೋ ಆಯಿತು. ೭ ಪೈಸ ದಿನಕ್ಕೆ ಆದಾಯ ತೀರ ನಿರ್ಗತಿಕರಿಗೆ ಇಲ್ಲ, ಆ ಲೆಕ್ಕಾ ಚಾರದಲ್ಲಿ ಕೋಟ್ಯಾಧೀಶ್ವರರ ಆದಾಯವೂ ಸೇರಿದೆ. ಅಂದರೆ ಕೋ ಟ್ಯಾಂತರ ಜನರಿಗೆ ದಿನಕ್ಕೆ ೭ ಕಾಸಿನ ಆದಾಯವೂ ಇಲ್ಲ, ಕೋಟ್ಯಾಂತರ ಜನ ಉಪವಾಸ ಮಾಡುತ್ತಿರಬೇಕು ಎಂದು ಅರ್ಥವಾಗುತ್ತದೆ" ಎಂದು ಶ್ರೀ ಬಿರ್ಲಾ ಹೇಳಿದರು. ನಾವು ಪ್ರತಿವರ್ಷ ೬೦ ಕೋಟಿ ರೂಪಾಯಿ ಬಡ್ಡಿಗಾಗಿ ಕೊಡುತ್ತಿದ್ದೇವೆ, ಕೊಡುವುದಕ್ಕೆ ನಮ್ಮ ಕೈಯಲ್ಲಿ ಕಾಸಿಲ್ಲ

ವಾದರೂ ಕೊಡುತ್ತಿದ್ದೇವೆ. ವ್ಯಾಪಾರದ ತಕ್ಕಡಿ ನಮಗನುಕೂಲ ವಾಗಿದೆ ಎಂದೇ ಹೇಳುತ್ತಾ, ನಾವೇನೋ ದಿನದಿನಕ್ಕೆ ಬಡವರಾಗುತ್ತಿದ್ದೇವೆ. ನಮ್ಮ ಸಾಲದಿಂದ ನಮಗೇನೂ ಪ್ರತಿಫಲ ಬರುತ್ತಿಲ್ಲ. ಇಂಥ ವಿಶಾಲ ಬಡ ದೇಶದಲ್ಲಿ ೩೦ ಕೋಟಿ ಜನಕ್ಕೆ ದಿನಕ್ಕೊಂದು ಕಾಸಾದರೂ ಎಷ್ಟೋ ಆಗುತ್ತದೆ. ಒಬ್ಬ ಗಂಡು, ಹೆಣ್ಣನ್ನು ಕೂಡಾ ಅವರ ಕೆಲಸದಿಂದ ಕಿತ್ತೊಗೆಯಬೇಕೆಂಬುದು ಚರಕಾದ ಗುರಿಯಲ್ಲ. ನಮ್ಮ ಲಕ್ಷಾಂತರ ಜನ ಒಂದೊಂದೂ ವ್ಯರ್ಥವಾಗುವ ಗಳಿಗೆಯನ್ನು ಒಂದೇ ಫಲದಾಯಕ ಉದ್ಯೋಗಕ್ಕೆ ಉಪಯೋಗಿಸಿಕೊಳ್ಳುವುದು ಚರಕಾದ ಗುರಿ. ನಮ್ಮ ಜನಕ್ಕೆ ಯುದ್ಧ ಕುಶಲತೆಯಿಲ್ಲ, ಆಶೆಯಿಲ್ಲ ಅಂಥವರಿಗೆ ಇದಕ್ಕಿಂತ ಅನುಕೂಲವಾಗುವ ಕಾಸು ಬರುವ ಕೆಲಸ ಮತ್ತಾವುದು ತಾನೇ ಇದೆ? ವ್ಯವಸಾಯದಿಂದ ಉತ್ಪನ್ನ ಬೆಳೆಸುವುದೂ ಅವರಿಗೆ ಸಾಧ್ಯವಿಲ್ಲ. ಸಾಮಾನ್ಯವಾಗಿ ನಮ್ಮ ನೆಲದ ಒಡೆತನ ಒಬ್ಬೊಬ್ಬನಿಗೂ ಎರಡು ಎಕರೆ. ಇದರಲ್ಲಿ ನೂರಾರು ಎಕರೆಯ ಜಮೀನುದಾರರೂ ಸೇರಿದಾರೆ. ವ್ಯವಸಾಯ ಕಮಿಷನ್ನಿನ ನೂರಾರು ಶಿಫಾರಸುಗಳಲ್ಲಿ ಬಡರೈತನಿಗೆ ಬೇಕಾದ್ದು ಒಂದೂ ಇಲ್ಲ. ಅವರು ಹೇಳುವುದು ಕಾರ್ಯರೂಪಕ್ಕೆ ಬರುವುದೂ ಇಲ್ಲ" ಎಂದರು.

ಕವಿಗಳು "'ಓ' ಈ ಕಮಿಷನ್ನುಗಳಿಂದ ಏನೂ ಪ್ರಯೋಜನವಿಲ್ಲ. ಒಂದೆರಡು ಶಾಖೆ ಹೆಚ್ಚು ಮಾಡಿದರೆ ಆಯಿತು ಇವುಗಳ ಕೆಲಸ. ನನಗಂತೂ ಇವುಗಳಲ್ಲಿ ನಂಬಿಕೆ ಇಲ್ಲವೇ ಇಲ್ಲ" ಎಂದರು ಕವಿಗಳು.

ಈ ವರ್ಷ ಗಾಂಧಿಜಿ ದೇಶಕ್ಕೆ ಯಾವ ಕಾರ್ಯಕ್ರಮ ಸೂಚಿಸುವರೆಂಬುದನ್ನು ತಿಳಿದುಕೊಳ್ಳಲು ಕವಿಗಳಿಗೆ ಕುತೂಹಲ. ಗಾಂಧಿಜಿ ಹೇಳಿದರು.

"ಹಗಲೂ ರಾತ್ರಿ ಯೋಚನೆ ಮಾಡುತ್ತಾ ಇದೇನೆ. ಕವಿದ ಕತ್ತಲಲ್ಲಿ ಏನೂ ಬೆಳಕು ಕಾಣದು. ಫಲಪ್ರದವಾದ ಸತ್ಯಾಗ್ರಹ ನಡೆದೀತೆಂದು ನನಗನಿಸುವುದಿಲ್ಲ. ಸಾಮಂತ ಸ್ವರಾಜ್ಯ ನಾವು ತಿಳಿದುಕೊಂಡದಲ್ಲವೆಂದಿರುವಾಗ, ದೇಶದ ಗುರಿ ಸಂಪೂರ್ಣ ಸ್ವರಾಜ್ಯವೆಂದು ಬಿಡಿಸಿ ಹೇಳದೇ ದಾರಿಯಿಲ್ಲ."

ಅವರು ಮಾತನಾಡುತ್ತಿರುವಾಗ ಕೋಣೆಯಲ್ಲಿ ಗುಂಪು, ದೊಡ್ಡದಾಗುತ್ತಿತ್ತು. ಕವಿಗಳು ಹೋಗುವ ಆಸೆ ತೋರ್ಪಡಿಸಿದರು. " ಹಿಂದಿರುಗಿ ಹೋಗುವಾಗ ಅಹಮದಾಬಾದಿಗೂ ಬರುತ್ತೀರಿ ತಾನೆ? ಅಹಮದಾಬಾದಿನಲ್ಲಿ ಇಳಿದರೆ ನನ್ನಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ ನಿಮಗೆ. ಸರಿ ನೀವು ಬರುವುದನ್ನೇ ಕಾಯುತ್ತೇನೆ. ಈ ಸಲ ಬಂದಾಗ ಬಹುದಿನಗಳ ಹಿಂದಿನಂತೆ, ಒಂದು ದಿನ ಇದ್ದು ಹೋಗಬೇಕು " ಎಂದರು ಗಾಂಧಿಜಿ.

ಕವಿಗಳು ಹೊರಡಲು ಸಿದ್ಧರಾದಾಗ ಆಶ್ರಮದ ಬಾಲಕ ಬಾಲಕಿಯರು;—ಪ್ರಾರ್ಥನಾ ಸ್ಥಳದಲ್ಲಿ ಕವಿಗಳಿಗೆ ತಮ್ಮ ಗೌರವ ಸೂಚಿಸಲು ಕೂಡಿದರು—ಅರ್ಧ್ಯ ಗಟ್ಟಿದರು. ನೂಲಿನ ಹಾರ, ಕವಿಯ ಅಗಲವಾದ ಹಣೆಗೆ ಕುಂಕುಮ, ಒಂದು ಹಾಡು-ಇಷ್ಟೇ ಕವಿಗೆ ಅರ್ಪಣೆ; ಪ್ರತಿಯಾಗಿ ಕವಿ ಅವರಿಗೆ ಆಶೀರ್ವಾದ ಮಾಡಿದರು. ಹುಡುಗರ ಇದನ್ನು ಬಹುದಿನ ಮರೆಯುವುದಿಲ್ಲ. ಕವಿಗಳು ಹೇಳಿದರು. "ಮಾತನಾಡುವುದು ವ್ಯರ್ಥ, ಶಾಸಕೋಶಕ್ಕೆ ಸುಮ್ಮನೆ ಕೆಲಸ. ಮಾತನಾಡುವುದಕ್ಕಿಂತಲೂ ನಾನು ಯಾವಾಗಲೂ ಮಾಡುವ ಹಾಗೆ ಒಂದೇ ವಾಕ್ಯದಲ್ಲೊಂದು ಸಂದೇಶ ಬರೆದುಕೊಟ್ಟು ಹೋಗುತ್ತೇನೆ. ನನ್ನ ಸಂದೇಶವಿಷ್ಟೆ: ದೇಶಕ್ಕೆ ನಾವು ನೀಡುವ ಬಲಿದಾನ ಭೋಗದಂತೆ ಉದ್ವೇಗ ಪೂರ್ಣವಾದ ಉತ್ಸಾಹದ್ದಾಗಬಾರದು; ಸತ್ಯದ ಶಿಸ್ತಿನದಾಗಬೇಕು, ಕಟುಸತ್ಯದ ಶಿಸ್ತಿನದಾಗಬೇಕು. ನೀವೆಲ್ಲಾ ಹಾಗೆ ಮಾಡುತ್ತಿದ್ದೀರ? ನಿಮ್ಮ ಮಹೋಪಾಧ್ಯಾಯರು ನಿಮ್ಮೊಂದಿಗೆ ಇರುವವರೆಗೂ ಹಾಗೇ ಮಾಡುತ್ತೀರಿ ಎಂದು ನಾ ಬಲ್ಲೆ. ನಿಮ್ಮಿಂದ ನಾನು ಬಯಸಿದ ಮಹಾ ಪ್ರತಿಜ್ಞೆಯನ್ನು ಪೂರ್ಣ ಮಾಡುತ್ತೀರ ನೀವು; ಭಾಷಣ ಪ್ರದರ್ಶನಗಳ ರಾಜಕೀಯ ವಿವಾದದ ಯೋಚನೆ ನಮಗೆ ಬೇಡ, ನಮಗೆ ನಿಶ್ಶಬ್ದವಾದ, ಮೌನವಾದ ದುಡಿತದ ಕಷ್ಟಕ್ಕೆ ಹೃತ್ಪೂರ್ವಕವಾಗಿ ಒಪ್ಪಿ ಮೈ ಒಡ್ಡೋಣ. ಇಲ್ಲಿ ನಾನು ಈ ಮಾತು ಹೇಳುವ ಆವಶ್ಯಕತೆಯೇ ಇಲ್ಲ. ಇಲ್ಲಿನ ಗಾಳಿಯಲ್ಲೇ ಅಡಿದೆ. ನಿಮ್ಮ ಸುತ್ತೆಲ್ಲ ಅದರ ಪ್ರಭಾವ ಪಸರಿಸಿರುವುದು ನನಗೆ ಕಾಣುತ್ತಿದೆ. ಇದನ್ನು ಕಂಡು ನನಗೆ ಅಸೂಯೆ ಆಗುತ್ತದೆ. ಗದ್ದಲದ ಪ್ರದರ್ಶನಗಳಲ್ಲಿ ನನಗೆ ನಂಬಿಕೆ ಇಲ್ಲ. ಮಾತನಾಡುವುದು ಬೇಡ. ನಿಶ್ಶಬ್ದವಾದ ಕೆಲಸದಲ್ಲಿ, ಅಲ್ಪಾರಂಭದಲ್ಲಿ

ನಂಬಿಕೆ ಇರಲಿ. ನಾನು ಬಲ್ಲೆ ; ಹುಟ್ಟು ಸಣ್ಣದಾಗಿದ್ದರೂ, ಸತ್ಯ ರೆಕ್ಕೆ ಬಿಚ್ಚಿ ಹಾರಿ, ಬೆಂಕಿಯಂತೆ ದೇಶದಗಲಕ್ಕೂ ಹರಡುತ್ತದೆ ಎಂದು ನಾನು ಬಲ್ಲೆ. ಪೀಪಿಯೂದಿ ಉಸುರು ಹಾಳುಮಾಡಿಕೊಳ್ಳುವ ಕೆಲಸ ಇನ್ನು ಸಾಕು."

---

## ೨೩. ಸೇವಾಗ್ರಾಮದ ಸುದ್ದಿಗಳು.

### ೧. ಗೋರಕ್ಷಕ

ಇಲ್ಲಿ ಸೇವಾಗ್ರಾಮದಲ್ಲಿ ಆಶ್ಚರ್ಯವಾದ ರೀತಿಯಲ್ಲಿ, ಪರಸ್ಪರವಾಗಿ ತಾವು ಅಣ್ಣ ತಮ್ಮಂದಿರೆಂಬ ಭಾವವುಂಟಾಗುತ್ತದೆ. ಒಬ್ಬರೊಂದಿಗೆ ಒಬ್ಬರಿಗೆ ಸಹಾನುಭೂತಿಯೂ ಸೌಹಾರ್ದವೂ ಉಂಟಾಗುತ್ತಿದೆ. ಹೊರಗಿನಿಂದ ನೋಡುವವರಿಗೆ ನಾವು ಒಬ್ಬರಂತೆ ಒಬ್ಬರು ಇಲ್ಲ. ಸಮಾಜದ ಬೇರೆ ಬೇರೆ ಭಾಗಗಳಿಂದ ಬಂದು ಸೇರಿದ್ದೇವೆ. ಇಲ್ಲಿಗೆ ಬರುವುದಕ್ಕೆ ಮುಂಚೆ ಬೇರೆ ಬೇರೆ ಜಾತಿ ಮತ ಕುಲ ಜೀವನದ ಮಟ್ಟ, ಇವುಗಳಲ್ಲಿದ್ದೆವು. ಆದರೆ ಈಗ ನಮ್ಮೆಲ್ಲರ ಗುರಿಯೂ ಒಂದೇ. ಆದರ್ಶವಾದ ಸಮಾಜ ಸೃಷ್ಟಿಗಾಗಿ ನಾವೆಲ್ಲ ಒಂದಾಗಿ ದುಡಿಯುತ್ತಿದ್ದೇವೆ.

ಒಬ್ಬ ಹೊಸಬರ ಪರಿಚಯು ವಾಚಕರಿಗೆ ಮಾಡಿಕೊಡುತ್ತೇನೆ. ನನಗೆ ಕೆಲಸ ಬಹಳವಾದುದರಿಂದ ಇದುವರೆಗೆ ಅವರ ಪರಿಚಯು ಮಾಡಿಕೊಳ್ಳಲು ನನಗೆ ಅವಕಾಶವಾಗದುದ ವಿಷಾದ. ಹೆಸರು ಪ್ರಭಾಕರ್. ಅವರು ಬಂದಿರುವುದು ಆಂಧ್ರದೇಶದಿಂದ : ಮಗನ್‌ವಾಡಿಗೆ ಶಿಕ್ಷಣಕ್ಕಾಗಿ ಬಂದ ಹರಿಜನ ವಿದ್ಯಾರ್ಥಿ. ಕೈಕಾಗದ, ಜೇನು ಸಾಕುವುದು. ಸಾಬೂನು ತಯಾರಿ ಇವುಗಳಲ್ಲಿ ಶಿಕ್ಷಣ ಹೊಂದಿದನಂತರ ಈತ, ತನ್ನ ದೇಶಕ್ಕೆ ಹೋಗುವುದಕ್ಕೆ ಮುಂಚೆ, ಸ್ವಲ್ಪಕಾಲ ಕಳೆಯಲು ಆಶ್ರಮಕ್ಕೆ ಬಂದ. ಆತ ಹಾಲು ಕುಡಿಯುವುದನ್ನು ಬಿಟ್ಟಿದ್ದ. ಆದಕ್ಕೆ ಕಾರಣವೇನೆಂದು ಗಾಂಧಿ ವಿಚಾರಿಸಿದರು. "ನಾನು ಹುಟ್ಟಿದ ಜಾತಿಯಲ್ಲಿ ದನದ ಮಾಂಸ ತಿನ್ನುವುದು ಅಸಹ್ಯವಲ್ಲ. ಸತ್ತದನ, ಹಂದಿಮಾಂಸ ತಿನ್ನುತ್ತಾರೆ. ಎಷ್ಟು ಕೆಟ್ಟ ಸತ್ತ ದನದ ಮಾಂಸವನ್ನೂ ಸಹ ತಿನ್ನುತ್ತಾರೆ.

ಸತ್ತ ದನ ಅನೇಕ ದಿನಗಳವರೆಗೆ ಭೂಮಿಯಲ್ಲಿ ಹೊಳಬಿದ್ದು ನಾರುತ್ತಿರುವುದು. ಅದನ್ನು ನಾವು ಗುಟ್ಟಾಗಿ ಅಗೆದು ಅನೇಕ ದಿನ ಒಣಗಿಸಿ ಅನಂತರ ತಿನ್ನುತ್ತಿದ್ದೆವು. ನನಗೆ ಅದರಿಂದ ಸ್ವಲ್ಪವೂ ಬೇಸರಿಕೆಯಾಗುತ್ತಿರಲಿಲ್ಲ. ಆ ಮಾಂಸವನ್ನೂ ಆಡಿನ ಮಾಂಸವನ್ನೂ ತಿನ್ನುವುದರಲ್ಲಿ ನನಗೆ ಬಹು ಆನಂದ. ಹೆಂಡ ನನಗೆ ಪ್ರೀತಿ. ವಿಧವೆಯಾದ ನನ್ನ ತಾಯಿ, ತಾನು ಕಷ್ಟಪಟ್ಟು ಸಂಪಾದಿಸಿದ ದುಡ್ಡಿನಿಂದ ನನಗೆ ಹೆಂಡ ತಂದುಕೊಂಡುತ್ತಿದ್ದಳು. ಆಕೆಯೂ ಕುಡಿಯುತ್ತಿದ್ದಳು. ನಾನು ಸ್ಕೂಲಿಗೆ ಅತಿ ಕಷ್ಟದಿಂದ ಹೋಗುತ್ತಿದ್ದೆ. ಮೆಟ್ರಿಕುಲೇಶನ್ ಪರೀಕ್ಷೆಯಲ್ಲಿ ನನಗೆ ಎರಡು ಸಲ ಫೇಲ್ ಆಯಿತು. ಅನಂತರ ದೇವರ ದಯದಿಂದ ಆಂಧ್ರಜಾತೀಯ ಕಲಾಶಾಲೆ ಸೇರುವ ಬುದ್ಧಿ ನನಗೆ ಹುಟ್ಟಿತು. ಅಲ್ಲಿ ನಾನು ಯಂಗ್ ಇಂಡಿಯಾ ಓದತೊಡಗಿದೆ. ಅರ್ಥ ಮಾಡಿಕೊಳ್ಳತೊಡಗಿದೆ. ಗೋ ರಕ್ಷಣೆಯ ಮೇಲೆ ಗಾಂಧಿಯವರೂ ಇತರರೂ ಬರೆದ ಲೇಖನಗಳನ್ನು ಓದಿದೆ. ನನ್ನ ಕಣ್ಣು ತೆರೆಯಿತು. "ರುಚಿಯಾದ ಔತಣ" ವೆಂದುಕೊಂಡಿದ್ದ ಅಸಹ್ಯವಾದ ಗೋ ಮಾಂಸ ಬಿಟ್ಟೆ. ಮತ್ತೆ ತಿನ್ನುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆ. ಆ ಶಿಕ್ಷಣ ಮುಗಿದ ಮೇಲೆ ನಾನು ಮಗನವಾಡಿಗೆ ಬಂದೆ. ಗೋಮಾತೆಗೆ ನನ್ನಿಂದಾದ ಅನ್ಯಾಯ ಕುರಿತು ಹಗಲು ರಾತ್ರಿ ನಿದ್ರೆಯಿಲ್ಲದೆ ಕೊರಗಿದೆ. ಹಾಲನ್ನು ಕುಡಿಯುವುದು ನನ್ನಿಂದ ಸಾಧ್ಯವಾಗಲಿಲ್ಲ. ನನ್ನ ಪಾಪದ ಪ್ರಾಯಶ್ಚಿತ್ತಕ್ಕಾಗಿ ಹಾಲನ್ನು ಬಿಟ್ಟೆ. ಹಾಲು ಬಿಟ್ಟುದು ಯಾಕೆ ಎಂಬುದಕ್ಕಾಗಿ ಬಾಪುಗೆ ಇದನ್ನೆಲ್ಲಾ ಹೇಳಬೇಕಾಯಿತು" ಎಂದ ಆತ.

ನಾನು "ಬಾಪುವಿಗೆ ನಂಬಿಕೆಯಾಯಿತೆ" ಎಂದೆ. ಆತ ನಡೆದ ಸಂಭಾಷಣೆ ವಿವರಿಸಿದ. ಅದರಿಂದ ಲಾಭವೂ ಆಶ್ಚರ್ಯವೂ ಉಂಟಾಗುವುದಾಗಿದೆ.

"ನಾನು ಬಾಪುವಿಗೆ ಹೀಗೆ ಹೇಳಿದೆ. ಗೋವು ಮತ್ತು ಮಾತೆ ಎರಡೂ ಒಂದು ಎಂದು ನನಗೆ ತಿಳಿದಿದೆ. ತಾಯಿ ಎರಡು ವರುಷ ಹಾಲು ಕೊಡುತ್ತಾಳೆ. ಆದರೆ ಗೋಮಾತೆ ನಮ್ಮ ಜೀವಮಾನದ ಪೂರ್ತಿ ಕೊಡುತ್ತಾಳೆ." ಬಾಪು ಹೀಗೆ ಹೇಳಿದರು. "ನಾನು ಇನ್ನೂ ಮುಂದಕ್ಕೆ ಹೋಗುತ್ತೇನೆ.

ಗೋಮಾತೆ, ಅನೇಕ ವಿಧದಲ್ಲಿ ತಾಯಿಗಿಂತ ಹೆಚ್ಚು. ನಮ್ಮನ್ನು ಹೆತ್ತ ತಾಯಿ ಎರಡು ವರುಷ ಹಾಲು ಕೊಡುತ್ತಾಳೆ. ಅನಂತರ ನಾವು ದೊಡ್ಡವರಾದಂತೆ ತನ್ನ ಸೇವೆ ಮಾಡಬೇಕೆಂದೂ ಬಯಸುತ್ತಾಳೆ. ಆದರೆ ಗೋಮಾತೆ ನಮ್ಮಿಂದ ಹುಲ್ಲು ಹುರುಳಿ ಹೊರತು ಏನನ್ನೂ ನಿರೀಕ್ಷಿಸುವುದಿಲ್ಲ. ನಮ್ಮನ್ನು ಹೆತ್ತ ತಾಯಿ ಆಗಾಗ್ಗೆ ಕಾಯಿಲೆ ಬೀಳುತ್ತಾಳೆ. ನಾವು ಸೇವೆ ಮಾಡಬೇಕೆಂದು ಬಯಸುತ್ತಾಳೆ. ಆದರೆ ಗೋಮಾತೆ ಸಾಧಾರಣವಾಗಿ ಕಾಯಿಲೆ ಬೀಳುವುದಿಲ್ಲ. ಗೋವಿನ ಬಾಳು ಬಿಡುವಿಲ್ಲದ ಸೇವೆಯ ಬಾಳು. ಗೋವು ಸತ್ತರೂ ಸೇವೆ ಇನ್ನೂ ಮುಗಿಯುವುದಿಲ್ಲ. ನಮ್ಮನ್ನು ಹೆತ್ತ ತಾಯಿ ಸ್ವರ್ಗಸ್ಥಳಾದರೆ ಆಗಲೂ ಸಂಸ್ಕಾರಕ್ಕೆ ನಮಗೆ ಖರ್ಚು. ಗೋಮಾತೆ ಬದುಕಿರುವಾಗ ಹೇಗೆ ಸೇವೆಮಾಡುತ್ತದೋ ಸತ್ತಮೇಲೆಯೂ ಹಾಗೆಯೇ ಮಾಡುತ್ತದೆ. ನಾವು ಅದರ ದೇಹದ ಎಲ್ಲಾ ಭಾಗವನ್ನೂ ಮಾಂಸ, ಮೂಳೆ ಕೊಂಬು ಚರ್ಮ—ಎಲ್ಲವನ್ನೂ ಉಪಯೋಗಿಸಿಕೊಳ್ಳಬಹುದು. ನಾನು ಇದನ್ನು ಹೇಳುವುದು ಹೆತ್ತ ತಾಯಿಯ ಯೋಗ್ಯತೆ ಕಡಿಮೆ ಎನ್ನುವುದಕ್ಕಲ್ಲ. ಆದರೆ ನಾನು ಗೋಮಾತೆಯನ್ನು ಯಾಕೆ ಪೂಜಿಸುತ್ತೇನೆ ಎಂಬುದರ ಕಾರಣಕ್ಕಾಗಿ. ಹಾಲನ್ನು ಕುಡಿ ಎಂದು ನಿನಗೆ ಹೇಳುತ್ತೇನೆ. ನಾನು ಹಸುವಿನ ಹಾಲು ಕುಡಿಯುವುದಿಲ್ಲ. ಇದಕ್ಕೆ ಕಾರಣ ನಾನು ಹಿಂದೆ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆ. ನಿನ್ನದು ಅಂತಹ ಪ್ರತಿಜ್ಞೆ ಅಲ್ಲ. ಗೋಶಾಲೆ ವಿಸ್ತರಿಸಲು ನಾನು ಇಲ್ಲಿ ಮಾಡುತ್ತಿರುವುದನ್ನು ನೋಡು. ನಿನ್ನ ಹೃದಯ ಅಷ್ಟು ಕನಿಕರವುಳ್ಳದುದಾದರೆ ಗೋ ಸೇವೆಗೆ ನಿನ್ನ ಬಾಳನ್ನು ಮೀಸಲಾಗಿ ಅರ್ಪಿಸು." "ಗಾಂಧಿಯವರ, ಮಾತು ಗೋ ಸೇವೆಯಲ್ಲಿ ಅವರ ಉತ್ಸಾಹ, ನೋಡಿ ನನಗೆ ಆಶ್ಚರ್ಯವಾಯಿತು. ಅವರ ಮಾತನ್ನು, ವಿಧಿಯಂತೆ ಶಿರಸಾ ವಹಿಸಿದೆ. "

" ಎಂತಹ ಅದ್ಭುತ ಕತೆ! ನಿಮ್ಮ ತಾಯಿ ಏನು ಹೇಳುವಳು ? ಅವಳಿಗೆ ಇವೆಲ್ಲಾ ಗೊತ್ತೇ ?" ಎಂದೆ.

ಇದರಲ್ಲಿ ಬಹುಭಾಗ ಅವಳಿಗೆ ಗೊತ್ತು. ಆಕೆ ಸತ್ತ ಮಾಂಸವನ್ನೂ ಹೆಂಡವನ್ನೂ ಬಿಟ್ಟಿದ್ದಾಳೆ. ಮನೆಗೆ ಬಾ ಎಂದು ನನ್ನನ್ನು ಕರೆಯುತ್ತಿದ್ದಾಳೆ. ಮೂರು ವರ್ಷಗಳಿಂದ ನಾನು ಆಕೆಯನ್ನು ನೋಡಿಲ್ಲ. ಅವಳು

ವೈದ್ಯಶಾಲೆಯಲ್ಲಿ ಆಳು. ಅವಳಿಗೆ ರೋಗಿಗಳಿಂದ "ಇನಾಮು" ದೊರೆಯುತ್ತಿದ್ದಿತು. ಆ ಇನಾಮುಗಳನ್ನು ತೆಗೆದುಕೊಳ್ಳಕೂಡದೆಂದು ನಾನು ಆವಳನ್ನು ಒಪ್ಪಿಸಿದೆ. ಅವಳಿಗೆ ಸರ್ಕಾರದಿಂದ ಬಟ್ಟೆ ಬರುತ್ತದೆ. ನಾನೇ ಇಬ್ಬರಿಗೂ ಆಗುವ ಬಟ್ಟೆ ಮಾಡುತ್ತೇನೆ. ಆ ಬಟ್ಟೆ ತೆಗೆದುಕೊಳ್ಳ ಬೇಡ ಎಂದು ಹೇಳಿದೆ. ನಾನು ಧನುಷ್ ತಕ್ಲಿ ತೆಗೆದುಕೊಂಡು ಹಳ್ಳಿ ಹಳ್ಳಿಗೂ ತಿರುಗುತ್ತೇನೆ. ಖಾದಿ, ಗೋ ಸೇವೆ, ಶಾಂತಿ, ಗ್ರಾಮ ಕೈಗಾರಿಕೆ ಗಳ ಪ್ರಚಾರ ಮಾಡುತ್ತೇನೆ.

## ೨ ಎತ್ತಿನ ಹಬ್ಬ

ಗಾಂಧಿಯವರು, ಸೇವಾಗ್ರಾಮದ ಹಸುಗಳು ಎತ್ತುಗಳೊಂದಿಗೆ ಕಳೆದ ಒಂದು ಸಾಯಂಕಾಲದ ವರ್ಣನೆಗೆ ಆ ಹಿಂದಲ ಕತೆ ಒಳ್ಳೆಯ ಮುನ್ನುಡಿ ಎಂದು ಭಾವಿಸುತ್ತೇನೆ. ಈಗ ಪ್ರತಿ ಭಾನುವಾರ ಬೆಳಿಗ್ಗೆ, ಕೆಲವು ಹಳ್ಳಿಯವರು ಬಂದು ಗಾಂಧಿಯವರೊಂದಿಗೆ ಮಾತನಾಡುತ್ತಾರೆ. ಗಾಂಧಿಯವರು ಅವರ ಪ್ರಶ್ನೆಗಳಿಗೆಲ್ಲಾ ಪ್ರತ್ಯುತ್ತರ ಕೊಡುತ್ತಾರೆ. ಈ ತಿಂಗಳ ಮೊದಲನೆಯ ದಿನ ಹಳ್ಳಿಯವರು ತಮ್ಮ ದನಗಳ ಮೆರವಣಿಗೆ ನೋಡಲು ಗಾಂಧಿಯವರನ್ನು ಆಹ್ವಾನಿಸಿದರು. ಗಾಂಧಿ ಹೋಗಲು ಒಪ್ಪಿದರು. ಪಾಪ! ಎತ್ತುಗಳಿಗೆ ವರುಷಕ್ಕೆ ಅದೊಂದು ದಿನ ಮಾತ್ರ ಬಿಡುವು. ಆ ದಿನ ಎತ್ತುಗಳಿಗೆ ಕೆಲಸವಿಲ್ಲ. ಅವಶ್ಯಕವಾಗಿ ಮಾಡ ಬೇಕಾದ ಕೆಲಸಬಿದ್ದರೆ ರೈತರೇ ಅದನ್ನು ಮಾಡುತ್ತಾರೆ. ಎತ್ತುಗಳಿಗೆ ಆ ದಿನ ಹೂವಿನ ಹಾರ; ಅಲಂಕಾರ, ಒಳ್ಳೆಯ ತಿಂಡಿ ಸಹ ಕೆಲವೆಡೆ ಉಂಟು. ಅವು ಅಲಂಕೃತವಾಗಿ ಹುಲ್ಲು ಅಗಿಯುತ್ತಾ ಸಾಲಾಗಿ ನಿಂತಿರುವಾಗ, "ಇವುಗಳು ಮಾತನಾಡಬಲ್ಲವಾದರೆ ಎಷ್ಟು ಸೊಗಸು! ನಮ್ಮ ಕೃತಜ್ಞತೆಯನ್ನು ಇವುಗಳಿಗೆ ಮತ್ತಾವುದಾದರೂ ಬೇರೆ ಹೆಚ್ಚು ಹಿತವಾದ ಮಾರ್ಗದಲ್ಲಿ ತೋರಿಸಲು ಸಾಧ್ಯವಿಲ್ಲವೇ" ಎಂಬ ಯೋಚನೆ ಬರುತ್ತದೆ.

ಗಾಂಧಿಯವರು ಆ ಸಂಧ್ಯಾಕಾಲವನ್ನು ಅವರೊಂದಿಗೆ ಕಳೆದರು. ಹೀಗೆ ನಮ್ಮ ಹಿಂದಲ ಪದ್ಧತಿಯಂತೆ ಈ ಹಬ್ಬ ಆಚರಿಸಿ ಎತ್ತುಗಳಿಗೂ ಹಸುಗಳಿಗೂ ವಿರಾಮಕೊಟ್ಟದ್ದು ತನಗೆ ಬಹಳ ಸಂತೋಷ

ವೆಂದು ಗಾಂಧಿ ಹೇಳಿದರು. "ಪ್ರಾಚೀನ ಭಾರತದಲ್ಲಿ ಮನುಷ್ಯನ ಐಶ್ವರ್ಯವನ್ನು ಅವನ ಬಳಿ ಇದ್ದ ಗೋವುಗಳಿಂದ ನಿರ್ಣಯಿಸುತ್ತಿದ್ದರು.—ಅವನ ಹತ್ತಿರ ಇದ್ದ ಚಿನ್ನ ಬೆಳ್ಳಿಯಿಂದಲ್ಲ—ಹಸುವನ್ನು ಮಾತೆ ಎಂದು ಪೂಜೆ ಮಾಡುತ್ತಿದ್ದರು. ಯಾಕೆಂದರೆ ಅದರ ಹಾಲು ನಮ್ಮನ್ನು ಸಾಕುವುದು. ಅದರ ಸಂತಾನ, ಎತ್ತು ನಮ್ಮ ವ್ಯವಸಾಯ ಮಾಡಿ ನಮಗೆ ಅನ್ನ ಕೊಡುವುದು. ಪಶ್ಚಿಮ ದೇಶದಲ್ಲಿಯೂ ಹಸುಗಳಿವೆ. ಅವುಗಳನ್ನು ಬಹಳ ಚೆನ್ನಾಗಿ ಸಾಕುತ್ತಾರೆ. ಆದರೆ ಹೋರಿಗಳನ್ನು ವ್ಯವಸಾಯಕ್ಕೆ ಉಪಯೋಗಿಸುವುದಿಲ್ಲ. ಅದು ಮಾಂಸವಾಗುತ್ತದೆ. ಪ್ರಾಚೀನ ಕಾಲದಿಂದ ಈ ಪದ್ಧತಿ ನಮಗೆ ಬಹಳ ಅಸಹ್ಯ. ನಾವು ಹಸುವನ್ನೂ ಎತ್ತನ್ನೂ ಪೂಜಿಸುತ್ತೇವೆ. ನಮ್ಮ ದೇಶದಲ್ಲಿ ಎಲ್ಲೆಲ್ಲಿಯೂ ಗಾಡಿ ಎಳೆಯುವುದು ಎತ್ತು. ಸಿಮ್ಲಾದಲ್ಲಿ ಸಹ ಗಾಡಿ ಎಳೆಯುವುದು ಎತ್ತೇ. ರೈಲುಗಳೂ, ಮೋಟಾರುಗಳೂ ಅಲ್ಲಿಗೆ ಹೋಗುತ್ತವೆ. ಆದರೆ ಆ ಬೆಟ್ಟದ ದಾರಿಯಲ್ಲಿ ಭಾರವನ್ನು ಎಳೆದುಕೊಂಡು ಯಾವಾಗಲೂ ಎತ್ತಿನಗಾಡಿ ಹೋಗುತ್ತಿರುವುದು ನನ್ನ ಕಣ್ಣಿಗೆ ಬಿದ್ದಿದೆ. ಈ ಪ್ರಯಾಣ ಸೌಕರ್ಯ ನಮ್ಮ ಜೀವನ ಮತ್ತು ನಾಗರೀಕತೆಯ ಭಾಗವಾಗಿಯೇ ಕಾಣುತ್ತವೆ. ನಮ್ಮ ಗ್ರಾಮಕೈಗಾರಿಕೆಗಳ ನಾಗರಿಕತೆ ಉಳಿಯಬೇಕಾದರೆ ನಮ್ಮ ಎತ್ತುಗಳೂ ಉಳಿಯಲೇ ಬೇಕು.

ಆದರೆ ನಮಗೆ ದುರ್ದಿನ ಬಂದಿದೆ. ಐಶ್ವರ್ಯವನ್ನು ಕುರಿತು ನಮ್ಮ ಅಭಿಪ್ರಾಯ ಬದಲಾಯಿಸುತ್ತಿದೆ. ಹಣವೇ ಐಶ್ವರ್ಯದ ಗುರುತಾಗಿದೆ. ನಾವು ನಮ್ಮ ದನಗಳನ್ನು ತಿರಸ್ಕರಿಸಿದೆವು. ಅವು ನಿಧಾನವಾಗಿ ಕ್ಷೀಣವಾಗುತ್ತಿವೆ. ಈ ಹಬ್ಬ ನೀವು ಹೀಗೆ ಆಚರಿಸುವುದು ಸಂತೋಷ. ಆದರೆ ನಿಮಗೆ ಇದರ ಅರ್ಥ ತಿಳಿಯಬೇಕು. ವರುಷವೂ ದನಗಳನ್ನು ಉದಾಸೀನಮಾಡಿ, ಒಂದು ದಿನ ಹಬ್ಬ ಮಾಡಿದರೆ ಪ್ರಯೋಜನವಿಲ್ಲ. ಯಾರ ಎತ್ತುಗಳು ಅತ್ಯುತ್ತಮವಾದುವು ಎಂಬುದನ್ನು ಕಂಡು ಹಿಡಿಯಬೇಕು. ಹಾಗೆ ಉತ್ತಮವಾಗಿ ಇಡಲು ಆತ ಮಾಡುತ್ತಿರುವುದೇನು ತಿಳಿಯಬೇಕು. ಯಾರ ಹಸು ಹೆಚ್ಚಾಗಿ ಹಾಲು ಕೊಡುತ್ತದೆ. ಅದನ್ನು ಆತ ಹೇಗೆ ಸಾಕುತ್ತಾನೆ, ಅದಕ್ಕೆ ಕೊಡುವ ಆಹಾರವೇನು ? ಇವುಗಳನ್ನು

ಕಂಡು ಹಿಡಿಯಬೇಕು ಹಳ್ಳಿಯಲ್ಲಿ ಅತ್ಯುತ್ತಮವಾದ ಎತ್ತಿಗೂ ಹಸು ವಿಗೂ ಒಂದೊಂದು ಬಹುಮಾನ ಕೊಡಬಹುದು. ನಾವು ಇಲ್ಲಿ ನಿಮ್ಮ ಸೇವೆಗೆ ಇದ್ದೇವೆ. ದನಗಳನ್ನು ಸಾಕುವುದರಲ್ಲಿ ನಿಪುಣನಾದ ಪಾರ್ನರ್ ಕರ್‌ಸಿ ಮತ್ತು ದನಗಳೇ ಪ್ರಾಣವಾದ ಬಲವಂತಸಿಂಗ್ ನಿಮಗೆ ಸಹಾಯ ಮಾಡಲು ಸಿದ್ಧರಿದ್ದಾರೆ. ನಿಮ್ಮ ಹಳ್ಳಿಯವರ ಉಪಯೋಗಕ್ಕಾಗಿಯೇ ಬೀಜದ ಹೋರಿ ಇದೆ. ನಾವು ಒದಗಿಸುವ ಸಹಾಯವನ್ನೆಲ್ಲಾ ನೀವು ಉಪಯೋಗಿಸಿಕೊಳ್ಳಬೇಕು. ಆದರೆ ನಿಮ್ಮ ರಾಸುಗಳಲ್ಲಿ ನಿಮಗೆ ಪೂರ್ಣ ವಾದ ಪ್ರೇಮವಿದ್ದರೆ ಮಾತ್ರ ಇದು ಸಾಧ್ಯ. "—ಎತ್ತುಗಳನ್ನು ಹೊಡೆ ಯುವ ದೊಣ್ಣೆ ತೋರಿಸಿ "—ಇಲ್ಲಿ ಇರುವ ಇದರಿಂದ ನನಗೂ ನಿಮಗೂ ನಾಚಿಕೆಯಾಗಬೇಕು. ನಿಮ್ಮ ಒಂದು ಮಗುವನ್ನು ನಾನು ಕೋಲಿನಿಂದ ತಿವಿಯ ಹೋದರೆ ನೀವು ಒಪ್ಪುವಿರಾ ? ಒಪ್ಪದಮೇಲೆ ಈ ಉಪಯುಕ್ತ ವಾದ ಪ್ರಾಣಿಗಳನ್ನು ಹಾಗೆ ತಿವಿಯಲು ನಿಮಗೆ ಏನು ಧೈರ್ಯ ? ಪ್ರಪಂಚ ದಲ್ಲಿ ಮತ್ತೆಲ್ಲಿಯೂ ಇಂತಹ ಹಿಂಸೆ ಮಾಡುವುದಿಲ್ಲ. ಇವುಗಳನ್ನು ಬಿಡ ಬೇಕು. ಬಿಡದಿದ್ದರೆ ಈ ಮೆರವಣಿಗೆಗಳಿಗೆ ನನ್ನನ್ನು ಕರೆಯಬಾರದು. ಅವುಗಳನ್ನು ದಯೆಯಿಂದ ಮೃದುವಾಗಿ ನಡೆಸಿಕೊಳ್ಳಬೇಕು. ಹಾಗೆ ಮಾಡಿದರೆ ದೊಣ್ಣೆಯ ಸಹಾಯವಿಲ್ಲದೆ ಅವು ನಿಮ್ಮ ಮಾತನ್ನು ಕೇಳಿ ಅದರಂತೆ ನಡೆಯುತ್ತವೆ. ಇಂದಿನಿಂದಲೇ ಹಾಗೆ ಪ್ರಾರಂಭಿಸಿ. ಮುಂದಲ ಹಬ್ಬದ ಹೊತ್ತಿಗೆ ನೋಡಿ. ಹೇಗೆ ಆಗುತ್ತೆ ಎಂದು. ಸೇವಾಗ್ರಾಮವನ್ನು ಮಾದರಿ ಗ್ರಾಮವಾಗಿ ಮಾಡುವುದು ನಮ್ಮ ಗುರಿ. ಇತರ ವಿಷಯಗಳಲ್ಲಿ ಹೇಗೆ ಮಾಡಬೇಕೆಂಬುದನ್ನು ಬೇರೆ ಕಾಲದಲ್ಲಿ ಹೇಳಿದ್ದೇನೆ. ಈಗ ಇಷ್ಟು ಹೇಳುತ್ತೇನೆ. ಮಾದರಿ ದನಗಳಿಲ್ಲದೆ ಮಾದರಿ ಗ್ರಾಮವಾಗಲಾರದು. ನಿಮ್ಮ ಸೇವೆಗೆ ನಾವು ಸಿದ್ಧರಾಗಿದ್ದೇವೆ. ಆದರೆ ನಿಮ್ಮ ಸಹಕಾರವಿಲ್ಲ ದಿದ್ದರೆ ಆ ಸೇವೆಯಿಂದಲೂ ಹೆಚ್ಚು ಪ್ರಯೋಜನವಾಗಲಾರದು. ಆದುದ ರಿಂದ ನೀವು ಸೇರಿ ತತ್‌ಕ್ಷಣ ಮಾಡಬೇಕಾದ ಒಂದು ಕಾರ್ಯಕ್ರಮ ವನ್ನು ನಿರ್ಣಯಿಸುವಿರೆಂದು ನಂಬುತ್ತೇನೆ. "

## ೩. ಒಂದು ಮದುವೆ

ಅನೇಕ ಕೆಲಸಗಳ ಮತ್ತು ನಿತ್ಯ ಕರ್ತವ್ಯಗಳ ಮಧ್ಯೆ, ದಕ್ಷಿಣ

ಭಾರತದ ಒಬ್ಬ ಹರಿಜನರ ಮದುವೆ ಮಾಡಿಸುವುದು ಗಾಂಧಿಯವರಿಗೆ ಸುಲಭವಾದ ಕಾರ್ಯವಾಗಲಿಲ್ಲ. ಆದರೆ ಗಾಂಧಿಯವರು ತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಮೂಲೆಗೊತ್ತಿ ಆ ಕಾರ್ಯ ಮಾಡಿದರು. ಯಾಕೆಂದರೆ ಮದುವೆಯಾಗಲು ಬಂದಿದ್ದವನು ಹರಿಜನ; ಮಲಬಾರಿನಿಂದ ಬಂದಿದ್ದ. ಆತನ ಹೆಸರು ಶ್ರೀ ವೇಲಾಯುಧನ್. ಗ್ರಾಜುಯೆಟ್, ಟಾಟಾ ಪೋಸ್ಟ್ ಗ್ರಾಜುಯೇಟ್ ಸ್ಕೂಲಿನ ಪದವೀಧರರು. ಹರಿಜನ ಸೇವಕ ಸಂಘದವರು ಪರಿಶೋಧನೆಗಳನ್ನು ನಡೆಸಲು ಇವರನ್ನು ನಿಯಮಿಸಿದ್ದಾರೆ. ವಧುವಾದ ಶ್ರೀಮತಿ ದಾಕ್ಷಾಯಣಿ, ಬಿ.ಎ., ಬಿ.ಟಿ., ಕೊಚಿನ್‌ಗೆ ಸೇರಿದವಳು. ಇಬ್ಬರದೂ ಹರಿಜನರಲ್ಲಿಯೇ ಬೇರೆ ಬೇರೆ ಪಂಗಡ. ಒಬ್ಬರಿಗೊಬ್ಬರಿಗೆ ಮದುವೆಯಾಗುವುದು ಅವರ ಜಾತಿ ಪದ್ಧತಿಗೆ ವಿರೋಧ. ಆದರೆ ಗಾಂಧಿಯವರಿಂದ ಶಾಸ್ತ್ರೋಕ್ತವಾದ ರೀತಿಯಲ್ಲಿಯೇ ಮದುವೆ ಮಾಡಿಸಿಕೊಳ್ಳಬೇಕು ಎಂಬುದು ಶ್ರೀ ವೇಲಾಯುಧನ್‌ರವರ ಆಸೆಯಾಗಿದ್ದಿತು. ಆದುದರಿಂದ ಅವರು ನಾಲ್ಕನೆ ತಾರೀಖು ವಾರ್ಧಾಕ್ಕೆ ಬಂದು ತಮ್ಮ ಆಸೆ ವ್ಯಕ್ತಪಡಿಸಿದರು ಯಾರನ್ನು ಪುರೋಹಿತರನ್ನಾಗಿ ಕರೆಯಬೇಕು ಎಂದು ಒಂದು ಗಳಿಗೆ ಗಾಂಧಿಯವರು ಯೋಚಿಸಿದರು. ವಾರ್ಧಾದಿಂದ ಯಾರಾದರೂ ಮಿತ್ರರನ್ನು ಕರೆಸಬಹುದಾಗಿದ್ದಿತು. ಆದರೆ ಇದ್ದಕ್ಕಿದ್ದಂತೆ ಪಾರ್‌ಚುರೆ ಶಾಸ್ತ್ರಿಯ ಜ್ಞಾಪಕ ಗಾಂಧಿಯವರಿಗೆ ಬಂತು. ಅವರಿಗಿಂತ ಹೆಚ್ಚು ಯೋಗ್ಯರಾದ ಪುರೋಹಿತರು ಇಲ್ಲ. ಅವರಿಗೆ ತೊನ್ನು. ನಮ್ಮೊಂದಿಗೆ ಕೆಲವು ಕಾಲದಿಂದ ಇದ್ದಾರೆ. ಧ್ಯಾನ, ಸಂಸ್ಕೃತ ಅಭ್ಯಾಸ ಇದರಲ್ಲಿ ಕಾಲ ಕಳೆಯುತ್ತಿದ್ದಾರೆ. ಅವರು ಪುರೋಹಿತರಾಗಲು ಕೂಡಲೇ ಒಪ್ಪಿದರು. ಅವರ ಗುಡಿಸಲಿನ ಮುಂದೆಯೇ ೬ನೆಯ ತಾರೀಖು ಬೆಳಿಗ್ಗೆ ವಿವಾಹ ನಡೆಯಿತು. ಆ ಪವಿತ್ರವಾದ ಕಾರ್ಯ, ಸರಳವಾಗಿ ಮನೋಹರವಾಗಿ ನಡೆಯಿತು. ವಧೂವರರ ಹಿಂದಿಯ ಅಜ್ಞಾನದಿಂದ ನೆರೆದಿದ್ದವರಿಗೆ ಬಹಳ ವಿನೋದವಾಯಿತು. ಪ್ರತಿ ಒಂದು ಮಂತ್ರ, ಮಾತಿನ ಅರ್ಥ, ಹೇಳುವಷ್ಟು ಇಂಗ್ಲೀಷು ಶಾಸ್ತ್ರಿಗೆ ಬರುತ್ತಿದ್ದಿತು. ಗಾಂಧಿಯವರೇ ಕನ್ಯಾದಾನ ಮಾಡಿದರು. ಶಾಸ್ತ್ರಿಗಳು ಗಾಂಧಿಯವರಿಗೆ " ಈ ಶ್ಲೋಕ ಉಚ್ಚರಿಸಿ " ಎಂದು ಹೇಳಿದರು. ಗಾಂಧಿಯವರು " ಅಷ್ಟು ವೇಗವಾಗಿ ಬೇಡ ನಿಧಾನವಾಗಿ ಹೇಳಿ. ಪ್ರತಿಯೊಂದು ಮಾತೂ ನನಗೆ ತಿಳಿಯಲಿ "

ಎಂದರು. ಅನಂತರ ಗಾಂಧಿಯವರು "ಇದರ ಅರ್ಥ ನಿನಗೆ ಗೊತ್ತೇ. ಈ ಕನ್ಯೆಯನ್ನು ನಾನು ನಿನಗೆ ಕೊಡುವುದು ಧರ್ಮ ರಕ್ಷಣೆಗಾಗಿ ಮತ್ತು ನೀನು ಆಕೆಯ ರಕ್ಷಣೆ ಮಾಡುವುದಕ್ಕಾಗಿ" ಎಂದರು. ಅನಂತರ ವಿವಾಹ ನಿಯಮ ಪ್ರತಿಜ್ಞೆಗಳನ್ನು ವಧೂವರರಿಗೆ ವಿವರಿಸಿದುದಾಯಿತು. ಅವರು ಅಗ್ನಿಯ ಎದುರಿಗೆ ದೇವತೆಗಳ ಸಾಕ್ಷಿಯಾಗಿ ಪ್ರತಿಜ್ಞೆಗಳನ್ನು ಸ್ವೀಕರಿಸಿದರು. ವಿವಾಹ ಒಂದು ಗಂಟೆ ಕಾಲದೊಳಗೆ ಮುಗಿದುಹೋಯಿತು. ಶಾಸ್ತ್ರಿಗಳು ವಧೂವರರಿಗೆ "ಸಾಯಂಕಾಲದವರೆಗೆ ಮೌನವಾಗಿರಿ, ಸಾಯಂಕಾಲ ಗಾಂಧಿಯವರು ನಿಮಗೆ ಸಪ್ತಋಷಿಗಳನ್ನು, ಮುಖ್ಯವಾಗಿ ವಸಿಷ್ಠ ಅರುಂಧತಿಯರನ್ನು ತೋರಿಸುತ್ತಾರೆ. ಅನಂತರ ಮಾತನಾಡಿ" ಎಂದು ಹೇಳಿದರು.

ಶಾಸ್ತ್ರಿಯವರು ಬಹಳ ಶ್ರದ್ಧೆಯಿಂದ ಎಲ್ಲಾ ಕೆಲಸಗಳನ್ನೂ ಮಾಡಿದರು. ಅವರದು ಆ ದಿನ ಉಪವಾಸ, ವಧೂವರರೂ ಉಪವಾಸ ಮಾಡಬೇಕೆಂದು ಅವರು ಹೇಳಿದರು. ವಿವಾಹದ ಮಂಗಳವಾಗಿ ಅವರೇ ತುಕಾರಾಮ್‌ರ "ಅಭಂಗ್" ಗೀತೆ ಮನೋಹರವಾಗಿ ಹಾಡಿದರು. ಈ "ಅಭಂಗ್" ಎಲ್ಲಾ ಮಹಾರಾಷ್ಟ್ರದವರ ಬಾಯಲ್ಲಿಯೂ ಇದೆ. ಗೋಖಲೆಯವರು, ಇದು ರಾನಡೆಯವರ ಪ್ರೀತಿಯ ಹಾಡು ಎಂದಿದ್ದರು. (ಜೋಕಾ ಜಂಜಲೇ ಗಾಂಜಲೇ—ಯಾರು, ತಾನು ಅತ್ಯಂತ ನೀಚ ಅಲ್ಪ ಎಂದುಕೊಳ್ಳುತ್ತಾನೋ ಆತನಲ್ಲಿ ನಿಜವಾಗಿ ದೇವರಿದ್ದಾನೆ) ಆ ಗೀತೆ ಬಹು ಮನೋಹರವಾಗಿದ್ದಿತಲ್ಲದೆ ಸಮಯಕ್ಕೆ ಅನುಸಾರವಾಗಿದ್ದಿತು.

ವಧೂವರರಿಗೆ ಆನಂದವಾಯಿತು. ವೇಲಾಯುಧನ್ ನನಗೆ ಹೀಗೆ ಹೇಳಿದರು "ಈ ಮದುವೆ ನಮ್ಮ ಊರಿನಲ್ಲಿ ಮಾಡಿಕೊಂಡಿದ್ದರೆ, ಬ್ರಾಹ್ಮಣ ಪುರೋಹಿತ ಎಂದೂ ಬರುತ್ತಿರಲಿಲ್ಲ. ಶಾಸ್ತ್ರಿಯಂತಹ ಜ್ಞಾನಿಗಳಂತೂ ಸಿಕ್ಕುತ್ತಲೇ ಇರಲಿಲ್ಲ. ಈ ಮಹತ್ತಾದ ಒಂದು ಕರ್ಮದ ಅರ್ಥವೂ ನಮಗೆ ಮರೆಯಾಗಿಯೇ ಇರುತ್ತಿದ್ದಿತು." ಮದುವೆ ಮಾಡಬೇಕಾದರೆ ಸೇವಾಗ್ರಾಮದಿಂದ ಹೊರಗೆ ಹೋಗಿ ಪುರೋಹಿತರನ್ನು ಇನ್ನು ಹುಡುಕಬೇಕಾದುದಿಲ್ಲ ಎಂದು ಗಾಂಧಿಯವರಿಗೆ ಬಹಳ ಸಂತೋಷವಾಯಿತು. ಗಾಂಧಿಯವರು "ಈ ಶಾಸ್ತ್ರಿಯಂತಹ ಬೇರೆ ಶಾಸ್ತ್ರಿಗಳನ್ನು

ನಾನು ನೋಡಿಲ್ಲ. ಆತ ಒಳ್ಳೆಯ ಸಹಾನುಭೂತಿಯಿಂದ, ಸ್ವಲ್ಪವೂ ಆಡಂಬರ ಗದ್ದಲವಿಲ್ಲದೆ ಈ ಕೆಲಸ ಮಾಡಿದ್ದಾನೆ " ಎಂದರು.

——

## ೨೪. ಸಾಮ್ರಾಜ್ಯವಾದಿಗಳ ಗ್ಯಾಂಗು

[ಶ್ರೀ ಮಹದೇವ ದೇಸಾಯಿಯವರನ್ನು ಸರ್ಕಾರ ೧೯೪೨ನೆ ಆಗಸ್ಟ್ ೯ನೇ ತಾರೀಖು ಬಂಧಿಸಿದರು. ಈ ಲೇಖನ ಆಗಸ್ಟ್ ೯ರ ಹರಿಜನದಲ್ಲಿ ಪ್ರಕಟವಾಯಿತು.]

### ಇದು ದೇಸಾಯಿಯವರ ಕೊನೆಯ ಲೇಖನ

ಸಾಮ್ರಾಜ್ಯವಾದಿ ಎಂಬ ಮಾತು ಈಚೆಗೆ ಬಳಕೆಗೆ ಬಂದುದು ಈ ಜನ ಹೇಳುವುದು ಇದು, " ಮಿತ್ರರಿಗೇ ಈಗ ಜಯ ಅನಂತರವೂ ಮಿತ್ರರು ತಮ್ಮ ಆಸ್ತಿಗಳನ್ನೂ ಅಧೀನ ರಾಷ್ಟ್ರಗಳನ್ನು ಈಗಿಗಿಂತಲೂ ಜಬರ್ದಸ್ತಿನಿಂದಲೇ ಆಳುತ್ತಾರೆ ಜರ್ಮನಿ ೧೯೧೮ರಲ್ಲಿ ಸೋತು ನಷ್ಟವಾದುದ ಕ್ಕಿಂತ ಈಗ ಹೆಚ್ಚು ನಿರ್ನಾಮವಾಗುತ್ತದೆ. " ಪ್ರೊಫೆಸರ್ ಲಾಸ್ಕಿ ಮುಂತಾ ದವರು, " ಇದು ನ್ಯಾಯವಲ್ಲ. ಚರ್ಚಿಲ್ ಹಿಟ್ಲರ್ ತತ್ವವನ್ನು ನಾಶ ಮಾಡುವುದು ಸರಿ. ಆದರೆ ಆ ತತ್ವ ಯಾವ ಶಕ್ತಿಗಳಿಂದ ಬೆಳೆಯಿತೋ ಆ ಶಕ್ತಿಗಳನ್ನು ನಾಶ ಮಾಡಬಾರದು " ಎನ್ನುತ್ತಾರೆ. ಆದರೆ ಅವರೂ ಕೂಡ ಯುದ್ಧಕಾಲದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಕೂಡದೆನ್ನು ತ್ತಾರೆ. ಆದುದರಿಂದ ತಮ್ಮ ಕನಸಿನ ಕಟ್ಟಡವನ್ನು ಸಾಮ್ರಾಜ್ಯವಾದಿಗಳು ಸಂತೋಷದಿಂದ ಕಟ್ಟುತ್ತಾ ಮುಂದುವರಿಯುತ್ತಾರೆ. ಕಾಂಗ್ರೆಸ್ಸಿನ ಮೇಲೆ ಬದ್ಧದ್ವೇಷ ಹೊಂದಿರುವ ಮಿ. ಅಮೆರಿ, ಇನ್ನೂ ಕಣ್ಮರೆಯಾಗ ದಿರುವ ಈ ಸಾಮ್ರಾಜ್ಯವಾದಿಗಳ ತಂಡಕ್ಕೆ ಸೇರಿದವರು. ಕೆಲವು ದಿನಗಳ ಕೆಳಗೆ ಮಿ. ಅಮೆರಿಯವರು ಲಂಡನ್ ಯೂನಿವರ್ಸಿಟಿಯಲ್ಲಿ ಮಾತನಾಡುತ್ತಾ, ಈಚೆಗೆ ಜಪಾನು ಭಾಷೆ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಯಾಕೆ ಹೆಚ್ಚಾಗಿದೆ ಎಂಬುದರ ಕಾರಣವನ್ನು ಹೀಗೆ ವಿವರಿಸಿದರು :

" ಇಷ್ಟರಲ್ಲಿಯೇ ನಾವು ಹಿಂದಕ್ಕೆ ಜಯಿಸುವ ದೇಶಗಳಲ್ಲಿಯೂ ಮತ್ತು ಜಪಾನಿನಲ್ಲಿಯೇ, ಜಪಾನ್ ಖೈದಿಗಳನ್ನು ವಿಚಾರಣೆ ಮಾಡುವ ಜವಾಬ್ದಾರಿ ತಮ್ಮದಾಗುವುದೆಂದು ಆ ವಿದ್ಯಾರ್ಥಿಗಳಿಗೆ ಗೊತ್ತು. ಈ ಯುದ್ಧದ ನಂತರ, ಹೊಸ ಜಗತ್ತು ಸೃಷ್ಟಿಯಾಗುವುದು. ಅದರಲ್ಲಿ ನಮ್ಮ ಜವಾಬ್ದಾರಿ ಬಹಳ. ಬ್ರಿಟಿಷ್ ಬಾವುಟದ ರಕ್ಷಣೆಯಲ್ಲಿರುವ ಮತ್ತು ರಕ್ಷಣೆಗೆ ಬಗುವ ದೇಶಗಳಲ್ಲಿ ಹೊಸ ಮತ್ತು ಹೆಚ್ಚು ವೈಭವಯುಕ್ತವಾದ ಜೀವನವನ್ನು ಮತ್ತೆ ಸೃಷ್ಟಿಸುವ ಜವಾಬ್ದಾರಿ ನಮ್ಮದಾಗುವುದು. "

ಈ ಬುಡ ಬುಡಕೆಯೊಡನೆ, ಚರ್ಚಿಲ್ಲರ ವಾಗ್ವೈಖರಿಯ ಒಂದು ಉದಾಹರಣೆ ನೋಡೋಣ.

" ಹಿಟ್ಲರ್ ಎಂಬುವನ ದುರಹಂಕಾರ ಅತಿಯಾದುದು. ಅವನಿಗೆ ಜಯ ಮತ್ತು ರಕ್ತದ ದಾಹ. ಜರ್ಮನ್ ಜನರ ಜೀವನ ಮರಣ ಅವನ ಕಿರುಬೆರಳಿನಲ್ಲಿದೆ. ಮುಂದಲ ಛಳಿಗಾಲದಲ್ಲಿ ತನ್ನ ಸೈನ್ಯಕ್ಕೆ ರಷ್ಯಾದಲ್ಲಿ ಇನ್ನೂ ಹೆಚ್ಚು ಉತ್ತಮವಾದ ಆಹಾರ ಬಟ್ಟೆಗಳನ್ನು ಒದಗಿಸುವುದಾಗಿ ಸಹ ಆತ ಬೊಗಳಿದ."

ಪಿಶಾಚಿಗೂ, ಕೊಡಬೇಕಾದುದನ್ನು ಕೊಡಲೇಬೇಕು. ಹಿಟ್ಲರ್ ಯಾಕೆ ದುರಹಂಕಾರಿ ? ಮುಂದಲ ಭಯಂಕರವಾದ ಛಳಿಗಾಲದಲ್ಲಿ ತನ್ನ ಸೈನ್ಯಕ್ಕೆ ಒಳ್ಳೆಯ ಆಹಾರ ಬಟ್ಟೆಗಳನ್ನು ಒದಗಿಸುವ ನಿರೀಕ್ಷೆ ಅವನಿಗಿರುವುದರಿಂದಲೇ ಅಲ್ಲವೆ ? ಹಾಗಾದಮೇಲೆ " ಜಪಾನನ್ನು ಜಯಿಸಬೇಕು. ಇತರ ರಾಷ್ಟ್ರಗಳನ್ನು ಮತ್ತೆ ಬ್ರಿಟಿಷ್ ಬಾವುಟದ ಅಧೀನಪಡಿಸಬೇಕು " ಎಂದು ಹೇಳುವ ಮಿ. ಅಮೆರಿಯವರನ್ನು ಯಾವ ಹೆಸರಿನಿಂದ ಕರೆಯಬೇಕು ?

ಮಿ. ಅಮೆರಿ ಮತ್ತು ಚರ್ಚಿಲರು ಇನ್ನೂ ಬ್ರಿಟಿಷ್ ಬಾವುಟ ಎಂಬ ದೃಷ್ಟಿಯಿಂದಲೇ ಮಾತನಾಡುತ್ತಾರೆ. ಕಾನ್‌ರಾಡ್ ನೊಎಲ್ ಎಂಬುವರು, ಈ ಬಾವುಟ ಸಾಮ್ರಾಜ್ಯ ಬಾವುಟ ಎಂದರು. ಈ ಬಾವುಟ ಸೃಷ್ಟಿಯಾದುದು ಐರ್ಲೆಂಡನ್ನು ೧೮೦೧ ರಲ್ಲಿ ಬಲಾತ್ಕಾರವಾಗಿ ಇಂಗ್ಲೆಂಡಿಗೆ ಸೇರಿಸಿಕೊಂಡಾಗ. ಈ ಸೇರುವಿಕೆಯನ್ನು ಕುರಿತು ಗ್ಲಾಡ್‌ಸ್ಟನ್ ಹೀಗೆ ಹೇಳಿದರು, " ಈ ಸಂದರ್ಭದಲ್ಲಿ ಇಂಗ್ಲೆಂಡು, ಚರಿತ್ರೆಯಲ್ಲಿ

ಮತ್ತೆಲ್ಲಿಯೂ ಕಾಣದ ಹಿಂಸೆ, ಮೋಸ, ದಬ್ಬಾಳಿಕೆ, ಕ್ರೌರ್ಯ ಅತ್ಯಂತ ಹೆಚ್ಚಾಗಿ ಉಪಯೋಗಿಸಿತು. [combined violence and fraud, baseness and tyranny and cruelty in a degree rarely if ever parallelled in history] ಈ ಬಾವುಟದ ರಕ್ತ ಸ್ವಭಾವವನ್ನು ವಿವರಿಸುತ್ತಾ ಕಾನರಾಜ್ ನೋಎಲ್‌ಯವರು, ಗೂಚ್ ಮತ್ತು ಶ್ರೀಮತಿ ಗ್ರೀನ್‌ರವರ ವಾಕ್ಯಗಳನ್ನು ಉದಹರಿಸುತ್ತಾರೆ. ಗೂಚ್ ಹೀಗೆ ಬರೆದರು. " ೧೮೦೦ ಸಂಯುಕ್ತ ಮಸೂದೆಗೆ (Act of union) ನೀತಿಯ ಬಲವಿಲ್ಲ, ಐರಿಷ್ ಜನಾಂಗವನ್ನು ಮಾರಿದುದಾಯಿತು. ಈ ಮಾರುವಿಕೆಗೆ ಬಹುಮತವನ್ನು ಸಂಪಾದಿಸಿದ ಸಂಗತಿ, ಗ್ರೇಟ್ ಬ್ರಿಟನ್ನಿನ ಇತಿಹಾಸದಲ್ಲಿ ಅತ್ಯಂತ ಅಪಮಾನಕರವಾದುದು. " ಶ್ರೀಮತಿ ಗ್ರೀನ್ ಹೀಗೆ ಬರೆದರು. "ಸಂಯುಕ್ತ ಮಸೂದೆ ಆದುದು ಬ್ರಿಟಿಷ್ ಮಂತ್ರಿ ಮಂಡಲದಲ್ಲಿ, ಐರ್ಲೆಂಡಿನವರು ಇದು ಬೇಕೆಂದು ಕೇಳಲಿಲ್ಲ, ಯುದ್ಧದ ಮಧ್ಯದಲ್ಲಿ ಸೈನ್ಯದ ಪಶುಶಕ್ತಿಯ ಬಲದಿಂದ ಈ ಸಂಯುಕ್ತ ಮಸೂದೆ " ಪ್ಯಾಸ್ " ಆಯಿತು. ಬ್ರಿಟಿಷ್ ಸಾಮ್ರಾಜ್ಯ ಪ್ರೋತ್ಸಾಹಕರಾದ ಲೆಕಿ ಎಂಬುವರು "ಈ ಸಂಯುಕ್ತ ಮಸೂದೆಗೆ ಐರ್ಲೆಂಡಿನಲ್ಲಿ ಯಾರೂ ಒಪ್ಪಲಿಲ್ಲ. ಇದರಲ್ಲಿ ಅಧಿಕಾರಿಗಳ ನೀತಿಹೀನತೆ ಹೆಚ್ಚಾಗಿದ್ದಿತು. ಲಂಚ ತಿನ್ನದ ಮೇಧಾವಿಗಳಾದ ಐರಿಷ್ ಪ್ರಜೆಗಳೆಲ್ಲಾ ಇದನ್ನು ವಿರೋಧಿಸಿದರು " ಎಂದು ಹೇಳುತ್ತಾರೆ.

ಮಾನವೋ ಅವಮಾನವೋ, ನೀತಿಯೋ ಅನೀತಿಯೋ ಮಿ ಅಮೆರಿಯವರು ಭಾರತವನ್ನು ಬ್ರಿಟಿಷ್ ಬಾವುಟದ ಆಧೀನದಲ್ಲಿಟ್ಟು ಸಾಮ್ರಾಜ್ಯವನ್ನು ಉಳಿಸಿಕೊಳ್ಳಬೇಕು. ಅವರು ತಮ್ಮ ದೇಶದವರಿಗೆ ವಾಗ್ದಾನ ಮಾಡಿರುವುದು " ಈ ಹೊಸ ಜಗತ್ತೇಯೇ "

೯-೮-೧೯೪೨

---

ಶಂಕರ ಮುದ್ರಣಾಲಯ